ಈಚೆಗೆ ಸಲ್ಪ ದಿನಗಳ ಹಿಂದೆ ಸೂರತ್ ಪಟ್ಟಣದಲ್ಲಿ ಅಹಮದಾಬಾದ ವರೆಗೆ ಬಲವಾದ ಮಳೆ ಬಿದ್ದುದರಿಂದ, ಸೂರತ್ ಜನರು ಪ್ಲೇಗರೋಗದ ಬಾಧೆಯಂ ತಪ್ಪಿಸಿಕೊಳ್ಳುವದಕ್ಕಾಗಿ ಊರ ಹೊರಗಡೆ ಗುಡಿಸಲುಗಳಂ ಕಟ್ಟಿಸಿಕೊಂಡು ವಾಸಮಾಡುತಲಿದ್ದುದರಿಂದ, ಈಗಿನ ವರ್ಷದ ಬಾಧೆಯಂ ತಡೆಯಲಾರದೆ ಅಲ್ಲಿನ ಕಲೆಕ್ಟರವರ ಬಂಗ್ಲೆಗೆ ಹೋಗಿ ತಮ್ಮ ಕಷ್ಟವಂ ತಿಳಿಸಲು ಇದುವರೆಗೆ ಸದರೀ ಜನರ ವಿಷಯದಲ್ಲಿ ಕಲ್ಪಿಸಿದ್ದ ನಿರ್ಬಂಧಗಳನ್ನೆಲ್ಲ ತಪ್ಪಿಸಿ ಮರಳಿ ಯೆಲ್ಲರು ಅವರವರ ಮನೆಗಳಿಗೆ ಹೋಗಿ ಸೇರಬಹುದೆಂದು ಹುಕುಂ ಕೊಟ್ಟದ್ದರಿಂದ ಅನೇಕ ಸಹಸ್ರ ಜನರು ತಮ್ಮ ಸಾಮಾನುಗಳೊಡನೆ ಗುಂಪುಗುಂಪಾಗಿ ತಮ್ಮ ಮನೆಗಳಿಗೆ ಹೋಗಿ ಸೇರುತಲಿದ್ದಾರೆ. ಪ್ಲೇಗ ರೋಗವು ಪ್ರಾಯಶಃ ನಿವೃತ್ತಿಯಾಗಿದ್ದಾಗ್ಯೂ ಏಕಕಾಲದಲ್ಲಿ ಅನೇಕ ಸಹಸ್ರ ಜನರು ಸದರೀ ಪಟ್ಟಣವನ್ನು ಪ್ರವೇಶಿಸುವದರಿಂದ ಮರಳಿ ಸದರೀ ರೋಗವು ಕೆಲಿಹಾಕುವುದೊ ಎಂಬ ಭೀತಿಯಿಂದ ಅಲ್ಲಿನ ಅಧಿಕಾರಿಗಳು ಬಹಳ ಚಿಂತಿಸುತಲಿರುವಂತೆ ಕಾಣುತಿದೆ. ಈಗ ಬಿದ್ದ ವರ್ಷವು ಅಕಾಲಿಕವಾದಾಗ್ಯೂ ಇದರಿಂದ ಪ್ರಯೋಜನವಿಲ್ಲದೆ ಹೋಗಲಾರದೆಂದು ನಂಬುತ್ತೇವೆ.

ಈಗ ಇಂಡಿಯನ್ ಪೀನಲ್‌ಕೋಡ್ ೧೨೪ನೇ ಏ. ಸೆಕ್ಷನನ್ನು ತಿದ್ದುಪಡಿಮಾಡಿ ಅದಕ್ಕೆ ನೂತನವಾಗಿ ಕೆಲವು ಪ್ರಕರಣಗಳನ್ನು ಸೇರಿಸಿ, ಅದರಲ್ಲಿ ವಿಧಿಸಲ್ಪಟ್ಟಿರುವ ದಂಡನೆಗಳನ್ನು ಕಠಿಣಗಳಾಗಿ ಮಾಡಿರುವ ವಿಷಯದಲ್ಲಿ ಇಂಡಿಯನ್ ಅಸ್ಸೋಸಿಯೇಷನ್ ಸಮಾಜದ ಸೆಕ್ರೆಟರಿಯವರು ಇವರಡಿ ಕಂಡಂತೆ ಲಂಡನ್ ಡೆಯಿಲೀ ನ್ಯೂಸ್ ಎಂಬ ಪತ್ರಿಕೆಗೆ ತಂತಿ ವರ್ತಮಾನ ಕೊಟ್ಟಿರುತ್ತಾರೇನೆಂದರೆ :—ಕಲಹಪ್ರೇರಣೆಯನ್ನು ಕುರಿತ ಮಸೂದಾ ಆಕ್ಟು ಬಹಳ ಕಠಿಣವಾದ್ದೆಂದು ಯೂರೋಪಿಯನ್ ಮತ್ತು ನೇಟಿವ್‌ಗಳೆಲ್ಲರು ಒಂದೇವಿಧವಾಗಿ ಆಕ್ಷೇಪಿಸುತಲಿದ್ದಾರೆ. ಇಂಗ್ಲಿಷ ಮ್ಯಾನ್, ಪಯೋನಿಯರ್, ಮತ್ತು ಟೈಂಸ್ ಆಫ್ ಇಂಡಿಯಾ, ಯೂರೋಪಿಯನ್ ಮತ್ತು ನೇಟಿವ್ ಸಮಾಜಗಳೆಲ್ಲವು ಏಕ ವಾಕ್ಯವಾಗಿ ಆಕ್ಷೇಪಿಸುತಲಿವೆ. ಇಂತ ಏಕಕಂಠ್ಯವಾದ ಆಕ್ಷೇಪಣೆಯು ದೇಶಭಾಷಾ ವೃತ್ತಾಂತಪತ್ರಿಕೆಗಳನ್ನು ಕುರಿತು ರಚಿಸಲ್ಪಟ್ಟ ಆಕ್ಟಿನ ವಿಷಯದಲ್ಲಿ ಸಹ ನೋಡಿದ್ದಿಲ್ಲವು ಸೆಲೆಕ್ಟ ಕಮಿಟಿಯವರ ರಿಪೋರ್ಟು ಸುತರಾಂ ತೃಪ್ತಿಕರವಾಗಿಲ್ಲವು ದರ್ಭಂಗಾ ಮಹಾರಾಜರವರು ಮೊದಲಾದ ಇಂಡಿಯನ್ ಮೆಂಬರುಗಳು ಸದರೀ ಮಸೂದಾ ಆಕ್ಟನ್ನು ಒಪ್ಪಲಿಲ್ಲವು ಸದರೀ ಮಸೂದೆಯು, ಯಾವ ತಿದ್ದುಪಡಿಯೂ ಇಲ್ಲದೆ ಮೊದಲಿನಂತೆಯೇ ಇದೆ, ಎಂಬುದು.

ಮದರಾಸ ಗವರ್ನಮೆಂಟ ನ್ಯಾಯನಿರ್ಧಾರಕ ಸಭೆಯ ಮುಂದಿಡಲ್ಪಡುವದಾಗಿರುವ ಬಾಲ್ಯವಿವಾಹವನ್ನು ಕುರಿತ ಕಾನೂನಿನವಿಷಯದಲ್ಲಿ ಗವರ್ನಮೆಂಟಿನವರು ಪ್ರಚುರಿಸಿ ಅದನ್ನು [illegible] ಗವರ್ನಮೆಂಟ ಗೆಜೆಟ [illegible] ಅಭಿಪ್ರಾಯ ಕೇಳಿದೊಡನೆ ಅಲ್ಲಿ [illegible] ಆದಿತ್ಯವಾರದಬಿನ ಸಭೆ [illegible] ಯತ್ನಮಾಡುತಲಿದ್ದರೆಂದು ಕಳೆದವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಅಟೇ ಪ್ರಕಾರ ಮೀಟಿಂಗಿನವರು [illegible] ಈ ಪ್ರಯತ್ನಕ್ಕೆ ಪ್ರತ್ಯರ್ಥಿಗಳಾದವರು ಕೆಲವರು ಬಂದಿದ್ದು ಉಭಯಪಕ್ಷೀಯರಿಗೂ ವಾಕ್ಕಲಹಗಳು ನಡೆದು, ಪ್ರತ್ಯರ್ಥಿಗಳ ಪಕ್ಷಾನುಯಾಯಿಗಳಾದವರೆಲ್ಲರು ಕೂಡಲೆ ಅಲ್ಲಿಂದಹೊರಟು ಬೇರೆಬೇರೆ ಸ್ಥಳದಲ್ಲಿ ಮೀಟಿಂಗ್‌ಮಾಡಿ ಸದರೀ ಮಸೂದಾ ಆಕ್ಟನ್ನು ಗವರ್ನಮೆಂಟಿನವರು ಮಂಜೂರ್ಮಾಡಿದ್ದರೆ [illegible] ಗವರ್ನಮೆಂಟಿನವರನ್ನು ಪ್ರಾರ್ಥಿಸಬೇಕೆಂದು ನಿರ್ಣಯಗಳಂಮಾಡಿದರು. ಮೇಲಿನ ಉಭಯಪಕ್ಷಿಯವರಲ್ಲಿ ಯಾರವುಯುಕ್ತಕ್ಕೆ ಇದು ಉಚಿತಕಾಲವಲ್ಲವು ಪ್ರಸಕ್ತ ಮಸೂದಾ ಆಕ್ಟನ್ನು ಮದರಾಸ ಗವರ್ನಮೆಂಟಿನವರು ಇಂಡ್ಯಾ ಗವರ್ನಮೆಂಟಿಗೆ ಕಳುಹಿಸಿಕೊಡುವರೆಂಬುವದಕ್ಕೆ ಯಾವಆಧಾರವೂ ಕಂಡುಬರುವದಿಲ್ಲವು, ಅಥವಾ ಕಳುಹಿಸಿದಾಗ್ಯೂ ಇಂಡ್ಯಾ ಗವರ್ನಮೆಂಟಿನವರು ಅವುಗಳನ್ನುಒಪ್ಪುವರೊ ಅಥವಾ ತಿರಸ್ಕರಿಸುವರೊ ಈಗ ಹೇಳುವದಕ್ಕೆ ಸಾಧ್ಯವಲ್ಲವು. ಮೊದಲು ಸದರೀ ಮಸೂದಾ ಆಕ್ಟು ಮದರಾಸ ಗವರ್ನಮೆಂಟ ನ್ಯಾಯವಿಧಾಯಕ ಸಭೆಯ ವಿಚಾರಕ್ಕೆ ತರಲ್ಪಡುವುದೇ ಅನುಮಾನಾಸ್ಪದವಾಗಿದೆ. ದೈವಾತ್ ತರಲ್ಪಟ್ಟರೆ ಆಕಾಲದಲ್ಲಿ ಅದನ್ನು ಪೋಷಿಸುವದಕ್ಕಾಗಲಿ ನಿಷ್ಪ್ರಯೋಜಕವನ್ನಾಗಿ ಮಾಡುವದಕ್ಕಾಗಲಿಉಚಿತಸಮಯವಾಗಿರುವುದು. ಆಂತ ಕ್ರಮವಂಬಿಟ್ಟು ಈಗಿನಿಂದ ಉಭಯಪಕ್ಷೀಯರೂ ಮೀಟಿಂಗಗಳಂ ಮಾಡಿ ಮನಸ್ವೀ ವಾಕ್ಕಲಹಗಳಿಗೆ ಪ್ರಾರಂಭಿಸುವುದು ವಿವೇಕಿಗಳಾದವರಪ್ರಯತ್ನವನ್ನಿಸಿಕೊಳ್ಳಲಾರದು. ಪ್ರಸಕ್ತ ಮಸೂದಾ ಆಕ್ಟು ಪ್ರಯುಕ್ತ ಮೈಸೂರುದೇಶದ ಆಕ್ಟಿನ ನಕಲಾಗಿರುವದರಿಂದ ಇದರಲ್ಲಿ ಯೆಷ್ಟು ಪ್ರಯೋಜನಕರವಾಗಿದೆಯೋ ಮದರಾಸ್‌ನಲ್ಲೂ ಅಷ್ಟೇ ಪ್ರಯೋಜನಕರವಾಗಿರುವುದು. ಅದಕ್ಕಾಗಿ ಅಲ್ಲಿನವರು ಈಗನಿಂದ ಗುದ್ದಾಟಕ್ಕೆ ಪ್ರಸಿದ್ಧರಾಗುವುದು ಹೇಳನಾಸ್ಪದವಾದುದು.

LOCAL AND PROVINCIAL NEWS.
ಪಳದೇಶವೃತ್ತಾಂತ ಮತ್ತು ತಾಲ್ಲೂಕಿಜಾತಿವೃತ್ತಾಂತಗಳು

ಕಳೆದ ಶುಕ್ರವಾರದದಿನ ಮಧ್ಯಾಹ್ನ ಸುಮಾರು ಮೂರು ಘಂಟೆಗೆ ಮದರಾಸಿನಲ್ಲಿ ಬಲವಾದ ವರ್ಷ ಬಿದ್ದಂತೆ ತಿಳಿಯಬರುತಿದೆ.

ಈಗ್ಗೆ ಎರಡುತಿಂಗಳ ಕಾಲದಿಂದಲು ಸರ್ಕ್ಯೂಟಿನಮೇಲಿದ್ದ ಇಲ್ಲಿನ ಪ್ರಥಮ ರೆಸಿಡೆಂಟರವರಾದ ಕರ್ನಲ್ ಡೊನಾಲ್ಡ್ ರಾಬರ್ಟ್‌ಸನ್ ಸಾಹೇಬರವರು ಕಳೆದವಾರದಲ್ಲಿ ಇಲ್ಲಿಗೆ ವಾಪಸ್‌ಬಂದು ಸೇರಿದರು.

ಫ್ರೆಂಚ್‌ರಾಕ್ಸ್ ಡಿವಿಜನ್ ಯೆಗ್ಜಿಕ್ಯೂಟಿವ್ ಇಂಜನಿಯರಾಗಿದ್ದು ಕಾಸಿಲೆ ರಜಾಮೇಲೆ ಮದರಾಸಿಗೆಹೋಗಿದ್ದ ಮಿ ಇಸ್ಮಾಯಿಲ್ ಎಂಬವರು ಆದಿವಾರದೊಳು ಮೃತಪಟ್ಟರೆಂದು ತಿಳಿದು ಬಹಳ ವಿಷಾದಿಸುತ್ತೇವೆ.

ನಂಜನಗೂಡಿನಿಂದ ಚಾಮರಾಜನಗರದ ರೈಲ್ವೆ ಡಿಸ್ಟ್ರಿಕ್ಟು ಹಿರೋಟಿವರೆಗೆ ಇನ್ನು [illegible] ರೈಲ್ವೆ ಹಾಕಿಸುವ ಉದ್ದೇಶದೊಡನೆ, ಸರ್ವೆಮಾಡತಕ್ಕದ್ದೆಂದು ಗವರ್ನಮೆಂಟಿನವರು ದಕ್ಷಿಣ [illegible] ರೈಲ್ವೆ ಕಂಪೆನಿಯವರಿಗೆ ಹುಕುಂಮಾಡಿರುವಂತೆ ಕೇಳುತ್ತೇವೆ.

ಬರುವ ಬುಧವಾರದದಿನ ಶ್ರೀಮನ್ಮಹಾರಾಣೀ ರೀಜಂಟರವರು ಮೈಸೂರಿಗೆ ವಾಪಸ್‌ದಯಮಾಡುವರೆಂತಲೂ, ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದೂರವರು ಈ ತಿಂಗಳ ೨೪ನೇ ತಾರೀಖಿನಲ್ಲಿ ದಯಮಾಡುವರೆಂತಲೂ ತಿಳಿಯಬರುತಿದೆ.

ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್‌ದಾರರಾದ ಮೆ॥ ಎಸ್. ಶ್ರೀನಿವಾಸರಾಯರವರು ಹಂಗಾಮಿ ಡಿಸ್ಟ್ರಿಕ್ಟ ಪೋಲೀಸು ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟು ಅವರ ಕೆಲಸಕ್ಕೆ ಕೋಲಾರ ಡೆಪ್ಯುಟಿ ಅಮಲ್‌ದಾರ್ ಮೆ॥ ಎ. ಕೃಷ್ಣಸ್ವಾಮಿ ಅಯ್ಯಂಗಾರ್ರವರೂ, ಅವರ ಕೆಲಸಕ್ಕೆ ಮ॥ ನರಸಿಂಗರಾವ್ ಎಂಬವರೂ ನಿಯಮಿಸಲ್ಪಟ್ಟಂತೆ ಕೇಳುತ್ತೇವೆ.

ಈ ಸಂಸ್ಥಾನದ ದಿವಾನರವರಾದ ಸರ್ ಕೆ. ಶೇಷಾದ್ರಿಅಯ್ಯರವರು ರೆಸಿಡೆಂಟರವರೊಡನೆ ಈ ತಿಂಗಳ ೨೦ನೇ ತಾರೀಖಿನಲ್ಲಿ ಕಲ್ಕತ್ತೆಗೆ ಪ್ರಯಾಣಮಾಡುವರೆಂಬ ಪ್ರವಾದವುಂಟಾಗಿದೆ. ಈಪ್ರಯಾಣಕ್ಕೆ ಉಂಟಾದ ಕಾರ್ಯಕಾರಣಗಳು ಕೇವಲ ರಾಜಕೀಯ್ಯಗಳಾಗಿರಬೇಕಾಗಿರುವದರಿಂದ ಅದು ಸದ್ಯಕ್ಕೆ ಹೊರಪಡುವಸಂಭವ ತೋರುತ್ತಿಲ್ಲವು. ಪರಂತು ಪ್ರಜೆಗಳ ಊಹೆಗಳು ನಾನಾವಿಧವಾಗಿರುತವೆ. ಅದು ಅಸಹಜವಲ್ಲವು.

ಈಗ್ಗೆ ಒಂದು ವಾರದ ಮೊದಲು ಬಿಸಿಲು ಬ್ರೈ) ಮೈಕಾಲವಾಸಗಳಲ್ಲಿರುವಂತಿದೆ ರಾತ್ರಿ ಕಾಲದಲ್ಲಿ ಸೆಖೆಗೆ ಪ್ರಾರಂಭವಾಯಿತು, ಕೆರೆ ಕುಂಟೆಗಳಲ್ಲಿ ನೀರು ಬತ್ತಿಹೋಗಲಾರಂಭವಾಯಿತು. ಮನೆಗಳ ಬಾವಿಗಳಲ್ಲೂ ನೀರು ಇಳಿಯುತಲಿದೆ. ಜನಿಸಿಗಳ ದಾರಣೆಗಳು ಒಂದೇ ವಿಧವಾಗಿವೆ. ಜನಾರೋಗ್ಯವು ಸಾಮಾನ್ಯವಾಗಿದೆ. ದೈವಾತ್ ರೋಗಾದ್ಯುಪದ್ರವಗಳು ಜಾಸ್ತಿಯಾಗಿ ಇಲ್ಲವು.

ಪ್ಲೇಗರೋಗವು ಈ ದೇಶೀಯರ ಭಾಗ್ಯವಿಶೇಷದಿಂದ ಈ ದೇಶದೊಳು ಇದುವರೆಗೆ ಕಾಲಿಟ್ಟಿಲ್ಲವು, ಆದಾಗ್ಯೂ ಗವರ್ನಮೆಂಟಿನವರು ಮುಂಜಾಗ್ರತೆ ವಹಿಸಿ, ದೈವಾತ್ ಒಂದುವೇಳೆ ಇಲ್ಲಿಯೂ ತಲೆಹಾಕಿದರೆ ಕೂಡಲೆ ಅದರ ವ್ಯಾಪಕತೆಯಂ ನಿರೋಧಿಸುವದಕ್ಕೆ ಸಾಧ್ಯಗಳಾಗಿ ತೋರಿಬರುವ ಬಹುವಿಧ ಉಪಾಯಗಳಂ ಈಗಿನಿಂದಲೇ ಆಲೋಚಿಸಿ ಆವಶ್ಯಕಗಳಾದ ಏರ್ಪಾಡುಗಳನ್ನೆಲ್ಲ ಕೊರತೆ ಇಲ್ಲದೆ, ಈ ಪಟ್ಟಣದಲ್ಲಿ ಮಾತ್ರವಲ್ಲದೆ ಗ್ರಾಮಾಂತರಗಳಲ್ಲಿ ಸಹ ಅಲ್ಲಿನ ಪಟೇಲರು ಶಾನುಭೋಗರ ಮೂಲಕ ಮಾಡಿಸುತಲಿದ್ದಾರೆ.

ಕಳೆದ ಬೃಹಸ್ಪತಿವಾರದ ದಿನ ಹಗಲು ಸುಮಾರು ಮೂರು ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫೀಸಿನ ಕಾಂಪೌಂಡಿನಲ್ಲಿ ಕೆಲವರು ಖೈದಿಯರು ಕೆಲಸಮಾಡುತಿದ್ದರು [illegible] ಕಾಲದಲ್ಲಿ ಅವರಮೇಲೆ ಪಹರೆ ಇದ್ದ ಪೋಲಿಸ್ ಜವಾನನೊಬ್ಬನು ಒಬ್ಬ ಖೈದಿಯನ್ನು [illegible] ತನಗೆ ಬಲ್ಲಾಜ್ಜಿನವಕ್ಕೆ ಬೀಡಿ ತರುವಂತೆ ಹೇಳಲು ಸದರೀ ಖೈದಿಯು ಆಬಗ್ಗೆ ಹೋದವನು ತಿರುಗಿ ಬಾರದೆ ಪರಾರಿಯಾದನು. ತರುವಾಯ ಅವನನ್ನು ಹುಡುಕುವಲ್ಲಿ ಅದೇದಿನ ಮಿಲಿಟರಿ ಸ್ಟೇಷನ್ನಿನಲ್ಲಿ ಕುಡುಕೊಂಡು ಪತ್ತೆಗಿರಿಸೂ ಡಿಸ್ಟ್ರಿಕ್ಟ ಪೊಲೀಸಿಗೆ ಒಪ್ಪಿಸಲ್ಪಟ್ಟಿರುವಂತೆ ಕೇಳುತ್ತೇವೆ ಈ ಖೈದಿಯು ಕಂಟೋನ್ಮೆಂಟ ಮ್ಯಾಜಿಸ್ಟ್ರೇಟರಿಂದ ದಂಡಿಸಲ್ಪಟ್ಟು ಇಲ್ಲಿನ ಸೆಂಟ್ರಲ್ ಜೆಯಿಲ್‌ನಲ್ಲಿಡಲ್ಪಟ್ಟದ್ದರಿಂದ ಇವನನ್ನು ಸಿಟಿ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡುವವಕ್ಕೆ ಅಧಿಕಾರ ವುಂಟೆ ಎಂಬ ವಿಷಯದಲ್ಲಿ ಜಿಜ್ಞಾಸೆ ಯುಂಟಾಗಿ ಅವರ ಪ್ರಸಕ್ತಿಯ ಬಗ್ಗೆ ಚೀಫ್‌ಕೋರ್ಟಿಗೆ ಬರೆದಿರುವಂತೆ ತಿಳಿಯಬರುತಿದೆ.

ಕಳೆದ ನವಂಬರ್‌ತಿಂಗಳ ಮೊದಲು ಈ ಷಹರ್ ಮನೆಗಳ ಪಾಯಖಾನೆಗಳ ಪಾಕೀಜಾ ಕೆಲಸವನ್ನು ಮ್ಯೂನಿಸಿಪಾಲಿಟಿಯವರು ತಮ್ಮ ನೌಕರಿಗೆ ಸೇರಿದ ಹಲಾಲಖೋರರಿಂದ ಮಾಡಿಸುತ, ಆ ಬಗ್ಗೆ ಆಯಾ ಮನೆಗಳ ಕಂದಾಯದಮೇಲೆ

ಮುನಾಸಿಬ ತೆರಿಗೆ ವಸೂಲ್ಮಾಡಿನುತ ಬಂದರ ಷ್ಟು ಸದರೀ ಕಂದಾಯವು ಬಹಳ ಜಾಸ್ತೀ ಯೆಂದು ಪ್ರಜೆಗಳು ಮಾಡಿದ ಫಿರ್ಯಾದನ್ನು ಬೋರ್ಡಿನವರು ಮನಸ್ಸಿಗೆ ತೆಗೆದುಕೊಂಡು ಮರಳ ವಿಚಾರಣೆಮಾಡಿ ಹಿಂದಿನ ಕಂದಾಯವನ್ನು ಬಹಳಮಟ್ಟಿಗೆ ತಗ್ಗಿಸಿ ಇದರಡಿ ಕಂಡಂತೆ ಕಂದಾಯ ದರಗಳನ್ನು ನಿಷ್ಕರ್ಷಿಸಿರುತ್ತಾರೆ:—

ಸಾಲೀಯಾನಾ ಕಂದಾಯ.		ರೂ.	ಆ.	ಪೈ.
6½ ಇಂದ 2½ ರೂ॥ ಕಂದಾಯದ ಮನೆಗೆ		0	1	6
1½ ಇಂದ 4 ರೂ॥	,,	0	2	0
4 ರಿಂದ 6½ ರೂ॥	,,	0	3	0
6½ ಇಂದ 10 ರೂ॥	,,	0	4	0
10 ರಿಂದ 12 ರೂ॥	,,	0	6	0
12 ರಿಂದ 15 ರೂ॥	,,	0	8	0
15 ರಿಂದ 30 ರೂ॥	,,	1	0	0
30 ರಿಂದ 75 ರೂ॥	,,	1	8	0

ಮೇಲಿನಂತೆ ಕಂದಾಯಗಳನ್ನು ತಗ್ಗಿಸಿದ್ದು ಪ್ರಜೆಗಳಿಗೆ ಸಹಾಯವೆಂಬುದರಲ್ಲಿ ಸಂಶಯವಿಲ್ಲವು, ವರಂತು ಪ್ರತಿ ತಿಂಗಳಲ್ಲೂ ಇಂತ ಚಿಲ್ಲರೆ ಕಂದಾಯಗಳನ್ನು ವಸೂಲ್ಮಾಡುವುದು ಸುಲಭ ಸಾಧ್ಯವಾದ ಕೆಲಸವಾಗಿರುವದೆಂದು ನಾವೆಣಿಸಲಾರೆವು. ಒಂದೂವರೆ ಆಣೆ ಮೊದಲು ನಾಲ್ಕಾಣೆಯ ವರೆಗೆ ಕೊಡತಕ್ಕವರಿಂದ ಮೂರು ತಿಂಗಳಿಗೊಂದಾವರ್ತಿ ವಸೂಲ್ಮಾಡಿಸಿದರೆ ಮ್ಯೂನಿಸಿಪಾಲಿಟಿಯವರಿಗೆ ಸ್ವಲ್ಪ ಸೌಲಭ್ಯ ವುಂಟಾಗುವದೆಂದು ತೋರುತಿದೆ.

THE MYSORE GAZETTE.
ಮೈಸೂರು ಗೆಜೆಟ.

ತಾರೀಖು ೧೦ನೇ ಫೆಬ್ರವರಿ ೧೮೯೮.

ಅಪ್ಪಾಯಿಂಟ್‌ಮೆಂಟ್ಸ್ ನೇಮಕಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು ೬ನೇ ಫೆಬ್ರವರಿ ೧೮೯೮.

ನಂ॥ ೪೯೭೫—ಮಿ. ೧೪೦೯—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೪೪ನೇ ಆರ್ಟಿಕಲ್ ಅನುಸರಿಸಿ ಟೀಮಗೊಗ್ಗೆಯ ಅಸಿಸ್ಟೆಂಟ್ ಸರ್ಜನ್ ಮಿ॥ ಜೆ. ಎ. ಕೋಯಿಲ್ಹೋ ಎಲ್. ಎಂ. ವ ಎಸ್. ಯವರಿಗೆ ೧೮೯೭ ನೇ ಡಿಸೆಂಬರ ೯ನೇ ತಾರೀಖಿನಾರಭ್ಯ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು ೩ನೇ ಫೆಬ್ರವರಿ ೧೮೯೮.

ನಂ॥ ೯೧೬೩—ಜ್ಯು. ೧೧೦೮—ಕ್ರಿಮಿನಲ್ ಪ್ರೊಸೀಜರ ಕೋಡಿನ ೩೭ನೇ ಸಕ್ಷನ್ ಅನುಸರಿಸಿ ಮಾಗಡಿ ತಾಲ್ಲೂಕಿನ ಅಮಲ್ದಾರ ವ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾದ ಎಂ. ಎ ತಿರುಮಲಾಚಾರ್ರಿಗೆ ಸದರೀ ಕ್ಲಾಸಿನ ಮ್ಯಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೊಡಬಹುದಾದ್ದೆನೇ ಷೆಡ್ಯೂಲ್‌ನಲ್ಲಿ ಜಾಸ್ತೀ ಅಧಿಕಾರವಾಗಿ ವಿವರಿಸಿರುವ ಇವರಡಿ ಕಂಡ ಅಧಿಕಾರವು ಕೊಡಲ್ಪಟ್ಟಿರುತ್ತೆ:—

ದರ್ಖಾಸ್ತು ಬಗ್ಗೆ ಕಮ್ಮಿಟ್ ಮಾಡಲಿಕ್ಕೆ ಅಧಿಕಾರ ಸೆ॥ ೨೦೬.

ತಾರೀಖು ೫ನೇ ಫೆಬ್ರವರಿ ೧೮೯೮.

ನಂ॥ ೯೧೬೭.ಮಿ. ೧೪೬೭—ಪ್ರೊಬೇಷನರ್ ಅಸಿಸ್ಟೆಂಟ್ ಕಮಿಷನರರಿಗಳ ಇದರಡಿ ಕಂಡ ವರ್ಗಾವರ್ಗಗಳು ಹುಕುಂ ಮಾಡಲ್ಪಟ್ಟಿರುತವೆ ಮತ್ತು ಕೂಡ್ಲೆ ಚಾರ್ಜಿಯಲ್ಲಿ ಬರತಕ್ಕದ್ದು :—

ಮಿ॥ ವೆಂಕಟರಾಯರು, ಮೈಸೂರು ಡಿಸ್ಟ್ರಿಕ್ಟಿನಿಂದ ಕೋಲಾರ ಡಿಸ್ಟ್ರಿಕ್ಟಿಗೆ.

ಮಿ॥ ಆರಾವಮುದ ಅಯ್ಯಂಗಾರ್ರು, ಹೆಡ್‌ಕ್ವಾರ್ಟರ್ಸ್‌ನಿಂದ ತುಮಕೂರು ಡಿಸ್ಟ್ರಿಕ್ಟಿಗೆ.

ಮಿ॥ ಕೆ. ದಾಮೋದರರಾಯರು, ಬೆಂಗಳೂರು ಡಿಸ್ಟ್ರಿಕ್ಟಿನಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ

ತಾ॥ ೧ನೇ ಫೆಬ್ರವರಿ ೧೮೯೮.

ನಂ॥ ೭೨೦೧—ರಿ. ೨೪೩೨—ಇದರಡಿ ಕಂಡ ಅಮಲ್ದಾರ್ರುಗಳ ವರ್ಗಾವರ್ಗಗಳು ಹುಕುಂಮಾಡಲ್ಪಟ್ಟಿರುತವೆ—

ಟಿ. ಚೊಕ್ಕಣ್ಣ, ಬಿ. ಎ. ಯವರು ಬಾಗೇಪಲ್ಲಿಯಿಂದ ಚಿಕ್ಕಬಳ್ಳಾಪುರತಾಲ್ಲೂಕಿಗೆ.

ಸಿ. ನಾರಾಯಣರಾಯರು, ಚಿಕ್ಕಬಳ್ಳಾಪುರದಿಂದ ಬಾಗೇಪಲ್ಲಿ ತಾಲ್ಲೂಕಿಗೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ನ್ಯೂಯಾರ್ಕ್ ಪಟ್ಟಣದಲ್ಲಿ ಗಾಡಿಹೊಡೆಯುವ ಕೆಲಸವನ್ನು ಹೆಂಗಸರೇ ಮಾಡುತ್ತಿರುವರು.

ಇಂಗ್ಲೆಂಡ್ ಮತ್ತು ವೇಲ್ಸ್ ದೇಶಗಳಲ್ಲಿ ಮದುವೆಯಿಲ್ಲದ ಗಂಡಸರಿಗಿಂತಲೂ ಮದುವೆಯಿಲ್ಲದ ಹೆಂಗಸರು ೭೩,೦೦೦ ಜನರಿರುವರು.

ಪಂಜಾಬಿನಲ್ಲಿರುವ ಹೋಷಿಯಾರ್‌ಪುರದ ಎಂಬಲ್ಲಿ ಪ್ಲೇಗ್ ರೋಗವು ಪ್ರಬಲವಾಗಿ, ದಿನವೂ ೧೦೦ ಜನರವರೆಗೆ ಸಾಯುತಿರುವಂತೆ ವರ್ತಮಾನವಿದೆ.

ಅಕೋಲಾದಲ್ಲಿ ಜಾನೂ ಎಂಬೊಬ್ಬ ಹೊಲೇಜಾತಿಯವನು ಗೋಹತ್ಯ ಮಾಡದೆ ಅದನ್ನು ರಕ್ಷಣ ಮಾಡಬೇಕೆಂದು ಉಪದೇಶಮಾಡ ತೊಡಗಿದ್ದಾನೆ. ಇವನು ಯೋಗ್ಯ.

ದಿಲಾಯತಿಯಲ್ಲಿ ಒಬ್ಬನು ಮುರುಕು ಪೆಟ್ಟಿಗೆಗಳನ್ನು ಹರಾಜಿನಲ್ಲಿ ಖರೀದಿಗೆ ತೆಗೆದುಕೊಂಡನು. ಅವನ್ನು ಪರಿಶೋಧಿಸಿ ನೋಡುವಲ್ಲಿ ಒಂದು ಪೆಟ್ಟಿಗೆಯಲ್ಲಿ ೨ ಲಕ್ಷ ರೂಪಾಯಿಗಳ ನೋಟುಗಳು ದೊರದವು. ಧನ್ಯನಾದಂತಾಯಿತು.

ಫ್ರಾನ್ಸ್ ದೇಶದ ಕಡೆಯ ರನ್ನರ ಜನರಿಗೆ (ಪ್ಲೇಗ ರೋಗಿ ಟಪಾಲ್ ಒಯ್ಯುವವರಿಗೆ) ಬೈಸಿಕಲ್ ಮದ್ದತ್ತು ಕೊಡುವ ವಿಷಯವಾಗಿ ಹಿಂದುಸ್ತಾನದೊಳಗಿನ ಪೋಸ್ಟ ಖಾತೆಯ ಕಡೆಯ ಅಧಿಕಾರಿಗಳ ವಿಚಾರವು ನಡೆದಿರುತದೆ.

ನಿಜಾಂ ಸರ್ಕಾರದವರು ಮೊನ್ನೆ ಆದ ಸೂರ್ಯಗ್ರಹಣದ ದಿವಸ ಐವತ್ತು ಜನ ಖೈದಿಗಳನ್ನು ಬಂಧಮುಕ್ತರನ್ನಾಗಿ ಮಾಡಿದ್ದಲ್ಲದೆ ಅವರಿಗೆ ಅನ್ನದಾನ, ವಸ್ತ್ರದಾನ ಮತ್ತು ದ್ರವ್ಯದಾನ ಮಾಡಿದರೆಂದು ತಿಳಿಯಬರುತದೆ.

ಬರ್ಮಾದೇಶಕ್ಕೆ ಸೇರಿದ ಮೌಲ್ಮೀನ ಪಟ್ಟಣದಲ್ಲಿ ಮಹಾರಾಣಿಯವರ ವಿಕ್ಟೋರಿಯಾ ಆಕಾರದಷ್ಟು ಬಹು ಸುಂದರವಾದ ಒಂದು ಶಿಲಾ ಪ್ರತಿಮೆಯನ್ನು ಬರ್ಮಾ ದೇಶದ ಶಿಲ್ಪಿಯು ತಯಾರ್ಮಾಡಿರುತ್ತಾನೆ.

ಇಂಗ್ಲೆಂಡಿನಲ್ಲಿ ಸೂರ್ಯಗ್ರಹಣವು ಪೂರ್ಣಗ್ರಾಸವಾಗಿ ಕಂಡದ್ದು ೧೭೨೪ನೇ ಇಸವಿ ಮೇ ೨೨ರಲ್ಲಿ, ಆಮೇಲೆ ಇಲ್ಲ. ಮುಂದೆ ಆಂತ ಪೂರ್ಣಗ್ರಾಸವಾದ ಸೂರ್ಯಗ್ರಹಣವು ೧೯೨೭ನೇ ಇಸವಿ ಆಗಸ್ಟ್ ೨೯ನೇ ತಾರೀಖಿನಲ್ಲಿ ಕಾಣಿಸುವದೆಂದು ಜೋತಿಷ್ಕರು ನಿಶ್ಚಯಿಸಿರುವರು.

ತ್ರಿಚನಾಪಳ್ಳಿಯಲ್ಲಿ ಒಬ್ಬ ನಾಯರ್ ಹುಡುಗನಿಗೆ ಕಳೆದ ಟರ್ಮ್ ಸೆಕಂಡರಿ ಪರೀಕ್ಷೆಯಲ್ಲಿ ಪ್ಯಾಸಾಗಲಿಲ್ಲವು. ಆದಕ್ಕಾಗಿ ಅವನ ತಂದೆಯು ಅವನನ್ನು ಸ್ವಲ್ಪ ಕಠಿಣವಾಗಿ ದಂಡಿಸಿದನು. ಆ ಹುಡುಗನು ಅಪಮಾನವನ್ನು ತಡೆಯಲಾರದೆ ತನ್ನ ಕೊಠಡಿಯೊಳಕ್ಕೆ ಹೋಗಿ ಬಂದೂಕಿನಿಂದ ಆತ್ಮಹತ್ಯ ಮಾಡಿಕೊಂಡನು.

ಅಯೋಧ್ಯಾ ಪಟ್ಟಣದ ಮಾಜೀ ಸುಲ್ತಾನರ ಪುತ್ರರಾದ ಪ್ರಿನ್ಸ್ ಮೆಹರ್ದ್ದಾನ್ ಮಿರ್ಜಾ ಬಹದೂರ್ ಯವರು ತಮ್ಮ ಧರ್ಮ ಪತ್ನಿಯನ್ನು ತ್ಯಜಿಸಿಬಿಟ್ಟು, ಆಕೆಗೆ ಜೀವನಾಂಶ ಕೊಡುತ್ತಿದ್ದರು. ತಮ್ಮ ೨॥ ವರುಷ ವಯಸ್ಸಿನ ಪುತ್ರನನ್ನು ಆಕೆಯ ಸ್ವಾಧೀನದಿಂದ ಬಿಡಿಸಿಕೊಡಬೇಕೆಂದು, ಆಕೆಯಮೇಲೆ ಫಿರ್ಯಾದ್ ಮಾಡಿರುತ್ತಾರೆ.

ರಾಣಿಗಂಜಿನಲ್ಲಿ ಬೆರ್ಕ ಬಜಾರಿ ಫೌಜ್ ಎಂಬ ಬಂಗಾಳಿಯು ಆರು ಜನಗಳ ಸಂಗಡ ಸೇರಿಕೊಂಡು, ಯೌವನವತಿಯರಾದ ಇಬ್ಬರು ಹುಡುಗಿಯರಿಗೆ ಬೋಧನೆ ಮಾಡಿ ಅವರ ಮನೆಯಿಂದ ಕರೆದುಕೊಂಡು ಹೋಗಿ, ತಮ್ಮ ಬಂಗಲೆಯಲ್ಲಿ ಇಟ್ಟುಕೊಂಡಿದ್ದರು. ಕಲ್ಕತ್ತಾ ಹೈಕೋರ್ಟ ಜಡ್ಜಿಗಳು ಈ ೭ ಜನರಿಗೂ ಒಂದೊಂದು ವರುಷ ಪ್ರಕಾರ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಸಂಗಮೇಶ್ವರದ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಗೃಹಸ್ಥನಿಗೆ ಸುಮಾರು ೨೦ ದಿನಗಳ ಕೆಳಗೆ ಒಂದು ವಿಚಿತ್ರ ಲಕ್ಷಣದ ಮಗು ಹುಟ್ಟಿತು. ಈ ಮಗುವು ಕಿರೀಟದ ಆಕೃತಿಯುಳ್ಳ ತಲೆಯುಳ್ಳದ್ದಾಗಿಯೂ ಒಂದು ಸಣ್ಣ ಬಾಲ ಪೃಷ್ಠದಲ್ಲಿಯೂ ಇದೆ. ಜನನ ಕಾಲದಲ್ಲಿ ಇದರ ಬಾಲವು ೩ ಅಂಗುಲ ಇದ್ದದ್ದು ಈಗ ೪ ಅಂಗುಲ ಉದ್ದವಾಗಿ ಬೆಳೆದಿದೆಯೆಂದು ಅಪರಾಂತದ ಪತ್ರಿಕೆಯೊಂದು ತಿಳಿಸುತ್ತದೆ.

ನಮ್ಮವರಲ್ಲಿ ಪೂರ್ವಕಾಲದಲ್ಲಿ ಅಂದರೆ ರಾಮಾಯಣ ಮಹಾಭಾರತ ಕಾಲಗಳಲ್ಲಿ ಯುದ್ಧರಂಗಗಳಲ್ಲಿ ರಥಗಳನ್ನು ಉಪಯೋಗಿಸುತ್ತಿದ್ದರಷ್ಟೇ. ಇನ್ನುಮೇಲೆ ಬರತಕ್ಕ ಯುದ್ಧಕಾಲಗಳಲ್ಲಿ ರಥಗಳನ್ನು ಉಪಯೋಗಿಸುವ ಕಾಲವು ಬರುವಂತೆ ತೋರುತದೆ. ಈಗ ಜರ್ಮನಿಯಲ್ಲಿ ಮಿ॥ ಹಾಕಲೆಂಬಾತನು ಒಂದು ಬಂಡಿಯನ್ನು ತಯಾರ್ಮಾಡಿರುವಂತೆಯೂ, ಅದರೊಳಗೆ ಗುಂಡು ಹಾರಿಸುವ ತುಪಾಕಿಗಳು ಶತ್ರುಗಳನ್ನು ಹೊಡೆಯುತ ಬರಬಹುದೆಂತಲೂ, ಬಂಡಿಯಲ್ಲಿರತಕ್ಕ ರಥಿಕನಿಗೆ ಶತ್ರುಗಳಿಂದ ಪೆಟ್ಟು ತಾಕದಂತೆ ಆ ರಥಕ್ಕೆ ಒಂದು ಉಕ್ಕಿನ ಎರಡಿ ಇರುವದೆಂತಲೂ ತಿಳಿಯಬರುತದೆ.

ಪುಣೆಯಿಂದ ಪರಸ್ಥಳ ಪ್ರಯಾಣ ಮಾಡತಕ್ಕವರನ್ನು ಆರು ದಿನಗಳ ವರೆಗೆ ಊರ ಹೊರಗಿಟ್ಟದ್ದು ಆದಮೇಲೆ ಮುಂದಕ್ಕೆ ಹೊರಡಲು ಬಿಡುತಿದ್ದರು. ಆದರೆ ಪುಣೆಯಲ್ಲಿ ಪ್ಲೇಗ್ ರೋಗವು ಈಗ ಒಮಮಟ್ಟಿಗೆ ಕಡಿಮೆಯಾಗಿರುವದರಿಂದ ಕಳೆದ ತಿಂಗಳ ೨೬ನೇ ತಾರೀಖ್ ಲಾಗಾಯಿತು ಹೀಗೆ ಎಲ್ಲರನ್ನು ಕ್ವಾರಂಟೈನ್ ಇಡುವ ಪದ್ಧತಿಯನ್ನು ತಪ್ಪಿಸಿ ಡಾಕ್ಟರ್ ಪರೀಕ್ಷೆಯಲ್ಲಿ ಅನುಮಾನ ತೋರುವವರನ್ನು ಮಾತ್ರ ಕ್ವಾರಂಟೈನಲ್ಲಿ ಇಡುವಂತೆ ನಿರ್ಧಾರವಾಗಿರುವದು. ಪೂನೆ ಪಟ್ಟಣದ ಸುತ್ತಲೂ ವಿಭಾಗಿಸಿ ಪಹರೆಯನ್ನಿಟ್ಟು ನಾಲ್ಕು ರಸ್ತೆಗಳನ್ನು ಮಾತ್ರ ಪ್ರಾತಃಕಾಲ ೫ ಘಂಟೆಲಾಗಾಯಿತು ರಾತ್ರಿ ೯ ಘಂಟೆಯವರೆಗೂ ಪಟ್ಟಣದೊಳಕ್ಕೆ ಹೋಗಿ ಬರತಕ್ಕವರಿಗಾಗಿ ಖುಲ್ಲಾ ಇಟ್ಟಿರುವರು.

ಗೋವೆ(ಪ್ರಾಂತ)ದಲ್ಲಿ ಶಾಂತಾದುರ್ಗಾ ಎಂಬ ಹೆಸರಿನ ಒಂದು ಪ್ರಾಚೀನ ಮತ್ತು ಪ್ರಸಿದ್ಧ ದೇವಸ್ಥಾನವಿದ್ದು, ಈ ದೇವಸ್ಥಾನದಮೇಲೆ ಹೋದ ಆಚೆಯ ಕಸಬಾರ ಅಂದರೆ ಸೂರ್ಯಗ್ರಹಣ ಹಿಡಿದ ದಿವಸ ದರೋಡೆ ಬಿದ್ದು ಲಕ್ಷ ಸವ್ವಾಲಕ್ಷ ರೂಪಾಯಿಗಳ ಮಾಲುಗಳು ಕಳವಾಗಿ ಹೋಗಿರುತ್ತದೆ. ಶನಿವಾರದಿವಸ ಸಾಯಂಕಾಲದಲ್ಲಿ ೩೫–೪೦ ಜನ ಹತ್ಯಾರ್‌ನಿಂದ ಬಂದ ದರೋಡೆಖೋರರು ದೇವಾಲಯದಲ್ಲಿ ಹೊಕ್ಕು ಅಲ್ಲಿದ್ದ ೩ ಜನ ಪರಿಚಾರಕರನ್ನು ಚೆನ್ನಾಗಿ ಮರ್ದಿಸಿ ಮುಖ್ಯ ದೇವಿಯನ್ನು ಕಿತ್ತು ತೆಗೆದುಕೊಂಡರು. ಈ ದೇವಿಯು ಬಂಗಾರದ್ದಿತ್ತು. ಈ ದೇವಿಯನ್ನು ಹೊತ್ತದ್ದರಿಂದಲೇನೆ ತೃಪ್ತಿಯಾಗದೆ, ದೇವಾಲಯದೊಳಗಿನ ಜವಾಹಿರ್ ಮತ್ತು ಬೆಳ್ಳಿ ಐವಜುಗಳನ್ನು ತೆಗೆದುಕೊಂಡು ಹೊರಟು ಹೋದರು. ಇದೇಪ್ರಕಾರ ಹೋದ ಒಂದೆರಡು ತಿಂಗಳಲ್ಲಿ ೨—೩ ರಿಕಾಣಿಗಳು ದರೋಡೆ ಚೋರರು ತಮ್ಮ ಅಮಲ್ ಉಪಯೋಗಿಸಿರುತ್ತಾರೆ. ಈ ದರೋಡೆಯವು ಆ ದೇಶದವರೇ ನಮ್ಮ ಜಿಲ್ಲೆಯೊಳಗಿನ ಪ್ರಸಿದ್ಧ ವಾಣಿಜ್ಯ ಪುರದವರೆಂದು ಬಹುಜನರು ತಿಳಿದಿದ್ದಾರೆ. ಈಗಲಿ ನಡೆದ ಚೋರಿಯಲ್ಲಿ ಎಲ್ಲರೂ ಪಠಾಣರಿರದೆ ೯ ಜನ ಪಠಾಣರು, ಬಾಕಿಯವರು ಹಿಂದೂಗಳಿದ್ದರೆಂದು ತಿಳಿಯಬರುತದೆ ಇನ್ನೂ ವರೆಗೂ ದರೋಡೆ ಹೋದವರ ಮತ್ತು ಮಾಲಿನ ಪತ್ತೆ ಇಲ್ಲವು.—ಸ. ವೈ.

ಮುಂಬೈಯಲ್ಲಿ ಪ್ಲೇಗಿನ ಹಾವಳಿಯು ಹೆಚ್ಚು ಹೋಗಿದೆ. ನಿತ್ಯ ೩೦೦ ಜನರು ಎಲ್ಲ ರೋಗಗಳಿಂದ ಕೂಡಿ ಸಾಯುತ್ತಾರೆ. ಪ್ಲೇಗ್ ಚಿಕಿತ್ಸೆಗೊಳ್ಳುವ ಕೆಲಸವು ನಡೆದದೆ, ಅಲ್ಲಿಯ ಕ್ವಾರಂಟೈನ ವನ್ನು ತೆಗೆಯಲಾಗಿದೆ. ಜನರಿಗೆ ಹೋಗಿ ಬರಲಿಕ್ಕೆ ಆತಂಕವಿಲ್ಲ. ಪುಣೆಯಲ್ಲಿ ರೋಗವು ಇಳಿತರಕ್ಕೆ ಬಂದಿದೆ. ಈಗ್ಯೆ ಸಾವಿನಪ್ರಮಾಣವು ೬–೮ರ ವರೆಗಿದೆ, ಬೆಳಗಾಂವಿಯಲ್ಲಿಯೂ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಲೂ, ಹೆಚ್ಚಾಗುತ್ತಲೂ ಅದೆ ಬೆಳಗಾಂವಿಯು ಕಡೆಯಿಂದ ಬರುವವನನ್ನು ತೇಗೂರದಲ್ಲಿಯೂ, ಗೈಸ್ತಿಯ ಕ್ವಾರಂಟೈನದಲ್ಲಿಯೂ ಕೂಡ್ರಿಸುವದರಿಂದ ಊರಿಗೆ ಪ್ಲೇಗಿನ ಹಾವಳಿಯು ಬಾರದಾದದಲ್ಲ ಆದರೆ ಸರಕಾರೀ ಕೆಲಸದ ನಿಮಿತ್ತವಾಗಿ ಬರುವವರನ್ನು ಹಾಗೇ ಬಿಡುತ್ತಿರುವದರಿಂದ ಯಾವಾಗ್ಯೆ ಏನಾಗುತ್ತದೆಂಬುದು ಹೇಳಲಿಕ್ಕೆ ಬರುವಂತಿಲ್ಲ. ಹುಬ್ಬಳ್ಳಿಯಲ್ಲಿ ಪ್ಲೇಗ್‌ಕೇಸ ಇಲ್ಲವೆಂದು ನಮ್ಮ ಲೋಕಲ್ ಸುಧಾರಕ ಫಲಕಗಳು ಅಭಿಪ್ರಾಯ ಪಟ್ಟಿರುವರೆಂದು ತಿಳಿಯುತದೆ ಯಾಕಂದರೆ ಹುಬ್ಬಳ್ಳಿಯಲ್ಲಿ ೧೨–೧೫ ದಿವಸ ನಂತರ ಒಂದು ಕೇಸು ಆಗುತ್ತಿದ್ದು ನಿಜವಾದ ಪ್ಲೇಗನೇ ಆದರೆ ನಿತ್ಯ ಹತ್ತುಹದಿನೈದು ಸಾವುಗಳಾಗುತ್ತಿದ್ದವು. ಆದಕಾರವೇನೂ ಇರದ್ದರಿಂದ ಅಲ್ಲಿಯ ಡಾಕ್ಟರ್ ಮುಂತಾದವರಿಗೆ ತೀವ್ರವೇ ಆಪ್ಪಣೆಕೊಡುವ ವಿಚಾರ ಉಂಟೆಂಬರ್ಥದ ಮುಂಬಯಿ ಅಲ್ಲಿಯ ಪತ್ರದಲ್ಲಿ ಧ್ವನಿತವಾಗಿದೆ.

ADVERTISEMENT.

Bangalore City Municipality
ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

೨೦ನೇ ನಂಬರ ಉಪನಿಬಂಧನೆಯನ್ನನುಸರಿಸಿ ಕೊಡಲ್ಪಟ್ಟ ನೋಟಿಸ.

ಕಲ್ಲುಗಳಿಂದ ಪಾಯಖಾನೆ ಗುಂಡಿಗಳನ್ನು ಕಟ್ಟಿಸುವಿಕೆ.

ಸಿಟಿ ಮ್ಯೂನಿಸಿಪಾಲಿಟಿಯ ಬೈಲಾ ೨೦ನೇ ಸೆಕ್ಷನ್ ಅನುಸರಿಸಿ ಪಾಯಖಾನೆ ಗುಂಡಿಗಳನ್ನು ಕಲ್ಲುಗಳಿಂದ ಕಟ್ಟಿಸಬೇಕಾದವರಿಗೆ ಇದರಿಂದ ತಿಳಿಸಲ್ಪಡುವದೇನಂದರೆ,— ಈ ಉಪನಿಬಂಧನೆಯ ನಿಯಮಗಳಿಗೆ ಅನುಸಾರವಾಗಿ ನಡೆಯಬೇಕಾದ ವಿಷಯದಲ್ಲಿ ಮನೆಗಳ ಯಜಮಾನರಿಗೆ ಸಹಾಯ ಮಾಡುವದಕ್ಕಾಗಿ, ಪಾಯಖಾನೆ ಗುಂಡಿಗಳನ್ನು ಕಟ್ಟಿಸುವದಕ್ಕೆ ಹಿಡಿಯಬಹುದಾದ ಅಂದಾಜು ಮೊಬಲಗನ್ನು ಠೇವಣಿ ಇಡುವಂತವರಿಗೆ ಮ್ಯೂನಿಸಿಪಾಲಿಟಿಯವರು ಸದರೀ ಕಾಮಗಾರಿಯನ್ನು ಮಾಡಿಸಿಕೊಡುವರು. ಪಾಯಖಾನೆ ಗುಂಡಿಗಳನ್ನು ಕಟ್ಟಿಸಿಕೊಡುವಬಗ್ಗೆ ಅರ್ಜಿಗಳನ್ನು ಸಿಟಿ ಮ್ಯೂನಿಸಿಪಾಲಿಟಿ ಆಫೀಸಿನಲ್ಲಿ, ಸಾನಿಟರಿ ಇಲಾಖೆಗಳಲ್ಲಿ, ಡಿವಿಜನ ಕನ್ಸರ್ವೆನ್ಸಿ ಓವರ್‌ಸಿಯರರಿಗಳಲ್ಲಿ ಪಡೆದುಕೊಳ್ಳಬಹುದು

ಬೆಂಗಳೂರು, ೩೧ನೇ ಡಿಸೆಂಬರ ೧೮೯೭. | T. T. LEONARD, *President,* *City Municipal Commission.*

VAIDYASARA SANGAHA.

A TREATISE ON THE PRINCIPLES OF HINDU MEDICINE

Price, including Postage Rs. 5–0–0.

ವೈದ್ಯಸಾರಸಂಗ್ರಹ.

ಇದು ಚರಕ, ಸುಶ್ರುತ, ವಾಗ್ಭಟ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುವದೆ, ಇದರ ಕ್ರಯ—ಸ್ಟ್ಯಾಂಪಿಂಗ ಮತ್ತು ಅಂಚೆ ಹಾಸಲ್ ಬೆಲೆ ಪ್ರತಿ ೧ಕ್ಕೆ ೫—೦—೦ ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

ಈ ಕಂಪೆನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತತ್ತಿಯು.

ಅತ್ಯುತ್ಕೃಷ್ಟಕರವಾದ ಖರ್ಜೂರದಿಂದ ತಯಾರಿಸಿದ ಈ ಉತ್ತತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ನೆನಸಿ, ಒಳ್ಳೇ ಡಬ್ಬಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ತತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವವಿದ್ದವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ನೂವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೩೦ ವರ್ಷಗಳ ಪ್ರಾಯದಲ್ಲಿ ಮುದುಕರ ಕಾಮವಿಕಾರವಾದರೂ ತರೆಯಾದ ಗಂಡಸರಂತೆ ಪ್ರಜ್ವಾಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಹೆಚ್ಚಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಸಿಪ್ಪಿಯ ಮುಂಚೆ ಅಥವಾ ಹಿಂಚೆ ಪರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ಲವಣ್ಯವು ಬೆಳೆದು ಮೈಬಣ್ಣವು ಸುಧಾರಿಸುತ್ತವೆ. ಪರಸ್ತ್ರೀಗಮನ ಇಂದ್ರಿಯಸಂಬಂಧಿಕ ರೋಗಗಳಾವುವೂ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿನವರೆಗೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ಪಷ್ಟ ಸೌಚಕ್ಕಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ರೋಗ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದಿದ್ದಲ್ಲಿ ೪೦ ದಿವಸಗಳ ಮೇಲೆ ಗುಣ ಬಂದೀತು. ೧೧ ದಿನಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧–೪–೦ ರೂ॥ ಒಂದೇವ್ಯಕ್ತಿಗೆ ೬ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ನಾನಾ ಬಗೆಯ ರೋಗಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ರೋಗ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಸಾಧಾರಣ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯಶಾಸ್ತ್ರಗಳಿಗಾಗಿ ಕಳುಹಿಸಲ್ಪಡುತ್ತವೆ. ಬರೆದು ಬಂದ ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಸಲು ವ್ಯಾಲ್ಯು ಪೇಯಬಲ್ ವೆಚ್ಚ ಬೇರೆ ಕೊಡಬೇಕು ಉಚಿತ ಡಬ್ಬಿ ಸಹ ೭ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಿಮೆ ಬೀಳುವದು.)

ಮೇಲ್ವಿಳಾಸ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ್ ಬ್ಯಾಂಬ್ ಆಫೀಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGAUM.

BANGALORE :—Printed and Published at the KARNATAKA PRESS, No. 40, HOSPITAL ROAD,—1898.

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಸಂ. 1 ಕ್ಕೆ ... 3 0 0	ಸಂ. 1 ಕ್ಕೆ 4 0 0
6 ತಿಂಗಳಿಗೆ ... 2 0 0	6 ತಿಂಗಳಿಗೆ 2 8 0
3 ತಿಂಗಳಿಗೆ ... 1 1 0	3 ತಿಂಗಳಿಗೆ 1 8 0

VOL. XXV. BANGALORE:—MONDAY, FEBRUARY 21, 1898. No. 8.

Select Telegrams.

London, 12th February—In the Commons this evening, Mr John R Imond brought for ward an amendment to the address in favour of an Independent Irish Parliament and Executive, which was rejected by a majority of 158 votes. Sir William Harcourt declined to support it, on the ground of the hopelessness of supremacy. The Irish voted with the majority.

Reuter wires from Pekin that Britain has been granted the right to extend the Burma Railway through Yunnan.

London, 14th February,—Great Britain is negotiating at Peking for the navigation of inland waters, and the opening of the Yuen chou, in the Yunnan Province.

London 14th February—The Russian cruiser *Tamboff* has left Odessa for Vladivostock with a thousand troops on board.

London 16th February—Sir William Harcourt and Mr Balfour wound up the debate on the frontier policy, which the former denounced, and especially attacked Sir George White's Simla speech as being most culpable and dangerous. Mr Balfour, who defended Sir George White, said that he was unable to give the slightest hope of any avoidance of complications on the frontier but did hope that influence which had been successfully exercised northward and southward of the disturbed district might slowly and cautiously be further extended.

Mr Phillips, Liberal candidate has been elected member for Pembroke, defeating Mr Campbell, Conservative candidate, by 1 670 votes and replacing Mr Davies, Liberal member, who resigned his seat owing to his taking up a Colonial appointment. The polling was as follows —Phillips, 5 070, Campbell, 3 400 votes.

THE

Karnataka Prakasika.

MONDAY, FEBRUARY 21, 1898.

IMPECUNIOUS ZEMINDARS

It is to be feared that many of the Zemindars of Southern India are in a poor way. They are fearfully involved in debt, they derive very little from their estates, and have to borrow on every occasion. Thus a debt which might have been small at first becomes something fearful in amount, and completely overwhelms the borrower. He gets into the hands of unprincipled men whose interest it is to keep him down, so that they make money out of him. They lend him small sums when he is in great distress, or when a warrant is issued against him, at enormous interest, and thus his burdens are increased, till at last he sinks under them altogether. There are many men so situated in the Madras Presidency, and if help is not obtained soon they will have to be sold up, and perhaps left entirely penniless. These men place too much confidence on the Government. They believe it will come to their rescue rather than see them sold up entirely, but in this they are mistaken. The Government cannot help them if it wished. There are rules against this, and these must be obeyed. In addition the State has no money to spare. It requires all it has, and more, to carry on the work of the Government, and it is not the slightest use for an impecunious Zemindar trusting to this source to procure money. It will not be forthcoming. The sooner the Zemindars are thrown on their own resources the better it will be for them. They have too long trusted to Government, and it has failed them. They should now trust to themselves. But if the Government cannot help these Zemindars the rich Indians might do so. For instance they might form Syndicates, collect the money required, then lend it on the mortgage of estates. The lenders would have to take the management of an estate on which money had been advanced into their own hands, till the whole amount had been paid up. This is the way the Sivagunga estate is now being managed by the mortgagees, and in a few years the Zemindary will be free from debt and given back to its owner. The lenders in this case are not Natives, but Europeans. In any case the estate is being cleared, and it is a pity that Native millionaires do not follow the example of the man who lent money to Sivaganga. It is very strange that men who possess money do not care to invest it in land. In England this is considered the highest kind of investment. It may not give the highest rate of interest, but still people either buy or take land on mortgage whenever had an opportunity for so doing. Money is sometimes obtained from England to free these estates from debt, but in this case, the interest on the money has to be sent to England, and is lost to India. We feel certain that unless something is done to help the Zemindars many of them will be swept out of existence before long. Their creditors, with the help of the courts will sell them up, and they will no more be heard of. This would be a great pity. The Zemindaries have been in existence for hundreds of years—some of them, at least—and they ought to be preserved. But something more is required. The rising generation of Zemindars must be educated. As a rule they are sunk in the grossest ignorance. Some of them cannot even write their own names, while the flatterers about them make them believe they are the greatest, and the cleverest men in the land. A change is required, and the Government should insist on the sons of the Zemindars being educated just as it insists on the sons of Princes being taught properly. Till this has been done very little good will be achieved. Education is the chief thing required, and the Government should take the matter in hand at once.

BAD ROADS

The roads in the Civil and Military Station are in a poor way, and repairing them does not seem to do much good. The same may be said of some of the roads in the City. In the Station, however well they may seem to be mended, they are soon in holes again, and the reason is that the laterite used is of a poor kind. The carriages that go over the roads grind it into powder, just as flour is ground in a mill. The dust lies thick on the roads, and when the wind rises it is blown about, and gets into the eyes and lungs of those who pass over them. Even without wind the dust arises, simply by the motion of the carriages. The road from the Station to the Lal Bagh is a terrible instance of the way the laterite is ground up. The material is very soft, and it is almost useless to mend the roads with such stuff. Better material should be found, and in the end it would be cheaper to use it than the rubbish now used. Better laterite could be got, but it would have to be fetched from a greater distance, and, of course, would cost more. The soft stone is nearer the town, consequently it is used. But we feel assured this is very poor economy, and the sooner a change is made the better will it be for those who use the roads and the tax payers in general. We all have heard the saying—"Cheap and nasty"—and it holds good in the case of the Bangalore roads and the way they are repaired. Then again the dust people inhale must cause much sickness, and this is another reason why the present way of mending the roads should not be allowed to go on.

News and Notes

A Society has recently been started with the object of proving that the earth is not round but flat.

An orange tree will bear fruit till 150 years old, and there are recorded instances of orange trees bearing when 500 years old.

The Plague in Bombay is thwarting all human endeavours. In spite of all preventive measures the dire epidemic has broken out in the Hyderabad State.

Sir Auckland Colvin we are glad to see, condemns the breach of promise involved in the withdrawal of the offer to pay the Frontier War bill in part, if not in full out of the British Treasury.

A monkey died of plague in Belgaum city only a short time ago. When brought to the Municipal office for *post mortem* examination it was found that it had no less than four buboes in the throat and groins.

The recent addition to Currency legislation made by the Government of India does not seem to have been well received in England. The *Times* expresses the opinion that there is not much likelihood of gold being tendered or "deposited" in London on the terms proposed.

In Norway, a law provides that no person, shall be permitted to cut down a tree unless he plants three saplings in its place. This is an excellent device for preventing the denudation of the country of its trees. In India similarly, it was considered an act of great religious merit to plant trees.

A young lady in Soochow recently married a flower vase. A few days before her contemplated marriage her lover had died. The bride vowed she would never marry, but to an inmate of her betrothed's family where she could observe her widowhood. To ensure this she went through a form of marriage with a red flower-vase.

The Hon'ble P M Mehta has returned to Bombay after an absence of about ten months in England. The *Gujarati* in welcoming him back refers to the eventful and memorable period in the annals of Bombay when the necessity of his advice and guidance was deeply felt, and adds "Bombay without the Hon'ble Mr Mehta was like the Liberal party without its Gladstone."

Who says superstition has lost caste in Europe or among Christians? On the Feast of the Epiphany the annual ceremony of blessing the waters of the Neva and sprinkling the military standards was performed in the presence of the Czar and the Grand Dukes in a pavilion erected on the edge of the river on the Palace quay. The immersion of the cross was followed by a salvo of artillery.

The prominence of Indian questions just now has determined the Indian Committee to take a rather novel step. It has decided to send to the constituencies which are being contested some natives of India competent to address the electors, and to deal with questions current about India. The Liberal ... has so far approved that it has intimated to the Liberal agents this desire and left them to make their own arrangements.

Mr. Basivi Reddi, a wealthy and philanthropic *rais* of Cocanada, is now adding a most enduring monument to his generous-hearted munificence and liberality. Mr. Basivi Reddi has done much to relieve distress in the recent famine, and has besides given a lakh of rupees for a choultry for twenty two acres of land, and proposes to colonise it with deserving poor families, by giving each a block of land free of cost, the whole lot to be called Basivireddi pettah, after the name of the donor.

From the published report of the evidence given before the so called Famine Commission which is now sitting in Madras, it is evident that this Commission is more are less waste of public money. It has examined a number of official witnesses who have had direct personal experience of the administration of relief during the recent famine, but after carefully reading their evidence, one fails to find much that would be of use when the Commission comes to suggest improvements in the present Famine Code.

The Dewan of Cochin Mr Rajagopal Chariar, has just brought about a much needed reform. From the 11th February (corresponding with 1st Masi) the free feeding of Brahmins in the Cochin *Ootoperahs* or feeding houses will be restricted to *bona fide* travellers except in the Ootooperah at Tripunitora, the residence of the Raja, where the existing system will be continued. This step will result in a great saving to the State. The Travancore Government might also very well take steps in this direction.

Mr Baptista, a Bombay gentleman, who is now in England and was recently assisting the Liberal candidate in South East Durham, was speaking on a public platform in York, when he was interrupted by a cry of "black man", and forthwith came his reply that he preferred to be that rather than a "black guard"—a specimen of a repartee which, an English contemporary says, delighted his audience. It was well that it did. Those who seek indiscreet references to the colour of one's skin may beware of the cutting retort which they may provoke.

A STORY, which the Lahore paper gives for *what is the worth, comes to it from the frontier* It is said that when Sir William Lockhart's recent speech was made to the Afridi Jirgahs on the absurdity of their continuing to oppose the British forces, the leading Zakka Khel Chief, in addressing his followers, thus interpreted the terms offered "*The English General says that 500 of our mardans must be given up* to the British soldiers 500 young wives to the Sikhs, and 500 old women for the Gorkhas." Naturally the Zakka Khel tribesmen declared with one voice that they would fight to the bitter end

---

THAT *great and untiring friend of India*, Sir William Markby, writes a letter to the *Spectator* of the 22nd January on the proposed amendment in the Criminal Procedure Code by which Magistrates will be entrusted with the duty of trying sedition cases "Two things must be borne in mind," says Sir *William*, "*first, that the Magistrate in India* is also in reality one of the heads of the Police, secondly, that the Magistrate in India represents the Government and the Native Press the Opposition" In this sentence Sir W Markby puts the whole case against the proposed amendment in the briefest *compass*.

MUCH regret is expressed in Agra at the resolution of Government to sell Rambagh which stands on the east bank of the Jumna to the highest bidder The garden is of considerable historical interest The garden *is extensive and well kept But necessity* knows no law And the Government is in such a sad plight financially that it has to bring even a most cherished national possession such as Rambagh to the hammer We may next hear of the Taj Mahal being sold to some American millionaire, and of the exclusive right of exhibiting advertisements on the gigantic slopes of the mighty Himalayas being leased out to Mr—Sir John—Lipton or to the Pears Soap Company !

PROFESSOR DEWAR performed a pretty experiment, at the Royal Institution, to show what depth of liquid was represented by our gaseous atmosphere The air, as we know, extends upwards all round the globe to a dis*tance of about five miles Prof D war had* a tube fifty two feet long hanging from the top of the building, in which was ordinary air This represented about one five-hundredth of the height of the atmosphere When the air in the tube was liquefied it collected at the bottom to a depth of about four fifths of an inch. This multiplied by 500 gives 33½ ft as the depth of the sea of liquid air in which we should be immersed if the earth became suddenly reduced to the temperature of interstellar space

---

THE Hon'ble Mr. P. M Mehta made a brief but rather noteworthy contribution to the debate on the District Police Amendment Bill at the last sitting of the Bombay Legislative *Council He said that he would give his reasons* why he did not take any part in the discussion that followed the numerous amendments In the first place, he thought that all that was required for him to say had been said by him in the Supreme Legislative Council three years ago when a similar Bill was under consideration, and it had produced no effect, and thus it being the case, he did not think it worth his while to repeat the same arguments *Another reason why he abstained from the* discussion was that he did not take those proceedings very seriously It seemed to him that nothing could be gained by long arguments although his friend the Hon. Mr Garud seemed to have great faith in arguments These were his reasons why he did not take *part in the discussion*

THE Lucknow *Advocate* gives currency to a rumour which will be received with mixed feelings throughout the country It is proposed, says our contemporary, to found a new *College whose instruction is to be imparted according to the system prevailing in the* London University Another distinctive feature would be that every student will have to be a boarder And the institution will be *open to the sons and relatives of Rajas, Maharajas*, Zemindars and other rich men Lord Elgin has consented to be the President, and Sir Alexander Mackenzie, the Vice-President of the Committee. Their Highness the Maharajas of Cooch Behar and Durbhanga, with Maharajas Sir Jotindra Mohan Tagore and Surjyakanta Acharji, have taken the lead in the matter So far the proposal is a good one and nobody can have anything but good wishes for it But our *contemporary adds* that this College is intended to commemorate the name of Lord Elgin For Lord Elgin's sake, we hope there is no truth in this part of the rumour

---

Local and Provincial

---o---

MR AGAR.—We hear that Mr A P Agar, the present Commissioner of Police at Madras, comes to Mysore as Inspector General of Police

YEDATHORE SALES.—As announced previously the Deputy Commissioner of Mysore, Mr Madiah *conducted the sales of Ye*...da there lands in person on the 10th, 11th and 12th instants. The total extent sold was about 700 acres and the proceeds realized were about Rs 70 000 and odd The *Government must* congratulate itself upon this result The Deputy Commissioner has also made arrangements to have a village built near the lands as early as possible to afford all facilities for cultivation

---

Extracts.

THE SEDITION BILL PASSED

THE LAST SCENE IN THE SUPREME COUNCIL.

Calcutta, 18th February—At yesterday's sitting of the Supreme Legislative Council the Sedition Bill was passed into law All the *Indian Members excepting the Hon'ble Pandit* Sary Kaul opposed the Bill Among the supporters *of the Bill the Hon'ble Mr Chalmers* Sir Griffith Evans Sir James Westland and Sir Alexander Mackenzie were the principal speakers

Mr Chalmers in the course of his speech said that the Government had been urged both from official and private sources to re enact the Press law but that they were entirely opposed to that course They were aiming at sedition and offences akin to it and not at the Press Sedition taught and preached orally is even more dangerous than written sedition.

Mr Allan Arthur felt bound to mention that there was a strong feeling against giving Magistrates power to try sedition cases under Section 124A

Mr Ananda Charlu said that there was no sedition and therefore no need for any repressive measure, that the present Bill while it would prove a standing and demoralising menace to frank and candid discussion of public interests would itself become, if passed into law, a standing and irritating grievance

Pandit Bisswambhar Nath was of opinion that if any alteration was required to be made in the existing law it was in consequence of the recent State trials necessary *in the direction of leniency and not of stringency*

Sir Alexander Mackenzie said that the majority of newspapers simply revelled in misrepresentation of the motives of Government This evil in his opinion was yearly growing and spreading with the spread of so called education which did not teach the people to be good and loyal citizens Government were turning out by scores of thousand young men who were trained only in words, looked mainly *for Government employment and failing to* get it became a host of discontented, disobedient and sometimes troublesome young men. This was the class that wrote for the Native Press

There were thirty two amendments of which seventeen were put and lost, fourteen withdrawn and only one that of Sir Griffith Evans was accepted The discussion lasted for full eight hours

ನೋಟಿಸ್.

ಈಗ ಈವರ್ತೆಗೆಳು ಖಾಲ್ಯವಾಗಿರುವ ಇರ್ವ್ಯಾಲ್ರೆ ಬಜಾ ಎಂಬವ್ವರಕ್ಕೆ ನಾವುಭಾಗಿಗಳಾಗಿರುವವರಿಂದ ಈವಾರದ ಪತ್ರಿಕೆಯು ಬಹುದಿನ ಕಾಲಾತೀತವಾಗಿ ನಮ್ಮ ಚಂದಾದಾರರಿಗೆ ರವಾನಿಸಬೇಕಾಗಿ ಬಂದಬಗ್ಗೆ ಒಡಳವ್ಯಸನಪಡುತ್ತೇವೆ

ಪ್ರೊಪ್ರೈಟರ್, ಕ. ಪ್ರ.

ಕರ್ನಾಟಕ ಪ್ರಕಾಶಿಕಾ.

೧೮೯೮ನೇ ಇಸವಿ ಫೆಬ್ರವರಿ ೨೧ನೇ ತಾರೀಖು ಸೋಮವಾರ.

ಮೈಸೂರು ಸಂಸ್ಥಾನದ ಕೌನ್ಸಿಲ್ ಮೆಂಬರುಗಳ ಪುನರ್ವರಣ

ಈಗ ಈ ಸಂಸ್ಥಾನಕ್ಕೆ ಸೇರಿದ ಅನೇಕ ವಿಷಯಗಳಲ್ಲಿ ಪ್ರತಿ ಕೌನ್ಸಿಲ್ ಮೆಂಬರುಗಳ ಚುನಾವಣೆಯು ಪ್ರಜೆಗಳ ಆಲೋಚನೆಗೆ ಪ್ರಮುಖವಿಷಯವಾಗಿರುತ್ತದೆ ಈಗ ಇರತಕ್ಕ ಮೆಂಬರುಗಳು ಚುನಾಯಿಸಲ್ಪಟ್ಟು ಈ ತಿಂಗಳ ೧೮ನೆಯ ತಾರೀಖಿಗೆ ಪೂರ್ಣವಾಗಿ ಮೂರುವರ್ಷಗಳ ಕಾಲ ತೀರಿದೆ ಇವರಿಗೆ ಮೇಲೂ ನಿಶ್ಚಯವಾಗಿದ್ದ ಕಾಲವು ಮುಗಿದ ವರ್ತನೆ, ಆಗಿರುವವರಿಂದ ಇವರನ್ನೇ ಒಪ್ಪುವ ವಿಧೆಯುನ್ನು ನಮ್ಮ ದರ್ಬಾರು ಮಾಡುವದಕ್ಕೆ ಅಥವಾ ಬೇರೆ ಮನುಷ್ಯರುಗಳನ್ನು ನೇಮಕಮಾಡುವದಕ್ಕೆ ಇದು ಉಚಿತಕಾಲವಾಗಿರುತ್ತದೆ ಇವರ ನೇಮಕದ ವಿಷಯದಲ್ಲಿ ಶ್ರೀ ಮನ್ಮಹಾರಾಣಿ ರೀಜೆಂಟರವರೇ ಆಗಲಿ, ಬ್ರಿಟಿಷ್ ರೆಸಿಡೆಂಟರವರೇ ಆಗಲಿ, ಪ್ರಜೆಗಳ ಅಭಿಪ್ರಾಯವನ್ನರಿತು ದೇಶದ ಸಾರವಾಗಿ ಯಾವ ಕೆಲಸವನ್ನೇ ಆಗಲಿ ಮಾಡತಕ್ಕದೆಂದು ನಂಬುವದು ಅಪಾಯಕರವಾದುದು ಏತಕ್ಕೆಂದರೆ, ಪ್ರಸಕ್ತ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯಗಳು ಭಿನ್ನಭಿನ್ನಗಳಾಗಿ ವೃತ್ತಾಂತಪತ್ರಿಕೆಗಳಮೂಲಕ ಹೊರಪಡುತ್ತಿರುವದರಿಂದ ಅವು ಪರಿಗಣಿಸಲ್ಪಡುವಲ್ಲದೆ ಹೋದವು ಸಾಮಾನ್ಯವಾಗಿ ವಿದ್ಯಾವಂತರಾದವರ ಅಭಿಪ್ರಾಯಗಳೆಲ್ಲವು ಏಕಮುಖವಾಗಿರುವದಕ್ಕೆ ಅವನ್ನು ಗವರ್ನಮೆಂಟಿನವರು ಗಣನೆಗೆ ತೊಂಗಲಾರದು ಒಬ್ಬ ಅಧಿಕಾರಿಯಿಂದ ಪ್ರತಿ ... ಪಡೆದವರು ಅವರನ್ನು ... ಫಲಭಂಗವಂ ಹೊಂದಿದವರು ದೂಷಿಸುವ ... ಲೇಖನವಾಗಿರುತ್ತದೆ. ಈಗ ಕೌನ್ಸಿಲರುಗಳ ಚುನಾವಣೆ ವಿಷಯದಲ್ಲಿ ಹುಟ್ಟಿರತಕ್ಕ ಅಭಿಪ್ರಾಯಗಳು ಕಡಸಾರವಾದವು ಒಂದು ವೇಳೆ ಈವಿಷಯದಲ್ಲಿ ಪ್ರಜಾಭಿಪ್ರಾಯವು ಆವಶ್ಯಕವೆಂದು ಗವರ್ನಮೆಂಟಿನವರಿಗೆ ತೋರುವ ಪಕ್ಷದಲ್ಲಿ ಇಂಗ್ಲೆಂಡ್ ಮೊದಲಾದ ವಿಲಕ್ಷಣ ರಾಜ್ಯಗಳಲ್ಲಿನ ಪ್ರತಿನಿಧಿಗಳ ಚುನಾಯಿಸಲ್ಪಡುತ್ತಬರುವ ಕ್ರಮವನ್ನು ಅಂದರೆ ವೋಟ್ಸ್ ಎಂಬ ಪ್ರಜೆಗಳ ಅಭಿಪ್ರಾಯವಂ ಶೇಖರಿಸಿ ಯಾರಿಗಾಗಿ ಜಾಸ್ತಿ ಅಭಿಪ್ರಾಯಗಳು ದೊರೆಯುತ್ತವೆಯೋ ಅವರನ್ನು ಚುನಾಯಿಸುವಪಕ್ಷದಲ್ಲಿ ಅದರಮೇಲೆ ಆಕ್ಷೇಪಣೆ ಬರುವದು ಇರಲಾರದು. ಪರಂತು ಮೈಸೂರು ಸರ್ಕಾರದವರು ಅಸ್ಟರ ಕ್ರಮವು ವಹಿಸುವರೆಂದು ನಾವು ನಂಬಲಾರೆವು.

ಈಚೆಗೆ ತಿಳಿಯಬರುವದರಲ್ಲಿ ಕೌನ್ಸಿಲ್ ಮೆಂಬರುಗಳ ಚುನಾವಣೆ ವಿಷಯದೊಳು ಬ್ರಿಟಿಷ್ ರೆಸಿಡೆಂಟರವರು ಮಹಾರಾಣೀ ರೀಜೆಂಟರವರೊಡನೆ ಆಲೋಚಿಸಿ ಅವರ ಅಭಿಪ್ರಾಯವು ತಿಳಿದುಕೊಂಡು ಅದರಂತೆ ಅಥವಾ ಅದರಲ್ಲಿ ಸ್ವಲ್ಪ ಬದಲಾವಣೆ ಯೊಡನೆ ಒಂದುವಿಧ ವ್ಯವಸ್ಥೆಯಂ ಮಾಡಿಕೊಂಡು ಅದಕ್ಕೆ ಇಂಡ್ಯಗವರ್ನಮೆಂಟಿನವರ ಮಂಜೂರಾತಿಯಂ ಪಡೆಯುವ ಉದ್ದೇಶದೊಡನೆ ಈಗ ಕಲ್ಕತ್ತೆಗೆ ಹೊರಟಿರುತ್ತಾರೆಂದು ಈಪ್ರಾಂತಗಳು ಸಾಮಾನ್ಯವಾಗಿ ಪ್ರಸ್ತಾಪಿಸಲ್ಪಡುತ್ತಲಿದೆ ಇದೂ ಅಲ್ಲದೆ ಪ್ರಾರಂಭದಿಂದ ಕೌನ್ಸಿಲ್ ಮೆಂಬರುಗಳಿಗೆ ಉಂಟು ಮಾಡಲ್ಪಟ್ಟಿರುವ ಅಧಿಕಾರವನ್ನು ಕೆಲವುಬಾಬುಗಳಲ್ಲಿ ಇನ್ನು ಹೆಚ್ಚಿಸಿ ಶ್ರೀಮನ್ಮಹಾರಾಜರವರು ಪ್ರಾಪ್ತವಯಸ್ಕರಾಗಿ ತಮ್ಮ ರಾಜ್ಯಧುರವಂ ಸ್ವಯಂ ವಹಿಸುವದಕ್ಕೆ ಅರ್ಹರಾಗುವತನಕ ಸಂಸ್ಥಾನದ ವಿಶಿಷ್ಟ ಆತಳತಗಳಮೇಲೂ ಬ್ರಿಟಿಷ್ ಗವರ್ನಮೆಂಟಿನವರು ಉಳಿಸಿಕೊಂಡಿರುವ ಅಧಿಕಾರವನ್ನು ಸಹ ಹೆಚ್ಚಿಸಿ ಕೊಂಡು ಬರಬೇಕು ಉದ್ದೇಶವು ಬ್ರಿಟಿಷ್ ರೆಸಿಡೆಂಟರಿಗೆ ಉಂಟೆಂದು ಸಹ ನಮ್ಮ ಕೇಳ್ವಿಕೆಗೆ ಬಂದಿರುತ್ತದೆ ಪರಂತು ಅದರ ಸತ್ಯಾಸತ್ಯತೆಗೆ ನಾವು ಜವಾಬ್ದಾರರಲ್ಲ ಮುಖ್ಯವಾಗಿ ಇರತಕ್ಕ ಕೌನ್ಸಿಲ್ ಮೆಂಬರುಗಳೇ ಪುನಃ ಚುನಾಯಿಸಲ್ಪಡುವರೋ ತಿಳಿಯ, ಪರಂತು ಮೂರನೆಯ ಕೌನ್ಸಿಲರ್ ಖಾನ್ ಬಹದೂರ್ ಅಬ್ದುಲ್ ರಹಿಮಾನ್ ಸಾಹೇಬರವರು ಪೋಲೀಸ್ ಕೆಲಸದಿಂದ ನಿವೃತ್ತಿ ಮಾಡಲ್ಪಟ್ಟ ಅವಕಾಶದಲ್ಲಿ ಮಹಾರಾಜರಾಜಶ್ರೀ ವಿ ಪಿ ಮಾಧವರಾಯರವರು ಚುನಾಯಿಸಲ್ಪಡುವರೆಂಬ ಒಂದುವಿಧ ಪ್ರವಾದವು ಪ್ರಬಲವಾಗಿದೆ ಪ್ರಾಯಿಕವಾಗ ಅದು ಕಾರ್ಯಕ್ಕೆ ಬರತಕ್ಕ ಪಕ್ಷದಲ್ಲಿ ಅದಕ್ಕಾಗಿ ನಾವು ಆಶ್ಚರ್ಯಪಡಬೇಕಾದುದಿಲ್ಲವು

---o---

ಪ್ಲೇಗ್ ವ್ಯಾಧಿಯ ನಿವಾರಣೋಪಾಯ.

ಈವ್ಯಾಧಿಯು ಮುಂಬೈನ ಪ್ರಾಂತ್ಯದಲ್ಲಿ ಪ್ರಾರಂಭವಾಗಿ ಸಮೀಪ ಪ್ರದೇಶಗಳಲ್ಲಿ ಬಹುಮಂದಿಯನ್ನು ಅಕಾಲಿಕ ಮರಣಕ್ಕೆ ಗುರಿಮಾಡಿದ್ದಲ್ಲದೆ ಬಹುಮಂದಿಗೆ ಜನಸಂಖ್ಯೆಯನ್ನು ... ವರ್ಷದ ... ದೇಶಾಂತರಕ್ಕೆ ಹೋಗಿರುತ್ತದೆ. ಈವ್ಯಾಧಿ ... ಪ್ರತಿಕ ... ಮುಂಬೈ ಸರ್ಕಾರದವರ ಈ ವ್ಯಾಧಿಯ ನಿವಾರಣೆ ಬಗ್ಗೆ ... ಕಾಲ ... ಗಳು ದೊರೆಯದಿಲ್ಲವಾಗಿ ಬಹಳ ಪ್ರಜೆಗಳು ನಷ್ಟವಾದರೆಂದು ಪ್ರತಿ ಸಡುತ್ತಿರುವರು ಮೈಸೂರು ಸರ್ಕಾರದವರು ನಮ್ಮ ಪ್ರಜೆಗಳಿಗೆ ಈ ವ್ಯಾಧಿಯು ಸಂಬಂಧವು ಬಾಗದಂತಿರುವದಕ್ಕಾಗಿ ಈಗಿನಿಂದಲೂ ಅನೇಕ ಏರ್ಪಾಡುಗಳನ್ನು ನಡೆಸುತಲಿದ್ದಾರೆ ಇದಕ್ಕಾಗಿ ಪ್ರಜೆಗಳೆಲ್ಲರು ಸರ್ಕಾರದವರಿಗೆ ಅತ್ಯಂತ ಕೃತಜ್ಞರಾಗಿರಬೇಕು ಮೈಸೂರು ಸರ್ಕಾರದವರು ಪ್ಲೇಗ್ ಕಮಿಷನರಾಗಿ ನೇಮಿಸಲ್ಪಟ್ಟಿರುವವರಿಂದ ಅವರು ಮಾಡುವ ಪ್ರಯತ್ನಗಳಿಗೆಲ್ಲ ಪ್ರಜೆಗಳು ಸಹಾಯ ಮಾಡಬೇಕಾದ್ದು ಆವಶ್ಯಕವು ಈ ವ್ಯಾಧಿಯು ನಮ್ಮ ದೇಶಕ್ಕೆ ವ್ಯಾಪಿಸದಿರುವ ... ಸರ್ಕಾರದವರು ಮಾಡುವ ... ಗಳಿಗೆಲ್ಲ ಪ್ರಜೆಗಳು ಸಹಾಯ ... ಅವರಿಂದ ಸರ್ಕಾರದವರಿಗೆ ... ಪ್ರಯೋಜನವು ಸಹ ಉಂಟಾಗುವುದು, ಆದರೆ ಸರ್ಕಾರದವರು ಜವಾಬ್ದಾರಿಯನ್ನರಿಯದ ಚಿಲ್ಲರೆ ನೌಕರರನ್ನು ಆದಷ್ಟು ... ಕಳುಹಿಸಿಕೊಡುವದರಿಂದ ಅವರ ಸ್ವೇಚ್ಛಾ ಪ್ರವರ್ತನೆಯು ಬರಲ್ಲಿ ... ಅಂಜದವನಮೇಲೆ ತಪ್ಪು ಎತ್ತಿಹಾಕಿದರು ಎಂಬಂತೆ ಮೊದಲೇ ಉಂಟಾಗಿರುವ ವ್ಯಾಧಿಯಿಂದ ಭೀತರಾಗಿರುವ ಪ್ರಜೆಗಳ ವಿಚಾರಣೆಯ ಬಗ್ಗೆ ಸ್ವಲ್ಪ ನುಭವವಿಲ್ಲದ ಒಳಿಕಾದ ಅಧಿಕಾರಿಗಳನ್ನು ನೇಮಿಸುವುದರಿಂದ ಸರ್ಕಾರದವರು ಮಾಡುವ ಉಪಕಾರವು ಕೂಡ ಪ್ರಜೆಗಳಿಗೆ ತಿಳಿಯದೆ ಹೋಗಿದೆಯೆಂದು ವ್ಯಸನಪಡಬೇಕಾಗಿದೆ. ಸರ್ಕಾರದವರು ಸಹ ... ವಾಗಿಯೂ ಗೌರವ್ಯವಾಗಿಯೂ ಪಾಪಭೀರುಗಳಾಗಿಯೂ ಇರುವವರನ್ನು ಜನರಭೀತಿ ನಿವಾರಣೆಯ ಬಗ್ಗೆ ನಿಯಮಿಸಿ ತನ್ನೊಳಗಿನ ಪ್ರಜೆಗಳನ್ನು ಸ್ವಾಧೀನಕ್ಕೆ ತಂದುಕೊಂಡು ಅವರಿಗೆ ಬೇಕಾದ ಏರ್ಪಾಡನ್ನು ಮಾಡುವುದು ಪ್ಲೇಗ್ ಕಮಿಷನರ ಮುಖ್ಯ ಕೆಲಸವಾಗಿರುವುದು

ಒಬ್ಬ ವೃತ್ತಾಂತ ಲೇಖಕರು ಬರೆಯುತ್ತಾರೇನೆಂದರೆ —

ಗತಿಸಿದ ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರವರು ತಮ್ಮ ಸಂಸ್ಥಾನದಲ್ಲಿ ಮಾಡಲ್ಪಡುತ್ತಿರುವ ಧರ್ಮಕೆಲಸಗಳಲ್ಲ ಅತಿಶಯವಾಗಿರುವಂತೆ ತಿರುಪತಿ ಮಳ್ಳಿಚಾಲೀಯಹಾ ... ಸಾವಿರ ರೂಪಾಯಿಗಳ ಧರ್ಮವೆತೆಯಂತೆ ಏರ್ಪಾಡು ಮಾಡಿದರು. ಅದು ದಾನಪ್ಪಜಿಯವರ ಲವಾಜಮೆಯಲ್ಲಿ ಒಳಪಡಿಸಲ್ಪಟ್ಟಿತು. ಈಚೆಗೆ ಈದೇಶದ ಮುಜರಾಯಿ ಸೂಪರಿಂಟೆಂಡೆಂಟರು ತಿರುಪತಿಗೆಹೋಗಿ ಅಲ್ಲಿನಧರ್ಮಗಳನ್ನೆಲ್ಲನೋಡಿ

ದೇವರಲ್ಲಿ ಅತ್ಯಂತ ಭಕ್ತಿಯುಕ್ತರಾಗಿ ಮಹಾರಾಜರವರ ಇಷ್ಟದಂತೆ ಅಲ್ಲಿ ೧೨ ಸಾವಿರರೂಪಾಯಿಗಳ ಧರ್ಮಕಾರ್ಯವು ಶಾಶ್ವತವಾಗಿ ನಡೆಯುವಂತೆ ಮಾಡಬೇಕೆಂದು ನಿಶ್ಚಯ ಮಾಡಿಕೊಂಡವರಾಗಿ ೧೫೦೦ ರೂಪಾಯಿ ಜಾಸ್ತಿಯಾಗಿ ಮಂಜೂರ ಮಾಡಿ ಈ ಮೊಬಲಗಿನ ಬ್ರಹ್ಮಕುಂಡವು ನಡೆಯುವಂತೆ ಮಾಡಿದರು. ಈ ಏರ್ಪಾಡು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗೆ ಬಹಳ ಸಾಧಕವಾದದ್ದು. ಊರಿನ ನಿವಾಸಿಗಳೆಲ್ಲರೂ ಸೇರಿ ವಿಶೇಷಂಗಿಮಾಡಿ ಪೂರ್ವದಂತೆ ೧೨ ಸಾವಿರಕ್ಕೆ ಭರ್ತಿಯಾಗಿ ನಿಂತಿರುವ ೫೦೦ ರೂಪಾಯಿಯನ್ನು ಸೇರಿಸಿಕೊಳ್ಳಬೇಕೆಂದು ಪ್ರೊಸೀಡಿಂಗ್ಸನ್ನು ಮಾಡಿ ಮುಜರಾಯಿ ಸೂಪರಿಂಟೆಂಡೆಂಟರವರಿಗೆ ರವಾನಿಸಿದಂತೆ ಅರಿತ ಸಂತೋಷಿಸುತ್ತೇವೆ. ಈ ಚೆಗೆ [illegible] ಪ್ರೊಸೀಡಿಂಗ್ಸ್ ಅತ್ಯಂತ [illegible] ಕಾಣುತ್ತದೆ. ಇದಕ್ಕೆ [illegible] ತಿಳಿಯ ಬರಲಿಲ್ಲವು ಮುಜರಾಯಿ [illegible] ಶ್ರೀನಿವಾಸರಲ್ಲಿ ಬಹಳ [illegible] ಕಾಲದಲ್ಲಿ ಅದು [illegible] ಸಂದೇಹವಿಲ್ಲವು. ಅಲ್ಲಿನ ಧರ್ಮಶಿಖರಗಳಾದ ಮಹಾರಾಜರುಗಳಾದ ಮೊದಲಾದವರು(?) ಶೇಷವ್ಯವಸ್ಥೆಗಳವರೂ ಈ ಧರ್ಮವನ್ನು ಅಭಿವೃದ್ಧಿಪಡಿಸ ಬ್ರೌತಿಗೆ ಭಾಗಗಳಾಗಬೇಕೆಂದು ಪ್ರಾರ್ಥನೆ ಕ್ಷೇಮ. ಅಲ್ಲಿ ಶ್ರೀ ಹಯಗ್ರೀವರ ಮಠಕ್ಕಾಗಿ ಸಲ್ಲತಕ್ಕರುವ ದ್ರವ್ಯದುರ್ವ್ಯ ಮಾತ್ರ ಸಪ್ಪನಿಯೋಗವಾಗುವದಿಲ್ಲವೆಂಬುವ ವಿಷಯದಲ್ಲಿ ಧರ್ಮದರ್ಶಿಗಳ ಅಶ್ರದ್ಧೆಯು ಕೇವಲ ಉಪೇಕ್ಷಣೀಯವಾಗಿದೆ. ಗುರುಸ್ಥಾನದವರ ಗಾಬರ್ಯರೂ ದೇವಸ್ಥಾನ ಮೇಲಿನ ಪಾರುಪತ್ಯಗಾರರು ವೆಂಗಪ್ಪ ಮುಣಯ್ಯನವರೂ ದರ್ಮಕಾರ್ಯವನ್ನು ಬಹಳ ಶ್ರದ್ಧೆಯೊಡನೆ ನಡೆಸುತ್ತಿರುವದಾಗಿ ಅರಿತು ಅವರಿಗೆ ಅಧಿಕಾರಿಗಳನ್ನು ಸಹ ವಹಿಸಿದ್ದಕ್ಕಾಗಿ ಮುಜರಾಯಿ ಸೂಪರಿಂಟೆಂಡೆಂಟರವರನ್ನು ವಂದಿಸಬೇಕಾಗಿದೆ.

Occasional Notes.
ನೈಮಿತ್ತಿಕವಿಷಯನ್ಯಾಸ.

ಪ್ಲೇಗರೋಗದ ಭೀತಿಯಿಂದ ಸಾವಿರಾರುಜನರು ಮುಂಬೈಯಿಂದ ಸ್ವೀನ ಕಿಡತ್ತಿ ಕಾಟಿವಾಡಿಗೆ ಹೋಗಬು ಯೋಗರತ್ತಾರೆ

ಪಂಜಾಬ ದೇಶದೊಳು ಒಳ್ಳೆಯ ವರ್ಷದಿಂದ ಬೆಳೆಗಳು ಬಹಳ ಚೆನ್ನಾಗಿವೆಯೆಂದು ತಿಳಿಯಬರುತ್ತದೆ.

ಈ ಬಾವಿಯು ಚಪ್ಪಟೆಯಾಗಿರುತ್ತದೆಯೇ, ಹೊರತು ಗುಂಡಾಗಿರುವದಿಲ್ಲವೆಂದ ನಿರೂಪಿಸುವದಕ್ಕಾಗಿ ಒಂದು ಸಂಘವೇರ್ಪಟ್ಟಿರುವಂತೆ ಒಂದು ಪತ್ರಿಕೆ ತಿಳಿಸುತದೆ.

ನಾರ್ವೆ ದೇಶದಲ್ಲಿ ಯಾವನಾದರೊಬ್ಬನು ಒಂದು ಮರವನ್ನು ಕಡಿಯಬೇಕಾದರೆ ಅದೇ ಸ್ಥಳದಲ್ಲಿ ಹೊಸದಾಗಿ ಮೂರು ನಾರುಗಳನ್ನು ನಾಟದಹೊರತು ದೊಡ್ಡ ಮರವನ್ನು ಕಡಿಯುವದಕ್ಕೆ ಅಪ್ಪಣೆ ಕೊಡಲ್ಪಡಲಾರದು.

ಮುಂಬೈ ಪ್ಲೇಗರೋಗವು ಕ್ರಮೇಣ ಲಾಹೋರಿನವರೆಗೆ ವ್ಯಾಪಿಸಿ,ಅಲ್ಲಿಯೂ ಅದನ್ನಿವಾರಣದ ಬಗ್ಗೆ ಅವಶ್ಯಕಗಳಾದ ಯೋಜನೆಗಳು ನಡೆಸಲ್ಪಡುತಿವೆ. ಸದರೀರೋಗವು ಗ್ರಾಮಾಂತರಗಳಲ್ಲಿ ಸಹ ವ್ಯಾಪಿಸುತಲಿರುವಂತೆ ತಿಳಿಯಬರುತಿದೆ

ಈ ತಿಂಗಳ ೧೦ನೆಯ ತಾರೀಖಿನಲ್ಲಿ ಮಲಬಾರ ಡಿಸ್ಟ್ರಿಕ್ಟಿಗೆ ಸೇರಿದ ಪೊನ್ನಾಣಿ ತಾಲೂಕಿನಲ್ಲಿ ನಡೆಸಲ್ಪಟ್ಟ ದರೋಡೆಯಲ್ಲಿ ಕಳವಾದ ಜವಾಹಿರಾದಿಗಳೊಡನೆ ೩೦೦ ರೂಪಾಯಿಗಳ ಕರೆನ್ಸಿ ನೋಟಗಳು ಸಹ ಚೋರಿಯಾಗಿರುವಂತೆ ಪ್ರಕಟಿಸಲ್ಪಟ್ಟಿದೆ.

ಈಸಲ ಬರ್ಮಾದೇಶದೊಳು ೫೫೯೯೦೪ ಎಕ್ರೆ ಶರೀ ಜಮೀನು ಸಾಗುವಳಿಯಾಗಿ ಕಬ್ಬಿನ ಕೆಲಸ ಪೂರ್ತಿಯಾಗಿ ಪಾಲಿಷ್ಟು ನಡೆಯುತಿರಿದೆ. ಇದರಲ್ಲಿ ೧೯,೩೦,೦೦೦ ಟನ್ ಅಕ್ಕಿ ಅನ್ಯದೇಶಗಳಿಗೆ ರಪ್ತು ಮಾಡುವದಕ್ಕೆ ಸಿಕ್ಕಬಹುದೆಂದು ರಂಗೂನ್ ಗೆಜೆಟಿಪತ್ರಿಕೆ ತಿಳಿಸುತಿದೆ.

ಕಳೆದ ತಿಂಗಳಲ್ಲಿ ಬೆಳಗಾಂವಿನೊಳು ಒಂದು ಕೋತಿಗೆ ಪ್ಲೇಗಿನ ರೋಗತಗಲಿ ಸತ್ತುಹೋಯಿತು. ಅದನ್ನು ಡಾಕ್ಟರಗಳು ಕೊಯಿದು ಪರೀಕ್ಷೆ ಮಾಡುವಲ್ಲಿ ಅದಕ್ಕೆಕುತ್ತಿಗೆಯಲ್ಲೂ ತೊಡೆಸಂಧಿನಲ್ಲೂ ನಾಲ್ಕು ಗಡ್ಡೆಗಳಿದ್ದವೆಂದು ಅಗ್ರ್ಯಾತದ(?) ಪತ್ರಿಕೆಯೊಂದು ತಿಳಿಸುತಿದೆ.

ಈಚಿನ ಡಾ ಷಹರನಿವಾಸಿಯಾದ ಬಸವರಡ್ಡಿಯೆಂಬವರು ಕಳೆದ ಕ್ಷಾಮಕಾಲದಲ್ಲಿ ಬಹಳ ಅರ್ಥವ್ಯಯಮಾಡಿ ಸಾವಿರಾರು ಬಡಜನರನ್ನು ಕಾಪಾಡಿದ್ದು ಮಾತ್ರವಲ್ಲದೆ ಈಚೆಗೆ ಇಪ್ಪತ್ತೆರಡು ಎಕ್ರೆ ಜಮೀನನ್ನು ಕ್ರಯಕ್ಕೆ ತೆಗದು ಕೊಂಡು ಬಸವರಡ್ಡಿ ಪಾಳ್ಯವೆಂಬ ಒಂದು ಊರನ್ನು ಕಟ್ಟಿಸಿ ಬಡವರಾದವರನೇಕರಿಗೆ ಅದರಲ್ಲಿ ಮನೆಗಳಂ ಕಟ್ಟಿಸಿಕೊಟ್ಟು ಅವರೆಲ್ಲರಿಗೂ ಜೀವನಾಧಾರವಂ ಕಲ್ಪಿಸಿಕೊಡಬೇಕೆಂದು ಯೋಚಿಸುತಲಿರುವದಾಗಿ ಕೇಳಿ ಬಹಳಸಂತೋಷಿಸುತ್ತೇವೆ.

ಒಂದಾನೊಂದು ಲಾಹೋರ್ ಪತ್ರಿಕೆಗೆ ಸರಹದ್ದು ಪ್ರಾಂತದಿಂದ ಬರೆದು ತಿಳಿಸಲ್ಪಡುವ ವರ್ತಮಾನವು ಬಾಧಿರುವಂತೆ ಸದರೀ ಪತ್ರಿಕೆ ಪ್ರಕಟಿಸಿರುತದೆ:—ಈಗ ವಾಯುವ್ಯ ಸರಹದ್ದಿನಲ್ಲಿ ನಡೆಯುತಲಿರುವ ಯುದ್ಧದಲ್ಲಿ ಬ್ರಿಟಿಷ ಸೇನಾನಾಯಕರಿಂದ ನಿಕ ನಿಲ್ಲಿಯು ಲಾಕ್‌ಹಾರ್ಟ ಎಂಬವರು, ಅಫ್ರಿದೀಸ್ ಎಂಬ ಜನರನ್ನು ಕರೆಯಿಸಿ, ನೀವು ಬ್ರಿಟಿಷನವರಮೇಲೆ ದ್ವೇಷಮಾಡಿ ಅವರನ್ನೆದಿರಿಸುವುದು ವಿವೇಕವಿಲ್ಲದಕಾರ್ಯವೇ ಹೊರತು ಬೇರೆ ಯಾವ ಸುಖವಿಲ್ಲವೆಂದು ಅವರಿಗೆ ಹಿತೋಕ್ತಿಗಳಂ ಹೇಳಲು ಅವರ ಗುಂಪಿನಲ್ಲಿ ಮುಖ್ಯ ತನಾದವನು ಬ್ರಿಟಿಷ ಜನರಲರವರು ವ್ಯಕ್ತಪಡಿಸಿದ ಅಭಿಪ್ರಾಯವು ತರ್ಜುಮೆಮಾಡಿ ತಮ್ಮ ಜನರಿಗೆ ತಿಳಿಸಿ ವಕ್ತ—ಬ್ರಿಟಿಷ ಸೋಲ್ಜರಗಳಿಗೆ ೫೦೦ ಮಂದಿ ಕನ್ಯೆಯರೂ, ಸಿಕ್ಖಜನರಿಗೆ ೫೦ ಮಂದಿ ವಿಧವೆಯರಾದ ಹೆಂಡತಿಯರೂ, ಘೂರ್ಖ ಜನರಿಗೆ ೫೦ ಮಂದಿ ಮುದಿ ಹೆಂಗುಸರೂ ಬೇಕೆಂದು ಜನರಲ ಸಾಹೇಬರು ಹೇಳುತ್ತಾರೆ, ಎಂದು ತಿಳಿಸಲು ಸದರೀಜನರೆಲ್ಲ ರೇಗಿಕೊಂಡು ಸಾಯುವತನಕ ಯುದ್ಧಮಾಡತಕ್ಕದ್ದೆಂದು ತಮ್ಮೊಳಗೆ ತಾವು ನಿರ್ಣಯಿಸಿಕೊಂಡರೆಂಬುವದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತ ವೃತ್ತಾಂತಗಳು.

ಕಳೆದ ಮಂಗಳವಾರದಿನ ರಾತ್ರಿ ಸುಮಾರು ೯ ಘಂಟೆಗೆ ಮೈಸೂರಿನಲ್ಲಿ ಒಂದು ಹದ ಒಳ್ಳೆಯ ಮಳೆ ಆಯಿತೆಂದು ಕೇಳುತ್ತೇವೆ.

ಕೊಡಗಿನಲ್ಲಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಾಗಿರುವ ಮಿ॥ ರಾಕ ಸಾಹೇಬರಿಗೆ ಮೈಸೂರು ಸಂಸ್ಥಾನದವರು ಡೆಪ್ಯುಟಿಕಮಿಷನರ ಹುದ್ದೆ ಕೊಟ್ಟು, ಕಡೂರು ಡಿಸ್ಟ್ರಿಕ್ಟಿಗೆ ನೇಮಿಸಿಕೊಳ್ಳುವವರಾಗಿದಾರೆಂದು ಕೇಳುತ್ತೇವೆ—ವೃ. ಪ.

ಈಸಂಸ್ಥಾನದ ಬ್ರಿಟಿಷ ರೆಸಿಡೆಂಟರವರಾದ ಕರ್ನಲ ಡೊನಾಲ್ಡರಾಬರ್ಟ್‌ಸನ್ ಸಾಹೇಬರವರು ಈಸಂಸ್ಥಾನಕ್ಕೆ ಸಂಬಂಧಪಟ್ಟ ಕೆಲವು ಮುಖ್ಯ ಕಾರ್ಯಗಳಂ ಖುದ್ದು ವ್ಯವಸ್ಥೆಮಾಡಿಕೊಂಡು ಬರುವ ಉದ್ದೇಶದೊಡನೆ ಈ ತಿಂಗಳ ೧೭ನೆಯ ೩೦ ಗುರುವಾರದಿನದರಾತ್ರಿ ಇಲ್ಲಿಂದೈಹತ್ತು ಮದರಾಸಿನಮಾರ್ಗವಾಗಿ ಕಲ್ಕತ್ತೆಗೆ ದಯಮಾಡಿದರು.

ಮಿ॥ ಭಾಭಾ ಸಾಹೇಬರು ತಮ್ಮ ಪುತ್ರಿಯನ್ನು ಬೊಂಬಾಯಿನಲ್ಲಿ ಕೋರ್ಟ್ಯಾಟರ್ನಿಯವರಾದ ಒಬ್ಬ ಸಾಹುಕಾರನ ಮೆ॥ ಶಾ ಎಂಬ ಏಕತನೆ ಪುತ್ರನಿಗೆ ಕೊಟ್ಟು ಕಳೆದ ಸೋಮವಾರ ಅಲ್ಲೀ ವಿವಾಹ ಬೆಳೆಸಿದರೆಂತಲೂ ವರದಕ್ಷಿಣೆಗಾಗಿ ನಾನಾ ನಗನಾಣ್ಯಗಳನ್ನೂ ಒಂದು ಆವೆಯನ್ನೂ ಅಳಿಯನಿಗೆ ಕೊಟ್ಟರೆಂತಲೂ ಕೇಳುತ್ತೇವೆ.—ವೃ. ಪ.

ಕೋಲಾರದ ಚಿನ್ನದ ಗಣಿಗಳಲ್ಲಿ ಟ್ಯಾಂಕ್ ವೈರ್ ಎಂಬ ಗಣಿಯ ವಾಕರ್ಸ್ ಷಾಫ್ಟ ಎಂಬ ಗಣಿಯೊಳಗೆ ಕಳೆದ ವಾರ ಒಂದು ಅನಾಹುತ ಪ್ರಾಪ್ತವಾಗಿ, ಮೂವರು ಕೂಲಿ ಆಳುಗಳು ಆ ಕ್ಷಣವೇ ಪ್ರಾಣಬಿಟ್ಟರು. ಇನ್ನು ನಾಲ್ಕು ಜನರಿಗೆ ಘೋರ ಘಾಯಗಳಾಗಿವೆ. ಇವರು ಚಾಂಪಿಯನ್ ರೀಫ್ ಕಂಪೆನಿಯ ಆಸ್ಪತ್ರಿಯಲ್ಲಿ ಬಿದ್ದಿರುತ್ತಾರೆ.

ಹಾಸನದ ಹತ್ತಿರ ಗಂಡ ಎಂಬೊಬ್ಬನು ಏನೋ ಕದ್ದು ಕೊಂಡನೆಂದೂ ಕದ್ದ ಒಡವೆಯನ್ನು ಅವನಿಂದ ತರಿಸಬೇಕೆಂದೂ ಪೋಲೀಸಿನವರು ಅವನನ್ನು ನಾನಾ ವಿಧವಾಗಿ ಹಿಂಸೆ ಮಾಡಿದಹಾಗೂ, ಆ ಹಿಂಸೆಯನ್ನು ಅವನು ಸಹಿಸಲಾರದೆ ಕಡುಗೋಲಿನಿಂದ ತನ್ನ ಕೊರಳನ್ನು ಕೊಯಿದ ಕೊಂಡಹಾಗೂ, ಪೋಲೀಸಿನವರು ಅವನನ್ನು ಆಸ್ಪತ್ರಿಯಲ್ಲಿ ಹಾಕಿರುವಹಾಗೂ ವರ್ತಮಾನ ಹುಟ್ಟಿದೆ—ವೃ ಪ.

ಈ ತಿಂಗಳ ೧೬ನೆಯ ತಾರೀಖು ಬುಧವಾರದ ದಿನ ಹಗಲು ಸುಮಾರು ೧೦॥ ಘಂಟೆಗೆ ಶ್ರೀಮನ್ಮಹಾರಾಣೀ ರೀಜಂಟರವರು ತಮ್ಮ ಸಂಸಾರ ಸಮೇತರಾಗಿ ಸ್ಪೆಷಲ್ ಟ್ರೈಯಿನ್ನಲ್ಲಿ ರಾಜಧಾನಿಗೆ ದಯಮಾಡಿದರು. ಆ ಕಾಲದಲ್ಲಿ ರೆಯಿಲ್ವೆಪ್ಲ್ಯಾಟ್ ಫಾರಂ ಅಲಂಕರಿಸಲ್ಪಟ್ಟದ್ದು ಮಾತ್ರವಲ್ಲದೆ ಇತರವಿಶಿಷ್ಟ ರಾಜಮರ್ಯಾದೆಗಳೆಲ್ಲವು ಪೂರ್ಣವಾಗಿ ನಡೆಸಲ್ಪಟ್ಟವು ಶ್ರೀಮನ್ಮಹಾರಾಜರವರ ಸವಾರಿಯು ಪ್ರಾಯಶಃ ಮುಂದಿನವಾರದಲ್ಲಿ ಚಿತ್ತೈಸಬಹುದೆಂದು ತೋರುತಿದೆ.

ಇಲ್ಲಿನಸಿಟಿ ರೆಯಿಲ್ವೆ ಸ್ಟೇಷನ್ ಹೊಸದಾಗಿ ಕಟ್ಟಿದಕ್ಕೆ, ಅರಕೋಣಂ ಮೊದಲಾದ ದೊಡ್ಡ ಸ್ಟೇಷನ್ಗಳಲ್ಲಿ ಕಟ್ಟಲ್ಪಟ್ಟಿರುವಂತೆ, ಉಭಯಪಾರ್ಶ್ವದಲ್ಲೂ ತಾಳ್ವಾರ ಕಟ್ಟಬೇಕಾದ್ದು ಯಾವಕಾರಣದಿಂದಲೂ ಇದುವರೆಗೆ ಸುಸ್ಥಿತಿಬಿದ್ದಿತ್ತು. ಈಗಮೇಲಿನ ಅಧಿಕಾರಿಗಳಿಂದ ಬಂದ ಹುಕುಂ ಅನುಸರಿಸಿ ತಾಳ್ವಾರದ ಕಾಮಗಾರಿಗೆ ಪ್ರಾರಂಭವಾಗಿರುತಿದೆ ಸುಮಾರು ಇನ್ನು ಮೂರುತಿಂಗಳ ಕಾಲದೊಳಗಾಗಿ ಕಾಮಗಾರಿ ಪೂರೈಸಬಹುದೆಂದು ತೋರುತಿದೆ.

ಈ ಸಂಸ್ಥಾನಕ್ಕೆ ಸೇರಿದ ಎಲ್ಲಾ ರಸ್ತೆಗಳಲ್ಲೂ ಸರ್ಕಾರದವರು ಹಾಕಿಸಿರುವ ಸಾಲುಮರಗಳನ್ನು ಯಾರು ಯಾವ ವಿಧವಾಗಿಯೂ ನೋಯಿಸಿ ಕಡಿಸದಂತೆ ಡೆಪ್ಯುಟಿಕಮಿಷನರವರು ಮೊದಲುಗೊಂಡು ತೋಟಕ್ಕೆ ತಳವಾರರ ವರೆಗೆ ಇರುವ ಬೇರೆ ಬೇರೆ ಉದ್ಯೋಗಸ್ಥರು ಚೆನ್ನಾಗಿ ಆಗಾಗ್ಗೆ ನೋಡಿಕೊಳ್ಳುತ್ತಲೂ ಅವು ಸುಖವಾಗಿ ಬೆಳೆಯುವದಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲ ಮಾಡುತ ಬರಬೇಕೆಂತಲೂ ಸರ್ಕಾರದವರು ಎಲ್ಲ ಡೆಪ್ಯುಟಿಕಮಿಷನರವರುಗಳಿಗೂ ಅಪ್ಪಣೆಮಾಡಿರುತ್ತಾರೆ.

ಈಗ ಪ್ಲೇಗಿನ ಅವಾಂತರದಿಂದ ರೈಲುಗಳು ಹೊಡ ತಿರುಗುವುದು ಬಹಳಕಡಿಮೆಯಾಗಿದೆಯಷ್ಟೆ. ಶ್ರೀರಂಗಪಟ್ಟಣ ಮೈಸೂರು ಪ್ರಾಂಚಲೈನ್ ಈ ಸ್ಥಳಗಳ ಜನರಿಗೆ ಬಹಳ ಅನುಕೂಲವಾಗಿರುವುದರಿಂದ ಅವರು ಈ ರೈಲ್ವೆ ಕಂಪೆನಿಯವರಿಗೆ ತಿಳಿಸಿ ಕೊಂಡರು. ಈಗ ಶ್ರೀರಂಗಪಟ್ಟಣದ ವರೆಗೆ ಮಾತ್ರ ಬರುವ ಚಿಕ್ಕ ರೈಲು ಗಾಡಿಯು ಹೋಗಿ ಬರುತಿರುವುದು. ಅದೇ ರೈಲನ್ನು ಹಿರೋಡಿನವರೆಗೂ ನಡೆಸಿ ಅಲ್ಲಿನವರಿಗೂ ಅನುಕೂಲಪಡಿಸಿ ಕೊಡಬೇಕೆಂತಲೂ ರಾತ್ರಿ ಅಲ್ಲಿಂದ ಬರುವವರನ್ನು ಮೈಸೂರಿಗೆ ಕರತರಬೇಕೆಂತಲೂ ಜನರು ಪ್ರಾರ್ಥಿಸಿರುವರೆಂದು ಕೇಳುವೆವು ಕಂಪೆನಿಯವರು ಇದನ್ನು ನಡಸಿ ಕೊಟ್ಟಾರೆಂದು ನಂಬುವೆವು.—ವೃ. ಟ.

ಈ ಷಹರರಸ್ತೆಗಳ ತಾತ್ಕಾಲಿಕಸ್ಥಿತಿಯು ಕೇವಲ ಹಾಸ್ಯಾಸ್ಪದವಾಗಿದೆ. ಪ್ರತಿಮಿಂದಿರಸ್ತೆಯಲ್ಲೂ ಗೇಣುದ್ದಧೂಳು ಮಣ್ಣುನಿಂತಿರುತಿದೆಯೇ ಹೊರತು ಘಟ್ಟಿಯಾದಸ್ಥಳವೇಯಿಲ್ಲವು. ಗಾಡಿಗಳ ಸಂಚಾರಕಾಲದಲ್ಲೂ ಗಾಳಿಬೀಸುವಾಗಲು ಧೂಳೆದ್ದು ರಸ್ತೆಯಲ್ಲಿ ತಿರುಗಾಡುವಂತವರ ಮೂಗು, ಕಣ್ಣು, ಬಾಯಿತುಂಬ ಹೋಗಿ, ಕಡೆಗೆ ಹೊಟ್ಟೆಯೊಳಕ್ಕೆ ಸಹ ಸೇರುವಂತಾಗಿದೆ. ಈ ರಸ್ತೆಗಳು ಯಾವಾಗ ಕ್ರಮಪಟ್ಟು ಪ್ರಜೆಗಳಿಗೆ ಅವರಬಾಧೆ ತಪ್ಪುವುದೋ ನಾವರಿಯೆವು. ಈಚೆಗೆ ಇಲ್ಲಿನ ಮ್ಯುನಿಸಿಪಾಲಿಟಿಯ ಆತಳತಗಳು ತೃಪ್ತಿಕರವಾಗಿರುವಂತೆ ತೋರಲಿಲ್ಲವು.

ಈಪ್ರಾರಿನ ತಾತ್ಕಾಲಿಕ ಸ್ಥಿತಿಯು ಯಾವಭಾಗದಲ್ಲೂ ಪ್ರಜೆಗಳಿಗೆ ಆರೋಗ್ಯಕರವಾಗಿರುವದಿಲ್ಲವೆಂದು ಹೇಳಬೇಕಾಗಿದೆ. ಈಗ್ಗೆ ಹದಿನೈದುದಿನಗಳಕಾಲಕ್ಕೆ ಮೇಲ್ಪಟ್ಟು ಪ್ರಾಯಶಃ ಪ್ರತಿಮನೆಯಲ್ಲಿಯೂ ಅಥವಾ ಪಕ್ಷ ಒಬ್ಬರಿಬ್ಬರಿಗೆ ಕಡಮೆಇಲ್ಲದೆ ಚಳಿ, ಜ್ವರ, ನೆಗಡಿ, ತಲೆನೋವು ಮೊದಲಾದ ರೋಗಗಳಿಂದ ಪೀಡಿತರಾಗಿ ಬಿದ್ದಿರುತ್ತಾರೆ. ಈ ರೋಗದಮೂಲಕ ಪ್ರಾಣಹಾನಿಗಳುಸಹ ಉಂಟಾಗದೆ ಹೋಗಲಿಲ್ಲವು ಈ ಜ್ವರವನ್ನು ಕೆಲವುಸಂವತ್ಸರಗಳಹಿಂದೆ ಯುರೋಪ್ದಲ್ಲಿ ಅಥವಾ ಸರ್ವತ್ರವ್ಯಾಪಿಸಿದ್ದ ಇಂಫ್ಲುಎನ್ಜಾ ಎಂಬ ಜ್ವರವೆನ್ನುತ್ತಾರೆ, ಇದರ ಚಿಕಿತ್ಸೆಯು ಸುಲಭಸಾಧ್ಯವಾಗಿ ಕಾಣುವದಿಲ್ಲವು. ಬಿಸಿಲು ದಿನೇದಿನೆ ಬಲವಾಗುತಬರುತಲಿದೆ.

ಈಷಹರಿನಲ್ಲಿ ಜಲವಸತಿಗಾಗಿ ಕಲ್ಪಿಸಲ್ಪಟ್ಟಿರುವ ಯೋಜನೆಯು ಸಾಮಾನ್ಯವಾಗಿ ಯಲ್ಲರಿಗೂ ಉಪಯುಕ್ತವಾಗಿರುತದೆಂದು ಹೇಳುವದಕ್ಕೆ ಅವಕಾಶವಿಲ್ಲವು. ಬೀದಿಗಳಲ್ಲಿ ನಲ್ಲಿಗಳನ್ನಿಡುವಕ್ರಮವು ಅಧಿಕಾರಿಗಳ ಇಚ್ಛಾನುವ್ಯಾಪಾರವಾಗಿರುವಂತೆ ಕಾಣುತಿದೆಯೇ ಹೊರತು ಅದು ಸರ್ವಜನೋಪಯುಕ್ತವಾಗಬೇಕೆಂಬ ಭಾವವು ಸದರೀ ಇಲಾಖಾ ಅಧಿಕಾರಿಗಳ ಹೃದಯದಲ್ಲಿರುವಂತೆ ಕಾಣಿಸಲಿಲ್ಲವು. ಕೆಲವು ಬೀದಿಗಳಲ್ಲಿ ಇದುವರೆಗೆ ನಲ್ಲಿಗಳಿಡಲ್ಪಡಲೇ ಇಲ್ಲವು. ಆಬಗ್ಗೆ ಅಲ್ಲಿನ ಜನರು ಆಗಿಂದಾಗ್ಗೆ ಬರೆದುಕೊಳ್ಳುವ ಅರ್ಜಿಗಳಿಗೆ ಜವಾಬ ದೊರೆಯುವದಿಲ್ಲವು. ನಲ್ಲಿಗಳಿಡಲ್ಪಟ್ಟಿರುವ ಪ್ರದೇಶಗಳಲ್ಲಿ ಕಂಜಾತಿ ಜನಗಳು ಮಾಡುವ ಗಲೀಜುಗಳನ್ನು ನಿರ್ಬಂಧಿಸುವದಕ್ಕೆ ಅಧಿಕಾರಿಯೊಬ್ಬರು ಇದುವರೆಗೆಯೇರ್ಪಡಲಿಲ್ಲವು. ಹೀಗಾದಮೇಲೆ ಪ್ರಜೆಗಳಿಗೆ ಈನಲ್ಲಿಗಳಮೂಲಕ ಯಾವಭಾಗದಲ್ಲಿ ಸುಖ ಉಂಟಾಯಿತೆಂದು ಜಿಜ್ಞಾಸೆ ಮಾಡತಕ್ಕವರಿಗೆ ಉತ್ತರವನ್ನಿಯುವುದು ಅಸಾಧ್ಯಪ್ರಶ್ನೆಯಾಗಿ ಕಾಣಿರಿದೆ. ಈಕಾರ್ಯದಲ್ಲಿ ಪ್ರಥಮ ಪ್ರವರ್ತಕರಾದ ದಿವಾನ ಸಾಹೆಬರವರಿಗೆ ಪ್ರಾರಂಭದಲ್ಲುಂಟಾಗಿದ್ದ ಅಕ್ಕರೆಯೂ ಶ್ರದ್ಧೆಯೂ ತಪ್ಪಿ ಅದನ್ನು ಅವರು ಅನ್ಯರತಲೆಯಮೇಲೆ ಹೊರಿಸಿ ನಿಶ್ಚಿಂತರಾಗಿರುವಂತೆ ಕಾಣುತಿದೆ. ಇವರು ಹೀಗೆಯೇ ಇರುವಪಕ್ಷದಲ್ಲಿ ಇದರಿಂದ ಅವರು ನಿರೀಕ್ಷಿಸುವ ಕೀರ್ತಿ ಪ್ರತಿಷ್ಟೆಗಳಂ ಹೊಂದುವಣವು ಸುಲಭಸಾಧ್ಯವಾಗಿರಲಾರದು.

SUMMARY OF NEWS.
ವೃತ್ತಾಂತ ಸಂಗ್ರಹವು.

ಫ್ರಾನ್ಸ ದೇಶವು ಹೊಗೆಬಂಡಿಯ ಚಕ್ರಗಳನ್ನು ಕಾಗದದಿಂದ ಮಾಡುತ್ತಿರುವರು.

ಯಾವತ್ತು ಪೃಥ್ವಿಮೇಲೆ ದರ ಒಂದು ಮಿನಿಟಿನಲ್ಲಿ ೩೦ ಜನರ ಪಾತ್ರ ೬೭ ಪ್ರೇತ್ಯ, ಆಗುತ್ತವೆಂದು ಅಂದಾಜು ತೆಗದಿದ್ದಾರೆ.

ದಾಮೋದರ ಚಾಪೇಕರನ ತಾಯಿಯು ಪ್ಲೇಗಿನಿಂದ ಸತ್ತಳು. ಇವಳು ಆದರಿಕೆಯಿಂದಲೇ ಆಸ್ಪತ್ರೆಯಲ್ಲಿ ಪ್ರಾಣಬಿಟ್ಟಳೆಂದು ಅನ್ನುತ್ತಾರೆ.

ಆಸ್ಟ್ರೇಲಿಯಾದಲ್ಲಿ ಮೊಟ್ಟಮೊದಲು ಅಂದರೆ ೧೭೮೮ ನೇ ಇಸವಿಯಲ್ಲಿ ವಾಸಕ್ಕಾಗಿ ಜನರು ಹೋದಾಗ್ಯೆ ಅಲ್ಲಿ ೨೯ ಕುರಿಗಳಿದ್ದವು, ಈಗ್ಗೆ ೧೧,೦೦೦,೦೦೦ ಇರುತ್ತವೆ?

ಈವಾರದಲ್ಲಿ ಹುಬ್ಬಳ್ಳಿಯಲ್ಲಿ ಇಬ್ಬರು ಜ್ವರದಿಂದ ಸತ್ತಿದ್ದು ಅವರು ಪ್ಲೇಗಿನಿಂದ ಸತ್ತರೆಂದು ನಿರ್ಣಯಿಸಲ್ಪಟ್ಟರು. ೮೯ ಅಂತು ಪ್ಲೇಗು ಬಂದಿದ್ದು ೮೭ ಜನರು ಸತ್ತಿರುತ್ತಾರೆ.

ರಷಿಯಾದ ತಾಬೇದಾರರೊಳಗಿದ್ದ ಮುಸಲ್ಮಾನಜನರ ಕಡೆಯಿಂದ ಬಹಳ ಗಲಭೆದಂಗೆ ಆಗುವ ಭೀತಿ ಇರುತ್ತದೆಂದು ಸೇಂಟ್‌ಪೀಟರ್ಸ್‌ಬರ್ಗದಿಂದ ವರ್ತಮಾನ ಪ್ರಸಿದ್ಧವಾಗುತ್ತದೆ.

ದಿಲ್ಲಿಯಿಂದ ಜಂಗಾರಮಾಡುವ ರಾಕ್ಷಸಿಯು ಸಿಡಿಗೆ ಮುಟ್ಟಿದ್ದರಿಂದ ಇನ್ನುಮೇಲೆ ೪ ರೂಪಾಯಿಗೆ ತೊಲೆಯಂತೆ ಭಂಗಾರದ ಧಾರಣೆಯಾಗುವದು, ಬಂಗಾರದ ದಾಗಿನವೆಂದು ಹಾಳಿರುವ ಕೊನಿಯುವ ಜನರಿಗೆ ದೇವರು ಕೊಡಿಸಿಕೊಟ್ಟಂತಾಯಿತು.

ಈಗ ಅಮೆರಿಕಾದೇಶದಲ್ಲಿ ೧೫೭ ಟನ್ನಗಳ ತೂಕವುಳ್ಳ ಹಿರಂಗಿಯಿಂದ ಅರ್ಧಟನ್ ಮತ್ತೊಂದು ಟನ್ ತೂಕದ ಗುಂಡು ಹಾಕಿ ಹೊಡೆದರೆ ೧೬ ಮೈಲಿ ಹಾಸಲೆಯುತ್ತಿರುವ ಸ್ಥಳದ ಮೇಲೆ ಕೆಳಗೆ ಮಾಡುವಂತಹ ಒಂದು ಭಾರಿ ಹಿರಂಗಿಯನ್ನು ತಯಾರುಮಾಡುತ್ತಿರುವರು,

ವಿಯನ್ನಾ ಪಟ್ಟಣದಲ್ಲಿರುವ ಒಬ್ಬ ವಿದ್ವಾಂಸನು ಸ್ತ್ರೀಯರ ಘಾತಕ ಪದಾರ್ಥಗಳನ್ನು ಆಹಾರವಮಾಡಿದರೆ ಗಂಡುಮಕ್ಕಳನ್ನು ಇಂತಹ ಪದಾರ್ಥಗಳನ್ನು ಸೇವನೆ ಮಾಡಿದರೆ ಹೆಣ್ಣುಮಕ್ಕಳನ್ನೂ ಪಡೆಯುವರೆಂದು ಪರೀಕ್ಷಿಸಿ ನಿರ್ಧರಮಾಡಿ ಬರೆದಿರುತ್ತಾನೆ

ಯಾವತ್ತೂ ಸರಕಾರಿ ಬರವಣಿಗೆಯಲ್ಲಿ "ಇಂಗ್ಲಿಷ್" "ಇಂಗ್ಲೆಂಡ್" ಈ ಹೆಸರುಗಳೇ ಬರುತ್ತಿರುವದರಿಂದ ಸ್ಕಾಟ್ಲಂಡದ ಜನರು ಅದಕ್ಕೆ ಅಡ್ಡಿಮಾಡಿ "ಬ್ರಿಟಿಷ್" ಮತ್ತು "ಬ್ರಿಟನ್" ಈ ಹೆಸರುಗಳನ್ನು ಪ್ರಯೋಗಿಸಬೇಕೆಂದು ಮಹಾರಾಣಿಯವರಿಗೆ ವಿನಂತಿಮಾಡಿದ್ದಾರೆ.

ಹುಬ್ಬಳ್ಳಿಯಲ್ಲಿ ಬಹಳ ಗೊಂದಲ ನಡೆದಿರುವದು. ನಗರ ಪೇಟೆ ಸಮೀಪಿಸಿರುವ ಅರ್ಧದ [illegible] ಮನೆಗಳನ್ನು ಸುಡಬೇಕೆಂದು ನಿಶ್ಚಯವಾಗಿರುತ್ತದೆಂಬದಾಗಿ ತಿಳಿಯಬರುತ್ತದೆ, ಮತ್ತು ಇದಕ್ಕೆ ಬದಲಾಗಿ ನಿಶ್ಚಯ [illegible] ಮನೆಗಳು ಅಲ್ಲಿನವರಿಗೆ ಸಮರ್ಪಿಸಲ್ಪಡುತ್ತವೆ.

[illegible] ಜನರು ಕೂಡಿ ಕಿಚ್ಚಿಟ್ಟು ದಂಗೆ ಮಾಡಿದರು. [illegible] ಪ್ಲೇಗಿನವರು ವೈದ್ಯ [illegible] ಅಸಿಸ್ಟೆಂಟ್ ಪೊಲೀಸ್ ಸುಪರಿಂಟೆಂಡೆಂಟರ ಬಂಗಲೆ [illegible] ನಾವು ಮುಂದೆ ವಿವರವಾಗಿ ತಿಳಿಸುವೆವು.

ವೀಣಾವೇದ "ವೈಶ್ಯ" ಎಂಬ ಹೆಸರಿನಿಂದ ಒಂದು ಸಭೆಯು ಸ್ಥಾಪಿಸಲ್ಪಟ್ಟಿದೆ. ವೈಶ್ಯರ ಉತ್ಪತ್ತಿ [illegible] ಈ ಸಭೆಯ ಉದ್ದೇಶ [illegible]

ಮುಂಬಯಿಯಲ್ಲಿ ಜ್ವರವು ಹೆಚ್ಚುತ್ತಲೇ ಇದೆ. [illegible]

ವಾತ್ಸಲ್ಯ [illegible] ಉದಾಹರಣೆ — [illegible]

ಲಕ್ನೋ ನಗರದ ಪ್ಲೇಗ್ ಆಸ್ಪತ್ರೆಯಲ್ಲಿ [illegible]

ಕಳೆದ ಮೇ ತಿಂಗಳ ೭ನೇ ಮತ್ತು ೮ನೇ ತಾರೀಖುಗಳಲ್ಲಿ ಈ ಸಂಸ್ಥಾನದ ಕೌನ್ಸಿಲರಾದ ಮೆ॥ ಪಿ ಎನ್ ಕೃಷ್ಣಮೂರ್ತಿಯವರ ಗೃಹದೊಳು ನಡೆದ ವಿವಾಹಗಳ ವಿಷಯದಲ್ಲಿ ಈ ಊರೊಳು ಪ್ರಕಟಿಸಲ್ಪಡುವ "ಬೆಂಗಳೂರ್ ನ್ಯೂಸ್" ಎಂಬ ಪತ್ರಿಕೆಯು ಕಳೆದ ತಿಂಗಳ ೨೮ನೇಯ ತಾರೀಖು ಶುಕ್ರವಾರದ ಸಂಚಿಕೆಯೊಳು ಪ್ರಕಟಿಸಲ್ಪಟ್ಟಿರುವ ಬಹುವಿಧ ಅಪಲಾಪಗಳಲ್ಲಿ ಕೆಲವನ್ನು ಉದಾಸೀನಭಾವದಿಂ ನಿರ್ಲಕ್ಷ್ಯಯಿಂದ ಬಿಡೋಣ. ಕೇವಲ ಅಪಪ್ರಥೆಗೆ ಕಾರಣಭೂತಗಳಾಗಿರುವ ಮುಖ್ಯಗಳಾದ ಕೆಲವು ಅಂಶಗಳ ನಿಜಸ್ಥಿತಿಯಂ ಪ್ರಕಟಿಸಿ ಸದರೀ "ಬೆಂಗಳೂರ್ ನ್ಯೂಸ್" ಎಂಬ ಪತ್ರಿಕೆಯ ತುಚ್ಛಲೇಖನದಿಂ ಮೆ॥ ಕೃಷ್ಣಮೂರ್ತಿಯವರ ವಿಷಯದೊಳು ಸ್ಥಳಪರಸ್ಥಳಗಳಲ್ಲಿನ ಪ್ರಜೆಗಳ ಹೃದಯಗಳಲ್ಲುಂಟುಮಾಡಲ್ಪಟ್ಟಿರಬಹುದಾದ ಅನ್ಯಥಾ ಜ್ಞಾನವಂ ಹೋಗಲಾಡಿಸುವದು ಈ ಸಂದರ್ಭದೊಳು ನಮಗೆ ಅವಶ್ಯ ಕರ್ತವ್ಯವೆಂದು ಭಾವಿಸುವೆವು.

ಈ ಗೃಹದ ವೇಳೆ ಶೆಟ್ಟಿವರ್ತಕ ಮಹಾಜನರು ಕರೆಯಿಸಿ ನಮವನಿಗೆ ತಾಂಬೂಲ ಕೊಟ್ಟ ನಂತರ ಅವರಿಗೆ ತಾಂಬೂಲ ಕೊಟ್ಟದರಿಂದ ಅವರೆಲ್ಲರು ಅಸಮಾಧಾನ ಪಟ್ಟುಕೊಂಡು ಬಂದರು ಎಂಬವುದು ಕೇವಲ ನಿರಾಧಾರವು. ಶುಭಕ್ಕೆ ಬಹೂತರಾಗಿ ಹೋಗಿದ್ದವರನ್ನು ಮರ್ಯಾದಾ ಪುರಸ್ಸರವಾಗಿ ಬರಮಾಡಿಕೊಂಡು ಉಚಿತಾಸನಗಳಲ್ಲಿ ಕುಳ್ಳಿರಿಸಿ ಗಂಧ ಪುಷ್ಪ ಫಲ ತಾಂಬೂಲಗಳು ಕೊಡುವದಕ್ಕಾಗಿ ಗೌರವ್ಯರಾದ ದೊಡ್ಡಮನುಷ್ಯರು ಸುಮಾರು ಇಪ್ಪತ್ತು ಮಂದಿಯವರೆಗೆ ನಿಯಮಿತರಾಗಿ ಬಹಳ ತೃಪ್ತಿಯಿಂದ ಕಾರ್ಯಗಳಂ ನಡೆಸುತಲಿದ್ದರು. ಅನೇಕ ಸಹಸ್ರ ಪ್ರಜೆಗಳು ಗುಂಪು ಗುಂಪಾಗಿ ಹೋಗಿದ್ದು ಅವರಿಗೆಲ್ಲ ತಾಂಬೂಲ ಕೊಡುವ ಕಾಲದಲ್ಲಿ ವ್ಯಕ್ತಿಜ್ಞಾನವಿಲ್ಲದೆ ಯಾರಾದರೊಬ್ಬರು ನಮವನಿಗೆ ತಾಂಬೂಲ ಕೊಟ್ಟರಬಹುದೆಂದು ನಂಬಿದಾಗ್ಯೂ ಕೂಡ ವಿಶೇಷ ಸಂದರ್ಭಗಳಲ್ಲಿ ಪ್ರಮಾದವಶಾತ್ ನಡೆದುಹೋಗುವ ಅಲ್ಪ ವಿಷಯವಂ ಇದಂಪರ್ಯೇಣ ಒಂದು ಪ್ರಬಲ ಅಪರಾಧತ್ವೇನ ಗಣಿಸಿ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸುವಣವು ಪತ್ರಿಕಾ ಲೇಖನೋದ್ಯೋಗದ ಸ್ವರೂಪವನ್ನೂ ಜವಾಬ್ದಾರಿಯನ್ನೂ ಸ್ವಲ್ಪವೂ ಅರಿಯದ ಮೂಢಮತಿಗಳ ಕಾರ್ಯವೆಂದು ನಮ್ಮಂತೆ ಅನೇಕರು ಭಾವಿಸದೆ ಹೋಗಲಾರರು. ಪ್ರಸಕ್ತ ಶುಭಕ್ಕಾಗಿ ಕರೆಯಿಸಲ್ಪಟ್ಟಿದ್ದ ಶೆಟ್ಟಿ ವರ್ತಕ ಮಹಾಜನರನ್ನೆಲ್ಲ ಒಂದು ದೊಡ್ಡ ಹಾಲ್‌ನಲ್ಲಿ ಕುಳ್ಳಿರಿಸಿ, ಅವರ ಸಂತೋಷಾರ್ಥ ತಾಫಾ ಕಟ್ಟಿಸಿ, ಪ್ರತಿ ಒಬ್ಬರಿಗೂ ಗಂಧಪುಷ್ಪ ಫಲ ತಾಂಬೂಲಗಳಂ ಕೊಟ್ಟದ್ದು ಮಾತ್ರವಲ್ಲದೆ, ಮೆ॥ ಕೃಷ್ಣಮೂರ್ತಿಯವರು ಮಧ್ಯೆ ಅಲ್ಲಿಗೆ ಹೋಗಿ ಬಹಳ ಆದರದೊಡನೆ ವರ್ತಕರನ್ನೆಲ್ಲ ಮಾತನಾಡಿಸಿ ಗೌರವಿಸಿ ತಮ್ಮ ಕೆಲಸಕ್ಕೆ ವಾಪಸ್ ಹೋದರು. ಇದರ ನಿಜಸ್ಥಿತಿ ಹೀಗಿರುವಲ್ಲಿ ಅದನ್ನು ಮರೆಮಾಚಿ ನಿರಾಧಾರವಾದ ಕಲ್ಪಿತ ಕಥೆಗಳಂ ಪ್ರಕಟಿಸುವದಕ್ಕೆ ಅಸೂಯಾಜನಕವಾದ ಪರಪ್ರೇರಣೆಯಲ್ಲದೆ ಇನ್ನೇನು ಕಾರಣವಿರುವುದು? ಈಚೆಗೆ ಈ ಲೇಖಕರು ಅಲ್ಪವಾದ ಒಂದು ಕಾರಣವಮೇಲೆ ತಮಗೆ ಲಭಿಸಿದ ಒಬ್ಬ ದೊಡ್ಡ ಮನುಷ್ಯರ ಆಶ್ರಯವು, ತಾವು ಮಾಡುವ ದುರ್ಲಕ್ಷ್ಯದ ಫಲಾನುಭವದಿಂ ತಮ್ಮಂ ಕಾಪಾಡುವದೆಂಬ ಭ್ರಾಂತಿಪೀಡಿತರಾಗಿ ಮನಸ್ವಿ ಲೇಖನ ಭೂಷಣಗಳಗಳಿಸಿರುವಂತೆ ಸ್ಪಷ್ಟವಾಗಿ ಕಾಣುತಿದೆ. ಇದೂ ಅಲ್ಲದೆ ಈ ಲೇಖಕರು ಮೆ॥ ಕೃಷ್ಣಮೂರ್ತಿಯವರ ಆಶ್ರಯವಂ ಸಂಪಾದಿಸಲು ಮಾಡಿದ ಪ್ರಯತ್ನವು ಫಲಕಾರಿಯಾಗದೆ ಹೋದದರಿಂದ ಪರಾಗ್ರಹ ಪೀಡಿತರಾಗಿ ಕದಾಚಿತ್ ಅವರ ದರ್ಶನಾರ್ಥ ಅವರ ಬಂಗ್ಲೆಗೆ ಹೋಗುವಂತವರನ್ನೆಲ್ಲ ವ್ಯಕ್ತಿ ವಿಶೇಷದೊಡನೆ ದೂಷಿಸುವದಕ್ಕುಪಕ್ರಮಿಸಿರುವಂತೆ ವ್ಯಕ್ತವಾಗುತಿದೆ.

ಈ ದೇಶದ ಪುರಾತನ ಸಂಪ್ರದಾಯಾನುಸಾರವಾಗಿ ಪರ್ಯಾಯಾರ್ಥ ಕೊಡಲ್ಪಡುವ ತಾಂಬೂಲವು ಸಾಮಾನ್ಯವಾದುದಾಗಿಯೇ ಇರುವದು. ಭೋಜನಾನಂತರವೂ ಮಜಲಿಸ್ ಕಾಲದಲ್ಲೂ ಕೊಡಲ್ಪಡುವ ಗಂಧಪುಷ್ಪ ತಾಂಬೂಲಗಳು ಪರಿವಾರಯುಕ್ತವಾದವಾಗಿಯೂ ಭೋಗ್ಯಗಳಾಗಿಯೂ ಇರುವವು. ಹೀಗಿದ್ದಾಗ್ಯೂ ಇದನ್ನರಿಯದ ಮೂಢರ ಲೇಖನವಂ ನೋಡಿ ಯಾರು ತಾನೆ ಅಸಹಿಸಿಕೊಳ್ಳದೆ ಹೋಗುವರು? ಈ ತುಚ್ಛಲೇಖಕರ ವಿಷಯ ಹಾಗಿರಲಿ. ಮೆ॥ ಕೃಷ್ಣಮೂರ್ತಿಯವರ ಗೃಹದೊಳು ನಡೆದ ವಿವಾಹಗಳ ವೈಖರಿಯಂ ಯಥಾವಸ್ಥಿತವಾಗಿಯೂ ಸಂಗ್ರಹರೂಪವಾಗಿಯೂ ನಮ್ಮ ವಾಚಕರ ತಿಳುವಳಿಕೆಯಬಗ್ಗೆ ಇದರಡಿ ಪ್ರಕಟಿಸುವೆವು —ಮುಹೂರ್ತದ ದಿವಸ ಸುಮಾರು ಒಂದು ಸಾವಿರ ವೈದಿಕ ಬ್ರಾಹ್ಮಣರಿಗೆ ಒಂದು ರೂಪಾಯಿ ಮೊದಲ್ಗೊಂಡು ಐದರವರೆಗೆ ವ್ಯಕ್ತಿತಾರತಮ್ಯಾನುಗುಣವಾಗಿ ಭೂರಿದಕ್ಷಿಣೆ ಕೊಟ್ಟರು ಪ್ರತಿದಿನವೂ ಸುಮಾರು ಪಕ್ಷ್ಯಗಳೊಡನೆ ಸಾವಿರಾರು ಬ್ರಾಹ್ಮಣರಿಗೆ ಸಂತರ್ಪಣೆ ನಡೆಯಿತು. ಸುಮಾರು ಎರಡುಸಾವಿರ ಮಂದಿ ಸ್ಮಾರ್ತಬ್ರಾಹ್ಮಣರಿಗೆ ಇಲ್ಲಿನ ಪೂರ್ಣಯ್ಯನವರ ಸತ್ರದಲ್ಲಿ ದಿವ್ಯಭೋಜನ ಮಾಡಿಸಿದರು. ಕಳೆದ ಬೃಹಸ್ಪತಿವಾರ ದಿವಸ ಇಲ್ಲಿನ ತುಳಸೀತೋಟದ ಶ್ರೀಕೃಷ್ಣಸ್ವಾಮಿ ಸನ್ನಿಧಿಯಲ್ಲಿ ಸುಮಾರು ಐನೂರುಮಂದಿ ಶ್ರೀವೈಷ್ಣವ ವೈದಿಕಬ್ರಾಹ್ಮಣರಿಗೆ ಲಾಡುವೊದಲಾದ ಭಕ್ಷ್ಯಗಳೊಡನೆ ಭೋಜನಮಾಡಿಸಿದರು. ನಿನ್ನೆಯದಿನ ಬ್ರಾಹ್ಮಣೇತರರಾದ ದೊಡ್ಡಮನುಷ್ಯರಿಗೆ ತಮ್ಮ ಬಂಗ್ಲೆಯಲ್ಲೇ ದಿವ್ಯಭೋಜನ ಮಾಡಿಸಿದರು. ಮುಸಲ್ಮಾನ ದೊಡ್ಡಮನುಷ್ಯರಿಗೆ ಕೂಡಲೇ ಔತನ ನಡೆಯುವಂತಿದೆ. ಈ ದಿನ ಈ ಪ್ರಾಂತದಲ್ಲಿರುವ ಅಡ್ವೋಕೇಟುಗಳು ವಕೀಲರು ಮೊದಲಾದವರಿಗೆಲ್ಲ ಅತಿ ವಿಜೃಂಭಣೆಯಿಂದ ಔತನ ನಡೆಯುತಿದೆ. ಈ ಸಂಸ್ಥಾನದ ರೆಸಿಡೆಂಟರವರು ಈಗ ನೀಲಗಿರಿಯಲ್ಲಿರುವದರಿಂದ ಅವರು ಇಲ್ಲಿಗೆ ವಾಪಸ್ ಬಂದಕೂಡಲೆ ಇಲ್ಲಿರುವ ಯೂರೋಪಿಯನ್ ಆಫೀಸರುಗಳಿಗೆ ಔತನ ಮಾಡುವದಕ್ಕೆ ಪ್ರಬಲ ಸನ್ನಾಹಗಳು ನಡೆಯುತಲಿವೆ. ಮಿಸ್ಟರ್ ಕೃಷ್ಣಮೂರ್ತಿಯವರು ತಮ್ಮ ಮಹಾಗೌರವ, ಸ್ವಗೌರವ ಮತ್ತು ಐಶ್ವರ್ಯಗಳಿಗೆ ಯಾವಭಾಗದಲ್ಲೂ ಲೋಪ ಲೇಶವಿಲ್ಲದಂತೆ ಅತ್ಯುದಾರ ಮನಸ್ಕರಾಗಿ ಲಕ್ಷಾಂತರ ರೂಪಾಯಿಗಳ ವ್ಯಯದಿಂ ನಡೆಸಿದ ಶುಭವಂ ನೋಡಿ ಅನುಭವಿಸುವುದು ನಿಷ್ಪಕ್ಷಪಾತಿಗಳಾದ ಸತ್ಪುರುಷರ ಕರ್ತವ್ಯವಾಗಿದ್ದಾಗ್ಯೂ ಅದು ಬಿಟ್ಟು ಇದಂಪರ್ಯೇಣ ಉನ್ಮತ್ತಪ್ರಲಾಪಕ್ಕೆಳಸಿರುವ ಈ ದುರ್ವೃತ್ತರ ಲೇಖನವನ್ನು ಅಭಿಜ್ಞರಾದವರು ಯೋಚಿಸದು ಗೌರವಿಸುವರು! ಭಯವರಿಯದ ಕರು ಮನಸ್ಸಿಗೆ ಹಾರಿ ಬಿದ್ದು ಕೈಕಾಲುಗಳಂ ಮುರಿದುಕೊಳ್ಳುತ್ತಾ ಪ್ರಾಣಬಿಡುವಂದದಿ, ಅಪ್ರಬುದ್ಧವಯಸ್ಸಿನವರೂ ಗೌರವ್ಯರಾದವರ ದೂಷಣ ತಿರಸ್ಕಾರಗಳು ತನಗೆ ಕರ್ತವ್ಯ ಮಾತ್ರ ತನ್ನ ಲೇಖನಶಕ್ತಿ ಪ್ರದರ್ಶನವೆಂಬ ಮತ್ತ ಪಿಶಾಚಪೀಡಿತರಾಗಿ ಮನಸ್ವಿ ವರ್ತಿಸುವಂತವರ ದುರ್ಲೇಖನಕ್ಕೆ ಅವಕಾಶ ಕೊಡುವ ಪತ್ರಿಕೆಯು ಸ್ವಲ್ಪದಿನಗಳಲ್ಲೇ ನಾಮಮಾತ್ರಾವಶಿಷ್ಟವಾಗುವುದು ಲೋಕಹಿತಾರ್ಥವೆಂದು ಭಾವಿಸುವೆವು.

ಮೆ॥ ಪೂರ್ಣಯ್ಯನವರ ಕುಮಾರ್ತಿಯ ವಿಷಯದಲ್ಲಿ ಈ ಕುತ್ಸಿತಲೇಖಕರು ಪಯೋಗಿಸಿರುವ ಅವಾಚ್ಯವಾದ ಶಬ್ದವು ಕೇವಲ ಹೃದಯವ್ಯಥಾಕಾರಿಯಾಗಿರುವದರಿಂದ ಅದಂ ಮರಳಿ ಇಲ್ಲಿ ಅನುವದಿಸುವದಕ್ಕೆ ನಮ್ಮ ಮನವು ಸುತರಾಂ ಒಡಂಬಡಲಿಲ್ಲವು. ಯುಕ್ತಾಯುಕ್ತ ಪರಿಜ್ಞಾನಹೀನರಾದ ಈ ದೂಷಕರು ಕ್ಷಿಪ್ರದಲ್ಲಿ ಭಗವನ್ನಿಗ್ರಹಕ್ಕೆ ವಿಷಯರಾಗದೆ ಹೋಗಲಾರರೆಂದು ದೃಢವಾಗಿ ನಂಬುವೆವು.

ಸದರೀ ಲೇಖನದ ಪ್ರಾರಂಭದಲ್ಲಿ ಮೊಕ್ಕದ್ದಮ್ಮೆ ಪೂರ್ತಿಯವರ ಗುಣಗಳನ್ನು ದಿವಾನ್ ಬಹದೂರ್ ಪಿಳ್ಳೆ(?) ರಘುನಾಥರಾಯರವರಿಗೆ ಧಾರೆಯೆರೆದರು" ಎಂದು ತಿಳಿಸಲ್ಪಟ್ಟಿರುವದರಿಂದ ಈ ಲೇಖಕರು ದಿವಾಂದುಂಬುವವರಲ್ಲಿ ಸಂಶಯ ಲೇಶವೂ ತೋರುಬರುವದಿಲ್ಲವು. ದಿವಾನ್ ಬಹದೂರ್ ರಘುನಾಥರಾಯರವರಿಗೆ ಪುತ್ರಸಂತಾನವಿಲ್ಲವು, ಮತ್ತು ಅವರು ಇಲ್ಲಿನ ಕುಟುಂಬಕ್ಕೆ ಬರಲೂ ಇಲ್ಲವು. ಇಂತ ಮುಖ್ಯ ವಿಷಯದಲ್ಲೇ ಇಷ್ಟು ಅವಿಚಾರವಾಗಿ ಬರೆದಿರುವ ಈ ಲೇಖಕರಿಂದ ತಿಳಿಸಲ್ಪಟ್ಟಿರುವ ಇತರವಿಷಯಗಳು ವಾಚಕರ ನಂಬಿಕೆಗೆ ಯೆಷ್ಟು ಅರ್ಹವಾಗಿರುವವೋ ಅದು ಅವರೇ ಊಹಿಸಿ ನಿರ್ಧರಿಸಿಕೊಳ್ಳಬಹುದು.

ಪೆನ್ಶನ್ ಕಾಲ ನಿರ್ಣಯವು.

— 1 —

ಈ ಸಂಸ್ಥಾನದ ಉದ್ಯೋಗಸ್ಥರು ತಮ್ಮ ನೌಕರಿಯ ಪೆನ್ಶನ್ ಮೇಲೆ ನಿವೃತ್ತರಾಗಬೇಕಾದ ಕಾಲದ ವಿಷಯದಲ್ಲಿ ಈಚೆಗೆ ಉಂಟಾದ ಒಂದು ಪ್ರಬಲ ಚರ್ಚೆಯು ಗವರ್ನಮೆಂಟಿನ ವ್ಯವಸ್ಥೆಯು ಯೆಂತಿರುತ್ತದೆಂದರೆ.— ಇಲ್ಲಿನ ಗವರ್ನಮೆಂಟ್ ಬುಕ್ ಡಿಪೋನಲ್ಲಿರುವ ಒಬ್ಬ ರೈಟರಿಗೆ ಅರವತ್ತು ವರ್ಷಗಳ ವಯಸ್ಸು ಪೂರ್ತಿಯಾಗಿರುತ್ತದೆ, ಪರಂತು ಕೆಲಸ ಮಾಡುವದಕ್ಕೆ ಶಕ್ತನಾಗಿರುತ್ತಾರೆ, ಅವರನ್ನು ನೌಕರಿಯಲ್ಲಿಟ್ಟುಕೊಂಡಿರಬಹುದೆ ಅಥವಾ ಪೆನ್ಶನ್ ಮೇಲೆ ನಿವೃತ್ತಿ ಮಾಡತಕ್ಕದ್ದೋ ಯೆಂದು ವಿದ್ಯಾಭ್ಯಾಸದ ಚೀಫ್ ಇನ್ಸ್ಪೆಕ್ಟರ್ ಜನರಲ್ ಅವರು ಗವರ್ನಮೆಂಟಿನವರನ್ನು ಕೇಳಲಾಗಿ, ಸದರೀ ರೈಟರು ಮಾತ್ರವಲ್ಲದೆ, ಆ ಡಿಪೋ(?) ನೌಕರರಲ್ಲಿ ಯಾರೇ ಆಗಲಿ ದೇಹದಾರ್ಢ್ಯವೂ ಬುದ್ಧಿಬಲವೂ ಉಳ್ಳವರೆಲ್ಲರು ಅರವತ್ತು ವರ್ಷಗಳ ವಯಸ್ಸಿನವರೆಗೆ ನೌಕರಿಯಲ್ಲಿರಬಹುದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿರುವಂತೆ ಕೇಳುತ್ತೇವೆ. ಶರೀರದ ಧೈರ್ಯ ಮೊದಲಾದ ಅರ್ಹತೆಯು ಪರಿಗಣಿಸದೆ, ಐವತ್ತೈದು ವರ್ಷಗಳ ವಯಸ್ಸು ಪೂರ್ತಿಯಾದವರಿಗೆಲ್ಲ ಪೆನ್ಶನ್ ಕೊಡುತಬಹುದು, ಅವರ ಸ್ಥಾನಗಳಿಗೆ ಬೇರೆ ಯುವಕರನ್ನು(?) ನಿಯಮಿಸುವದರ ಮೂಲಕ ಸರ್ವೀಸಿನ ಖರ್ಚುಗಳು ದುಬಾರಿಯಾಗುವವೆಂಬ ಆಲೋಚನೆಯಿಂದ ಗವರ್ನಮೆಂಟಿನವರು ಮೇಲೆ ತಿಳಿಸಲ್ಪಟ್ಟಿರುವಂತೆ ಹುಕುಂ ಮಾಡಿರಬಹುದೆಂದು ಯೋಚಿಸಲಾಗಿರುತ್ತದೆ ಇದು ಅನುಚಿತವಾದುದೆಂದು ನಾವು ಹೇಳಲಾರೆವು ಐವತ್ತೈದು ವರ್ಷಗಳ ವಯಸ್ಸು ಪೂರ್ತಿಯಾದ ಕಾರಣ ಒಂದರಿಂದಲೇ ವೃತ್ತಿಗೆ ಯೋಗ್ಯರಾಗಿಯೂ ಮುಂದೆ ಕೆಲಸಮಾಡುವದಕ್ಕೆ ಶಕ್ತರಾಗಿಯೂ ಇರುವವರನ್ನು ಪೆನ್ಶನ್ ಮೇಲೆ ನಿವೃತ್ತಿ ಮಾಡುವದರಿಂದ ವ್ಯರ್ಥವಾದ ಖರ್ಚುಗಳಿಗೆ ಅವಕಾಶ ಉಂಟಾಗುವದೇನೋ ನಿಜ, ಪರಂತು ಈ ಹೊಸ ನಿಬಂಧನೆಯು ವ್ಯಕ್ತಿತಾರತಮ್ಯವಿಲ್ಲದೆ ಅರ್ಹರಾದವರೆಲ್ಲರ ವಿಷಯದಲ್ಲೂ ಆಚಾರದೊಳು ತರಲ್ಪಡುವ ಪಕ್ಷದಲ್ಲಿ ಅದು ಆಕ್ಷೇಪಣೆಯ್ಯಾಗಲಾರದು. ಇನ್ನು ನಾಲ್ಕಾರು ತಿಂಗಳ ಕಾಲದೊಳಗಾಗಿ ಪೆನ್ಶನ್ ರೂಲ್ಸ್ ಅನುಸರಿಸಿ ಕೆಲಸದಿಂದ ನಿವೃತ್ತರಾಗಬೇಕಾದವರನೇಕರಿರುವದರಿಂದ ಅವರ ವಿಷಯದಲ್ಲಿ ಗವರ್ನಮೆಂಟಿನವರು ಯಾವ ಕ್ರಮವನ್ನು ಅನುಸರಿಸುವರೋ ಅದರಿಂದ ಅವರ ಉದ್ದೇಶವು ವ್ಯಕ್ತವಾಗದೆ ಹೋಗಲಾರದು.

Occasional Notes
ನೈಮಿತ್ತಿಕವಿಷಯನ್ಯಾಸ.

ನೇಪಾಳ ದೇಶದೊಳು ಪ್ಲೇಗ್ ರೋಗದ ವ್ಯಾಪಕತೆಗೆ ಅವಕಾಶವಿಲ್ಲದಿರುವಂತೆ ಪರಸ್ಥಳಗಳಿಂದ ಅಲ್ಲಿಗೆ ಹೋಗುವಂತವರನ್ನು ದೇಶದೊಳಗೆ ಬಿಡಕೂಡದೆಂದು ಸದರೀ ಸರ್ಕಾರದವರು ಹುಕುಂ ಕೊಟ್ಟಿರುತ್ತಾರೆ.

ಕುಚಬಿಹಾರ್ ಸಂಸ್ಥಾನದ ಮಹಾರಾಜರವರಿಗೆ ದೇಹಾರೋಗ್ಯದಲ್ಲಿ ಕೊರತೆಯುಂಟಾಗಿರುವದರಿಂದ ಯುರೋಪ್ ಖಂಡಕ್ಕೆ ಹೋಗಿ ಅಲ್ಲಿನ ಸಮರ್ಥರಾದ ವೈದ್ಯರಿಂದ ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂಬ ಉದ್ದೇಶದೊಡನೆ ಶೀಘ್ರದಲ್ಲಿ ಅಲ್ಲಿಗೆ ಪ್ರಯಾಣ ಮಾಡುವವರಾಗಿರುವಂತೆ ತಿಳಿಯಲಾಯಿತು.

ಬರ್ಮಾದೇಶದ ಪದಭ್ರಷ್ಟರಾದ ಥೀಬಾ ಅರಸಿನವರು ಉಪಯೋಗಿಸುತಲಿದ್ದ ಚಿನ್ನದ ರಥವೂ ಅವರು ಕೂಡುತಲಿದ್ದ ಅಂಗಿಯೂ ಕಳೆದ ಮೇ ತಿಂಗಳ ೨ನೇ ತಾರೀಖಿನಲ್ಲಿ ಲಂಡನ್ ಪಟ್ಟಣದೊಳು ಹರಾಜಿಗೆ ಇಡಲ್ಪಟ್ಟಿದ್ದವು.

ಕಳೆದ ಮಂಗಳವಾರದದಿನ ಪೇಶಾವರ್ ಪಟ್ಟಣದಲ್ಲಿ ಬೆಂಕಿಬಿದ್ದು ಒಂದು ಮೊಹಲ್ಲಾ ಪೂರಾ ಸುಟ್ಟುಹೋಗಿ ನಾಲ್ಕುನೂರು ಮನೆಗಳು ನಾಶವಾಗಿ ತನ್ಮೂಲಕ ನಾಲ್ಕುಕೋಟಿ ರೂಪಾಯಿಗಳ ನಷ್ಟವುಂಟಾದಂತೆ ತಂತಿವರ್ತಮಾನ ಬಂದಿರುತ್ತದೆ.

ಮುಂಬೈಯಲ್ಲಿ ಪ್ಲೇಗ್ ರೋಗವು ದಿನೇ ದಿನೇ ಶಾಂತವಾಗುತ್ತ ತನ್ಮೂಲಕ ಮೃತಿಹೊಂದುವಂತವರ ಸಂಖ್ಯೆಯು ಸಹ ಕಡಮೆಯಾಗುತಲಿರುವದರಿಂದ ಇನ್ನು ಸ್ವಲ್ಪ ದಿನಗಳಲ್ಲಿ ಸದರೀ ರೋಗದ ಬಾಧೆಯು ನಿಶ್ಶೇಷವಾಗಿ ನಿವೃತ್ತಿಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಪಂಜಾಬ್ ದೇಶದ ಹೋಷಿಯಾರ್ಪುರ್ ಡಿಸ್ಟ್ರಿಕ್ಟಿಗೆ ಸೇರಿದ ಅನೇಕಗ್ರಾಮಗಳಲ್ಲಿ ಪ್ಲೇಗ್ ರೋಗ ವ್ಯಾಪಿಸಿ ಪ್ರಾಣಹಾನಿಯನ್ನುಂಟುಮಾಡುತಲಿರುವದಾಗಿ ಹಿಂದಿನವಾರಗಳ ಪತ್ರಿಕೆಗಳ ಮೂಲಕ ತಿಳಿಸಿದ್ದೆವಷ್ಟೆ. ಕಳೆದ ವಾರದಲ್ಲಿ ಬಂದ ವರ್ತಮಾನದ ಮೂಲಕ ಈಗ ಪ್ರಸಕ್ತ ರೋಗವು ಶಮನವಾಗುತಲಿರುವಂತೆ ತಿಳಿದು ಸಂತೋಷಿಸುತ್ತೇವೆ.

ಇಂಗ್ಲಾಂಡ್ ದೇಶದೊಳು ಒಂದು ಪ್ರದೇಶದ ಪೋಸ್ಟ್ ಮಾಸ್ಟರಾದ ಮಿ॥ ರಾಬರ್ಟ್ ಟೈಲರ್ ಎಂಬವರಿಗೆ, ಕಳೆದ ಏಪ್ರಿಲ್ ತಿಂಗಳಿಗೆ ೧೦೫ ವರ್ಷಗಳ ವಯಸ್ಸು ಪೂರ್ತಿಯಾದುದರಿಂದ, ಶ್ರೀ ಮಹಾರಾಜ್ಞಿಯವರು ತಮ್ಮ ತಸ್ವೀರನ್ನು ವಿಶೇಷ ಕೆಲಸಗಾರಿಕೆಯುಳ್ಳ ಗೂಡಿನಲ್ಲಿ ಹಾಕಿಸಿ, ಕ್ವೀನ್ ವಿಕ್ಟೋರಿಯಾಯವರಿಂದ ಕೊಡಲ್ಪಟ್ಟ ಇನಾಂ ಎಂದು ಮೇಲ್ಗಡೆ ಬರೆಯಿಸಿ ಅವರಿಗೆ ಕಳುಹಿಸಿ, ಸದರೀ ಪೋಸ್ಟ್ ಮಾಸ್ಟರವರ ಫೋಟೋಗ್ರಾಫ್ ತಸ್ವೀರನ್ನು ತಮಗೆ ಕಳುಹಿಸಿಕೊಡಬೇಕೆಂದು ಬರೆಯಿಸಿದರಂತೆ.

ಈ ಸಲದ ಮೊಹರಂ ಹಬ್ಬದಲ್ಲಿ ಲಾಹೋರ್‌ನೊಳು ಮುಸಲ್ಮಾನ ಜನರೊಡನೆ ಹಿಂದೂಗಳೂ ಸೇರಿ ಸಹೃದಯದಿಂದ ಸದರೀ ಹಬ್ಬವನ್ನು ಬಹಳ ವಿಭವದೊಡನೆ ನಡೆಸಿದರು, ಮುಲ್ತಾನಿನಲ್ಲಿ ಸದರೀ ಹಬ್ಬದೊಳು ಹಿಂದೂಗಳಿಗೂ ಮುಸಲ್ಮಾನರಿಗೂ ಪ್ರಬಲ ಕಲಹ ಉಂಟಾಗಿ ಒಬ್ಬರಿಗೊಬ್ಬರು ಚೂರಿಗಳಿಂದ ತಿವಿದುಕೊಂಡು ಘಾಯಗಳಂ ಮಾಡಿಕೊಂಡರು. ಕಡೆಗೆ ಮಿಲಿಟರಿ ಸೈನ್ಯವು ಬಂದು ಈ ಜನರ ಪುಂಡತನ್ನು ಅಡಗಿಸಿ ಅನೇಕರನ್ನು ದಸ್ತಗಿರಿಮಾಡಿ ವಹಿಸಿಟ್ಟಿರುತ್ತಾರೆ, ಮುಂದೆ ಕ್ರಮವಾಗಿ ದರ್ಯಾಫ್ತಿ ನಡೆಯುವದು.

ಕಳೆದತಿಂಗಳ ೨೮ನೇ ತಾರೀಖ್ ಮಂಗಳವಾರ ಬೆಳಗ್ಗೆ ೫ ಘಂಟೆ ಸಮಯದಲ್ಲಿ ಮೆಕ್ಕಾ ಎಂಬ ಜಹಜು ಬಂಗಾಳಾ ಕೊಲ್ಲಿಯಲ್ಲಿ ಹೋಗುತ್ತಿದ್ದಾಗ ಲಿಂಡಲಾ(?) ಎಂಬ ಇನ್ನೊಂದು ಜಹಜಿಗೆ ಬಡಿದು, ತೂತು ಬಿದ್ದು, ನೀರು ತುಂಬಿ, ಮುಳುಗಿಹೋಯಿತು. ಅದರಲ್ಲಿ ಸುಮಾರು ೨೦೦ ಜನರವರೆಗೆ ಇದ್ದರು. ಬಹಳ ಕಷ್ಟಪಟ್ಟು ಇವರಲ್ಲಿ ಅನೇಕರು ೫, ೬ ದೋಣಿಗಳಲ್ಲಿ ಕೂತುಕೊಂಡು ದಡಕ್ಕೆ ಬಂದು ಸೇರಿದರು. ಉಳಿದವರು ಸುಮಾರು ೩೩ ಜನರು ಆ ಜಹಜಿನಲ್ಲೇ ಸಿಕ್ಕಿ ಸತ್ತುಹೋದರು. ಇದಲ್ಲದೆ ದಡಕ್ಕೆ ಬರುತಿದ್ದ ದೋಣಿಗಳಲ್ಲಿ ಒಂದು ತಲೆಕೆಳಗಾಗಿ, ಅದರಲ್ಲಿದ್ದವರ ಪೈಕಿ ೧೪ ಜನರು ಸಮುದ್ರದ ಪಾಲಾದರು ಎಂಬದಾಗಿ ತಂತಿ ವರ್ತಮಾನಬಂದಿದೆ.

ಕಳೆದ ತಿಂಗಳ ೨೪ನೆಯ ತಾರೀಖಿನಲ್ಲಿ ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ವರ್ಷವರ್ಧಂತಿ ಪ್ರಯುಕ್ತವಾಗಿ ಪುನೇ ಪಟ್ಟಣದೊಳು ನಡೆಸಲ್ಪಟ್ಟ ಪ್ರಬಲ ದರ್ಬಾರಿನಲ್ಲಿ ಅಲ್ಲಿನ ಡಿಸ್ಟ್ರಿಕ್ಟ್ ಜಡ್ಜಿಯವರಾದ ಮಿಸ್ಟರ್ ಕ್ರೋಯಿ(?) ಎಂಬವರು ಅಗ್ರಾಸನವಂ ವಹಿಸಿ ಆ ಕಾಲದೊಳು ಸದರೀ ಸಭೆಯನ್ನಲಂಕರಿಸಿದ್ದ ಬಹುಮಂದಿ ಸರದಾರರು ಮತ್ತು ದೊಡ್ಡ ಮನುಷ್ಯರನ್ನಧಿಕರಿಸಿ ಮಾಡಿದ ಉಪನ್ಯಾಸದ ಅಂತ್ಯದಲ್ಲಿ, ಕಳೆದ ಜುಲೈ ತಿಂಗಳೊಳು ಯೂರೋಪಿಯನ್ ಆಫೀಸರುಗಳಿಬ್ಬರು ವಧಿಸಲ್ಪಟ್ಟ ವಿಷಯವನ್ನು ವ್ಯಸನಪೂರ್ವಕ ಪ್ರಸ್ತಾಪಿಸಿ. ಆ ವ್ಯವಹಾರವು ಬಹಿರಂಗವಾಗಿ(?) ಸದರೀ ಮೊಕದ್ದಮೆಯನ್ನು ವಿಶೇಷಾವಧಾನದೊಡನೆ ದರ್ಯಾಫ್ತುಮಾಡಿದ್ದರಲ್ಲಿ ಸದರೀ ಕ್ರೂರಕೃತ್ಯವಂ ನಡೆಸಿದವನು ಪುನೆ ಜನರ ಪ್ರೇರಣೆಯಿಂದ ನಡೆಸಿದನೆಂಬುವದಕ್ಕೆ ಲೇಶಮಾತ್ರವು ರುಜುವಾತು ತೋರುಬರಲಿಲ್ಲವೆಂದು ಸಂತೋಷದೊಡನೆ ನಿಮಗೆ ನಾನು ತಿಳಿಸುತ್ತೇನೆಂದು ಹೇಳಿ ತಮ್ಮ ಉಪನ್ಯಾಸವಂ ಪೂರ್ತಿಗೈದರು ಇದರಿಂದ ಪುನೇ ಷಹರ ನಿವಾಸಿಗಳ ವಿಷಯದಲ್ಲಿ ಮುಂಬೈ ಗವರ್ನಮೆಂಟಿನವರು ಅವಲಂಬಿಸಿದ ಕ್ರಮಗಳೆಲ್ಲವು ಅಕ್ರಮಗಳೆಂದು ಸ್ಪಷ್ಟವಾಗಿ ಒಪ್ಪಿಕೊಂಡಂತೆ ತೋರ್ಪಡುತ್ತದೆ.

ಅನ್ಯದೇಶಗಳೊಳು ವಿಚಿತ್ರಗಳಾದ ವೃಕ್ಷಗಳು ಅನೇಕವಿರುತ್ತವೆ. ಅವುಗಳಲ್ಲಿ ಕೆಲವನ್ನು ಇದರಡಿ ತಿಳಿಸುತ್ತೇವೆ -೧ನೆ ಜೀವವೃಕ್ಷವು. ಇದು ಜಮೇಯಿಕಾ ದ್ವೀಪದಲ್ಲಿ ಬೆಳೆಯುತ್ತದೆ ಇದನ್ನು ಕಡಿದುಹಾಕುವದರಿಂದ ನಾಶಪಡಿಸುವದಕ್ಕಾಗುವದಿಲ್ಲವಾಗಿ ಇದಕ್ಕೆ ಜೀವವೃಕ್ಷವೆಂಬ ಹೆಸರುಂಟಾಯಿತು ಇದಕ್ಕೆ ಬೆಂಕಿ ಹಚ್ಚಿಯೇ ನಾಶಮಾಡುತ್ತಾರೆ ೨ನೇ ಬಟರ್ ಟ್ರೀ(?), ಅಂದರೆ ಅಮೃತ(?) ವೃಕ್ಷ ಇದು ಬಹಳ ಉಪಯುಕ್ತವಾದುದು ಮತ್ತು ವಿಚಿತ್ರವಾದುದು ಇದು ಮಧ್ಯ ಆಫ್ರಿಕಾ ಖಂಡದಲ್ಲಿ ಬೆಳೆಯುತ್ತದೆ. ಈ ವೃಕ್ಷದ ಬೀಜವನ್ನು ಕುಟ್ಟಿ ಹಾಲು ತೆಗೆದು ಕಾಯಿಸಿ ಬೆಣ್ಣೆ ಮಾಡಿ ಯಿಟ್ಟುಕೊಳ್ಳುತ್ತಾರೆ ಅದು ಒಂದು ವರ್ಷದವರೆಗೆ ಕೆಡದೆ ಯಿರುತ್ತದೆ ೩ನೇ ಕರ್ಪೂರ ವೃಕ್ಷ. ಇದು ಜೆಪಾನ್ ದ್ವೀಪದಲ್ಲೂ ಪೆಸಿಫಿಕ್ ಸಮುದ್ರದಲ್ಲಿರುವ ಕೆಲವು ದ್ವೀಪಗಳಲ್ಲೂ ಬೆಳೆಯುತ್ತದೆ ಇದರ ವಾಸನೆಯು ರೋಗವ್ಯಾಪಕತೆಯನ್ನು ನಿರೋಧಿಸುವದಕ್ಕೆ ಶಕ್ತವಾದುದು. ೪ನೇ ಜಲವೃಕ್ಷ. ಇದು ಫೆರೋ(?) ಎಂಬ ದ್ವೀಪದಲ್ಲಿದೆ ಈ ವೃಕ್ಷಗಳು ಯಾವಾಗಲೂ ಮೇಘದಿಂದ ಆವರಿಸಲ್ಪಟ್ಟಿವೆ. ಸದರೀ ದ್ವೀಪದ ಜನರಿಗೆ ಜಲಾಧಾರವು ಈ ವೃಕ್ಷಗಳು ವಿನಾ ಬೇರೆಯಾವುದೂ ಯಿಲ್ಲವು

ಕಳೆದ ತಿಂಗಳ ೨೬ನೇ ತಾರೀಖ್ ಬೃಹಸ್ಪತಿವಾರದದಿನ ದಕ್ಷಿಣ ಇಂಡಿಯಾ ರೈಲ್ವೆ ಜಂಗ್ಷನ್ ಸ್ಟೇಷನಾದ ವಿಳುಪುರಂ ಎಂಬ ಊರಲ್ಲಿ ಶೆಟ್ಟಿಜಾತಿ ಬಾಲಕನೊಬ್ಬನು, ಸುಮಾರು ಹತ್ತೊಂಭತ್ತು ವರ್ಷಗಳ ವಯಸ್ಸುಳ್ಳ ಯೆಂಟು ತಿಂಗಳ ಗರ್ಭಿಣಿಯಾಗಿದ್ದ ತನ್ನ ಹೆಂಡತಿಯು ತವರುಮನೆಯಲ್ಲಿರುತಿರುವ ಕಾಲದೊಳು ಸಮಯನೋಡಿಕೊಂಡಿದ್ದು, ಒಂದುದಿನ ಬೆಳಗ್ಗೆ ಐದುಘಂಟೆಯ ಹೊತ್ತಿನಲ್ಲಿ ಮನೆಯವರು ಬಾಗಿಲ ಕದವನ್ನು ತೆರೆದುಕೊಂಡು ಹೊರಗೆ ಹೋದ ಸಮಯವಂ ನೋಡುತಲಿದ್ದು ಒಳಗೆ ನುಗ್ಗಿ ಒಬ್ಬಳಾಗಿ ಮಲಗಿದ್ದ ಹೆಂಡತಿಯನ್ನು ಚೂರಿಯಿಂದ ಮೈಯೆಲ್ಲ ತಿವಿದದ್ದು ಮಾತ್ರವಲ್ಲದೆ, ದೇಹವಾದ್ಯಂತ ಒಂದುಕಡೆಯಿಂದ ಮತ್ತೊಂದುಕಡೆಗೆ ಸೌತೇಕಾಯಿಯನ್ನು ಸೀಳುವಂತೆ ಸೀಳಿಬಿಟ್ಟನು ಈ ಹಿಂಸೆಯನ್ನು ಸಹಿಸಲಾರದೆ ಅವಳು ಮಾಡಿದ ರೋದನಧ್ವನಿಯಂ ಕೇಳಿ ಅವಳ ರಕ್ಷಣಾರ್ಥ ಒಳಗೆ ಹೋದ ಒಬ್ಬಾತನನ್ನು ಚೂರಿಯಿಂದ ತಿವಿದು ಘಾಯ ಪಡಿಸಿ, ಅಲ್ಲಿಂದ ನೆಟ್ಟಗೆ ಸಬ್ ಜೈಲಿಗೆ ಹೋಗಿ ಬಿದ್ದುಕೊಂಡನು. ಈ ವರ್ತಮಾನವು ಪೋಲೀಸಿನವರಿಗೆ ತಿಳಿದು ಅವರು ಬಂದು ಈ ಘಾತುಕನನ್ನು ದಸ್ತಗಿರಿಮಾಡಿ ಸ್ಟೇಷನರಿ ಸಬ್ ಮ್ಯಾಜಿಸ್ಟ್ರೇಟರಲ್ಲಿ ಹಾಜರ್ಮಾಡಿದರು ಅವರ ಮುಂದೆ ಅವನು ಕೊಟ್ಟ ಕೈಫೀಯತ್ತಿನ ಮೂಲಕ, ತನ್ನ ಹೆಂಡತಿಯು ಬಹು ಕಾಲದಿಂದಲು ಬೇರೆಯೊಬ್ಬನನ್ನಿಟ್ಟುಕೊಂಡು ತನ್ನನ್ನು ಲಕ್ಷ್ಯಮಾಡದೆ ಮನಸ್ವೀ ದುರ್ವೃತ್ತಿಯುಳ್ಳವಳಾಗಿರುತಲಿದ್ದುದಂ ನೋಡಿ ಸಹಿಸಲಾರದೆ ಈ ಕೃತ್ಯವಂ ತಾನು ನಡಿಸಿದ್ದಾಗಿ ತಿಳಿಸಿದನು ಮೃತಪಟ್ಟ ಹೆಂಗುಸಿನ ಹೊಟ್ಟೆಯ ಸೀಳಿ ಸತ್ತಿದ್ದ ಹೆಣ್ಣುಮಗುವಂ ತೆಗೆದುಹಾಕಿದರು. ಈ ಘಾತುಕನ ಮುಂದಿನ ಪರಿಣಾಮವು ತಿಳಿದೇ ಇದೆ.

ಸರಹದ್ದು ಪ್ರಾಂತದಲ್ಲಿನ ಯುದ್ಧವು ನಿಂತು ಅಬಗ್ಗೆ ಅಲ್ಲಿಗೆ ಕಳುಹಿಸಲ್ಪಟ್ಟಿದ್ದ ಸೈನ್ಯಗಳು ಪ್ರಾಯಿಕವಾಗಿ ವಾಪಸ್ ಕಳುಹಿಸಲ್ಪಟ್ಟವು ಸದರೀ ಯುದ್ಧದಲ್ಲಿ ಅದಕ್ಕೆ ಕಾರಣಭೂತರಾದ ಆಫ್ರಿದಿ ಮತ್ತು ವಜೀರೀ ಜನಗಳ ಪುಂಡಾಟಗಳೆಲ್ಲವು ಅಡಗಿಸಲ್ಪಟ್ಟಾಗ್ಯೂ ಆಜನರು ತಮಗೆ ಸ್ವಾಭಾವಿಕವಾದ ದುಷ್ಟ ಚರ್ಯೆಗಳಂ ಬಿಡಲಿಲ್ಲವು, ಅಂದರೆ, ಲೂಟಿ ಮಾಡುವುದು, ಹುಲ್ಲಿನಮೆದೆಗೆ ಬೆಂಕಿ ಹಚ್ಚುವುದು, ಬ್ರಿಟಿಷರವರ ಆ ಯುದ್ಧಶಾಲೆಗಳಮೇಲೆ ಬಿದ್ದು ಅಲ್ಲಿನ ಪಹರೆಯವರನ್ನು ಬಂದೂಕಿನಿಂದ ಹೊಡೆದು ಅಲ್ಲಿರುವ ರೈಫಲ್ ಬಂದೂಕುಗಳನ್ನು ಯೆತ್ತಿಕೊಂಡುಹೋಗಿಬಿಡುತ್ತಾರೆ. ಈಚೆಗೆ ನಡೆದ ಯುದ್ಧದಲ್ಲಿ ಸದರೀ ಕಾಡುಜನರು ಅಪರಿಮಿತವಾದ ನಷ್ಟವಂ ಹೊಂದಿದರು ಯುದ್ಧದಲ್ಲಿ ಅನೇಕ ಸಹಸ್ರ ಜನರು ಪ್ರಾಣಗಳಂ ಕಳಕೊಂಡರು. ಇಷ್ಟಾದಾಗ್ಯೂ ಇನ್ನು ತಮ್ಮ ದುರ್ವ್ಯಾಪಾರಗಳಂ ಬಿಟ್ಟವರಲ್ಲವು. ಜಗಳವಾಡುವದಕ್ಕೆ ಶತ್ರುಗಳು ಸಿಕ್ಕದೆಹೋದರೆ, ಅಲ್ಪಕಾರಣಗಳ ಆಧಾರದ ಮೇಲೆ ತಮ್ಮೊಳಗೆ ತಾವು ಜಗಳಕ್ಕೆ ಪ್ರಾರಂಭಿಸಿ ಬಲಿಷ್ಟನಾದವನು ಬಲಹೀನನಾದವನ ಕುತ್ತಿಗೆಯನ್ನು ಹುಲ್ಲು ಕೊಯ್ಯುವಂದದಿ ಕೊಯಿದುಬಿಡುವನು. ಈ ಜನರು ಒಬ್ಬನ ಅಧಿಕಾರಕ್ಕಾಗಲಿ ಒಂದು ಕ್ರಮಕ್ಕಾಗಲಿ ಒಳಪಟ್ಟವರಲ್ಲವು ಅವರ ದೇಶದೊಳು ಪ್ರಾಣ ಮಾನ ಚಿಂತೆಯು ಯಾರಿಗೂ ತಪ್ಪಿದ್ದಲ್ಲವು. ಈ ಪ್ರದೇಶದಲ್ಲಿ ಮಾನುಷಕೋಟಿಗೆ ಸೇರಿದವರಿಗೆ ಅವಶ್ಯವಿರಬೇಕಾದ ವಿದ್ಯಾ ಬುದ್ಧಿ ವಿವೇಕಾದಿಗಳಿಲ್ಲದ ಜನರನ್ನು ನೋಡುವದಕ್ಕಿಂತಲು ವಿಶೇಷ ದುಃಖಕರವಾದ ವಿಷಯವು ಬೇರೊಂದಿರಲಾರದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಿಲ್ಲಾ ವೃತ್ತಾಂತಗಳು.

ಇಲ್ಲಿನ ಮಿಲಿಟರಿ ಸ್ಟೇಷನ್ ಕಲೆಕ್ಟರವರ ಆಫೀಸ್ ರೆವಿನ್ಯೂ ಇಲಾಖಾ ಮ್ಯಾನೇಜರಾಗಿದ್ದ ಮಿ॥ ಕೃಷ್ಣಮಾಚಾರ್ಯರವರು ಇನ್ಫ್ಲುಯೆನ್ಜಾ ಎಂಬ ಜ್ವರದ ಮೂಲಕ ಕಳೆದ ಮಂಗಳವಾರದದಿನ ಮೃತಪಟ್ಟರೆಂದು ತಿಳಿದು ಬಹಳ ವಿಷಾದಿಸುತ್ತೇವೆ.

ಈಗ್ಗೆ ನಾಲ್ಕಾರು ದಿವಸಗಳ ಮೊದಲು ರಾತ್ರಿ ವೇಳೆಯಲ್ಲೂ ಸಾಯಂಕಾಲದ ಮೇಲೆ ಜೋರಾದ ಮಳೆ ಪ್ರಬಲವರ್ಷಕ್ಕಾರಂಭಿಸಿ ಕೂಡಲೆ ಗಾಳಿಯಿಂದ ಹೊಡೆಯಲ್ಪಟ್ಟು ಚದರಿಹೋಗುತಿವೆಯೇ ಹೊರತು ಕೆರೆಕುಂಟೆಗಳಿಗೆ ನೀರು ಬರುವದಕ್ಕೆ ಅವಕಾಶವಿಲ್ಲದೆ ಇದೆ ಆಹಾರ ಪದಾರ್ಥಗಳ ಧಾರಣೆಗಳು ಹೆಚ್ಚಿಯೇ ಇವೆ ಜನಾರೋಗ್ಯವು ಸಾಮಾನ್ಯವಾಗಿದೆ ಪ್ಲೇಗ್ ರೋಗ ನಿವಾರಕಗಳಾದ ಪರೀಕ್ಷೆಗಳು ತೃಪ್ತಿಕರವಾಗಿ ನಡೆಸಲ್ಪಡುತಿವೆ ದೈವಾನುಗ್ರಹದಿಂದ ಈ ಪಟ್ಟಣದೊಳು ಸದರೀ ರೋಗದ ಬಾಧೆಯು ಇದುವರೆಗೆ ಇಲ್ಲವು.

ಮೊದಲು ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿಯೂ, ತರುವಾಯ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರಾಗಿಯೂ, ಇದ್ದು, ಈಚೆಗೆ ಅರಮನೆ ಜನಾನಾ ಸರ್ಕಾರಿನಲ್ಲಿ ರಾಜಪುತ್ರಿಯರಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದ ಮಿ॥ ಟಿ ಸುಬ್ಬಯ್ಯನವರು ಮೊನ್ನೆ ಮಂಗಳವಾರ ರಾತ್ರಿ ಸ್ವಗೃಹದಲ್ಲಿ ತೀರಿಹೋದರೆಂದು ತಿಳಿಸಲು ವಿಷಾದಿಸುತ್ತೇವೆ. ಇಂತ ಸುಗುಣಗಳುಳ್ಳ ದೊಡ್ಡ ಮನುಷ್ಯರೂ ಕಾಲವಾದ್ದರಿಂದಾಗಿ ಅವರ ಅನೇಕ ಬಂಧು ಬಳಗಗಳೂ ಇಷ್ಟಮಿತ್ರರೂ ಬಹಳವಾಗಿ ವ್ಯಸನ ಪಟ್ಟಿರೆಂಬುದಕ್ಕೆ ಸಂಶಯವಿಲ್ಲ.—ವ್ಯ. ಪ.

ಕಳೆದ ಬೃಹಸ್ಪತಿವಾರದದಿನ ಈ ಸಂಸ್ಥಾನದ ದಿವಾನರವರ ನಾಲ್ಕನೆಯ ಪುತ್ರಿಗೂ ಅವರ ಮೊಮ್ಮಗಳಿಗೂ ಅವರ ನೂತನಗೃಹದಲ್ಲಿ ವಿವಾಹಮಹೋತ್ಸವಗಳು ವಿಶೇಷ ವಿಭವದೊಡನೆ ಜರಗಿದವು ಈ ಶುಭಗಳ ಬಗ್ಗೆ ಆಹ್ವಾನದಿಂದಾಗಿ ಸ್ಥಳಪರಸ್ಥಳಗಳಿಂದ ಬಹುಮಂದಿ ದೊಡ್ಡ ಮನುಷ್ಯರು ಬಂದಿದ್ದರು. ಈ ಪೇಟೆ ಮಹಾಜನರೂ ವರ್ತಕಮುಂತಾದ ಸೇರಿದವರನೇಕರೂ ಕರೆಯಿಸಲ್ಪಟ್ಟಿದ್ದರು. ಎಲ್ಲರಿಗೂ ಫಲತಾಂಬೂಲ ಮೊದಲಾದ ಮರ್ಯಾದೆಗಳು ಕ್ರಮವಾಗಿ ನಡೆಸಲ್ಪಟ್ಟವು ಆಕಾಲದಲ್ಲಿ ಸೇರಿದ್ದ ಬ್ರಾಹ್ಮಣರಿಗೆ ಒಂದು ರೂಪಾಯಿ ಮೊದಲು ಯೆರಡುವರೆಗೆ ಭೂರಿದಕ್ಷಿಣೆ ಕೊಡಲ್ಪಟ್ಟಿತು ಬ್ರಾಹ್ಮಣ ಭೋಜನವು ಬಹಳ ವಿಸ್ತರಣೆಯೊಡನೆ ನಡೆಯುತಲಿದೆ. ನಟುವಿಗಾಯಕರು ಅನೇಕರು ಕರೆಯಿಸಲ್ಪಟ್ಟು ಗಾನವರ್ತನಗಳು ನಡೆಯುತಲಿವೆ. ಇದಕ್ಕೆ ಸೇರಿದ ಇತರ ವಿಶೇಷಗಳನ್ನು ಮುಂದಿನ ವಾರದಲ್ಲಿ ತಿಳಿಸುವೆವು.

ಈ ದೇಶದೊಳು ಲಾಕಪ್‌ಗಳು ಮುನ್ಸಿಫರ ಅಧಿಕಾರಕ್ಕೆ ಒಳಪಟ್ಟಿರುತಿವೆಯಷ್ಟೆ. ಅದನ್ನು ತಪ್ಪಿಸಿ ಅಸಿಸ್ಟೆಂಟ್ ಸರ್ಜನ್‌ಗಳು, ಸಬ್ ಅಸಿಸ್ಟೆಂಟ್ ಸರ್ಜನ್‌ಗಳು, ಆನರೆರಿ ಸಬ್ ಅಸಿಸ್ಟೆಂಟ್ ಸರ್ಜನ್‌ಗಳಿಗೆ ಕೊಡಬೇಕು, ಅಂತವರು ಇಲ್ಲದ ಪ್ರದೇಶಗಳಲ್ಲಿ ಅಮಲ್ದಾರರಿಗೆ ಅಥವಾ ಡೆಪ್ಯುಟಿ ಅಮಲ್ದಾರರಿಗೆ ಕೊಡಬೇಕೆಂದು ಚೀಫ್‌ಜಡ್ಜಿಯವರು ಮತ್ತು ಜೆಯಿಲ್‌ಗಳ ಇನ್ಸ್‌ಪೆಕ್ಟರ್ ಜನರಲವರು ಗವರ್ನಮೆಂಟಿನವರ ಅವಧಾನಕ್ಕೆ ತರಲು, ಯಾವಯಾವ ಸ್ಥಳದಲ್ಲಿ ಸರ್ಜನ್, ಅಸಿಸ್ಟೆಂಟ್ ಸರ್ಜನ್, ಅಥವಾ ಆನರೆರಿ ಸರ್ಜನ್, ಸಬ್ ಅಸಿಸ್ಟೆಂಟ್ ಸರ್ಜನ್‌ಗಳಿರುತ್ತಾರೆ. ಯೋ ಅಂತ ಪ್ರದೇಶಗಳಲ್ಲಿ ಸದರೀಯವರು ಲಾಕಪ್ ಚಾರ್ಜನ್ನಿರತಕ್ಕದ್ದು. ಇತರ ಸ್ಥಳಗಳಲ್ಲಿ ಅಮಲ್ದಾರರು, ಡೆಪ್ಯುಟಿ ಅಮಲ್ದಾರರು ಮುಖ್ಯವಾಗಿ ಚುನಾಯಿಸಲ್ಪಟ್ಟ ಸಬ್‌ರಿಜಿಸ್ಟ್ರಾರುಗಳು ಅಥವಾ ತಾಲ್ಲೂಕು ಶಿರಸ್ತೇದಾರರು ಲಾಕಪ್ ಚಾರ್ಜನ್ನಿರತಕ್ಕದ್ದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ.

THE MYSORE GAZETTE.
ಮೈಸೂರು ಗಜೆಟ.

ತಾರೀಖು ೨ನೇ ಜೂನ್ ೧೮೯೮
ಅಪ್ಪಿಕಾರ ನಾಮೆಗಳು.
ಜನರಲ್ ಮತ್ತು ರೆವಿನ್ಯೂ.

ತಾರೀಖು ೨೫ನೇ ಮೇ ೧೮೯೮.

ನಂ|| ೧೫೪೯೧-ಜಾ. ೧೪೬೧.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಕೋಲಾರ್ ಭಂಗಾರದಗಣಿಗಳ ಪೋಲೀಸ್ ಸೂಪರಿಂಟೆಂಡೆಂಟ್ ಮೆ|| ಡಿ. ಪಿ. ಟ್ಯಾಲರ್ಡ್‌ಯವರಿಗೆ ೧೮೯೮ನೇ ಮೇ ೧೨ನೇ ತಾರೀಖಿನ ಲಗಾಯಿತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನವರೆಗೂ ಒಂದು ತಿಂಗಳು ಇಪ್ಪತ್ತೇಳು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

೨. ಕೋಲಾರದ ಪೋಲೀಸ್ ಸೂಪರಿಂಟೆಂಡೆಂಟರಾದ ಮೆ|| ಸಿ. ಪ. ಡೀ‌ಯವರು ತಮ್ಮ ಕೆಲಸಗಳೊಂದಿಗೆ ಸದರೀ ಮೆ|| ಡಿ. ಪಿ ಟ್ಯಾಲರ್ಡ್‌ಯವರು ರಜಾಮೇಲಿರುವ ಕಾಲದಲ್ಲಿ ಯೂ ಮತ್ತೊಂದು ಹುಕುಂ ಕೊಡುವ ವರಿಯಂತ ಕೋಲಾರ್ ಭಂಗಾರದಗಣಿಗಳ ಪೋಲೀಸಿನ ಚಾರ್ಜನ್ನಿರತಕ್ಕದ್ದು.

ತಾ|| ೩೦ನೇ ಮೇ ೧೮೯೮

ನಂ|| ೧೫೬೬೯—ಮಿ ೩೯೮೦—ಶಿವಮೊಗ್ಗೆಯ ಅಸಿಸ್ಟೆಂಟ್ ಸರ್ಜನ್‌ಯವರಾದ ಮೆ|| ಜೆ. ಪಿ ಕುಯಿಲೋ ಯವರು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ರಜಾದಲ್ಲಿರುವ ಕಾಲದಲ್ಲಿ ಮೆಡಿಕಲ್ ಆಫಿಸರುಗಳ ಅನರಡಿಕಿಂತ ಹಂಗಾಮಿ ಬತ್ತಿಗಳು ೧೮೯೮ನೇ ಮೇ ೩ನೇ ತಾರೀಖಿನ ಲಗಾಯಿತು ಹುಕುಂ ಮಾಡಲ್ಪಟ್ಟಿರುತ್ತವೆ.—

(೧) ಮೊದಲನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್‌ರಾದ ಮೆ|| ಎಸ್. ರಂಗಣ್ಣ, ಎಲ್ ಎಂ ಪ ಎಸ್, ಯವರು ೩ನೇ ಕ್ಲಾಸ್ ಅಸಿಸ್ಟೆಂಟ್ ಸರ್ಜನ್‌ರಾಗಿ ಆಕ್ಟಿಂಗ್ ತಲೀಕ್ ಇರತಕ್ಕದ್ದು.

(೨) ಮೊದಲನೇ ಕ್ಲಾಸ್ ಆಸ್ಪತ್ರಿಯ ಅಸಿಸ್ಟೆಂಟ್ ಎಸ್ ಸಿದ್ಧಪ್ಪ ಎಲ್ ಎಂ ಪ ಎಸ್, ಯವರು ೩ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್‌ರಾಗಿ ಆಕ್ಟಿಂಗ್ ತಲೀಕ್ ಇರತಕ್ಕದ್ದು.

ನಂ|| ೧೫೬೮೯. ಮಿ ಫೈ, ೧೧೪೧-೯೨.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಸಿವಿಲ್ ಸರ್ಜನ್‌ರಾದ ಡಾಕ್ಟರ್ ಐ ಎಸ್. ಕೃಷ್ಣರಾವ್, ಎಂ. ಡಿ. ಯವರಿಗೆ ೧೮೯೮ನೇ ಮೇ ೧೪ನೇ ತಾರೀಖಿನ ಲಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾ|| ೨೩ನೇ ಮೇ ೧೮೯೮.

ನಂ|| ೧೧೬೨೪-ರೆ ಫೈ. ೪೫೬-೯೭—ಕುಣಿಗಲ್ ತಾಲ್ಲೂಕಿನ ಅಮಲ್ದಾರ್ ಆರ್. ಬಾಬುರಾಯರಿಗೆ ೧೮೯೮ನೇ ಏಪ್ರೈಲ್ ೩ನೇ ಮಾರ್ಚಿ ... ಮತ್ತು ೧೮೯೮ನೇ ಏಪ್ರೈಲ್ ೨೧ನೇ ಮಾರ್ಚಿ ... ನೇ ಸಂಬಳಗಳ ಇಪ್ಪತ್ತಿನ ಮೆಡಿಗಲ್ಲಿ ಕೊಟ್ಟಿದ್ದ ಎರಡು ತಿಂಗಳುಗಳ ಪ್ರಿವಿಲೇಜ್ ರಜಾ ಇನ್ನೂ ಇಪ್ಪತ್ತೆರಡು ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ|| ೧೧೬೨೩ ರೆ. ಫೈ, ೬೧ ೯೭ —ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಹಾಸನದ ಡಿಸ್ಟ್ರಿಕ್ಟ್ ಆಲೂರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮೆ|| ಪಿ. ಹೇಸ್ ಯವರಿಗೆ ೧೮೯೮ನೇ ಮೇ ೨ನೇ ತಾರೀಖಿನ ಲಗಾಯಿತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನವರೆಗೂ ಇಪ್ಪತ್ತೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

೨. ಹಾಸನ ಡೆಪ್ಯುಟಿ ಕಮಿಷನರವರ ಆಫಿಸಿನ ಜುಡಿಷಿಯಲ್ ಹೆಡ್‌ಮುನ್ಷಿ ಎಸ್. ಕೃಷ್ಣಪ್ಪನವರು ಸದರೀ ಮೆ|| ಪಿ. ಹೇಸ್ ಯವರು ರಜಾಮೇಲಿರುವ ಕಾಲದಲ್ಲಿ ಯೂ ಮತ್ತೊಂದು ಹುಕುಂ ಕೊಡುವ ವರಿಯಂತ ಆಲೂರು ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ೩ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತಲೀಕ್ ಇರತಕ್ಕದ್ದು.

SUMMARY OF NEWS.
ವೃತ್ತಾಂತ ಸಂಗ್ರಹವು.

ಶಿಪೋನಿ ಎಂಬ ಗ್ರಾಮಕ್ಕೆ ಬೆಂಕಿ ಬಿದ್ದು ಸಮೂಲ ಆ ಗ್ರಾಮವೆಲ್ಲಾ ಸುಟ್ಟು ಭಸ್ಮವಾಯಿತು. ಸುಮಾರು ೩|| ಲಕ್ಷ ರೂಪಾಯಿ ನಷ್ಟವಾಯಿತಂತೆ, ಈ ಬೆಂಕಿಯು ಪ್ರಾಣವು ೧೪೧೩ ವ್ಯಕ್ತಿಗಳವರಿಗೆ ಕಾಡಿತಂತೆ.

ಇಟಲಿ ದೇಶದಲ್ಲಿ ಭಯಂಕರವಾದ ದಂಗೆಗಳುಂಟಾಗಿವೆ. ಆದಂಗೆಯವರ ಪೈಕಿ ೩೦೦ ಜನರನ್ನು ಸರ್ಕಾರದವರು ಕೊಂದದ್ದಲ್ಲದ ಸಾವಿರ ಜನರಿಗೆ ಘಾಯವಾಗಿದೆ, ಈಗ ದಂಗೆ ಶಾಂತವಾಗಿದೆ

ನಾಲ್ಕು ಕೂಸುಗಳು— ಇಟೆಲಿಯಲ್ಲಿ ಒಬ್ಬ ಸ್ತ್ರೀಯಳು ನಾಲ್ಕು ಕೂಸುಗಳನ್ನು ಏಕಕಾಲಕ್ಕೆ ಹೆತ್ತಳು ಅವು ಜೀವಂತ ಇರುವವಾಗಿ ತಿಳಿಯುತ್ತದೆ ೧೮೯೩ ಇಸವಿಯಲ್ಲಿ ಯೂ ಒಬ್ಬ ಸ್ತ್ರೀಯಳು ಒಮ್ಮೆಲೆ ೬ ಕೂಸುಗಳನ್ನು ಹೆತ್ತಿದ್ದಳಂತೆ!!

ಕಾಲಮೋಟನೆಂಬ ಒಬ್ಬ ಪ್ರೆಂಚ್ ವಿದ್ವಾಂಸನು ಸರ್ಪದಂಶಕ್ಕೆ ಒಂದು ಮೇಲಾದ ಔಷಧ ಹುಡುಕಿ ತೆಗೆದಿದ್ದಾನೆ ಇಂಗ್ಲಿಷನಲ್ಲಿ "ಈಲ್" ಯನ್ನುವ ಮೀನಿನ ರಕ್ತವನ್ನು ಸರ್ಪ ಕಚ್ಚಿದ ಮನುಷ್ಯನಿಗೆ ಕುಡಿಸಬೇಕು. ಅಥವಾ ... ಪ್ಯಯಿಶಳಗೆ ಹಾಕಬೇಕು ಎಂದು ಹೇಳುತ್ತಾನೆ ಸುಲಭ ಉಪಾಯವು ಮಾಡಿ ನೋಡಬೇಕು.

ಬೆಳಗಾಂವ ಜಿಲ್ಹೆಯಲ್ಲಿ ಬಾಲಿತ ಎಂಬ ಊರಲ್ಲಿ ೨೦ನೇ ತಾರೀಖಿನ ದಿವಸ ಒಂದು ವಿಲಕ್ಷಣವಾದ ಆನಿಕಲ್ಲಿನ ವೃಷ್ಟಿ ಆಯಿತು ಎತಾಸಿನ ವರೆಗೆ ಒಂದು ಹನಿಯಾದರೂ ಬೀಳದೆ ಬರೇ ಆನೆಕಲ್ಲುಗಳೇ ಸುರಿಯುತ್ತಿದ್ದವು ಬಾವಿಯಲ್ಲಿಯೂ ಹೈಲಲ್ಲಿಯೂ ೧೦ ಇಂಚಿನಿಂದ ೧ ಫೂಟಿನ ವರೆಗೆ ದಪ್ಪಾಗಿ ದಥರವು ಕೂಡಿತ್ತು ಆನೆಕಲ್ಲಿನ ಆಕೃತಿಯು ಅಡಕೆಯು ಬೆಟ್ಟಿಂದ ಸಣ್ಣಾದಂಥ ಕಾಯಿ ವರೆಗೆ ಇತ್ತು ಎಲ್ಲಕೆಳು ದೊಡ್ಡ ಆನೆಕಲ್ಲು ೬ ತಾಸಿನ ವರೆಗೂ ಕರಗಿದಿಲ್ಲ.

ಬಾಗಾವಿ ತಾಲೂಕು ಗುಳೇದಗುಡ್ಡದಲ್ಲಿ ಲಿಂಗಾಯಿತ ಮತ್ತು ಕುರುಬರ ಈಜಾತಿಯವರಲ್ಲ ಬಹುದಿನಗಳಿಂದ ಕೆಡುದ್ವೇಷವಿದ್ದು ಅದು ಕಠಿಣ ಅತಿಸಿಕೆಂಬದಕ್ಕೆ ಬಂದು ಕಡೇದ ಅದಿತ್ಯವಾರದಿವಸ ಒಳ್ಳೇ ದೊಡ್ಡ ಬಡಿದಾಟವಾಗಿ ಆರಲ್ಲ ಲಿಂಗಾಯಿತ ಜನರ ಸುಮಾರು ೧೫೦ ೨೦ ಕಿರಾಣಿ ಅಂಗಡಿಗಳನ್ನು ಕುರಬರ ಜಾತಿಯ ಮಂದಿಯು ಬರಡಿಯ ಜನರು ಹಗಲು ನಾಲ್ಕು ತಾಸಿನ ಸುಮಾರಕ್ಕೆ ಅಂಗಡಿಯಲ್ಲಿಯ ಎಲ್ಲ ಕಿರಾಣಿ ದಾಸ್ತ ಮುಂತಾದ ಜಿನಸುಗಳನ್ನು ರಸ್ತೆಗೆ ಎಳೆದು ತಂದು ಅದರ ಮೇಲೆ ಕಸ್ತೆಂಣೆ ಸುರಿದು ಅಗ್ನಿ ನಾರಾಯಣಸಿಗೆ ಆಹುತಿ ಮಾಡಿದರಂತೆ ಈ ಪುಂಡಾಟದಲ್ಲಿ ಲಿಂಗಾಯಿತ ಜನರು ಬನ್ನಾಗಿಯೇ ಘಾಯಪಟ್ಟಿದ್ದು ಅವರು ಸುಮಾರು ೩೦ ೪೦ ಸಾವಿರ ರೂಪಾಯಿ ಲುಕ್ಸಾನಕ್ಕೆ ಒಳಗಾಗಿದ್ದಾರೆ. ಇಲ್ಲಿನ ಗ್ರಾಮಸ್ಥರ ಅಸಮಾಧಾನದ ಕಡಿಂದ ಈ ಪುಂಡಾಟಿಕೆಯು ... ದಿವಸವೇ ಮೆ|| ಡಿ|| ಮಾಜಿಸ್ಟ್ರೇಟ್ ಸಾಹೇಬರವರಿಗೆ ಏ ದು ಕೊಟ್ಟೇ ಅವರು ಮೆ|| ಪೋಲೀಸ ಸುಪರಿಂಟೆಂಡೆಂಟ್ ಸಾಹೇಬರನ್ನು ಕೂಡಿಕೊಂಡು ಗುಳೇದಗುಡ್ಡಕ್ಕೆ ಆ ದಿವಸವೇ ಹೋಗಿದ್ದು ಮೆ|| ರವರ ಸವಾರಿಯು ಇನ್ನು ಏರಿಗೆ ಅಲ್ಲೇ ಇರುತ್ತದೆ, ಸ್ಥಾನಿಕ ಜನರ ಹಿಡಿದು ನಡೆಯುತ್ತದೆ, ಗುಳೇದಗುಡ್ಡ ಗ್ರಾಮದಲ್ಲಿ ಈ ತರದ ಪುಂಡಾಟಿಕೆಯಲ್ಲಿ ಹೆಚ್ಚಾದದ್ದು ಇರುತ್ತದೆ

ಮಲಬಾರ್ ಜಿಲ್ಲೆಯಲ್ಲಿ ಒಬ್ಬ ಹುಡುಗಿಗೆ ಮೂರ್ಛಾರೋಗ ಸಂಭವಿಸಿ, ಸದರೀ ಮೂರ್ಛೆಯಿಂದಾಗ ವಿಶೇಷವಾಗಿ ರಕ್ತನೊರೆ ಮುಂತಾದ್ದನ್ನು ಕಕ್ಕುವುದರಿಂದ ಬೇಸರದುಂತವರಿದ್ದ ಒಬ್ಬ ನೇಟಿವ್ ವೈದ್ಯನಿಂದ ಗುಣಹೊಂದಲು ಚಿಕಿತ್ಸೆಯನ್ನು ಹೊಂದುತ್ತಾ ಇರಲಾಗಿ ಕೇವಲ ಮೂಢಜನರು ಅವಳ ಸಮೀಪಕ್ಕೆ ಬಂದು ಅವಳ ರೋಗವೆಲ್ಲ ಶಂಕೋಟಿ ಇದು ರೋಗವಲ್ಲ, ಬ್ರಹ್ಮರಾಕ್ಷಸ ದೆವ್ವ ಎಂದು ಹೇಳುವದಕ್ಕೆ ಪ್ರಾರಂಭಿಸಿದರು, ಚಿಕಿತ್ಸೆ ಮಾಡುತ್ತಿದ್ದ ವೈದ್ಯರು ಆ ಹುಡುಗಿಯಾಟಳ ಯಾರೋ ಇದು ಗ್ರಹಬಾಧೆ ಪಿಶಾಚವೊದಲಾದ ಸಂಗತಿಗಳನ್ನು ಚೀಟಿ ಹಾಗೆ ಜಾಗ್ರತೆಯಾಗಿ ನೋಡಿ ಕೊಂಡಿರಬೇಕೆಂದು ವೈದ್ಯನು ಅವರಿಂ ಇದು ಗ್ರಹಬಾಧೆಯೆಂದು ಯಾರೋ ಅಡಿಕೊಳ್ಳುತ್ತಿದ್ದ ಮಾತು ಆ ಹುಡುಗಿಯು ಕಿವಿಗೆ ಬಿದ್ದ ವೇಳೆ ಅನಂತರ ೩—೪ ದಿವಸಗಳೊಳಗಾಗಿ ಅಮುವರಿಗೆ ಇದ್ದ ಚೆಟ್ಟಿಗಳು ಬದಲಾಯಿಸಿ ತಾನು ಪಿಶಾಚಿ ಎಂದುಮನ್ನ ತನ್ನ ಪಿಶಾಚಿ ಒಬ್ಬ ಹೆಂಗಸು ಸ್ತ್ರೀಯೆಂದು ಹೇಳಲು ದೊಡಗಲು ಮಾಡಿದಳು. ಆ ಹುಡುಗಿಯು ಮೇಲಿರುವ ಪಿಶಾಚವನ್ನು ಹೋಗಲಾಡಿಸಲು ಅವಳ ಬೆರಳುಗಳಿಗೆ ಎಣ್ಣೆ ಬಟ್ಟೆಯನ್ನು ಸುತ್ತಿ ಅದನ್ನು ಸುಡುವದೇ ಮೊದಲಾದ ಕೃತ್ಯಗಳನ್ನು ನಡೆಸಿ ನಂತರ ಭೂತ ವೈದ್ಯರನ್ನು ಕರಸಿ ಮರಣ ವಾರಗಳವರೆಗೂ ಮಂತ್ರ ಮೊದಲಾದ್ದನ್ನು ಮಾಡಿದ್ದಾಗ್ಯೂ ಪ್ರಯೋಜನವಿಲ್ಲದೆ ಇರಲು ಮತ್ತೊಬ್ಬ ವೈದ್ಯನು ಮಂತ್ರಿಸುತ್ತಿರುವಾಗ ಆ ಹುಡುಗಿಯನ್ನು ಒಂದು ನಾಗರ ಹಾವು ಕಡಿಯಲು ಅದರ ವಿಷವು ತಲೆಗೇರಿ ಅದುವರೆಗೂ ಅವಳಿಗಿದ್ದ ರೋಗಗಳೆಲ್ಲಾ ಹೋಗಿ ರೋಗ ಗುಣವಾಗಿ ಸಜೀವರಾಗಲು ಅರ್ಹಳಾಗಿರುವಳೆಂದು ಮದ್ರಾಸ್ ಪತ್ರಿಕೆಯೊಂದು ತಿಳಿಸುತ್ತದೆ.

ವೈದ್ಯಸಾರಸಂಗ್ರಹ.

ಇದು ಚರಕ, ಬಾಘಟ, ಸುಶ್ರುತ, ಧರಾನೀಧರಕ್ಕ ಇದ್ದೆ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ.
ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಪಾಸಲ್ ದೇಬೀಲ್ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

BANGALORE CITY MUNICIPALITY
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ನೋಟಿಸ.

ತಾ|| ೧೭ನೇ ಮೇ ೧೮೯೮.
ಮನೆನಿವೇಶನಗಳ ಹರಾಜ್.

೧೮೯೮ನೇ ಇಸವಿ ಮೇ ೩೧ನೇ ತಾರೀಖಿನ ಬೆಳಗ್ಗೆ ೭|| ಘಂಟೆಗೆ ಚಾಮರಾಜೇಂದ್ರ ಪೇಟೆಯಲ್ಲಿ ಮೂರು ನಿವೇಶನಗಳು ಹರಾಜ್ ಮಾಡಲ್ಪಡುವವು.

೧೮೯೮ನೇ ಇಸವಿ ಜೂನ್ ೪ನೇ ತಾರೀಖಿನ ಬೆಳಗ್ಗೆ ೭||ಘಂಟೆಗೆ ಚಿಕಪೇಟೆಯಲ್ಲಿ ಹದಿನಾಲ್ಕು ನಿವೇಶನಗಳ ಹರಾಜ್ ಮಾಡಲ್ಪಡುವವು

ಇತರ ತಪ್ಸೀಲ್‌ಗಳ ವಿಷಯದಲ್ಲಿ ಸನ್ ೧೮೯೮ನೇ ಇಸವಿ ಮೇ ೫ ಮತ್ತು ೧೨ನೇ ತಾರೀಖಿನ ಮೈಸೂರು ಗಜೆಟ ೨ನೇ ಭಾಗವನ್ನು ನೋಡತಕ್ಕದ್ದು.

T. T. LEONARD,
President,
City Municipal Commission.

BANGALORE CITY MUNICIPALITY
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸ್

ತಾರೀಖ್ ೧೭ನೇ ಮೇ ೧೮೯೮.

ಬೀದಿಗಳಿಗೆ ದೀಪಹಚ್ಚತಕ್ಕ ಬಗ್ಗೆ ದರಖಾಸ್ತುಗಳು.

೧೮೯೮ನೇ ಇಸವಿ ಆಗಸ್ಟು ಗುರ್ರೆತಾರೀಖ್ ಮೊದಲು ಒಂದು ಸಂವತ್ಸರದವರೆಗೂ ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿಗೆ ಒಳಪಟ್ಟ ವಿಪ್ಯ ರಸ್ತೆಗಳು ಮತ್ತು ಬೀದಿಗಳಿಗೆ ಕೆರೋಸಿನ್ ಯೆಣ್ಣೆ ಸಪ್ಲೈ ಬರ್ನರ್‌ಗಳಿಂದ ದೀಪಹಾಕತಕ್ಕ ಬಗ್ಗೆ ೧೮೯೮ನೇ ಇಸವಿ ಜೂನ್ ೨೩ನೇ ತಾರೀಖಿನ ಮಧ್ಯಾಹ್ನ ೨ ಘಂಟೆಯವರೆಗೆ ಅವರವರ ರುಜು ಮಾಡಿರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬರಮಾಡಿಕೊಳ್ಳಲ್ಪಡುವವು.

ಪ್ರತಿಯೊಂದು ದರಖಾಸ್ತಿನ ಮೇಲೂ "ಬೆಂಗಳೂರು ಸಿಟಿಗೆ ದೀಪ ಹಚ್ಚುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಸಿಟಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರವರಿಗೆ ಮೆಯ್ಲಿನ ಬರವು ಕಳುಹಿಸತಕ್ಕದ್ದು.

ದರಖಾಸ್ತಿನ ಸಂಗಡ ನಗದು ಅಥವಾ ಕರ್‍ರೆನ್ಸಿ ನೋಟುಗಳ ಮೂಲಕ ೧೦೦ ರೂಪಾಯಿಗಳು ಠೇವಣಿ ಕಳುಹಿಸತಕ್ಕದ್ದು ಸದರೀ ಠೇವಣಿಯು ದರಖಾಸ್ತು ಮಂಜೂರಾಗದೆ ಹೋದರೆ ವಾಪಸ ಮಾಡಲ್ಪಡುವದು

(೧) ಸಾಯಂಕಾಲ ೬ ಘಂಟೆಯ ಮೊದಲು ಬೆಳಗ್ಗೆ ೫ ಘಂಟೆಯವರೆಗೆ ದೀಪಗಳು ಉರಿಯುವದಕ್ಕೆ.

(೨) ಚಂದ್ರಿಕೆಗಳು ಹೆಚ್ಚು ಕಡಿಮೆಯಾದ ಹಾಗೆಲ್ಲ ಉರಿಯುವದಕ್ಕೆ ತಿಂಗಳೊಂದಕ್ಕೆ ... ದಾಖಲನ್ನು ದರಖಾಸ್ತಿನಲ್ಲಿ ನಮೂದಿಸತಕ್ಕದ್ದು ಸದರೀ ಹೆಚ್ಚು ಕಮ್ಮಿದರಗಳ ತಪ್ಸೀಲನ್ನು ಕೋಟೆಯಲ್ಲಿರುವ ಮ್ಯುನಿಸಿಪಲ್ ಆಫಿಸಿನಲ್ಲಿ ಕಚೇರಿ ಹೊತ್ತಿನಲ್ಲಿ ಕೇಳಿ ತಿಳಿದುಕೊಳ್ಳಬಹುದು

ವಿಶಿಷ್ಟ ದೀಪಗಳೂ ನೋಟಿ ತಿಳಿಸಲ್ಪಟ್ಟಿರುವ ಕಾಲ ಮತ್ತು ನಮೂನೆಯಲ್ಲಿ ಹಚ್ಚಲ್ಪಡತಕ್ಕದ್ದು.

ಉಪಯೋಗಿಸಬೇಕಾದ ಬರ್ನರ್‌ಗಳಲ್ಲವು, ಒಂದೊಂದಂಗುಲ ಅಗಲವಾದ ಬೆಳಕು ಎತ್ತಿಗಿಸುವ ನಮೂನೆಯಲ್ಲಿರಬೇಕು ಮತ್ತು ಕೆರೋಸಿನ್ ಯೆಣ್ಣೆಯು ೧೨೫ ಡಿಗ್ರಿ ಪ್ರಕಾಶವುಳ್ಳದ್ದಾಗಿ ಅಥವಾ ಬರ್ನರ್‌ಗಳು ಮತ್ತಷ್ಟು ಹೊಸ್ತರದ ಪರಿಣಾಮ ವುಳ್ಳವಾಗಿ ಉರಿಯುವಂತೆ ಕೊಡತಕ್ಕದ್ದಾಗಿರಬೇಕು

ಈಗ ಸುಮಾರು ೧,೦೦೦ ದೀಪಗಳಿರುತವೆ, ಅವು ಮುಂದಕ್ಕೆ ೧,೨೦೦ಕ್ಕೆ ಹೆಚ್ಚಬಹುದು

ಕಾಂಟ್ರಾಕ್ಟ ಷರತ್ತುಗಳ ನಕಲನ್ನು ಮತ್ತು ಇತರ ವರ್ತಮಾನಗಳನ್ನು ಕಾಗದದ ಮೂಲಕವಾಗಿಯಾಗಲಿ ಮುಖ್ತಬಿಂಬವಾಗಲಿ ಪಡೆಯಬಹುದು,

T T LEONARD,
President,
City Municipal Commission.

ಈ ಕಂಪನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳಿಸತಕ್ಕ ಉತ್ಪತ್ತಿಯು.

ಅತ್ಯುತ್ಕೃಷ್ಟಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ಪತ್ತಿಗಳು ರೋಗಕಾರಕವಾದ ರೋಗಕಣಗಳ ಸಮಾಗಮ ಪ್ರಭಾವಗಳನ್ನು ಕೊಟ್ಟು, ಉದ್ಯಮದೊಳಗೆ ಮಾಗಿಸಿ, ಒಳ್ಳೇ ದೇಹದ ಬಲಗಳನ್ನು ಸಕಲರಿಗೂ ಹುಕಿದ್ದು ಸಿದ್ಧಮಾಡಿರುತ್ತೇವೆ ಈ ಉತ್ಪತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯಾಗಿರುವವೆ ಸಪ್ತಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ರೋಗವನ್ನು ಬಿಸಿಯು ಪ್ರಾಪ್ತವಾದಗಳು ರೋಗಹೊಂದುತ್ತವೆ ೬೦ ವರ್ಷಗಳ ಪ್ರಾಯದವರಿಗೂ ಮನ್ಮಥನ ಕಾಮವಿಕಾರವಾದರೂ ಹಿರಿದಾದ ರಂಗದರಂತೆ ಪ್ರಜ್ವಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಉಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಸಿಮ್ಮುಯ ಮುಂತೆ ಅದರಿಂದ ಹಿಂಬೆ ಸರಿದುಹೋಗುವ ಧಾತು ನಿಲ್ಲುತ್ತದೆ. ಸ್ವಲ್ಪ ವ್ಯಾಯಾಮ ಮಾಡುವವರಲ್ಲಿ ಬಣ್ಣವು ಬೆಳೆದು ಕೈಬಣ್ಣವು ಪ್ರಕಾಶಿಸುತ್ತವೆ ಹವನ ದಾಗೂ ಉಷ್ಣೀಕರಣದಿಂದ ಜೀರ್ಣಕೋಶದ ಇಲ್ಲದಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಾದರೂ ಅನ್ನ ಪಚನವಾಗಿ ... ಪಕ್ವವಾಗುತ್ತದೆ. ತಿನ್ನುವದೊಂದೆ ತಡ ಕೂಡಲೇ ಸ್ವಲ್ಪ ಸೌಬಲ್ಯವಾಗುತ್ತದೆ ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸೇವಿಸುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ ಮತ್ತು ಹಳೆದಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳವರೆಗೆ ಸಾಲತಕ್ಕ ೧ ಡಬ್ಬಿಗೆ ೧-೪-೦ ರೂ|| ಒಂದೇವೇಳೆಗೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸಶಕ್ತರಾಗುತ್ತಾರೆ. ಕರೆಗಿನ ಹಾಗೂ ಎದೆನೋವು ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತವೆ ಬರೆದು ಒಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯು ಪೇಯಬಲ್ ವೆಚ್ಚ ಬೇರೆ ಕೊಡಬೇಕು ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಲ್ಲಿ ಎಲ್ಲಾ ಖರ್ಚಾರ ಪಾರ್ಸಲ್ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಚಾರಕ—ಪಿ. ಎರ್. ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ್ ಇಂಗ್ಲಿಷ್ ಬ್ರ್ಯಾಂಚ್ ಆಫಿಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ್—ಬೆಳಗಾಂವ. Post BELGAUM.

BANGALORE.—Printed and Published at the KARNATAKA PRESS, No. 40, HOSPITAL ROAD,—1898.

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning

0 2 0	ಸಂ 1 ಕ್ಕೆ . 3 0 0 / ಸಂ 1 ಕ್ಕೆ ... 4 0 0
0 1 0	6 ತಿಂಗಳಿಗೆ . 2 0 0 / 6 ತಿಂಗಳಿಗೆ .. 2 8 0
	3 ತಿಂಗಳಿಗೆ, 1 4 0 / 3 ತಿಂಗಳಿಗೆ .. 1 8 0

Vol. XXV. BANGALORE:—MONDAY, JUNE 13, 1898. No. 24.

Select Telegrams.

London, 6th June—Reports have reached New York stating that an American force of five thousand men landed near Santiago this morning under cover of fire from some of Admiral Sampson's ships, and were joined by three thousand insurgents under the leadership of General Garcia. The rest of the American squadron simultaneously renewed the bombardment of the Santiago forts.

Admiral Dewey has informed the Washington Navy Department that the insurgents in the province of Cavite (Philippines) have captured fifty Spanish officers and eighteen hundred men, also the arsenal, and that Cavite is now prepared for occupation by American troops.

London, 7th June—The Native Spanish regiment in the Philippines, which mutinied and shot its officers, afterwards joined the rebels, who have been fighting furiously for several days past, and are driving in the Spaniards upon Manila.

The Duke of York has gone to Portsmouth to take over the command of the *Crescent*, and will leave on a three months cruise.

London, 8th June—The Governor of the Philippines has sent a despairing telegram to the Madrid Government, in which he says that nearly the whole of the Archipelago is in open revolt, and that unless the Home Government sends help, it is impossible to cope with the enemies on land and sea.

It is reported that the Governor has taken refuge in the citadel in Manila, where he will make his last stand.

London 9th June—Twenty seven thousand American troops, of whom twenty one thousand and six hundred are Infantry, the balance comprising a battalion of Engineers, five Squadrons of Cavalry, and six Batteries of Artillery, with sixteen siege guns—all under the command of General Shafter—have sailed from Tampa for Key West from whence they will be convoyed by a strong fleet to an agreed point.

THE

Karnataka Prakasika.

MONDAY, JUNE 13, 1898

THE MUNICIPALITY, C AND M. STATION

Matters of late have not been going on smoothly with the working of the Municipality of the Civil and Military Station. The President and some of the members of the Board do not pull well together. The former wishes to have everything his own way, he wishes to be everything, to do everything; to reduce the Commissioners to nonentities or dummies. This is not what Lord Ripon intended when he established local self government. Those who represented the people were to take a part—an intelligent part—in the affairs of the place they lived and of the people they represented. As they took a greater interest in matters Municipal, they were to be entrusted with more power. This is only right, but there are officials who do not like this view of the case, and the President of the C and M Station is one of them. Besides, the manner this gentleman displays when he presides angers many of the members, and they go away from the meetings disgusted. The result is that matters are getting out of gear, and while the same temper is displayed by the head of the institution they will not right themselves. This is a great pity, for at this time when there is a danger of plague visiting the Station the utmost efforts should be put forth to try to keep it out. At the last meeting of the Board a member contended that the sanitation of the place was not what it ought to be, and that the death rate in some parts of the place was far above the average. As regards the latter the speaker showed from Municipal figures that whereas ten years ago only fifteen deaths were reckoned per thousand, now the number is thirty per thousand. This is a terrible advance, and yet there is no epidemic in the Station. Cholera has not put in an appearance this year, and fortunately the plague has not come near us. But still the people are in a bad way as regards *the death rate, and* in some parts of the place it is nothing less than appalling. For instance in one circle, as the divisions of the place are called, the number of deaths is seventy one to the thousand. In another, forty four, in another, forty, and as we have said, it is thirty-one for the whole Station. This is far too high, and in one part of Bangalore with its fine climate and its freedom from epidemics there is a death rate fifteen higher than is the case in Bombay at the present time where plague and cholera are prevalent. Surely this is not a creditable condition of things for those who have the charge of the health of the place, and something ought to be done to improve matters to reduce the rate at which people now die. This would not, we fancy, be a very difficult task, and it should be tried at once. The idea that seventy one people per thousand die in a town with a splendid climate like Bangalore is appalling and preposterous. It is preposterous because it could be avoided, and those responsible for it incur a grave responsibility. The Municipality does not refuse funds to keep the place clean. Half the income is devoted to this purpose, namely Rs 150,000, while ten years ago the amount was only Rs. 15,000. This is a terrible increase, and yet the place is in a most insanitary condition, and people die when they ought not to do so. We cannot make out what becomes of the money; it cannot be applied in the best way possible, or the results would be better than they are. The roads are neglected because the money is spent on sanitation, and they will grow worse and worse, till at length they may become impassable. They are breaking up in several places, and they will break up in others before long especially when the rains set in. We shall soon have water brought by pipes into the place, but if the sanitation of the place and the roads are bad the place will be going back in two ways while it goes forward in another. Great changes are required in the working of the institution, and till these are brought about matters will continue to be wrong.

THE PLAGUE.

We are sorry to see that the plague has not yet died out in Bombay, and the same may be said of Calcutta. The cases are not many, but still people die of the disease. In the former place about five or six die every day, and though there may be no deaths in the latter for a day or two, the epidemic is there. It may spring into life at any time, and slay its hundreds, perhaps thousands. Kurrachee suffers the most at the present time, and the deaths there are numerous. It is thought by many that the cause of the great suffering of the place is the water supply. This is about the best in India. The town has an abundance of good water—in fact too much. It is completely saturated with it. The land around the town is cultivated and irrigated, and it is held by Doctors that dampness helps on the progress of the plague, while dryness is its worst enemy. It spread very extensively in the monsoon in Bombay last year, while at the end of the hot season it had nearly died out. It is to be hoped there will not be a recrudescence of the disease when the wet season sets in. But we are sorry to know that the plague has entered a place nearer Bangalore than any of the three we have mentioned. On the 7th of this month there were five cases at Hubli, and it is to be feared the figure will not stop at this. Hubli is on the way from Bombay to this place, *the direct* route here. If it takes root in that town it is very likely to spread, and it may come here. The only thing to be done is to fight against it in every possible way. The arrangements in the City appear to be very good, but we are sorry to say we cannot say the same of the Civil and Military Station. The arrangements, so far as we know are defective in the latter place, while, as we have elsewhere pointed out, the sanitation in parts is very bad. The worst of the matter is that the better preparations of the City will be of no use should the other part of the place be left in a bad state sanitarily. Both parts must be improved simultaneously, then the plague may be fought successfully, not otherwise.

News and Notes

Lord Sandhurst arrived at Ootacamund at two o'clock on the 8th instant. The arrival was private.

More than two hundred boats and fifteen hundred sailors have disappeared during a terrible storm which ravaged the north eastern coast of Japan on May 11.

A boy who was attacked by plague at Surat last week, committed suicide by throwing himself into a well, in order to avoid the ordeal of a plague hospital.

According to M D Lignita, the enlargement of the sun and moon near the horizon has not been satisfactorily explained by any one and the real cause of the phenomenon is still unknown.

The Hon'ble Mr J. Grose died suddenly at his residence, Sneddon Villa Ootacamund on the 7th evening. He was known to be subject to heart disease which was the cause of death.

Raja Tassadduq Rasul Khan of Jehangirbad, an Oudh Talukdar, has subscribed Rs 20,000 towards the foundation fund, as a memorial of the famine administration, for the training of lady doctors.

The vote of thanks passed by Congress to Admiral Dewey adds ten years to his age limit of retirement, and will make him at the end of the present year the Senior Admiral in the United States Navy.

Mrs Annie Besant, Mr W. C Bonnerjee, and His Highness the Maharajah of Cooch Behar were, among others, the passengers that left for Europe on Saturday before last by the Mail Steamer *Caledonia*.

An eminent Professor says that the age of fish is almost unlimited. As to the length of the life of fish, it is said, that the ordinary carp, if not interfered with, would live about 500 years. The ordinary goldfish has also been known to live over 100 years.

Mr Herbert Spencer, one of the most noteworthy of our modern philosophers, who has just entered his seventy ninth year, is revising his "Principles of Biology" for a new edition. This work was published thirty-one years ago, and did not only not pay him, but caused him to steadily lose money for many years.

The new Currency Committee, says the *London correspondent of the Pioneer*, is having a stormy opening. It is understood to have been started at the instigation of the Rothschilds, and "Rothsgrandchild" as a frivolous member on Change called it the other day is a subject of much embittered discussion.

A Simla telegram to the *Amrita Bazar Patrika* states that the question of the release of Mr. Tilak and the other editors who have been imprisoned has for some time past been under the consideration of the Governments of India and Bombay, and it is not unlikely that Lord Elgin will exercise his prerogative of mercy and release them.

The Travancore Government is about to establish a Medical School, the main object of which will be not only to secure the needful men for the Medical Department, but also to afford the subjects of H. H. the Maharajah facilities for qualifying themselves for an honourable, useful and lucrative profession independently of Government service.

We learn, says the *Patrika*, from a private letter, dated London, May 13th, that a petition was sent to Her Majesty the Queen, praying that Mr. Tilak may be released, and it was expected it would have some effect. The two first signatories were *Professor Max.* Muller and Sir William Hunter. The petition did not contain many signatures and among others, Sir M. Bhownaggree signed it.

His Highness the Gaekwar of Baroda is contemplating building for himself a Bombay residence. The site chosen for the palace is Nepean Sea Road, Malabar Hill, next to "Readymoney House." The land, for the purchase of which negotiations are now proceeding, is the property of Mr. Hirjee Jehangir Readymoney, grandfather of Sir Jehangir Cowasjee Jehangir. The transaction only awaits the sanction of the Supreme Government.

The earth has a shadow, but few ever see it, except in eclipses of the moon, or else few recognise it when they see it. Nevertheless many of us have noticed on fine cloudless evenings in summer shortly before sunset a rosy or pink arc on the horizon opposite the sun with a bluish grey segment under it. As the sun sinks the arc rises, until it attains the zenith, and even passes it. This is the shadow of the earth.

NAWAB Sir Asman Jah is suffering from a severe and dangerous form of carbuncle on the face. Surgeon-Colonel Hatch, of Bombay, has been summoned and will see His Excellency in consultation with Surgeon-Colonel Lawrie and the Nawab's regular medical attendant Doctor Ismadul Haq. His Highness the Nizam, the Resident, and the Minister have made constant enquiries about His Excellency's health by letter.

A SHORT time ago the Jodhpore State applied to the Mysore State for a loan for the construction of the Jodhpore section of the Shadipalli-Balootra Railway, but the negotiations fell through on account of the Mysore State being unable to lend the money without heavy loss to the State. Jodhpore is now negotiating for the loan from the Gwalior State and offer the same terms as were offered to Mysore. The Gwalior State is well known to have large resources and has previously assisted other Native States financially.

THE Hon'ble Nawab Fateh Ali Khan Qizilbash and Mr Moharram Ali Chishti have published notices, on behalf of their co-religionists thanking the Hindus of Lahore for the hearty co-operation and the sympathy shown by them during the Moharram. It is affirmed in these notices that such feelings of good will and harmony are sure to promote the welfare of India, and also to assist the Government in the measures adopted for the maintenance of the peace in the city.

THE question as to who is to be the next Viceroy of India still affords food for speculation. At a dinner given in association with Urban District Council for Seaham Harbour—the town created by the Londonderry family—the Chairman, Mr. J J Candlish, J P, the leading Liberal of the locality, in proposing the health of the Marquis and Marchioness of Londonderry, said he was delighted to hear that it was not at all unlikely that Lord Londonderry would be appointed Viceroy of India.

A MARWARI gentleman of Calcutta asks the *Pioneer* to state, for the benefit of his community, the majority of whom fled from Calcutta on the appearance of the plague, that every thing is being done to safeguard the Marwari quarter as much as possible. Two wealthy members of the community, viz, Babus Ram Chandra Gamba and Sheo Prasad Jhunjhunwalla have already set apart two big houses of theirs for purpose of isolation hospitals for Marwari patients, and are said to be spending money lavishly on their equipment and other contingent expenses.

THE Indian Medical Association of Calcutta are busy with reforms and have addressed two letters to the Chief Secretary of State for India. One deals with medical education and medical diplomas in India. It calls attention to the various medical degrees granted by uncontrolled private institutions and asks for a unified standard and the formation of a General Medical Council for India. The other is a petition regarding Government Doctors' private practice and speaks of it as a distinct hardship and grievance as well as a violation of the avowed policy of Government which prohibits officials from engaging in private remunerative work.

THE payment by China to Japan, at the Bank, says a London Correspondent, was certainly a noteworthy event in financial history, both on account of the size of the cheque passed, and the example afforded of the advantages of the clearing system. The payment was made in the presence of Sir Halliday Macartney, and Mr. C. Y. Lo as representatives of the Chinese Minister, while M. Koike represented Japan, the Governor, Deputy Governor, and Chief Cashier of the Bank being also present. The amount involved was £ 11,008,857 16s 9d, a little cheque calculated to make many a mouth water.

IN the bribery charges now being heard at Multan the prosecution on Thursday concluded the evidence in the second article of charge. The evidence produced on Thursday was largely documentary, and an endeavour was made to prove by entries in the books of native shop keepers and bankers and of European banking firms, that there was a direct connection of Sirdar Gurdial Singh with bribery payments. On Friday the prosecution opened the third article of charge, which alleged that Sirdar Gurdial Singh had, whilst Collector and District Judge of Muzaffargarh, taken Rs 3 225 as bribes for showing favour to a man named Parz Ram of Inayatpore near Muzaffargarh.

GOVERNMENT has placed at our disposal certain papers containing Dr Haffkine's views as regards the effects of preventive inoculation against plague. We gather from these papers that inoculation has for diminishes the chances of attack, that one inoculation appears to be sufficient for certain or person at least over one year's epidemic season, that the highest temperature observed in inoculated persons is 105° which however, is reached only in a very small number of cases, that no harm has resulted to any body from inoculation, and that generally the fever disappears in twenty-four hours, although in exceptional cases it continues in a low form for 2 or 3 days. As a rule, the higher the degree of fever produced, the sooner it disappears.—*Hindu*.

PEOPLE in Calcutta have serious objection to patients being carried in ambulance carts and for this reason the Government has ordered that ambulance cars should no longer be used. But the *Indian Mirror* draws Government's attention to the fact that two patients were removed on Sunday to the isolation hospital in ambulance vans. Our contemporary adds :—"We thought that these vans had been done away with, and *palkis* and other conveyances had been brought into use. What, then, is the value of our reassuring the people? We tell them that ambulance vans would no more be used. But they trust their sight better than any assurance that we can give. We wonder who, in the absence of the Government, is the head of the plague administration in Calcutta? It is such indifference to the good intentions and orders of Government that leads sometimes to unexpected results. The Bengal Government ought to make an example of the man who thus disobeyed its injunctions.

Local and Provincial

Colonel Donald Robertson, British Resident in Mysore, returned to Bangalore from Ootacamund on Thursday the 9th instant.

PLAGUE.—The Inspecting Medical Officer at Hurihar wires to the Plague Commissioner in Mysore that the Plague authority informs that there were at Hubli, on the 27th 4 indigenous cases; thirtieth 3, thirty first 1, first 4, and second, 2 plague cases.

TREATS.—In honor of the weddings that took place at the mansion of Mr Krishna Murti C I E, Councillor, the other day, he invited all the Brahmin officials to a supper, on Tuesday night last. Several, if not most of those invited, responded. After they had partaken of the sumptuous repast, a musical entertainment was given them. They enjoyed themselves immensely.

"REPRESENTATIVE INDIANS."—It affords us much pleasure to note, from the last *Mysore Gazette*, that, with the sanction of the Government the Inspector General of Education in the Province, Mr H J Bhabha, M A, has recommended "Representative Indians" by Mr. Parameswaran Pillai, B. A, (Editor of the *Madras Standard*), as a prize book for High Schools in Mysore. The publishers are Messrs George Routledge and Sons, London.—M. H.

Under Article 188 of the Mysore Service Regulations, Colonel J. P. Grant, Superintendent of Revenue Survey and Inam Settlements in Mysore, is granted privilege leave of absence for one month, with effect from the 20th May 1898, Mr D Appu Rao, Deputy Superintendent, Mysore Revenue Survey, being in charge of the office of the Superintendent of Revenue Survey and Inam Settlements during the absence of Colonel Grant on leave or until further orders.

"ON HONOR."—The Deputy Commissioner of the Shimoga District requested the Government of Mysore permission to omit the words "on honour" in the certificate regarding insurance attached to pay bills. The Secretary to the Insurance Committee submitted his opinion on it. The Government of Mysore has passed the following order thereon :—"Under the circumstances represented in the Deputy Commissioner's letter read above, the Government are pleased to direct that the words "on honour" be omitted from the certificates regarding insurance attached to pay bills of office establishment."

AN ORDER.—The President of the Bangalore City Municipality lately solicited instructions as to the advisability of granting the prayer of certain householders to enhance the assessment on their houses to Rs 15 so that they might be entitled to have house connection pipes. The Government of Mysore has passed the following order thereon :—Government observe that house tax cannot be raised for the mere asking and irrespective of rental value, but that when it comes to the notice of the Municipal Board that any house has not been properly valued, they have the power to decide whether a revaluation can be made or not.—E. M.

ಕರ್ಣಾಟಕ ಪ್ರಕಾಶಿಕಾ.

೧೮೯೮ನೇ ಇಸವಿ ಜೂನ್ ೧೩ನೇ ತಾ|| ಸೋಮವಾರ

ಹೆಸರಘಟ್ಟದ ಕೆರೆಯ ನೀರು

ಬಹುಕಾಲದವರೆಗೂ ನೀರಿನ ವಿಷಯದಲ್ಲಿ ಈ ಪಟ್ಟಣ ನಿವಾಸಿಗಳು ಅನುಭವಿಸುತಲಿದ್ದ ಕಷ್ಟವಂ ಪರಿಹರಿಸಬೇಕೆಂಬ ಶ್ಲಾಘ್ಯವಾದ ಉದ್ದೇಶದೊಡನೆ ಮೈಸೂರು ಗವರ್ನಮೆಂಟಿನವರು ಅನೇಕ ಲಕ್ಷರೂಪಾಯಿಗಳಂ ವ್ಯಯಮಾಡಿ ಮೂರು ನಾಲ್ಕು ವರ್ಷಗಳಕಾಲ ಶ್ರಮಪಟ್ಟು ಅದರ ಫಲರೂಪವಾಗಿ ಹೆಸರಘಟ್ಟದ ಕೆರೆಯನೀರಂ ನಲ್ಲಿಗಳ ಮೂಲಕ ಈ ಪಟ್ಟಣಕ್ಕೆ ತಂದು ಪ್ರಾಯಶಃ ಪ್ರತಿ ಬೀದಿಯಲ್ಲೂ ನಲ್ಲಿಗಳನ್ನಿಡಿಸಿರುತ್ತಾರೆಯಷ್ಟೆ. ಇದರ ಪ್ರಯೋಜನವಂ ಸರ್ವರೂ ಸಮಾನವಾಗಿ ಅನುಭವಿಸುವದಕ್ಕೆ ಅನುಕೂಲ್ಯವಂ ಕಲ್ಪಿಸಬೇಕಾದುದು ಗವರ್ನಮೆಂಟಿನವರ ಕರ್ತವ್ಯವಾಗಿದ್ದರೂ ಅದರ ವ್ಯವಸ್ಥೆಯ ಪ್ರಕಾರ ನಿಯಮಿಸಲ್ಪಟ್ಟಿರುವ ಮರಮ್ಮತ್ ಇಲಾಖಾ ಅಧಿಕಾರಿಗಳು ಸಾಲಿಯಾನಾ ೩೦೦ ರೂಪಾಯಿಗಳ ಬಾಡಿಗೆ ಹುಟ್ಟುವಳಿಯಾಗಬಹುದಾದ ಮನೆಗಳ ಮಾಲೀಕರು ಮಾತ್ರವೇ ಅವರವರ ಮನೆಗಳೊಳಗೆ ನಲ್ಲಿಗಳನ್ನಿಡಿಸಿಕೊಂಡು ಉಪಯೋಗಿಸುವದಕ್ಕೆ ಅರ್ಹರೆಂತಲೂ, ಇತರರು ಬೀದಿಗಳಲ್ಲಿಡಲ್ಪಟ್ಟಿರುವ ನಲ್ಲಿಗಳ ನೀರನ್ನು ಉಪಯೋಗಿಸಿಕೊಳ್ಳುವದಕ್ಕೆ ಮಾತ್ರವೇ ಅರ್ಹರೆಂತಲೂ ನಿರ್ಣಯಿಸಿ ತಮ್ಮ ಕಾರ್ಯವನ್ನು ನಡೆಸುತ್ತಿರುತ್ತಾರೆ. ನಲ್ಲಿಗಳನ್ನಿಡುವ ಕ್ರಮವು ಕುರಿತು ಆಲೋಚಿಸಿದರೆ, ಕೆಲವು ಬೀದಿಗಳಲ್ಲಿ ಒಂದು ಫರ್ಲಾಂಗಿಗೆ ನಾಲ್ಕಾರು ನಲ್ಲಿಗಳೂ, ಕೆಲವು ಬೀದಿಗಳಲ್ಲಿ ಒಂದು ಫರ್ಲಾಂಗಿಗೆ ಒಂದು ನಲ್ಲಿಯೂ ಇದ್ದುಬರುತ್ತವೆ. ಈರೀತಿ ಮಾಡಲ್ಪಡುವದಕ್ಕೆ ಡಿಪಾರ್ಟ್ಮೆಂಟ್ ನಿಯಾಮಿತರಾಗಿರುವ ಅಧಿಕಾರಿಗಳ ಇಚ್ಛೆಯ ಪ್ರಸಕ್ತನ ವಿನಾ ಇನ್ನೇನು ಕಾರಣವನ್ನು ಹೇಳಬಹುದು. ಈಗ ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿರುವ ನಲ್ಲಿಗಳ ಬಳಿ ಮಾಡಲ್ಪಡುವ ಗಲೀಜನ್ನು ನೋಡಿದರೇನೋ, ಅವರವರ ಮನೆಯ ಬಾವಿಯ ಉಪ್ಪುನೀರನ್ನಾದರೂ ಕುಡಿಯಬಹುದೇ ಹೊರತು ನಲ್ಲಿಯ ನೀರನ್ನು ಉಪಯೋಗಿಸಬಾರದೆಂಬವರ ಮಟ್ಟಿಗೆ ತೋರಿಹೋಗಿದೆ. ಇದು ಜಾತಿ ಮತಾಚಾರಗಳಲ್ಲಿ ಸ್ವಲ್ಪಮಟ್ಟಿಗಾದರು ಅಭಿಮಾನವುಳ್ಳ ವೃದ್ಧರುಗಳ ಅಭಿಪ್ರಾಯವೇ ಹೊರತು, ವಿಂಪ್ರ [illegible] ಮಾರ್ಗಾನುಯಾಯಿಗಳಾಗಿ ಪ್ರವರ್ತಿಸುವ ನವೀನನಾಗರಿಕರ ಅಭಿಪ್ರಾಯವಲ್ಲವು. ಸಾಲಿಯಾನಾ ೩೦೦ ರೂಪಾಯಿಗಳ ಬಾಡಿಗೆ ಹುಟ್ಟಬಹುದಾದ ಮನೆಗೆ ಕೊಡಬೇಕಾದ ಹದಿನೈದು ರೂಪಾಯಿಗಳ ಕಂದಾಯವಂ ಕೊಡುವ ಷರತ್ತಿನಮೇಲೆ ತಮ್ಮ ಮನೆಗಳೊಳಗೆ ನಲ್ಲಿಗಳನ್ನಿಟ್ಟುಕೊಡಬೇಕೆಂದು ಕೆಲವರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರವರಿಗೆ ಬರೆದುಕೊಂಡ ಅರ್ಜಿಯನ್ನು ಅವರು ಗವರ್ನಮೆಂಟಿಗೆ ಕಳುಹಿಸಿ ಆ ವಿಷಯದಲ್ಲಿ ಅವರ ಅಭಿಪ್ರಾಯವಂ ಕೇಳಿದ್ದಕ್ಕೆ ಗವರ್ನಮೆಂಟಿನವರು ಅದನ್ನೊಪ್ಪದೆ ಹೋದರು. ಮನೆಗಳೊಳಗೆ ನಲ್ಲಿಗಳನ್ನಿಡಿಸಿಕೊಳ್ಳುವ ಬಾಧ್ಯತೆಯಂ ಪಡೆಯುವದಕ್ಕೆ ಗವರ್ನಮೆಂಟ್ ರೂಲ್ಸ್ ಅನುಸರಿಸಿ ಕೊಡಬೇಕಾದ ಕಂದಾಯವಂ ಕೊಡುವದಕ್ಕೆ ಒಪ್ಪಿಕೊಂಡವರ ವಿಷಯದಲ್ಲಿ ಈರೀತಿ ಹಠವಂ ಮಾಡುವದಕ್ಕೆ ಉಂಟಾದ ಕಾರಣಮಾತ್ರ ವ್ಯಕ್ತವಾಗಲಿಲ್ಲವು. ಹೆಸರಘಟ್ಟದ ಕೆರೆ ನೀರಿನಲ್ಲಿ ಇಷ್ಟನ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನಿಗೆ ಬೇಕಾಗುವದನ್ನು ನೀರನ್ನು ಕೊಡುವದಕ್ಕೆ ಮೈಸೂರು ಗವರ್ನಮೆಂಟಿನವರು ಒಪ್ಪಿಕೊಂಡು ಸ್ಟೇಷನ್ ಅಧಿಕಾರಿಗಳು ಅನೇಕ ಲಕ್ಷ ರೂಪಾಯಿಗಳಂ ವ್ಯಯಮಾಡಿ ಸದರೀ ಕೆರೆಯಿಂದಲೇ ಪ್ರತ್ಯೇಕವಾಗಿ ನಲ್ಲಿಗಳಂ ಇಡಿಸಿ ಅಲ್ಲಿಗೆ ನೀರನ್ನು ಬಿಟ್ಟುಕೊಂಡಿರುವದರಿಂದ, ಪೇಟೆಯಲ್ಲಿ ಅಪೇಕ್ಷಿಸುವವರೆಲ್ಲ ಮನೆಗಳಲ್ಲಿ ನಲ್ಲಿಗಳಂ ಇಡಿಸಿದರೆ [illegible] ಜಾಸ್ತಿ ನೀರು ಖರ್ಚಾಗಿ, ಸಿವಿಲ್ ಸ್ಟೇಷನಿಗೆ ನೀರು ಸಾಲದೆಹೋಗಿ ತನ್ಮೂಲಕ [illegible] ಆಕ್ಷೇಪಣೆ ಮತ್ತು ಆಗ್ರಹಕ್ಕೆ ಗುರಿಯಾಗಬೇಕಾಗಿರುವದೆಂಬ ಭೀತಿಯಿಂದ ಗವರ್ನಮೆಂಟಿನವರು ತಾವು ಮಾಡಿರುವ ನಿಬಂಧನೆಗೆ ಪ್ರತ್ಯಕ್ಷ ವಿರುದ್ಧವಾಗಿ ವರ್ತಿಸಬೇಕಾದವರಾದರೆಂದು ತೋರುತ್ತದೆ. ಮೈಸೂರು ಸಂಸ್ಥಾನದ ಖಜಾನೆಯಿಂದ ನಾಲ್ಕಾರುಲಕ್ಷ ರೂಪಾಯಿಗಳ ವ್ಯಯವಂ ಮಾಡಿ ಕಟ್ಟಿಸಿದ ಸೋಕೆ ಕೆರೆಯು ಸ್ಟೇಷನ್ ಅಧಿಕಾರಿಗಳ ಯಾಜಮಾನ್ಯಕ್ಕೊಳಪಟ್ಟು ಪೇಟೆಯ ನಿವಾಸಿಗಳು ಜಲಾಭಾವದಿಂದ ಕಷ್ಟಪಡುವ ಕಾಲದಲ್ಲಿ ಅವರು ಕೇವಲ ದಯಾರೂಪವಾಗಿ ಅಲ್ಪಸ್ವಲ್ಪ ನೀರು ಕೊಡತಕ್ಕಂತೆ, ಹೆಸರಘಟ್ಟದ ನೀರು ಸಹ ಕಾಲಕ್ರಮೇಣ ತಮಗೆ ದುರ್ಲಭವಾಗುತ್ತದೋ ಎಂದು ಪೇಟೆಯ ಜನರು ಚಿಂತಿಸದಿರಲಿಲ್ಲವು. ಪ್ರಜೆಗಳು ಬೇರೆಯವರ ದುಡ್ಡು ಅನ್ಯರ ಪಾಲಾಗುವದಕ್ಕೆ ಅನೇಕ ಮಾರ್ಗಗಳು ಕೂಡುತ್ತವೆ. ಇದು ಕಾಲಸ್ಥಿತಿ ಪರೀಕ್ಷೆಯ ಫಲವೆಂದು ಭಾವಿಸುವೆವು.

ಪ್ಲೇಗುರೋಗದ ವ್ಯಾಪ್ತಿ.

ಮುಂಬೈಯಲ್ಲಿ ಪ್ಲೇಗುರೋಗವು ಇನ್ನು ಪೂರ್ತಿಯಾಗಿ ಶಾಂತವಾಗಲಿಲ್ಲವು. ಕಲ್ಕತ್ತೆಯಲ್ಲಿ ಶಂಕೆಯೇ ಇದೆ. ಸದರೀ ರೋಗವು ಏನು ಎನ್ನುವ [illegible] ಗ ತಗಲದೆ ಹೋದಾಗ್ಯೂ ಅದರಿಂದ ಜನರು ಸಾಯುತ್ತಿದ್ದಾರೆ. ಮುಂಬೈಯಲ್ಲಿ ಪ್ರತಿದಿನ [illegible] ಇರುತ್ತಿದೆ. ಕಲ್ಕತ್ತೆಯಲ್ಲಿ ಈಗ್ಗೆ ಮೂರ ನಾಲ್ಕು ದಿನಗಳ ಮೇಲು ಪ್ರಾಣಹಾನಿಗಳಿಲ್ಲವೆ ಹೋದಾಗ್ಯೂ ರೋಗವೇನೋ ಇರಲೇಇರುತ್ತದೆ. ಸದರೀ ರೋಗವು ಯಾವಾಗಲಾದರು ಪ್ರಬಲಿಸಿ ಅನೇಕರಿಗೆ ಪ್ರಾಣಹಾನಿಯನ್ನುಂಟುಮಾಡಬಹುದು. ಕರಾಚಿಯಲ್ಲಿ ಈಗ ಸದರೀ ರೋಗವು ಪ್ರಬಲಗೊಂಡು ಅನೇಕರು ಸಾಯುತಲಿದ್ದಾರೆ. ಈ ಪಟ್ಟಣಕ್ಕೆ ವಿಶೇಷ ಪ್ರಾಣಹಾನಿಗಳುಂಟಾಗುವದಕ್ಕೆ ಅಲ್ಲಿನ ಜನಬಾಹುಳ್ಯವೇ ಕಾರಣವೆಂದು ಅನೇಕರು ಅಭಿಪ್ರಾಯಪಡುತಲಿದ್ದಾರೆ. ನೀರು ಇಲ್ಲದೆ, ಸಮೃದ್ಧಿಯಾಗಿಯೂ ಇದೆ. ಸ್ಥಳ ಸಂಕುಚಿತವಾಗಿರುವ ಅದರಿಂದ ಪ್ರತ್ಯೇಕ ರೋಗವ್ಯಾಪ್ತಿಗೆ ಅವಕಾಶವು ಹೆಚ್ಚಿನದು. ಡಾಕ್ಟರುಗಳನೇಕರು ಅಭಿಪ್ರಾಯಪಡುತ್ತಾರೆ. ಇನ ಚಿಲ್ಲದ ಭೂಮಿಯಲ್ಲಿ ಸದರೀ ರೋಗದ ವ್ಯಾಪ್ತಿಗೆ ಸುತರಾಂ ಅವಕಾಶ ದೊರಿಯುವದಿಲ್ಲವು. ಮುಂಬೈಯೊಳು ಕಳೆದ ವರುಷ ಅಲ್ಲಿ ಈ ರೋಗವು ವಿಸ್ತಾರವಾಗಿ ವ್ಯಾಪಿಸಿ ಗ್ರೀಷ್ಮಕಾಲದ ಅಂತ್ಯದಲ್ಲಿ ನಿಂತುಹೋಯಿತು. ವರ್ಷದ ಪ್ರಾರಂಭವಾದಕೂಡಲೆ ದೈವಾಜ್ಞೆಯಿಂದ ಮರಳ ತಲೆಹಾಕಬಹುದೇ.

ಈಗ ಸದರೀ ರೋಗವು ಈ ದೇಶಕ್ಕೆ ಸಮೀಪದಲ್ಲಿರುವ ಹುಬ್ಬಳ್ಳಿಯಲ್ಲಿ ವ್ಯಾಪಿಸಿ ಜನ ಪ್ರತಿದಿನಕ್ಕೆ ನಾಲ್ಕಾರುಜನ ಸಾಯುವಂತೆ ತಿಳಿದು ಬಹಳ ವಿಷಾದಿಸುತ್ತೇವೆ. ಈ ತಿಂಗಳ ೭ನೇ ತಾರೀಖಿನಲ್ಲಿ ಐವರು ಮೃತಪಟ್ಟಂತೆ ತಿಳಿಯಬರುತಿದೆ. ಮುಂಬೈಯಿಂದ ಈ ದೇಶಕ್ಕೆ ರೈಲ್ವೆಗೆ ಬರುವದಕ್ಕೆ ಮಧ್ಯಮಾರ್ಗದಲ್ಲಿರುವ ಹುಬ್ಬಳ್ಳಿಯಲ್ಲಿ ಸದರೀ ರೋಗವು ವ್ಯಾಪಿಸಿರುವದರಿಂದ ಈ ದೇಶದೊಳಗೂ ತಲೆಹಾಕಬಹುದೆಂದು ಹೆದರಬೇಕಾಗಿರುತ್ತದೆ. ಸಾಧ್ಯಗಳಾದ ಸರ್ವಪ್ರಯತ್ನಗಳಿಂದಲೂ ಈ ದೇಶದೊಳು ಅದರ ಪ್ರ

ಹೋಕ್ಕೆ ಅವಕಾಶ ವಿಲ್ಲದಂತೆ ಮಾಡಬೇಕಾದ್ದು ಅವಶ್ಯ ಕರ್ತವ್ಯವಾಗಿದೆ. ಇಲ್ಲಿನ ಅಧಿಕಾರಿಗಳು ಪ್ರಸಕ್ತ ರೋಗ ನಿರೋಧಕಗಳಿಂದ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ದೈವಾಜ್ಞೆ ಹ್ಯಾಗಿರುವುದೋ ಮುಂದೆ ತಿಳಿಯಬರಬೇಕು.

ವಾದಬಲಹೀನರ ವಾಗಾಡಂಬರವು.

ಈ ಪತ್ರಿಕೆಯನ್ನು ನಾವು ಮೊದಲು ಪ್ರಾರಂಭಿಸಿದ್ದು ಮೊದಲು ಈಗ ಇಪ್ಪತ್ತೈದನೆಯ ಸಂವತ್ಸರವು ನಡೆಯುತಲಿದೆ. ಆದಿಭಾಗದಲ್ಲಿ ಈ ಪತ್ರಿಕೆಗೆ ಉಂಟುಮಾಡಲ್ಪಟ್ಟ ಬಹುವಿಧ ಸಂಕಟಗಳ ದೆಸೆಯಿಂದ ಇದು ಉಜ್ಜೀವಿಸಿ ಇಷ್ಟು ದೀರ್ಘಕಾಲನಿರ್ವಿಘ್ನವಾಗಿ ನಡೆದುಬಂದುದಕ್ಕೆ ನಮ್ಮ ಚಂದಾದಾರರ ಸಹಾಯವೇ ಮುಖ್ಯಪ್ರಧಾನ್ಯೇನ ಕಾರಣವೆಂದು ನಾವು ಒಪ್ಪಿಕೊಳ್ಳುತ್ತೇವೆ, ಪರಂತು ಈಗ್ಗೆ ಮೂರುನಾಲ್ಕು ವರ್ಷಗಳ ಕಾಲದವೊಂದಲು ನಮ್ಮ ಚಂದಾದಾರರಲ್ಲಿ ಅನೇಕರು ಉಚಿತ ಕಾಲಗಳಲ್ಲಿ ತಾವಾಗಿ ಚಂದಾಹಣವನ್ನು ಕಳುಹಿಸದೆಯೂ, ಅಥವಾ ಆಬಗ್ಗೆ ನಾವುಬರೆಯುವ ಕಾಗದಗಳಗೆ ನಿಗೇಕೊಟ್ಟು ಬಾಕಿಗಳನ್ನು ಕಳುಹಿಸದೆಯೂ, ಅಥವಾ ಜವಾಬ ಕೊಡದೆಯೂ ಕೇವಲ ಔದಾಸೀನ್ಯವಂ ತೋರ್ಪಡಿಸುತ ಬರುವದರ ಮೂಲಕ ನಮಗೆ ಪ್ರೋತ್ಸಾಹ ಭಂಗವನ್ನುಂಟುಮಾಡುತಲಿರುವುದು ಕೇವಲ ಶೋಚನೀಯವಾದ ವಿಷಯವಾಗಿರುತದೆ. ನಾಲ್ಕುಸಾವಿರ ರೂಪಾಯಿಗಳ ಬಾತವಾಳವನ್ನಿಟ್ಟು ಚೀಕಾಡಸಾಮಾನ್ಗಳನ್ನು ತರಿಸಿಕೊಂಡು, ಕೆಲಸಗಾರರಿಗೆ ತಿಂಗಳ ಕಟ್ಟು ನೂರಾರುರೂಪಾಯಿಗಳ ತೆಲುಪಕೊಡುತ ಪತ್ರಿಕಾ ಲೇಖಕ ಪ್ರಚಾರಕನಾದವನು ತಾನೂ ಶ್ರಮಿಸುವದರಿನ ಸರ್ವಜನಾಂಗೀಕಾರಯೋಗ್ಯವಾಗ ಒಂದು ಪತ್ರಿಕೆಯಂ ನಡೆಸುವದಕ್ಕೆ ಸಾಧ್ಯವಾದೀತೆಹೊರತು ಅನ್ಯಥಾಸು ಕರಂ ಸಾಧ್ಯವಲ್ಲವೆಂಬುವದನ್ನು ಅಭಿಜ್ಞರಾದವರಿಗೆ ನಾವು ತಿಳಿಸಬೇಕಾದುವಿಲ್ಲವು. ಪ್ರತಿಯೊಬ್ಬ ಚಂದಾದಾರರಿಗೂ ಬಾಕಿಗಳಬಗ್ಗೆ ನಾಲ್ಕಾರುತಡವೆ ಕೈಯಿಂದ ಮಾಸಿಕೊಟ್ಟು ಕಾರ್ಡುಗಳು ಮತ್ತು ಕಾಗದಗಳು ಬರೆಯುವದರಲ್ಲಿ ನಮಗುಂಟಾಗುವ ನಷ್ಟವನ್ನು ಕುರಿತು ಬಾಕೀದಾರರು ಸ್ವಲ್ಪವೂ ಆಲೋಚಿಸದಿರುವದು ವಿಶೇಷಶಃ ನಮಗೆ ಆಶ್ಚರ್ಯವನ್ನುಂಟುಮಾಡದೆ ಹೋಗಲಿಲ್ಲವು. ಸಂವತ್ಸರ ಕಟ್ಟಲೆ ಪತ್ರಿಕೆಯಂ ಪಡೆಯುತಬಂದು ಚಂದಾಬಾಕಿಯಬಗ್ಗೆ ನಾವು ಕಳುಹಿಸುವ ಬಿಲ್ಲುಗಳಂ ನೋಡಿದಕೂಡಲೆ, ನಿಮ್ಮಪತ್ರಿಕೆ ನಮಗೆ ಬರುವದೇಯಿಲ್ಲವೆಂದು ಕೆಲವರು, ಬಿಲ್ಲನ್ನುತೆಗದಿಟ್ಟುಕೊಂಡು ನಾಳೆಯದಿನ ಬಂದು ಹಣ ತೆಗದುಕೊಂಡು ಹೋಗೆಂದು ಹೇಳ ಕಾಲಕಳೆಯುತಬಂದು, ತರುವಾಯ ಹಣಪಾವತಿಯಾಗಿರುವದಕ್ಕೆ ನನ್ನಲ್ಲಿ ಬಿಲ್ ಹಾಜರಿದೆಯೆಂದು ಹೇಳತಕ್ಕವರು ಬೇರೇ ಕೆಲವರು. ಮೂರು ತಿಂಗಳಾದಾಗ್ಯೂ ತನಗೆ ಸಂಬಳ ಬಂದಿಲ್ಲವೆಂದು ಹೇಳತಕ್ಕವರು ಇನ್ನು ಕೆಲವರು. ಇವರೆಲ್ಲರು ತಿಂಗಳೊಂದಕ್ಕೆ ನೂರಕ್ಕೆ ಮೇಲ್ಪಟ್ಟು ಸಾವಿರರೂಪಾಯಿಗಳವರೆಗೆ ಪಗಾರು ಪಡೆಯುತ ಕನಿಷ್ಠ ಸಂಭಾವಿತರೆನ್ನಿಸಿ ಮೆರೆಯುತಲಿರುವ ಪ್ರಭುಗಳು. ಚಂದಾಬಾಕಿಯನ್ನು ಕೇಳದಕೂಡಲೆ ರೌದ್ರಾವೇಶಗೊಂಡು ಇನ್ನುಮುಂದೆ ನಿಮ್ಮ ಪತ್ರಿಕೆ ನಮಗೆ ಆವಶ್ಯಕವಿಲ್ಲವೆಂದುಹೇಳ, ಪರಂತು ಅದುವರೆಗಿನ ಬಾಕಿಯನ್ನು ಕೂಡಲೆಕೊಟ್ಟು ಫೈಸಲ್ಮಾಡಬೇಕೆಂಬ ಜ್ಞಾನವಿಲ್ಲದೆ, ಒಳಗೆ ಹೊರಬಾಹೋಗುವಂತವರೂ ಕೆಲವರಿರುತ್ತಾರೆ. ಇವರೆಲ್ಲರು ಪ್ರಭುಗಳ ಗೋಷ್ಠಿಗೆ ಸೇರಿದವರು. ಲೋಕದಲ್ಲಿ ವೃತ್ತಾಂತ ಪತ್ರಿಕೆಗಳನ್ನಪೇಕ್ಷಿಸುವಂತವರು ಅದರಮೌಲ್ಯವಂ ಕಳುಹಿಸಿ ತಮಗೆ ಅನುಕೂಲವಾಗಿ ಕಂಡುಬರುವತನಕ ಪತ್ರಿಕೆಯಂ ತರಿಸಿಕೊಳ್ಳುತಬಂದು, ಅದರ ಆವಶ್ಯಕತೆ ತಪ್ಪುವಕಾಲದಲ್ಲಿ, ಅದುವರೆಗಿನ ಬಾಕಿಯನ್ನು ಕಳುಹಿಸಿ ಮುಂದೆ ಪತ್ರಿಕೆಯಂ ನಿಲ್ಲಿಸಿಕೊಳ್ಳುವುದು ವಾಡಿಕೆಯಾಗಿಯೂ ಪ್ರಾಮಾಣಿಕರಾದವರ ನಡತೆಯಾಗಿಯೂ ಇದ್ದಾಗ್ಗೂ ದೌರ್ಭಾಗ್ಯವಶಾತ್ ನಮ್ಮ ಚಂದಾದಾರರಲ್ಲನೇಕರುಇದಕ್ಕೆ ಪ್ರತ್ಯಕ್ಷ ವಿರುದ್ಧ ವರ್ತನವುಳ್ಳವರಾಗಿರುವಬಗ್ಗೆ ಬಹಳ ವಿಷಾದಿಸುತ್ತೇವೆ. ಕಳೆದ ಜೂನ್‌ತಿಂಗಳ ೩೦ನೆಯ ತಾರೀಖಿನಲ್ಲಿ, ಈಗ ನಮಗುಂಟಾಗಿರುವ ದ್ರವ್ಯ ವಿಷಯಕವಾದ ಸಂಕಟಗಳಂ ತಿಳಿಸಿ, ಈ ಕಾಲದಲ್ಲಿ ಅವರವರ ಚಂದಾ ಬಾಕಿಗಳಂ ಕಳುಹಿಸಿ ನಮಗೆ ಸಹಾಯಕರಾಗಬೇಕೆಂದು ಮೂವತ್ತು ನೂರುಮಂದಿಗೆ ಮೇಲ್ಪಟ್ಟು ನಮ್ಮ ಚಂದಾದಾರರಿಗೆ ತಪಾಲಿನಮೂಲಕ ನಾವು ತಿಳಿಸಿದ ಪ್ರಾರ್ಥನೆಯನ್ನು ಪ ಮೂರು ಹತ್ತುಮಂದಿ ವಿನಾ ಮಿಕ್ಕವರ್ಯಾರೂ ಲಾಲಿಸಿ ಅದರಂತೆ ಇದುವರೆಗೆ ನಡೆಸಿ ಕೊಡದೆ ಇರುವದನ್ನು ಯೋಚಿಸಲಾಗಿ ನಮಗುಂಟಾದ ಆಶ್ಚರ್ಯಕ್ಕೆ ಪಾರವೇ ಇಲ್ಲದಿರುತದೆ. ನಮ್ಮ ಚಂದಾದಾರರಲ್ಲಿ ಪ್ರಾಯಿಕವಾಗಿ ಯೆಲ್ಲರು ಉಪವನ್ನರಾದವರೇ ಹೊರತು ಸಾಮಾನ್ಯಸ್ಥಿತಿಯುಳ್ಳರತಕ್ಕವರಲ್ಲವು. ಇವರಬಾಕಿಗಳೇ ಅಧಿಕವಾಗಿದೆ. ಹಾಗೆ ಸಾಮಾನ್ಯಸ್ಥಿತಿಯುಳ್ಳರತಕ್ಕ ಕೆಲವರು ಸಾಲ ಮಾಡಿಯಾದರೂ ಚಂದಾವನ್ನು ಮುಂಗಡವಾಗಿ ಕಳುಹಿಸುತಲಿದ್ದಾರೆ. ಇದಂ ಕಾಲವೈಪರೀತ್ಯದ ಫಲವೆಂದಲ್ಲದೆ ಇನ್ನೇನನ್ನಬೇಕು? ಈಗಲು ನಮ್ಮ ಚಂದಾದಾರರೆಲ್ಲರು ದಯಮಾಡಿ ಕೂಡಲೆ ಬಾಕೀಗಳನ್ನು ಕಳುಹಿಸಿ ನಮಗೆ ಸಹಾಯ ಮಾಡಬೇಕೆಂದು ಮರಳ ಪ್ರಾರ್ಥಿಸುವೆವು. ಆರೀತಿ ನಡೆಸಿಕೊಟ್ಟು ಪ್ರೋತ್ಸಾಹವನ್ನುಂಟುಮಾಡದೆ ಹೋಗುವಪಕ್ಷದಲ್ಲಿ ಅರ್ಥವ್ಯಯ ಮತ್ತು ಶಾರೀರಕ ಮಾನಸಿಕ ಕ್ಲೇಶಗಳಂ ನಿರ್ವಹಿಸಬೇಕಾದ ಈ ಪತ್ರಿಕಾಕಾರ್ಯವಂಮುಂದೆ ನಡೆಸುವದಕ್ಕೆ ನಾವು ಶಕ್ತರಾಗಿರಲಾರವೆಂದು ತಿಳಿಸುವದಕ್ಕೆ ಬಹಳ ವಿಷಾದಿಸುತ್ತೇವೆ.

ಮೈಸೂರು ಗ್ರ್ಯಾಜ್ಯುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತಗಳಾದ, ಕರ್ಣಾಟಕ ಗ್ರಂಥಮಾಲೆ ಮತ್ತು ವಿದ್ಯಾದಾಯಿನೀ ಎಂಬ ಎರಡು ಕನ್ನಡ ಮಾಸಪತ್ರಿಕೆಗಳು ತತ್ಪತ್ರಿಕಾಧಿಪರಿಂದ ಈ ತಿಂಗಳಲ್ಲಿ ಮಾತ್ರ ನಮಗೆ ಕಳುಹಿಸಲ್ಪಟ್ಟು ಅದಂ ನಾವು ಬಹಳ ಔತ್ಸುಕ್ಯದೊಡನೆ ಅಂಗೀಕರಿಸಿದೆವು. ಈ ಮಾಸಪತ್ರಿಕೆಗಳೆರಡೂ ಪ್ರಾರಂಭವಾಗಿ ಐದುಸಂವತ್ಸರಗಳುಗತಿಸಿ ಆರನೆಯ ವರ್ಷವೀಗ ನಡೆಯುತಲಿದೆ. ಈಗ ನಮಗೆ ಕಳುಹಿಸಲ್ಪಟ್ಟಿರುವ ಸಂಚಿಕೆಗಳೊಳು ಗ್ರಂಥಮಾಲೆಯಲ್ಲಿನ ಮುದ್ರಿತ ವಿಷಯಗಳು ಹಿಂದಿನಸಂಚಿಕೆಯ ಅವಶಿಷ್ಟಾಂಶಗಳಾಗಿ ಕಂಡುಬರುವವರಿಂದಲೂ, ಇನ್ನೂ ಅಸಂಪೂರ್ಣವಾದ ವಾಗಿರುವದರಿಂದಲೂ ಪೂರ್ವೋತ್ತರ ಸಂದರ್ಭಗಳನ್ನು, ನಿಜಸ್ವರೂಪವನ್ನೂ ತಿಳಿದುಕೊಳ್ಳುವಿಕ್ಕೆ ಅವಕಾಶವಿಲ್ಲದಿರುತಿದೆ. ಏತತ್ಪತ್ರಿಕಾ ಲೇಖಕೋಪಲೇಖಕರಾಗಿರುವ ದೊಡ್ಡಮನುಷ್ಯರಿಪಸರುಗಳ ಅಂತರಲೇಖನ ವಿಷಯಗಳೂ, ಪತ್ರಿಕಾ ಪೀಠಿಕೆಯಲ್ಲಿ ಮುದ್ರಿಸಲ್ಪಟ್ಟಿರುವದರಿಂದ ತನ್ಮೂಲಕವಾದ ವಕ್ತೃ ಗೌರವಹಿಂದ ವಿಷಯಗೌರವವನ್ನೂ ಹಿಸಿಕೊಳ್ಳ ಬಹುದಾಗಿರುತಿದೆ. ನಗೆಗತಲು, ಪರ್ವಚರಿತ್ರೆ, ಆರ್ಯಕೀರ್ತಿ, ವಿಷವೃಕ್ಷಗಳೆಂಬ ನಾಲ್ಕು ವಿಷಯಗಳು ಪ್ರತ್ಯೇಕ ನಾಲ್ವರು ದೊಡ್ಡಮನುಷ್ಯರಿಂದ ವಿರಚಿತವಾದವಾಗಿರುವಂತೆ ವ್ಯಕ್ತವಾಗುತದೆ. ಇವರಲ್ಲಿ ಮಿಷಾಂಕುರ ಪ್ರತಿಷ್ಠಾಪಕರಾದವರು ಈ ಸಂಸ್ಥಾನದ ಜುಡಿಷಿಯಲ್ ಇಲಾಖೆಯಲ್ಲಿ ದೊಡ್ಡ ಸ್ವಾತಂತ್ರ್ಯಾಧಿಕಾರದಲ್ಲಿರತಕ್ಕವರಾಗಿಯೂ, ಇತರಮೂವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ವ್ಯಾವಹಾರಿಕಾಧಿಕಾರದವೊಳರತಕ್ಕವರಾಗಿಯೂ, ಕರ್ಣಾಟ ಭಾಷಾವೈಭವನಂ ವಿವಿಧರೂಪರೀತಿ ಕಾವ್ಯಾಲಂಕಾರಾದಿಗಳಂ ವೃದ್ಧಿಗೊಳಿಸಿ ಅನುಭವಪೂರ್ವಕ ಆನಂದಿಸುವ ಸಂಕಲ್ಪ ಕುತೂಹಲವುಳ್ಳವರಾಗಿಯೂ, ಅನೇಕ ನವೀನ ಗ್ರಂಥ ನಿರ್ಮಾಪಕರಾಗಿ, ಇದುವರೆಗೇನೇ ಪ್ರಖ್ಯಾತ್ಯವಂ ಪಡೆದವರಾಗಿಯೂ ಇರುತ್ತಾರಾದಕಾರಣ ಈ ಪಂಡಿತರ ಪಾಂಡಿತ್ಯವು ಕರ್ಣಾಟಭಾಷಾಪಾಂಡಿತ್ಯ ಸಂಪಾದನಾಭಿಲಾಷಿಗಳಿಗೆ ಅನ್ಯತ್ರ ದುರ್ಲಭಗಳಾದ ಪ್ರಯೋಗಲಕ್ಷಣಗಳನ್ನೂ, ಶೈಲಿಯನ್ನೂ, ವಾಕ್ಯಭೇದವನ್ನೂ, ಅಲಂಕಾರ ಸ್ವರೂಪವನ್ನೂ, ವರ್ಣನಾ ವಿಧಾನವನ್ನೂ, ವಿಷಯವಿಮರ್ಶಕತಾ ಕ್ರಮವನ್ನೂ, ಶಬ್ದಗಳ ಧಾತುನಿಷ್ಪನ್ನರೂಪ ಪ್ರದರ್ಶನದಿಂ ವ್ಯಾಕರಣ ಮರ್ಯಾದೆಯನ್ನೂ ಸುಲಭವಾಗಿಬೋಧಿಸತಕ್ಕದ್ದಾಗಿರುವದೇನೂ ಆಶ್ಚರ್ಯವಲ್ಲವು. ಈಗ್ರಂಥಮಾಲೆಯನ್ನೆಲ್ಲರು ಧರಿಸಿ ಆನಂದಿಸಬೇಕೆಂಬ ಕುತೂಹಲದೊಡನೆ ಪಂಡಿತಮಂಡಿತವಾದ ಈ ಗ್ರಂಥದ ಮೌಲ್ಯವಂ ಸುಲಭಪಡಿಸಿ ಅದು ಸರ್ವತ್ರ ಪ್ರಚಾರದೊಳು ತರಲ್ಪಟ್ಟಿರುತಿದೆ. ಪ್ರತಿ ಸಂಚಿಕೆಯಲ್ಲೂ ಮುದ್ರಿಸಲ್ಪಡುತಿರುವ ಆಯಾ

ಗ್ರಂಥಗಳ ಭಾಗಗಳನ್ನು ಕೇಬರಿಸಿಟ್ಟು ಕಡೆಗೆ ಒಂದೇ ಪುಸ್ತಕವಾಗಿ ಬೈಂಡ್ ಮಾಡಿಕೊಳ್ಳಲಿಕ್ಕೆ ಅನುಕೂಲವಾಗಿರುವಂತೆ ಪ್ರತ್ಯೇಕ ಕ್ರಮಸಂಖ್ಯೆಗಳು ಕೊಡಲ್ಪಟ್ಟಿರುತವೆ. ಅತ್ಯಂತೋಪಯುಕ್ತವಾದ ಈ ಪತ್ರಿಕೆಯು ಸರ್ವಜನೋಪಲಾಳನಾರ್ಹವಾಗಿ ಉದ್ದಿಷ್ಟಪ್ರಯೋಜನವಂ ಘಟಿಸುವಂತೆ ಚಿರಕಾಲ ಉಜ್ಜೀವಿಸಿರಬೇಕೆಂಬದಾಗಿ ಕೋರುತ್ತೇವೆ. ವಿದ್ಯಾದಾಯಿನಿ ಎಂಬ ಪತ್ರಿಕೆಯು ಸಹ ವಿದ್ಯಾರ್ಥಿಗಳಿಗೆ ಆವಶ್ಯಕಗಳಾದ ವಿವಿಧವಿಷಯಗಳಿಂದೊಡಗೂಡಿ ಪ್ರಯೋಜನಕರವಾದ ಮಾಸಪತ್ರಿಕೆ ಯೆನಿಸಿರುತದೆ. ಈಗ ನಮಗೆ ಕಳುಹಿಸಲ್ಪಟ್ಟಿರುವ ಸಂಚಿಕೆಯಲ್ಲಿ ಗತಿಸಿದ ಮೆ॥ ಗ್ಯಾಡ್‌ಸ್ಟನ್ನರವರ ಚರಿತ್ರವು ಸಮಗ್ರವಾಗಿ ಪ್ರಕಟಿಸಲ್ಪಟ್ಟಿರುವದರಿಂದ, ಅನೇಕ ಸುಗುಣಗಳಿಂದ ಪ್ರಸಿದ್ಧಿಯುಂಪಡೆದು ಸಕಲರಿಂದಲೂ ಗೌರವಿಸಲ್ಪಡುತಲಿದ್ದ ಸದರೀ ದೊಡ್ಡಮನುಷ್ಯರು ಅವಲಂಬಿಸುತಲಿದ್ದ ಮಾರ್ಗವನ್ನು ನಮ್ಮ ಬಾಲಕರೆಲ್ಲರು ತಿಳಿದು ಅವರು ಪಡೆದಿದ್ದ ಶ್ಲಾಘ್ಯಗುಣಗಳಲ್ಲಿ ಪರಮಾಣುವಷ್ಟನ್ನಾದರು ಪಡೆಯಲೆತ್ನಿಸಲಿಕ್ಕೆ ಪ್ರೋತ್ಸಾಹರೂಪವಾಗಿರುತದೆ. ಬಾಲಕರಿಗೆ ಲೌಕಿಕವ್ಯಾವಹಾರಿಕ ಜ್ಞಾನವರ್ಧಕಗಳಾದ ವ್ಯವಸಾಯಾದಿ ವಿಷಯಗಳು ಕೆಲವು ಆಯಾ ಶಾಸ್ತ್ರಾನುಭವಶಾಲಿಗಳಾದ ಪಂಡಿತರಿಂದ ಬರೆಯಲ್ಪಟ್ಟಿರುತದೆ. ಇದರ ಚಂದಾ ವರ್ಷಕ್ಕೆ ರೂ ೧—೮—೦

ಮದರಾಸ ವೈಸ ಪತ್ರಿಕೆಯ ಹೈದರಾಬಾದ ವೃತ್ತಾಂತ ಲೇಖಕನು ಸದರೀ ಪತ್ರಿಕೆಗೆ ಬರೆದಿರುವ ಕೇಳಲು ಅತ್ಯಾಶ್ಚರ್ಯವಾದ ಒಂದು ವರ್ತಮಾನವನ್ನು ಇದರಿಂದ ತಿಳಿಸುತ್ತೇವೆ —ಹೈದರಾಬಾದಿನಲ್ಲಿ ಒಬ್ಬ ಬ್ರಾಹ್ಮಣನು ಯಾವದೋ ಒಂದು ಪ್ರಬಲ ತಪ್ಪಿತದಬಗ್ಗೆ ಯಾವಜ್ಜೀವಪರ್ಯಂತ ಸಜಾ ವಿಧಿಸಲ್ಪಟ್ಟು ಅನೇಕ ಸಂವತ್ಸರಗಳ ಕಾಲದ ಮೊದಲು ಕಾರಾಗೃಹವಾಸ ಮಾಡುತಲಿದ್ದನು. ಈಗ್ಗೆ ಕೆಲವು ದಿನಗಳ ಹಿಂದೆ, ಸದರೀ ಬ್ರಾಹ್ಮಣನು ಏಳು ವರ್ಷಗಳ ವಯಸ್ಸಿನಲ್ಲಿ ವಿವಾಹ ಮಾಡಿಕೊಂಡಿದ್ದ ಭಾರ್ಯೆಯು ಪ್ರಾಪ್ತವಯಸ್ಕಳಾಗಲು ಆಕೆಯ ತಾಯಿಯು ಆಕೆಯ ಗಂಡನಿಗೆ ಪ್ರಾಪ್ತವಾಗಿದ್ದ ದುರವಸ್ಥೆಯಂ ಮಗಳಿಗೆ ತಿಳಿಸಿದಳು. ಅದನ್ನು ಕೇಳಿ ಸದರೀ ಬಾಲೆಯು ಬಹಳ ದುಃಖಿತೆಯಾಗಿ ಕರ್ತವ್ಯನ್ನರಿಯಲಾರದೆ ಸಂಕಟ ಪಡುತಿದ್ದಳು. ಕಡೆಗೆ ಯಾವ ಉಪಾಯದಿಂದಲಾದರು ಗಂಡನನ್ನು ಜೆಯಿಲ್‌ನಿಂದ ಬಿಡುಗಡೆ ಮಾಡಿಸಿಕೊಂಡು ಬರಬೇಕೆಂದು ನಿಶ್ಚೈಸಿ, ತಾಯಿಯೂ ಮಗಳೂ ಸೇರಿ ಮೆ|ಬಿ. ಬನಸಿಲಾಲ್ ಎಂಬ ದೊಡ್ಡಮನುಷ್ಯರ ಮನೆಗೆ ಹೋಗಿ ತಮ್ಮ ಸಂಗತಿಯನ್ನೆಲ್ಲ ಅವರಿಗೆ ತಿಳಿಸಿದರು. ಅವರು ಸದರೀ ಇಬ್ಬರನ್ನು ಮೆ| ಸುಜನಲಾಲ್ ಎಂಬವರಲ್ಲಿ ಕಳುಹಿಸಿದರು ಈ ದೊಡ್ಡ ಮನುಷ್ಯರು. ಸದರೀ ಬ್ರಾಹ್ಮಣನನ್ನು ಕೂಡಲೇ ಖುಲಾಸೆ ಮಾಡಬೇಕು, ಹಾಗೆ ಮಾಡುವದಕ್ಕಾಗುವದಿಲ್ಲವೆಂದು ಹೇಳುವ ಪಕ್ಷದಲ್ಲಿ ಆತನು ಇನ್ನು ಅನುಭವಿಸಬೇಕಾಗಿರುವ ಖೈದನ್ನು ತಾನು ಅನುಭವಿಸುವದಕ್ಕೆ ಸಿದ್ಧನಾಗಿರುವಂತೆ ಒಪ್ಪಿ ನಿಜಾಂ ಸರ್ಕಾರಕ್ಕೆ ಪಿಟಿಷನ್ ಬರೆದು ಕಳುಹಿಸಿದರು. ಅದಂ ನೋಡಿದ ಕೂಡಲೆ ಘನವಂತರಾದ ನಿಜಾಮರವರು ಸದರೀ ಬ್ರಾಹ್ಮಣನನ್ನು ಜೆಯಿಲ್‌ನಿಂದ ಖುಲಾಸೆ ಮಾಡುವಂತೆ ಹುಕುಂ ಕೊಟ್ಟರು. ತನ್ನ ಪತಿಯ ದರ್ಶನಾಪೇಕ್ಷೆಯೊಡನೆ ಕೇವಲ ಚಿಂತಿಸುತಲಿದ್ದ ಸದರೀ ಅಬಲೆಗೆ ಈ ವರ್ತಮಾನವಂ ಕೇಳಿದ ಕೂಡಲೆ ಉಂಟಾದ ಸಂತೋಷಾತಿಶಯವು ಯಾವ ತೆರನಾದುದಾಗಿರುವುದೋ ಅದಂ ಈ ಪತ್ರಿಕೆಯನ್ನೋದುವಂತವರೇ ಊಹಿಸಿ ತಿಳಿದುಕೊಳ್ಳಬಹುದು. ಗಂಡನು ನಿರ್ಬಂಧದಿಂ ವಿಮುಕ್ತನಾಗಿ ಬಂದ ಕೂಡಲೆ, ಆತನು ತನ್ನ ಭಾರ್ಯೆಯಂ ಕರೆದುಕೊಂಡು ಮೆ॥ ಸುಜನಲಾಲ್ ಎಂಬವರ ಮನೆಗೆ ಹೋಗಿ ಅವರಿಗೆ ಸಾಷ್ಟಾಂಗಪ್ರಣಾಮಪೂರ್ವಕವಾದ ತಮ್ಮ ಕೃತಜ್ಞತೆಯನ್ನರುಹಿದನು. ಅದರಮೇಲೆ ಮೆ॥ ಸುಜನಲಾಲ್ ಎಂಬವರು ಅವರಿಗೆ ದಾರಿಖರ್ಚಿಗೆಕೊಟ್ಟು ಗಂಗಾಯಾತ್ರೆ ಹೋಗಿಬರುವಂತೆ ಹೇಳಿಕಳುಹಿಸಿ ಅವರು ಆರೀತಿ ಲೋಕಪಾವನಿಯಾದ ಗಂಗಾಸ್ನಾನವಂಮಾಡಿಕೊಂಡು ಬಂದರಾಗಿ ಬ್ರಾಹ್ಮಣ ಮಂಡಲಿಗೆ ಸೇರಿಸಿಕೊಳ್ಳಲ್ಪಟ್ಟರು, ಎಂಬುದು.

Occasional Notes.
ನೈಮಿತ್ತಿಕವಿಷಯನ್ಯಾಸ.

ಕಲ್ಕತ್ತೆಯಲ್ಲಿ ಪ್ರಾಪ್ತವಾಗಿರುವುದು ಪ್ಲೇಗ ಜಾಡ್ಯ ಅಥವಾ ಅಲ್ಲವೆಂಬುವ ವಿಷಯದಲ್ಲಿ ಡಾಕ್ಟರಗಳ ಅಭಿಪ್ರಾಯಗಳು ಭಿನ್ನಗಳಾಗಿರುತವೆ. ಅದು ಹ್ಯಾಗಾದರು ಇರಲಿ. ಸದರೀ ರೋಗವು ಈಗ ನಿವೃತ್ತಿಯಾಗುತಲಿದೆಯೆಂದು ತಿಳಿದು ಬಹಳ ಸಂತೋಷಿಸುತ್ತೇವೆ.

ಈಗ್ಗೆ ಎರಡು ತಿಂಗಳಹಿಂದೆ ಕಲ್ಕತ್ತೆಗೆ ಸೇರಿದ ಬ್ಯಾರಕಪೂರ ಎಂಬ ಪ್ರದೇಶದೊಳು ಮೂವರು ಸೋಲ್ಜರುಗಳು ಮನಸ್ವೀ ಕುಡಿದುಬಂದು ಒಂದು ಔಷಧಶಾಲೆಯಲ್ಲಿ ಪ್ರವೇಶಿಸಿ, ಅದರ ಯಜಮಾನರಾದ ಡಾಕ್ಟರ್‌ಸರ್ಕಾರ ಎಂಬವರನ್ನು ಹೊಡೆದು ಬಲವಾಗಿ ಘಾಯಪಡಿಸಿದ ಅಪರಾಧದ ಬಗ್ಗೆ ಕಲ್ಕತ್ತಾ ಹೈಕೋರ್ಟ ಸೆಷನ್ ವಿಚಾರಣೆಯಲ್ಲಿ ಜೂರಿಗಳು ಕೊಟ್ಟ ಅಭಿಪ್ರಾಯವನ್ನನುಸರಿಸಿ ಸದರೀ ಮೂವರು ಸೋಲ್ಜರುಗಳೂ ಘೀ ಇನುಂ ಏಳು ವರ್ಷಗಳ ಕಠಿಣಕೈದ ಸಜಾ ವಿಧಿಸಲ್ಪಟ್ಟರು.

ಮದರಾಸ ಬ್ಯಾಂಕ ಕ್ಯಾಷಿಯರಾಗಿದ್ದು ಗತಿಸಿದ ಮೆ| ಮನ್ನಿ ರಂಗಾಚಾರ್ಯರೆಂಬವರು ಅವರ ಜೀವಿತಕಾಲದಲ್ಲಿ ತಾಯಿತಂದೆಗಳಿಲ್ಲದ ಬಡವರ ಬಾಲಕರ ಉಪನಯನಾರ್ಥ ಸ್ಥಾಪಿಸಿದ್ದ ಧರ್ಮದ್ರವ್ಯದಿಂದ ಅವರಕುಮಾರರಾದ ಮ ಎ ತಿರುವಳಾಚಾರ್ಯರೆಂಬವರು ಪ್ರತಿಸಂವತ್ಸರದಲ್ಲೂ ಇಬ್ಬರು ಬಾಲಕರಿಗೆ ಉಪನಯನವಂ ಮಾಡಿಸುತಿದ್ದಾರೆ. ಉಪನಯನಾದಿ ಧರ್ಮಕಾರ್ಯಗಳಂ ಶಾಸ್ತ್ರೋಕ್ತವಾಗಿ ನಡೆಸುವಂತೆ ಉಯಿಲ್‌ಮೂಲಕ ತಮ್ಮ ಹಿರಿಯರು ಇಟ್ಟುಹೋದ ಧರ್ಮದ್ರವ್ಯವನ್ನು ಸ್ವಪ್ರತಿಷ್ಠಾರ್ಥವಾಗಿ ವಿನಿಯೋಗಪಡಿಸುತಲಿರುವಂತವರು ಅನೇಕರಿರುತ್ತಾರಾಗಿ ಅಂತವರೆಲ್ಲರು ಮೇಲೆ ತಿಳಿಸಿದ ಮೆ॥ ತಿರುಮಲಾಚಾರ್ಯರವರನ್ನು ನೋಡಿಯಾದರೂ ತಮ್ಮನಡತೆಯನ್ನು ಕ್ರಮಪಡಿಸಿಕೊಳ್ಳಬೇಕೆಂದು ಕೋರುತ್ತೇವೆ.

ಕ್ಯೂಬಾ ಎಂಬ ದ್ವೀಪದವಿಷಯವಾಗಿ ಸ್ಪೈನ್ ದೇಶಿಯರಿಗೂ ಅಮೆರಿಕಾದೇಶದ ಯುನೈಟೆಡ್ ಸ್ಟೇಟ್ಸ್ ಸಂಸ್ಥಾನಕ್ಕೂ ನಡೆದ ಘೋರ ಯುದ್ಧದಲ್ಲಿ ಸ್ಪೈನ್‌ದೇಶದವರು ಪರಾಜಿತರಾಗಿ, ಸಮಾಧಾನವಂ ಬೇಡಬೇಕಾದವರಾಗಿ ಆಬಗ್ಗೆ ವ್ಯವಸ್ಥೆ ನಡೆಯುತಲಿದೆ. ಕ್ಯೂಬಾದ್ವೀಪ ನಿವಾಸಿಗಳ ಸ್ವಸ್ವಾತಂತ್ರ್ಯ ಸಂಪಾದನಾರ್ಥ ಅಮೆರಿಕಾ ದೇಶದವರು ಸ್ಪೈನ್ ದೇಶದವರ ಮೇಲೆ ಯುದ್ಧಮಾಡಿ ಅವರನ್ನು ಜೈಸಿ ಅವರ ಅಧಿಕಾರದಿಂದ ಸದರೀ ದ್ವೀಪವನ್ನು ಬಿಡುಗಡೆಮಾಡಿದ್ದಾಗ್ಯೂ ಈಗ ಸದರೀ ದ್ವೀಪನಿವಾಸಿಗಳು ತಮಗೆ ಸಹಾಯಕರಾಗಿ ಬಂದ ಅಮೆರಿಕಾ ದೇಶದವರನ್ನೇ ಎದರಿಸಿ, ಅವರನ್ನಲ್ಲಿಂದ ಓಡಿಸಿಬಿಟ್ಟು ಸ್ವತಂತ್ರಾಧಿಕಾರವಂ ಸ್ಥಾಪಿಸಿಕೊಳ್ಳಬೇಕೆಂಬ ಉದ್ದೇಶದೊಡನೆ ಅದಕ್ಕೆ ತಕ್ಕ ಸನ್ನಾಹಗಳಂ ಮಾಡತೊಡಗಿರುತ್ತಾರೆ. ಇದರಿಂದ ಅಮೆರಿಕಾದೇಶಿಯರಿಗೆ ಮುಂದಿನ ಅವರ ಕರ್ತವ್ಯ ವಿಷಯದಲ್ಲಿ ಬಹಳ ಚಿಂತೆಯುಂಟಾಗಿದೆ

ಈಚೆಗೆ ಕೋಯಂಬತ್ತೂರು ಡಿಸ್ಟ್ರಿಕ್ಟಿಗೆ ಸೇರಿದ ಕಂಗಾಯಂ ಎಂಬ ಊರಿನಬಳಿ, ಕೆಲವು ಘಂಟೆಗಳ ಕಾಲದೊಳಗಾಗಿ ಒಬ್ಬ ಮನುಷ್ಯನಿಂದ ಒಂಭತ್ತುಮಂದಿ ಖೂನಿ ಮಾಡಲ್ಪಟ್ಟರೆಂದು ಒಬ್ಬ ವೃತ್ತಾಂತಲೇಖಕರು ಮದರಾಸ ಮೆಯಿಲ್ ಪತ್ರಿಕೆಗೆ ಬರೆದಿರುತ್ತಾರೆ. ಈ ದುರಾತ್ಮನು ಘೋರತರವಾದ ಈ ಕೃತ್ಯವಂ ನಡೆಸಿಬಿಟ್ಟು ತಲೆಮರೆಯಾಗಬೇಕೆಂಬ ಯೋಚನೆಯಿಂದ ತನ್ನ ಒಡಹುಟ್ಟಿದವಳ ಮನೆಗೆ ಹೋಗಲು ಆಕೆಗೆ ಈ ವರ್ತಮಾನ ತಿಳಿದು ತನ್ನ ಮನೆಯೊಳಗೆ ಅವನನ್ನು ಬರಗೊಳಿಸಲಿಲ್ಲವಾಗಿ ತಾನಾಗಿ ಪೋಲೀಸಿನವರಿಗೆ ಸಿಕ್ಕಿಬಿದ್ದನು. ಇಂತ ದುಷ್ಕೃತ್ಯವಂ ನಡೆಸಿದ್ದಕ್ಕೆ ಉಂಟಾದಕಾರಣವಮಾತ್ರ ಯಾರಿಗೂ ಗೊತ್ತಾಗಲಿಲ್ಲವು. ಮೊದಲು ಸಣ್ಣ ವಯಸ್ಸಿನ ಇಬ್ಬರು ಹೆಂಗುಸರನ್ನು ಕೊಲೆಮಾಡಿದನು, ತರುವಾಯ ತಾನುಮಾಡಿದಕೃತ್ಯವು ಹೊರಗಾಗದಿರಬೇಕೆಂಬ ಉದ್ದೇಶದಿಂದ ಇತರರನ್ನು ಕೊಂದುಹಾಕಿದನು, ಇದರಲ್ಲಿ ಇಬ್ಬರು ಮಕ್ಕಳು ಕೊಲ್ಲಲ್ಪಟ್ಟರು. ಈ ಮೊಕದ್ದಮೆಯ ವಿಚಾರಣೆಯಲ್ಲಿ ಹೊರಗಾಗಬಹುದಾದ ವಿಶೇಷಾಂಶಗಳನ್ನು ಇದರ ಪರ್ಯವಸಾನವನ್ನೂ ಮುಂದೆ ಪ್ರಕಟಿಸುವೆವು. ಈ ಪತ್ರಿಕೆಯ ಮತ್ತೊಂದುಕಡೆ ಪ್ರಕಟಿಸಲ್ಪಟ್ಟಿರುವ ಶೀರ್ವದ ಖೂನೀ ಮೊಕದ್ದಮೆಗೆ ಇದು ವಿಕಾರಿದ್ದಾಗಿದೆ

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತವೃತ್ತಾಂತಗಳು.

ನಾಳೆಯದಿನ ಉಪಾಕರ್ಮ ವಾದುದರಿಂದ ಆ ಬಗ್ಗೆ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾಕೊಡಲ್ಪಟ್ಟಿದೆ.

ಮುಂದಿನ ಬೃಹಸ್ಪತಿವಾರದದಿನ ಇಲ್ಲಿ ನಾಡರೆ ಜಾಜಿಗೆ ಪ್ರಾರಂಭವಾಗಿ ಐದನಿಟ್ಟು ದಿನ ನಾಲ್ಕರಪವೆ ನಡೆಯುವುದು.

ಲಾಲಬಾಗ ತೋಟದಲ್ಲಿ ಪುಷ್ಪಫಲ ಪ್ರದರ್ಶನೋತ್ಸವವು ನಾಳೆಯದಿನ ನಡೆಯುವದೆಂದು ಕೇಳುತ್ತೇವೆ.

ಹುಬ್ಬಳ್ಳಿಯೊಳು ಕಳೆದ ತಿಂಗಳ ೨೦ನೆಯ ತಾರೀಖಿನಲ್ಲಿ ೧೨ ಮಂದಿಗೆ, ೨೧ನೆಯ ತಾರೀಖಿನಲ್ಲಿ ೩೮ ಮಂದಿಗೆ, ೨೨ನೆಯ ತಾರೀಖಿನಲ್ಲಿ ೨೦ ಮಂದಿಗೆ, ೨೩ನೆಯ ತಾರೀಖಿನಲ್ಲಿ ೨೦ ಮಂದಿಗೆ, ೨೪ನೇ ತಾರೀಖಿನಲ್ಲಿ ೨೧ ಮಂದಿಗೆ ಪ್ಲೇಗ್ ರೋಗ ತಗಲಿದಂತೆ ವರ್ತಮಾನವುಂಟಾದೆ

ಕಳೆದ ಜೂನ್ ತಿಂಗಳ ಆಖೈರಿಗೆ ಖೈದಾದ ಸರ್ಕಾರ ಸಾಲಿನಲ್ಲಿ ಹೊಸ ಕಾಮಗಾರಿಗಳು, ಹಳೆ ಕಟ್ಟಡಗಳ ರಿಪೇರಿಗಳು, ನೀರಾವರಿ ಕೆಲಸಗಳು, ಅದಮನೆಯ ಕಾಮಗಾರಿಗಳು, ಶಿಬ್ಬಂದಿ ಖರ್ಚುಗಳು ಮತ್ತು ಕೊರಮುಬ್ಬುಗಳು ವಗೈರೆಯಬಗ್ಗೆ ಈಸಂಸ್ಥಾನದ ಮರಮ್ಮತ್ ಇಲಾಖೆಯ ೩೩೮ ಲಕ್ಷ ರೂಪಾಯಿಗಳು ಖರ್ಚಾಗಿರುವಂತೆ ಲೆಕ್ಕಮಾಡಲ್ಪಟ್ಟಿರುತದೆಂದು ಕೇಳುತ್ತೇವೆ

ಮೈಸೂರು ಗವರ್ನಮೆಂಟ ಪ್ರೆಸ್ ಆಫೀಸಿನಲ್ಲಿ ದಿನೇದಿನೇ ಕೆಲಸಗಳು ಹೆಚ್ಚುತಬಂದು ಸ್ಥಳ ಸಾಲದ್ದಾಗಿ ಕಂಡುಬಂದುದರಿಂದ, ಈಗಿನ ಕಟ್ಟಡವನ್ನು ಬಡಾಯಿಸಬೇಕಾದ್ದಾವಶ್ಯಕವೆಂದು ಗವರ್ನಮೆಂಟನವರಿಗೆ ತೋರಿ, ಆಬಗ್ಗೆ ಅಂದಾಜ ಪಟ್ಟಿಯನ್ನು ತಯಾರ್ಮಾಡಿ ಕಳುಹಿಸಿಕೊಡುವಂತೆ ಚೀಫ್‌ಇಂಜನಿಯರವರಿಗೆ ಹುಕುಂ ಆಗಿರುವಂತೆ ಒಳದೇಶದ ಡೆಯಿಲೀಪೋಸ್ಟ ಎಂಬ ಪತ್ರಿಕೆ ತಿಳಿಸುತದೆ.

ಈ ದೇಶದ ಅಗ್ರಿಕಲ್‌ಚರಲ್ ಬ್ಯಾಂಕುಗಳ ಪ್ರೆಸಿಡೆಂಟರುಗಳು ಮತ್ತು ಏಜಂಟರು ಲಿಫಾಫೆಯ ಮೇಲ್ಗಡೆ ಕೈಫಿಯತ ನಮೂದಿ ಕಳುಹಿಸಿಕೊಡುವ ಲಕೋಟೆ ವಗೈರೆಗಳನ್ನು ಸರ್ಕಾರೀಯಾಗಿ ಭಾವಿಸಿ ಹಾಸಲಿಲ್ಲದೆ ರವಾನಿಸುವಂತೆ ಪೋಸ್ಟಾಫೀಸ ಅಧಿಕಾರಿಗಳಿಗೆ ಶಿಫಾರಸ ಮಾಡಬೇಕೆಂದು ಸದರೀ ಬ್ಯಾಂಕ್‌ಗಳ ಇನ್ಸ್‌ಪೆಕ್ಟರವರು ಗವರ್ನಮೆಂಟಿಗೆ ಶಿಫಾರಸ ಮಾಡಿದ್ದಕ್ಕೆ, ಸದರೀ ಬ್ಯಾಂಕ್‌ಗಳು ಸರ್ಕಾರಿಯಲ್ಲವೆಂತಲೂ, ಅವುಗಳ ಮೆಂಬರ್‌ಗಳಾಗಲಿ ಇತರ ಅಧಿಕಾರಿಗಳಾಗಲಿ ಸರ್ಕಾರ್ ನೌಕರರಲ್ಲವೆಂತಲೂ, ಆದುದರಿಂದ ಆರೀತಿ ಶಿಫಾರಸ ಮಾಡುವದಕ್ಕಾಗುವದಿಲ್ಲವೆಂತಲೂ ಗವರ್ನಮೆಂಟನವರು ಜವಾಬ ಕೊಟ್ಟಂತೆ ಕೇಳುತ್ತೇವೆ.

ಕಳೆದ ತಿಂಗಳ ೨೩ನೇ ತಾರೀಖಿಗೆ ಖೈದಾದ ವಾರದ ಬಾಬತು ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಹಾಸನ (ಮಂಜರಾಬಾದ್ ವಿನಾ) ಚಿತ್ರದುರ್ಗ, ಈ ಆರು ಡಿಸ್ಟ್ರಿಕ್ಟ್‌ಗಳಲ್ಲೂ ವರ್ಷವು ಪ್ರಾಯಶಃ ಇಲ್ಲವು. ಅಥವಾ ಬಿದ್ದಕಡೆಗಳಲ್ಲಿ ಅತ್ಯಲ್ಪವೆಂದು ತಿಳಿಯಬರುತದೆ ಅದರಿಂದೀಚೆಗೆ ಅಂದರೆ ಕಳೆದವಾರದ ಆದಿಭಾಗದಲ್ಲಿ ಎರಡು ಮೂರು ದಿನಗಳು ಸದಾ ಮೋಡವಾದುತ ಆಗಿಂದಾಗ್ಗೆ ಬೀಳುತಲಿದ್ದ ವರ್ಷವು ತಾಲ್ಲೂಕುಗಳಲ್ಲೂಬಿದ್ದು ರಾಗಿಯ ಪೆರಾವ್ ಕೆಲಸವು ನಡೆದೂ ನಡೆಯುತಲೂ ಇರುವಂತೆ ಕೇಳುತ್ತೇವೆ ಪುಣಜಿ ಸಾಗುವಳಿಗೆ ಅವಕಾಶವುಂಟಾಗದ್ದ ಪ್ರದೇಶಗಳು ವಿನಾ ಅನ್ಯತ್ರ ತರೀ ಸಾಗುವಳಿ ನಿತರಾಂ ಇಲ್ಲವು. ಪ್ರಾಯಶಃ ಕಾಲವೂ ಅತಿಕ್ರಮಿಸುತ ಬಂದಂತೆಯೇ ಹೇಳಬೇಕಾಗಿದೆ ಈ ದುಃಸ್ಥಿತಿಯು ಕೆರೆಗಳ ನೀರನ್ನು ನಂಬಿದವರಿಗೆ ಯಾವಾಗ್ಗೂ ತಪ್ಪಿದ್ದಲ್ಲವು.

ಈಗ ಹುಬ್ಬಳ್ಳಿಯಲ್ಲಿ ಪ್ರಾಪ್ತವಾಗಿ ಪ್ರಾಣಹಾನಿಗಳನ್ನುಂಟು ಮಾಡುತಲಿರುವ ಪ್ಲೇಗ ರೋಗದ ವ್ಯಾಪಕತೆಯಂ ನಿರೋಧಿಸಿ ಅಣಗಿಸಬೇಕಾದ ವಿಷಯದಲ್ಲಿ ಆಬಗ್ಗೆ ನಿಯಮಿತರಾಗಿರುವ ಅಧಿಕಾರಿಗಳಿಂದ ಉಪಯೋಗಮಾಡಲ್ಪಡುತಿರುವ ಪಕ್ಷಪಾತ ಪ್ರೇರಿತಗಳಾದ ನಿರ್ಬಂಧಗಳನ್ನಾಲಿಸಿ ಅಲ್ಲಿನ ಜನರು ಕೇವಲ ಅಸಮಾಧಾನಗೊಂಡಿರುವಂತೆ ಕಾಣುತಿದೆ ಮುಂಬೈ ಗವರ್ನಮೆಂಟಿಗೆ ಸೇರಿದ ಪ್ರದೇಶದಲ್ಲಿಮಾತ್ರ ಇಂತ ನಿರ್ಬಂಧಗಳುಂಟು ಮಾಡಲ್ಪಡುತಿವೆಯೇ ಹೊರತು ಕಲ್ಕತ್ತಾ ಮೊದಲಾದ ಇತರಪ್ರದೇಶಗಳಲ್ಲಿಲ್ಲವು. ಅಲ್ಲಿ ಸರ್ಕಾರದವರೂ ಪ್ರಜೆಗಳೂಸೇರಿ ಐಕಮತ್ಯದೊಡನೆ ಪ್ಲೇಗರೋಗ ನಿವಾರಕ ಕಾರ್ಯಗಳಂ ತೃಪ್ತಿಕರವಾಗಿ ನಡೆಸುತಲಿದಾರೆ ಅದರ ಪರಿಶ್ರಮಕ್ಕೆ ಅನುಗುಣವಾದ ಫಲವೂ ಉಂಟಾಗುತಲಿದೆ ಈ ವಿಷಯದಲ್ಲಿ ಮುಂಬೈ ಗವರ್ನಮೆಂಟಿಗುಂಟಾದ ಅಪಪ್ರಥೆಗೆ ಅವರಿಂದ ನಿಯಮಿತರಾದ ತಾಬೇದಾರಿ ಅಧಿಕಾರಿಗಳಿಂದ ಅನುಸರಿಸಲ್ಪಡುತಿರುವ ಐಚ್ಛಿಕವ್ಯಾಪಾರಗಳೇ ಕಾರಣವೆಂದು ತೋರುತಿದೆ ಹುಬ್ಬಳ್ಳಿಯಲ್ಲಿ ಈ ರೋಗದಮೂಲಕ ಇದುವರೆಗೆ ನಾನೂರುಮಂದಿಗೆ ಮೇಲ್ಪಟ್ಟು ಮೃತಪಟ್ಟರೆಂದು ತಿಳಿದು ಬಹಳ ವಿಷಾದಿಸುತ್ತೇವೆ.

ಕಳೆದವಾರದ ಮೈಸೂರು ವೃತ್ತಾಂತಪತ್ರಿಕೆಯಿಂದ ಸಂಗ್ರಹಿಸಿ ಈಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಿರುವ ಸೀರಾವೃತ್ತಾಂತಲೇಖಕರ ಲೇಖನದಲ್ಲಿ ತಿಳಿಸಲ್ಪಟ್ಟಿರುವ ಘೋರತರವಾದ ಮತ್ತು ಕೇವಲ ಹೃದಯವ್ಯಥಾಕಾರಿಯಾದ ಖೂನಿಗಳದೆಸೆಯಿಂದ ಸದರೀ ತಾಲ್ಲೂಕು ಬಹಳ ಬೇಬಂದಿನಲ್ಲಿರುವಂತೆ ಕಾಣುತಿದೆ. ಒಂದುಮನೆಯೊಳು ಏಕಕಾಲದಲ್ಲಿ ಆರುಮಂದಿಯನ್ನು ಖೂನಿ ಮಾಡಬೇಕಾಗಿದ್ದರೆ ಒಬ್ಬನಿಂದ ಸುತರಾಂ ಸಾಧ್ಯವಾಗಲಾರದು. ಕೆಲವರು ಸೇರಿ ಮುಂದಾಗಿ ಸರ್ವಸನ್ನಾಹಗಳಂ ಮಾಡಿಕೊಂಡು, ತಕ್ಕ ಸಮಯವಂ ನಿರೀಕ್ಷಿಸುತಲಿದ್ದು ಈ ದುಷ್ಕೃತ್ಯವಂ ನಡೆಸಿರಬೇಕೆಂದು ಊಹಿಸುವದಕ್ಕೆ ಅವಕಾಶವಿಲ್ಲದೆ ಹೋಗಲಿಲ್ಲವು. ಈ ಮೊಕದ್ದಮೆಯ ಪತ್ತೆಯ ವಿಷಯದಲ್ಲಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಅಧಿಕಾರಿಗಳೂ ಪೋಲೀಸ ಅಧಿಕಾರಿಗಳೂ ಸೇರಿ ನ್ಯಾಯ್ಯವಾದ ಸರ್ವಪ್ರಯತ್ನಗಳಮೂಲಕ ಈ ಸತ್ತ ಘೋರಕೃತ್ಯವಂ ನಡೆಸಿದ ಘಾತುಕರಂ ಕಂಡು ಹಿಡಿದು ಅವರು ದಂಡನೆಗೆ ಗುರಿಮಾಡುವರೆಂದು ನಂಬುತ್ತೇವೆ. ಈಚೆಗೆ ಈ ದೇಶದೊಳು, ಖೂನಿಗಳು, ದರೋಡೆಗಳು, ಕಳವುಗಳು, ಮತ್ತು ಕೆಡುಕುಗಳು ದಿನೇದಿನೆ ನಿಶ್ಶಂಕವಾಗಿ ಬಲವಡುತ ಬರುವಬಗ್ಗೆ ಬಹಳ ಚಿಂತಿಸುತ್ತೇವೆ.

ಶ್ರೀಮನ್ಮಹಾರಾಜರವರಿಗೆ ಅನುರೂಪೆಯಾದ ಒಂದು ಕನ್ಯೆಯನ್ನು, ಮೂರನೆಯ ರಾಜಪುತ್ರಿಯವರಿಗೆ ಅನುರೂಪನಾದ ಒಬ್ಬ ವರನನ್ನೂ ನೋಡಿಕೊಂಡು ಬರುವದಕ್ಕಾಗಿ ದಿವಾನರು ಮೊದಲಾದವರು ಉತ್ತರದೇಶದಲ್ಲಿನ ನೇಟಿವ್ ಸಂಸ್ಥಾನಗಳಿಗೆ ಪ್ರಯಾಣೋನ್ಮುಖರಾಗಿರುತ್ತಾರೆಂದು ಈಗ್ಗೆ ಸುಮಾರು ಒಂದು ತಿಂಗಳ ಕಾಲದ ಮೊದಲು ಪ್ರಸ್ತಾಪಿಸಲ್ಪಡುತಲಿತ್ತಷ್ಟೆ. ಈ ಏರ್ಪಾಡು ಯಾವ ಕಾರಣದಿಂದಲೋ ಈಚೆಗೆ ಬದಲಾಯಿಸಲ್ಪಟ್ಟು, ದಿವಾನರವರ ಪ್ರಯಾಣವು ನಿಂತುಹೋಗಿ, ಈ ಪ್ರಬಲ ಕಾರ್ಯಕ್ಕೆ ಮೆ| ಪಿ. ಎನ್ ಕೃಷ್ಣಮೂರ್ತಿಯವರು ನಿಯಮಿತರಾಗಿ ಕಳೆದ ಬೃಹಸ್ಪತಿವಾರದದಿನ ರಾತ್ರಿ ಗುಜರಾತ ದೇಶಕ್ಕೆ ಪ್ರಯಾಣ ಮಾಡಿದರು. ಮೆ॥ ಕೃಷ್ಣಮೂರ್ತಿಯವರ ಜತೆಯಲ್ಲಿ ಮೆ॥ ಕಾಂತರಾಜ ಅರಸಿನವರು, ಮೆ॥ ಲಿಂಗಪ್ಪಾಜಿ ಅರಸಿನವರು ಸಹ ಹೋಗಿರುತ್ತಾರೆಂದು ಕೇಳುತ್ತೇವೆ. ಶ್ರೀಮನ್ಮಹಾರಾಜರವರಿಗೆ ಇಲ್ಲಿನ ಅರಸುಬಂಧುವರ್ಗದಲ್ಲೇ ಸರ್ವ ವಿಷಯದಲ್ಲೂ ಅನುರೂಪೆಯಾದ ಒಂದುಕನ್ಯೆ ಇರುತದೆ, ಪ್ರಾಯಶಃ ಅದೇ ಘಟಿಸಬಹುದೆಂದು ಈಗ್ಗೆ ಎರಡು ಮೂರು ವರ್ಷಗಳ ಕಾಲದ ಮೊದಲು ಪ್ರಸ್ತಾಪಿಸಲ್ಪಡುತಿದ್ದ ಅಂತ ಸಂಕಲ್ಪವು ಈಗ ಬದಲಾಯಿಸಲ್ಪಡುವದಕ್ಕೆ ಯಾವದೋ ಒಂದು ಪ್ರಬಲ ಕಾರಣವಿರಬೇಕೆಂದು ತೋರುತದೆ.

ಈ ತಿಂಗಳ ೧೨ ನೇ ತಾರೀಖು ಮಂಗಳವಾರ ೩ ಘಂಟೆ ಸಮಯದಲ್ಲಿ ತಿಪ್ಟೂರು ತಾಲೋಕಿಗೆ ಸೇರಿದ ಮಲ್ಲೇದೇವರ ಪಾಳ್ಯಕ್ಕೆ ಬೆಂಕಿ ಬಿದ್ದು, ಆ ಪಾಳ್ಯದಲ್ಲಿದ್ದ ಒಂದು ಮಾಳಿಗೆಮನೆ ವಿನಾ ಬಾಕಿ ಎಲ್ಲಾ ಮನೆಗಳು ಸುಟ್ಟುಹೋದವು. ಆ ಮನೆಗಳಲ್ಲಿದ್ದ ಸುಮಾರು ಎಂಟು ಸಾವಿರ ಕೊಬ್ಬರಿ ಕಾಯಿಗಳು, ದವಸ ಧಾನ್ಯಗಳು ಮತ್ತು ಆ ಪಾಳ್ಯದ ಸಮೀಪದಲ್ಲಿದ್ದ ಒಂದು ಭಾರಿ ಹುಲ್ಲುಬಣವೆ, ಒಂದು ಅರಳೆಮರ, ಒಂದು ಹುಣಸೇ ಮರ ಸಹ ಸುಟ್ಟುಹೋದವು ಮಟ್ಟ ಸಹಿತವಾದ ಕೊಬ್ಬರಿ ಕಾಯಿಗಳಿಗೆ ಬೆಂಕಿ ಬಿದ್ದದ್ದರಿಂದ ಆರಿಸಲು ಅವಕಾಶವಾಗದೆ ಹೋಯಿತು ಈಗ ಆ ಪಾಳ್ಯದ ಜನರ ಸ್ಥಿತಿಯು ಬಹು ಪರಿತಾಪಕರವಾದ್ದಾಗಿರುತ್ತೆ —ವೃ ಪ

ಒಬ್ಬ ಮನುಷ್ಯನು ಪಶ್ಚಿಮವಾಹಿನಿಗೆ ಬಂದು ತಾನು ಸೂಪರ್ ವೈಜರ್ ಎಂಬ ಅಧಿಕಾರಿ ಎಂದೂ, ತನಗೆ ೧೫೦ ರೂ ಸಂಬಳ ಬರುತದೆಂದೂ ಜನರಿಗೆ ಹೇಳಿ, ಕೆಲವು ಅಂಗಡಿಗಳಿಗೆ ಹೋಗಿ, ನೋಟ್ಸು ಮುರಿಸಿ ಹಣ ಕೊಡುತ್ತೇನೆಂಬದಾಗಿ ಅವರಿಗೆ ಆಶೆಹುಟ್ಟಿಸಿ, ಜಿನಿಸಿಗಳನ್ನು ತೆಗೆದುಕೊಂಡು, ಬ್ರಾಹ್ಮಣರೇ ಮುಂತಾದವರಿಗೆ ಸಮಾರಾಧನೆಯನ್ನು ಮಾಡಿಸಿದ್ದು ಮಾತ್ರವಲ್ಲದೆ, ಗುರುವಾರರಾತ್ರಿ ಸೂಳೆಯರ ಗಾನ ಹರಿಕಥೆಗಳನ್ನು ಮಾಡಿಸಿದನು ಅವನು ವ್ಯಾಪಾರಸ್ಥರಿಗೆ ಮೋಸಮಾಡಿ, ರೈಲುಹತ್ತಿ ಮುಂದಕ್ಕೆ ಹೋಗುವದರೊಳಗಾಗಿ ಪೊಲೀಸಿನವರಿಂದ ಶ್ರೀರಂಗಪಟ್ಟಣದ ಸ್ಟೇಷನ್ ಹತ್ತಿರ ಹಿಡಿಯಲ್ಪಟ್ಟು, ಲಾಕಪಿನಲ್ಲಿರುತ್ತಾನೆ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಾರೆ—ವೃ ಪ.

ಸೀರಾತಾಲ್ಲೂಕು ಹೊಸಕುಂಟೆ ಸಂಮತು ಬೇವಿನಹಳ್ಳಿ ಪಟೇಲನು ಅಲ್ಲಿ ಖೂನಿ ಆಗಿದೆಯೆಂದು ಜುಲೈ ೧೮ ರಲ್ಲಿ ರಿಪೋರ್ಟ ಮಾಡಿದ್ದರ ಮೇಲೆ ಕೂಡ್ಲೆ ಅ|| ಇನಸ್ಪೆಕ್ಟರು, ಅಮಲ್ದಾರು, ಆಸ್ಪತ್ರೆ ಅಸಿಸ್ಟೆಂಟರು ಬೇಕಾದ ಸಿಬ್ಬಂದಿಯನ್ನು ಕರೆದುಕೊಂಡು, ಮೇಲ್ಕಂಡ ಗ್ರಾಮಕ್ಕೆ ಹೋಗಿ, ಅಲ್ಲಿ ವೈಕ್ಯರ ವೆಂಕಟಪ್ಪನೆಂಬವನ ಮನೆಯಲ್ಲಿ ಆರು ಜನ ರಕ್ತಮಯವಾಗಿ ಸತ್ತುಬಿದ್ದಿರುವದನ್ನು ಕಂಡು, ಒಡನೆ ತುಮಕೂರು ಡೆಪ್ಯುಟಿಕಮಿಷನರಿಗೂ, ಪೊಲೀಸ್ ಅಸಿಸ್ಟೆಂಟರಿಗೂ ಎಕ್ಸ್‌ಪ್ರೆಸ್ ಕಳುಹಿಸಿದರು ಒಡನೆ ಒಳಗೆ ಬಂದು ಬಾಗಲು ತೆರೆದು ನೋಡಲಾಗಿ ಮನೆ ತುಂಬಾ ಹೆಣಗಳೂ ರಕ್ತಮಯವೂ ಆಗಿತ್ತು ಇದನ್ನು ನೋಡಿ, ಕೇಳುವವರ ಮೈಕೆ ಅಶ್ರುಧಾರೆಗಳನ್ನು ಸುರಿಸದೆ ಇರುವವರು ಒಬ್ಬರೂ ಇಲ್ಲವು. ಬಿದ್ದಿದ್ದ ಹೆಣಗಳಲ್ಲಿ—

೧ ನೇ ವೆಂಕಟಪ್ಪ —ಈತನ ವಯಸ್ಸು ೩೦, ಈತನ ಕುತ್ತಿಗೆಯನ್ನು ಕಡಿದು ಅಲ್ಲಲ್ಲಿ ಗಾಯಮಾಡಿ ಕೊಂದಿದ್ದರು

೨ ನೇ ಅಜ್ಜಮ್ಮ—ಮೇಲ್ಕಂಡ ವೆಂಕಟಪ್ಪನ ಹೆಂಡತಿ ಈಕೆಗೆ ವಯಸ್ಸು ೪೦ ಈಕೆಯ ಕುತ್ತಿಗೆಯನ್ನು ಕಡಿದು, ಅಲ್ಲಲ್ಲಿ ಗಾಯ ಮಾಡಿದ್ದರು

೩ ನೇ ಸಾರವ್ವ —ಈಕೆ ಮೇಲ್ಕಂಡವನ ನಾದಿನಿ, ೪೦ ವಯಸ್ಸಿನ ಈಕೆಯ ಕುತ್ತಿಗೆಯನ್ನು ಹೊಡೆದು, ಕಿವಿಯು ಹಿಂದೆಯೂ ಇತರ ಕಡೆಗಳಲ್ಲೂ ಘೋರ ಗಾಯಗಳನ್ನು ಮಾಡಿದ್ದರು

೪ ನೇ ಅಜ್ಜಮ್ಮ— ಮೇಲ್ಕಂಡವನ ಸೊಸೆ ಪ್ರಾಯ ೨೦ ಈಕೆಯನ್ನು ಸಹ ಮೇಲ್ಕಂಡ ಹಾಗೆಯೇ ಕೊಂದು ಹಾಕಿದ್ದರು

೫ ನೇ ಹನುಮ —೧ ವರುಷದ ಮಗುವು ವೆಂಕಟಪ್ಪನ ಮೊಮ್ಮಗ ಈ ಮಗುವಿಗೆ ೩-೪ ಕಡೆ ಗಾಯಗಳನ್ನು ಮಾಡಿ ಕೊಂದಿದ್ದರು

೬ ನೇ ರಾಮ—ಇವನು ಮೂರು ವರುಷದ ಬಾಲಕನು ಈ ಎರಡು ಹುಡುಗರೂ ಅಜ್ಜಮ್ಮನ ಮಕ್ಕಳು

ಹೀಗೆ ೬ ಮಂದಿಯನ್ನೂ ಕಳೆದ ೧೭ನೇ ಭಾನುವಾರ ರಾತ್ರಿ ಯಾರೋ ಮೇಲ್ಕಂಡ ಪ್ರಕಾರ ಕತ್ತರಿಸಿ ಹಾಕಿದಾರೆ. ಮುಖ್ಯವಾಗಿ ಅಜ್ಜಮ್ಮ ಸಾರವ್ವ ಎಂಬವರನ್ನು ಬಹಳ ಬಲಾತ್ಕಾರ ಮಾಡಿದ್ದರು. ಅಂದರೆ, ಅವರ ಗುರುತು ತಿಳಿಯದ ಹಾಗೆ ಮುಖದ ಮೇಲೆಲ್ಲ ಕತ್ತಿಯ ಗಾಯದ ಗುಂಡಿಗಳಂತೆ ಕೊಚ್ಚಿಬಿಟ್ಟಿದ್ದರು ಎನ್ನಬಹುದು.

ಇವರೆಲ್ಲರೂ ನಡುಮನೆಯ ಅಂಗಳದಲ್ಲಿ ಗಜದೂರದಲ್ಲಿ ಒಬ್ಬರು, ಮೊಳದೂರದಲ್ಲಿ ಒಬ್ಬರು ಹೀಗೆ ಅಲ್ಲಲ್ಲಿ ಒಂದೇ ಕೋಣೆಯಲ್ಲಿ ಮಲಗಿದ್ದರು. ಇವರು ಎಲ್ಲರೂ ಹ್ಯಾಗೆ ಹ್ಯಾಗೆ ಮಲಗಿದ್ದರೋ ಹಾಗೆ ಹಾಗೆಯೇ ಕೊಲ್ಲಲ್ಪಟ್ಟದ್ದಾರೆ.

ಈ ಯಜಮಾನನ ಮಗನು ವ್ಯಾಪಾರದ ಉದ್ದೇಶದಿಂದ ಅಮರಾಪುರಕ್ಕೆ ಹೋಗಿದ್ದನು. ಆತನಿಲ್ಲದ ಸಮಯದಲ್ಲಿ ಈ ಕೃತ್ಯಗಳು ನಡೆದಿವೆ. ಆತನು ಬಂದ ಮೇಲೆ ಆತನ ಸಂಕಟವನ್ನು ಹೇಳಲಳವಲ್ಲವು, ಎಂಬುದು ವಗೈರೆ—ವೃ ಪ.

THE MYSORE GAZETTE
ಮೈಸೂರು ಗೆಜೆಟ

ತಾರೀಖು ೨೧ನೇ ಜುಲೈ ೧೮೯೮
ಇಷ್ತಿಹಾರ್ ನಾಮೆಗಳು
ಜನರಲ್ ಮತ್ತು ರೆವಿನ್ಯೂ

ತಾ|| ೨೦ನೇ ಜುಲೈ ೧೮೯೮

ನಂ|| ೧೦೩೩-ಮಿ ೨೩೩ —ಪೊಲೀಸ್ ಇಲಾಖೆಯಲ್ಲಿ ಕೆಲಸ ನೋಡುತಲಿರುವ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಬಿ ಜೆ ಕಾವಸಾಸ್‌ಜಿ ನಾಯಿಕ್‌ರು ರೆವಿನ್ಯೂ ಇಲಾಖೆಗೆ ಪುನಃ ವರ್ಗ ಮಾಡಲ್ಪಟ್ಟಿರುತ್ತಾರೆ

ನಂ|| ೧೦೬೬-ಮಿ ೨೩೬—ಪೊಲೀಸ್ ಸೂಪರ್ಂಟೆಂಡೆಂಟರುಗಳು ವ ಅಸಿಸ್ಟೆಂಟ್ ಸೂಪರ್ಂಟೆಂಡೆಂಟರುಗಳ ಇವರಡಿ ಕಂಡ ತಾತ್ಕಾಲಿಕ ನೇಮಕಗಳು, ಬಡ್ತಿಗಳು ಮತ್ತು ನೌಕರರುಗಳಿಗೆ ಹುಕುಂ ಮಾಡಲ್ಪಟ್ಟಿರುತಿವೆ —

ಮ|| ಸಯ್ಯದ್ ಅಬ್ಬಾಸ್ ಹುಸೇನ್ ಯವರು, ಸಿ ಐ.ಇ ಯವರು—ಮೊದಲನೇ ಕ್ಲಾಸಿನ ಪೊಲೀಸ್ ಸೂಪರ್ಂಟೆಂಡೆಂಟರುಗಳಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ

ಮ|| ಡಿ ಎ ಬ್ಯಾಲನ್ಟೈನ್‌ಯವರು—ಎರಡನೇ ಕ್ಲಾಸಿನ ಪೊಲೀಸ್ ಸೂಪರ್ಂಟೆಂಡೆಂಟರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ

ಮ|| ಎಸ್ ಕೃಷ್ಣರಾಯರು, ಮಹಮ್ಮದ್ ಜಿ.ಸಲಿಯವರು—ಎರಡನೇ ಕ್ಲಾಸ್ ಪೊಲೀಸ್ ಅಸಿಸ್ಟೆಂಟ್ ಸೂಪರ್ಂಟೆಂಡೆಂಟರುಗಳಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ

ಪಿ ಕೃಷ್ಣರಾಯರು, ಮೊದಲನೇ ಕ್ಲಾಸಿನ ಪ್ರೊಬೇಷನರಿ ಅಸಿಸ್ಟೆಂಟ್ ಸೂಪರ್ಂಟೆಂಡೆಂಟರು — ಎರಡನೇ ಕ್ಲಾಸಿನ ಸೂಪರ್ಂಟೆಂಡೆಂಟ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ಮ|| ಮಂಜುನಾಥಯ್ಯನವರು, ೨ನೇ ಕ್ಲಾಸಿನ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರು ಮೊದಲನೇ ಕ್ಲಾಸಿನ ಪೊಲೀಸ್ ಅಸಿಸ್ಟೆಂಟ್ ಸೂಪರ್ಂಟೆಂಡೆಂಟ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತಾರೆ

ಎಸ್ ಸಿ ಹೇಮಯವರು, ಪೊಲೀಸಿನ ಪ್ರೊಬೇಷನರಿ ಅಸಿಸ್ಟೆಂಟ್‌ಸೂಪರ್ಂಟೆಂಡೆಂಟರು—ಕ್ರಿಮಿನಲ್ ಟೆಸ್ಟ್ ಪರೀಕ್ಷೆಯನ್ನು ಪ್ಯಾಸಮಾಡುವದಕ್ಕೆ ಒಳಪಟ್ಟು ಸಬ್‌ಪ್ರೊಟೆಸ್ಟಾಗಿ ೨ನೇ ಕ್ಲಾಸಿನ ಪೊಲೀಸ್ ಅಸಿಸ್ಟೆಂಟ್ ಸೂಪರ್ಂಟೆಂಡೆಂಟ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತಾರೆ

ಮ|| ನಗರ ಸುಬ್ಬರಾಯರು, ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರು ಪೊಲೀಸ್ ಇಲಾಖೆಗೆ ಎರಡನೇ ಕ್ಲಾಸಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ

ತಾ|| ೨೦ನೇ ಜುಲೈ ೧೮೯೮

ನಂ|| ೧೦೩೭-ಮಿ ೨೩೭ – ಅಮಲ್ದಾರರುಗಳ ಇವರಡಿ ಕಂಡ ಬಡ್ತಿಗಳು ಹುಕುಂ ಮಾಡಲ್ಪಟ್ಟಿರುತವೆ —

೨ನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ

೧ ಹಾಸನ ಆರ್ ಶ್ರೀನಿವಾಸರಾಯರು
೨ ಎಚ್ ಕೃಷ್ಣಪ್ಪನವರು
೩ ಕೆ ಶ್ರೀಕಂಠಯ್ಯನವರು

ಮೂರನೇ ಕ್ಲಾಸಿನಿಂದ ಎರಡನೇ ಕ್ಲಾಸಿಗೆ

೧ ಸಿರಾ ಶ್ರೀನಿವಾಸರಾಯರು
೨ ಇಲಿ ಶ್ರೀನಿವಾಸರಾಯರು
೩ ಟಿ ಒಮಾರಾಯರು
೪, ಪ್ಲೇಗ್ ಕೆಲಸದಲ್ಲಿ ಆಕ್ಟಿಂಗ್ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರಾಗಿರುವ ಟಿ ಬ ಪಾವ ರಾಯರಿಗೆ ಬದಲು ಆಕ್ಟಿಂಗ್ ತರಹ ಸಬ್‌ಪ್ರೊಟೆಸ್ಟಾಗಿರುವ ಪಿ ನಂಜುಂಡರಾಯರು ಮಾನಂ

ನಾಲ್ಕನೇ ಕ್ಲಾಸಿನಿಂದ ಮೂರನೇ ಕ್ಲಾಸಿಗೆ

೧ ವಿ ಸುಬ್ಬಪತಿ ಪಿಳ್ಳೆಯವರು
೨ ಬಿ ಆರ್ ಶ್ರೀನಿವಾಸಯ್ಯಂಗಾರ್ಯರು
೩ ಕೆ ಜಿ ರಾಮಣ್ಣನವರು
೪ ಪಿ ನಂಜುಂಡರಾಯರುಯವರಿಗೆ ಬದಲು ಆಕ್ಟಿಂಗ್ ಸಬ್‌ಪ್ರೊಟೆಸ್ಟಾಗಿರುವ ಪಿ ವೇದಾಂತದೇಶಿಗಂ ಅಯ್ಯಂಗಾರ್ಯರು

ನಂ ೧೦೩೮-ಮಿ ೨೩೮—ಸಬ್‌ಪ್ರೊಟೆಸ್ಟ್ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮಹಮ್ಮದ್ ಒಬೆದುಲ್ಲಾ ಯವರು ಸದರೀ ಕೆಲಸದಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ನಂ| ೧೦೦೬-ಮಿ ೨೪೯ —ನವ್ ಅಸಿಸ್ಟೆಂಟ್ ಸರ್ಜನ್ ಮ| ಸಿ ಅಪ್ಪಾದೊರೆ ಮೊದಲಿಯಾರ್, ಎಲ್ ಎಂ ಪ ಎಸ್ ಯವರಿಗೆ ೧೮೯೮ನೇ ಜೂನ್ ೨೦ನೇ ಮಾರ್ಚ ೧೩೩೩—ಮಿ ೪೦೩ನೇ ನಂಬರ್ ಇಷ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾ ಇನ್ನೂ ಮೂವತ್ತು ದಿನಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ

ತಾ|| ೨೦ನೇ ಜುಲೈ ೧೮೯೮.

ನಂ|| ೫೪೦—ರೆ ೨೯—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೭ನೇ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮ|| ೨೦. ಎಸ್ ನಾರ್ರಾಯಣರಾಯರಿಗೆ ೧೮೯೮ನೇ ಆಗಸ್ಟ್ ೫ನೇ ತಾರೀಖಿನಾರಭ್ಯ ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ ಸದರೀ ಡಿಸ್ಟ್ರಿಕ್ಟಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಕೆ. ಶ್ರೀನಿವಾಸರಾಯರು ಸದರೀ ಮ||ಎಂ ಎಸ್ ನಾರಾಯಣರಾಯರು ರಜಾ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರತಕ್ಕದ್ದು

ತಾ|| ೨೫ನೇ ಜುಲೈ ೧೮೯೮

ನಂ||೫೯೦—ರೆ ೨೯೮—ಅಸಿಸ್ಟೆಂಟ್ ಕಮಿಷನರ್ ಮ| ಎಚ್ ವೆಂಕಟರಾಯರನ್ನು ಮೈಸೂರಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ೧೮೯೮ನೇ ಜುಲೈ ೧೨ನೇ ಮಾರ್ಚ ೩೦೧೬—ಮಿ ೧೫೯ನೇ ನಂಬರ್ ಇಷ್ತಿಹಾರ್ನಾಮೆಯಲ್ಲಿ ಹುಕುಂ ಮಾಡಿದ್ದ ವರ್ಗವು ಅವರ ಕೋರಿಕೆಯಂತೆ ರದ್ದು ಮಾಡಲ್ಪಟ್ಟಿರುತ್ತೆ

ನಂ|| ೬೯೮—ರೆ ೨೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೧೯ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡಿ ತಾಲ್ಲೂಕು ಅಮಲ್ದಾರರಾಗಿ ನೌಕರರಾಗಿ ಮಾಡಲ್ಪಟ್ಟಿದ್ದ ಅಬ್ದುಲ್ ಜಲೀಲ್‌ಯವರಿಗೆ ೧೮೯೮ನೇ ಜುಲೈ ೧೫ನೇ ತಾರೀಖಿನ ಲಾಗಾಯಿತು ಸ್ವಂತ ಕೆಲಸಗಳ ಮೇಲೆ ಮೂರು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ

೨ ನೇ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರ ಆಫೀಸಿನ ರಿಕಾರ್ಡ್ ಕೀಪರ್ ಮತ್ತು ಪಾಲಿ ದೇವನಹಳ್ಳಿಯಲ್ಲಿ ಆಕ್ಟಿಂಗ್ ಅಮಲ್ದಾರ್ರಾಗಿದ್ದ ಗುಲಾಂ ಮಹಮ್ಮದ್ ಮಕ್ಕ ಯವರು ಸದರೀ ಅಬ್ದುಲ್ ಜಲೀಲ್‌ಯವರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮಾಗಡಿ ತಾಲ್ಲೂಕಿನ ಅಮಲ್ದಾರ್ ಚ ೩ನೇ ಕ್ಲಾಸ ಮಾಡಿಸ್ಟ್ರೇಟಾಗಿ ಆಕ್ಟಿಂಗ್ ತರಹ ನೌಕರರು ಮಾಡಲ್ಪಟ್ಟಿರುತ್ತಾರೆ, ದೇವನಹಳ್ಳಿಯಲ್ಲಿ ಚಾರ್ಜ ಒಪ್ಪಿಸಿದ ತರುವಾಯ ಕೂಡ್ಲೆ ಕೆಲಸಕ್ಕೆ ದಾಖಲಾಗತಕ್ಕದ್ದು

ತಾ|| ೨೦ನೇ ಜುಲೈ ೧೮೯೮

ನಂ| ೬೯೩-೪೦೧—ಮೈಸೂರು ಪಬ್ಲಿಕ್‌ವರ್ಕ್ಸ್ ಇಲಾಖಾ, ಚೀಫ್ ಇಂಜಿನಿಯರ್ ಸಿಬ್ಬಂದಿಯಲ್ಲಿ ೧೮೯೮ನೇ ಜುಲೈ ೧ನೇ ತಾರೀಖಿನಾರಭ್ಯ ಇವರಡಿ ಕಂಡ ವಾಪಸ್ ಬರೋಣವು ಹುಕುಂ ಮಾಡಲ್ಪಟ್ಟಿರುತ್ತೆ —

ಬೆಂಗಳೂರು ಡಿವಿಜನ್ —ಮ| ಬಿ ಎಸ್ ವೆಂಕಟಾಚಾರಿಯರಯವರು, ಎರಡನೇ ಕ್ಲಾಸ ಎಗ್ಜಿಕ್ಯುಟಿವ್ ಇಂಜಿನಿಯರ್, (ಹಂಗಾಮಿ ದರ್ಜೆ) ಮೂರನೇ ಕ್ಲಾಸ್ ಎಗ್ಜಿಕ್ಯೂಟಿವ್ ಇಂಜಿನಿಯರ್ (ಕಾಯಂ) ಕೆಲಸಕ್ಕೆ, ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ರಜಾದಲ್ಲಿದ್ದ ೨ನೇ ಕ್ಲಾಸ ಎಗ್ಜಿಕ್ಯೂಟಿವ್ ಇಂಜಿನಿಯರ್ ಮ|| ವೈ. ಶ್ರೀನಿವಾಸರಾಯರು ವಾಪಸ್ ಬಂದ ಸಬಬ

ಮೈಸೂರು ಡಿವಿಜನ್—ಮ||ಬಿ ಪಿ ರಘುಪತಿ ನಾಯುಡು ಯವರು, ಮೂರನೇ ಕ್ಲಾಸ ಎಗ್ಜಿಕ್ಯೂಟಿವ್ ಇಂಜಿನಿಯರ್, (ಹಂಗಾಮಿ ದರ್ಜೆ), ನಾಲ್ಕನೇ ಕ್ಲಾಸಿಗೆ ವಾಪಸ್

ಚಿತ್ರದುರ್ಗ ಡಿವಿಜನ್—ಮ|| ಕೆ ಪ್ರಹ್ಲಾದ ರಾಯರು, ನಾಲ್ಕನೇ ಕ್ಲಾಸ ಎಗ್ಜಿಕ್ಯೂಟಿವ್ ಇಂಜಿನಿಯರ್ (ಹಂಗಾಮಿ ದರ್ಜೆ), ಮೊದಲನೇ ಕ್ಲಾಸ್ ಅಸಿಸ್ಟೆಂಟ್ ಇಂಜಿನಿಯರ್ ಕೆಲಸಕ್ಕೆ ವಾಪಸ್

ಕಡೂರು ಡಿವಿಜನ್—ಮ||ಟಿ ಸುಬ್ಬರಾಯರು, ಮೊದಲನೇ ಕ್ಲಾಸ್ ಅಸಿಸ್ಟೆಂಟ್ ಇಂಜಿನಿಯರ್, (ಹಂಗಾಮಿ ದರ್ಜೆ) ಎರಡನೇ ಕ್ಲಾಸ್ ಅಸಿಸ್ಟೆಂಟ್ ಇಂಜಿನಿಯರ್ ಕೆಲಸಕ್ಕೆ ವಾಪಸ್,

ಕೋಲಾರ ಡಿವಿಜನ್—ಮ ಸಿ ಮಾಧವರಾಯರು, ಎರಡನೇ ಕ್ಲಾಸ ಅಸಿಸ್ಟೆಂಟ್ ಇಂಜಿನಿಯರ್ (ಹಂಗಾಮಿ ದರ್ಜೆ) ಮೂರನೇ ಕ್ಲಾಸ್ ಅಸಿಸ್ಟೆಂಟ್ ಇಂಜಿನಿಯರ್ ಕೆಲಸಕ್ಕೆ ವಾಪಸ್

ನಂ||೬೯೮-೪೦೨—ಕಡೂರು ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜಿನಿಯರ್ ಮ|| ಎಚ್ ಸಿ ರೈಸ್‌ಯವರಿಗೆ ಮಾಹೇ ಮಜಕೂರು ೨೫ನೇ ತಾರೀಖಿನ ಲಾಗಾಯಿತು ಯಾ ಅವರು ಹೊರಟ ತಾರೀಖಿನಾರಭ್ಯ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

ತಾರೀಖು ೨೦ನೇ ಜುಲೈ ೧೮೯೮

ನಂ|| ೬೯೯-೪೦೩—ಸ್ಯಾನಿಟರಿ ಇಂಜಿನಿಯರ್ ಸರ್ಕಲಿಗೆ ಸೇರಿದ ಅಸಿಸ್ಟೆಂಟ್ ಇಂಜಿನಿಯರ್ ಮ| ಆರ್ ಪಿ ಸುಂದರಂ ಅಯ್ಯರ್ ಯವರಿಗೆ ಮಾಹೇ ಮಜಕೂರು ೨ನೇ ತಾರೀಖಿನಾರಭ್ಯ ಎರಡು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

SUMMARY OF NEWS.
ವೃತ್ತಾಂತ ಸಂಗ್ರಹವು.

ಲಂಡನ ಶಹರದಲ್ಲಿ ೮೩|| ಲಕ್ಷ ಮನೆಗಳು ಇರುತ್ತಿವೆ; ಪೃಥ್ವಿಯಲ್ಲಿ ಇಂಥ ದೊಡ್ಡ ಶಹರವು ಯಾವದೂ ಇಲ್ಲ

ಚೀನ ಸರಕಾರದವರು ಹಾಂಗ್‌ಕಾಂಗದ ರಕ್ಷಣದ ಸಲುವಾಗಿ ೨೦೦ ಚೌರಸ್ ಮೈಲು ಭೂಮಿಯನ್ನು ೯೯ ವರ್ಷಗಳ ಕರಾರಿನಿಂದ ಬ್ರಿಟಿಷರಿಗೆ ಕೊಟ್ಟರು

ರೇವಾ ಸಂಸ್ಥಾನದ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಯಾವತ್ತು ಸಾರಾಯಿಯ ಅಂಗಡಿಗಳನ್ನು ಬಂದು ಮಾಡಿದ್ದಾರೆ ಇದಕ್ಕೆ ಪಾತ್ರ ಸುಧಾರಣೆ ಎನ್ನಬಹುದು

ಫ್ರೆಂಚರ ಯುದ್ಧ ಹಡಗವು ಅಮೇರಿಕೆಯ ಹತ್ತರ ಜಲಪ್ರವಾಸಿಯನ್ನು ಹೊಂದಿ ೬೦೦ ಜನರು ಒಮ್ಮೆಲೆ ಯಮಪುರವನ್ನು ಸೇರಿದ್ದರಿಂದ ವಿಲಾಯತಿಯಲ್ಲಿ ಹಾಹಾಕಾರವುಂಟಾಗುತ್ತದೆ.

ಪಂಜಾಬದಲ್ಲಿ ೭೫ ಲಕ್ಷ ವ ಮುಸಲ್ಮಾನರೂ ೫೦ ಲಕ್ಷ ಹಿಂದುಗಳೂ ಇದ್ದಾರೆ ಅಲ್ಲಿಯ ತುರಂಗದಲ್ಲಿ ೬೯೧ ಮುಸಲ್ಮಾನ ಕೈದಿಗಳೂ ೩೦ ಹಿಂದು ಕೈದಿಗಳೂ ಇದ್ದಾರೆ. ಹಿಂದುಗಳಿಗಿಂತ ಮುಸಲ್ಮಾನರು ಹೆಚ್ಚು ಅಪರಾಧಿಗಳಾದರಲ್ಲ

ಅಮೇರಿಕದಲ್ಲಿ ಒಬ್ಬ ಶ್ರೀಮಂತನಿರುವನು ಒಂದು ದಿನ ಅವನಿಗೆ ನೋಟುಗಳ ಟೊಪ್ಪಿಗೆಯನ್ನು ಇಟ್ಟುಕೊಳ್ಳುವ ಬಯಕೆಯುಂಟಾದ್ದರಿಂದ ೩೦ ಸಾವಿರ ರೂಪಾಯಿಗಳ ನೋಟುಗಳನ್ನು ಕತ್ತರಿಸಿ ಒಂದು ಟೊಪ್ಪಿಗೆ ಮಾಡಿಸಿ ತಲೆಗೆ ಸಿಗಹಾಕಿಕೊಂಡನು

ರೆಪಕ್ಕಿನಲ್ಲಿ ಜಗನ್ನಾಥನ ರಥೋತ್ಸವವು ಯಾವವಿಧವಾದ ಅಡಚಣೆಯೂ ಇಲ್ಲದೆ ಸುಖವಾಗಿ ನೆರವೇರಿತು. ಅಲ್ಲಿ ಜನಗಳ ಜಾತ್ರೆಯು ಸೇರುವುದರಿಂದ ಪ್ಲೇಗುರೋಗವು ತಲೆದೋರೀತೆಂದು ಬಹಳ ಅಂಜಿಕೆಯುಂಟಾಗಿತ್ತು, ಆದರೆ ದೈವಾನುಗ್ರಹದಿಂದ ಅಲ್ಲಿ ಇದುವರೆಗೂ ಅದು ಸಂಭವಿಸಲಿಲ್ಲ

ಅಫಗಾನಿಸ್ಥಾನದ ಅಮೀರರು ಪರ್ಷಿಯಾ ದೇಶದ ಇಬ್ಬರು ಕೈಗಾರಿಕೆಯವರನ್ನು ತಮ್ಮ ರಾಜಧಾನಿಯಾದ ಕಾಬೂಲ್ ಪಟ್ಟಣಕ್ಕೆ ಕರಿಸಿಕೊಂಡು, ಅವರಿಂದ ಗಾಜಿನ ಸಾಮಾನುಗಳು ತಯಾರಾಗುವಂಥಾ ಕಾರಖಾನೆಗಳನ್ನು ಪ್ರಾರಂಭ ಮಾಡಿಸುತ್ತಿದ್ದಾರೆ.

ಪಂಡಿತ ರಮಾಬಾಯಿಯವರ ಆಶ್ರಮದೊಳಗಿನ ೩೫೦ ಜನ ಬಾಲವಿಧವೆಗಳು ಕ್ರಿಸ್ತ ದೀಕ್ಷೆಯನ್ನು ಹೊಂದಿ ಆ ಆಶ್ರಮದೊಳಗಿನ ಆಸ್ಪತ್ರೆ ಶುಶ್ರೂಷೆಯ ಶಾಲೆಯವರೆಂದು ವರ್ತಮಾನ ಪತ್ರಿಕೆ. ಇದಕ್ಕಿಂತ ಹೆಚ್ಚಿನ ಬೇಸರದ ಸಂಗತಿಯೆಂದರೆ ಕಳೆದ ೧೦ ತಿಂಗಳೊಳಗೆ ಸುಮಾರು ೩೦೦ ವಿಧವೆಗೆ ಬ್ಯಾಪ್ಟಿಸ್ಮ ಸ್ನಾನವಾಗಿರುವದು ಇನ್ನಾದರೂ ಹಿಂದುಗಳು ಜಾಗೃತರಾಗುವರೋ ಇಲ್ಲವೋ ನೋಡಬೇಕು

ಗೋದಾವರೀ ಜಿಲ್ಲೆಯ ಕಲೆಕ್ಟರರಾದ ಮಿ ಬ್ರಾಡಿ ಎಂಬವರು ಥಂಡಿಗೆ ಔಷಧ ಆ ದೇಶದಲ್ಲಿ ಗಾಡಿ ಸಿಕ್ಕಿ ಕೂತು ತಿರುಗಾಡುವ ಸೋಯಿ ಇರುವುದಿಲ್ಲವಾದ್ದರಿಂದ ಪಲ್ಲಕ್ಕಿಯೊಳಗೆ ಕೂತು ಹೋಗುತ್ತಿರುವಾಗ ಬಿಸಿಲು ಬಹಳ ಇದ್ದದರಿಂದ ಸಾಹೇಬರ ಸಂಗಡ ಹೋಗುತ್ತಿದ್ದ ಶಿಪಾಯಿಗೆ ಬಿಸಿಲಿನಿಂದ ಮೂರ್ಛೆ ಬಂದು ಬಿದ್ದನು, ಈ ಪತ ವರ್ತಮಾನ ಕಲೆಕ್ಟರಸಾಹೇಬರಿಗೆ ತಿಳಿದಕೂಡಲೆ ಅವರು ಪಲ್ಲಕ್ಕಿಯಿಂದ ಇಳಿದು ಆಸಿಪಾಯಿ ಬಿದ್ದಲ್ಲಿಗೆ ಹೋಗಿ ಅವನನ್ನು ಪಲ್ಲಕ್ಕಿಯೊಳಗೆ ಹಾಕಿ ಸದರೀ ಸಾಹೇಬರು ಪಲ್ಲಕ್ಕಿ ಸಂಗಡ ನಡೆದರು ಬಂದು ಸಮೀಪದ ಹಳ್ಳಿಗೆ ಹೋದ ಕೂಡಲೆ ತಮ್ಮ ಖರ್ಚಿನಿಂದ ಒಂದು ಬಾಡಿಗೇ ಗಾಡಿ ಮಾಡಿಸಿ ಶಿಪಾಯಿಯನ್ನು ದವಾಖಾನೆ ಇದ್ದಊರಿಗೆ ಕಳುಹಿಸಿದರು ಈ ಹಿಂದುಸ್ಥಾನದಲ್ಲಿ ಇಂತ ಕೋಮಲ ಹೃದಯದ ದೊಡ್ಡ ಅಧಿಕಾರಸ್ಥರು ಎಷ್ಟು ಜನವಿದ್ದಾರು ?

ಪ್ಲೇಗಿನ ಮೇಲೆ ಇಷ್ಟರೊಳಗಾಗಿ ನಾನಾ ಪ್ರಕಾರವಾದ ಔಷಧೋಪಚಾರಗಳು ಉಪಯೋಗವು ಬೀಳದೆ ಪ್ರತಿಯೊಂದು ಔಷಧವು ನಿರುಪಯೋಗವಾಗಿ ಹೋದದ್ದು, ಈ ಗಿಡಕ್ಕೆ ಕನ್ನಡದಲ್ಲಿ ರಂಜನಪತ್ರೆ ಎಂದು ಹೆಸರೆಂದು ಗೊತ್ತಾಗಿದೆ ಜನರು ಇದರ ಉಪಯೋಗ ಮಾಡಲಿಕ್ಕೆ ತಪ್ಪಬಾರದು ಇದು ಪ್ರತಿಯೊಂದು ಹಳ್ಳಿಯಲ್ಲಿಯೂ ಸುಲಭವಾಗಿ ಸಿಕ್ಕುತ್ತದೆ ಇದರ ರಸವನ್ನು ತೆಗೆದು ಹಾಲಿನಲ್ಲಿ ಬೆರಸಿ ಕುಡಿಯಬೇಕು ಇದರ ರಸವು ಹಲ್ಲುಗಳಿಗೆ ಹತ್ತಿದರೆ ಹಳದಿ ಬಣ್ಣವಾಗುವದರಿಂದ ಎಚ್ಚರಿಕೆಯಿಂದ ಕುಡಿಯಬೇಕು. ಈ ಗಿಡದ ಕಟ್ಟಿಗೆಯು ಎಲೆಯನ್ನು ಕಸ್ತೂರಿ ಸಹ ಉಪಯೋಗಿಸಬಹುದು ಇದರ ರಸವು ಪ್ರಮಾಣಕ್ಕೆ ಸರಿಯಾಗಿ ಕೊಡಲ್ಪಟ್ಟರೆ ಗುಣವಾಗುತ್ತದೆ ಹೆಚ್ಚಾಗಿ ಕೊಟ್ಟರೆ, ಹೊಟ್ಟೆಯಲ್ಲಿ ಉರಿಯುತ್ತದೆ ಆದಕ್ಕೆ ಹಾಲು ಕೊಡಲು ಶಾಂತವಾಗುತ್ತದೆ ಇದರಿಂದ ಹೊಟ್ಟೆಯು ಶುದ್ಧವಾಗಿ ಜ್ವರವು ಕಡಿಮೆಯಾಗುತ್ತದೆ ಇದರ ಔಷಧವನ್ನು ಅರಿದು ಕಟ್ಟಿದರೆ ಗಂಟು ಕರಗುತ್ತದೆ ರೋಗಿ ಗುಣವಾಗುತ್ತದೆಂದು ನಮ್ಮ ಸ್ನೇಹಿತರೊಬ್ಬರು ತಮ್ಮ ಮನೆಯ ವರಿಗೆ ಪ್ಲೇಗ್ ಸಂಭವಿಸಿದ ಕಾಲದಲ್ಲಿ ಮಾಡಿದೆನೆಂದು ಹೇಳಿದ್ದರಿಂದ ಅದು ನನ್ನ ವಾಚಕ ವರ್ಗಕ್ಕೆ ತಿಳಿದಿರಲೆಂದು ಇಲ್ಲಿ ಕೊಟ್ಟಿದ್ದೇವೆ ಇದರ ಕಡೆಗೆ ದುರ್ಲಕ್ಷ್ಯ ಮಾಡಿ ಈ ಭಯಂಕರ ಸಮಯದಲ್ಲಿ ಸಂತಾಪಕ್ಕೆ ಗುರಿಯಾಗಬಾರದೆಂದು ನಾವು ಸಾರಿ ಹೇಳುತ್ತೇವೆ—ಲೋ ಬ.

VAIDYASARA SANGRAHA

A TREATISE ON THE PRINCIPLES OF
HINDU MEDICINE.
Price, including Postage Rs 5-0-0.

ವೈದ್ಯಸಾರಸಂಗ್ರಹ

ಇದು ಚರಕ, ವಾಗ್ಭಟ, ಸುಶ್ರುತ, ಇವುಗಳ ಮೊದಲಾದ ಅನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ,
ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ ವೇಮೀಲ್ ಪ್ರತಿ ೧ಕ್ಕೆ ೫—೦—೦
ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

Bangalore —Printed and Published in the KARNATAKA PRESS, No 10, HOSPITAL ROAD,—1898.

THE

Karnataka Prakasika.

ಪ್ರಕಟನೆಯ ರಿವಾಜ್ } ಮೊದಲನೆಯದಕ್ಕೆ ಪಙ್ತಿ ಒಂದಕ್ಕೆ 0 2 0
ಎರಡನೆಯ ವಕ್ಕೆ ಪಙ್ತಿ ಒಂದಕ್ಕೆ 0 1 0
[illegible]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು — ಸ್ಥಳದವರಿಗೆ		ಪರಸ್ಥಳದವರಿಗೆ, ಪೋಸ್ಟೇಜ್ ಸಹ	
ಸಾಲಿ 1 ಕ್ಕೆ	3 0 0	ಸಾಲಿ 1 ಕ್ಕೆ	4 0 0
6 ತಿಂಗಳಿಗೆ,	2 0 0	6 ತಿಂಗಳಿಗೆ	2 8 0
3 ತಿಂಗಳಿಗೆ,	1 4 0	3 ತಿಂಗಳಿಗೆ	1 8 0

[illegible] ‖ [illegible] ‖

Vol. XXV. BANGALORE:—MONDAY, AUGUST 8, 1898. No. 32.

Select Telegrams.

London, 2nd Aug—The *Washington Post* states that President McKinley intends to call an extra Session of Congress on Spain's acceptance of the terms of peace, with a view to passing special legislation to maintain an active army of one hundred thousand men.

London, 1st Aug—Genl Merritt has cabled to Washington that the situation in the Philippines is of the gravest character.

An open rupture with the insurgents is expected at any moment.

The Emperor of Germany has ordered a week's mourning throughout the army and navy for the late Prince Bismarck. The Kaiser also offered a sepulchre in the Berlin cathedral among His Majesty's ancestors for the interment of the deceased Prince, but it is doubtful if the family will accept the offer.

In the House of Lords, to-day Lord Salisbury replying to a question by Earl Kimberly regarding British interests in Yangtze, said that the Chinese are well disposed towards British enterprise but it had been suggested that they were being threatened by other Powers to give them the preference. Hence, on the 22nd of July the British Minister at Pekin was authorised to inform the Chinese Government that Great Britain would support them against any power committing an act of aggression upon China for permitting British subjects to construct or support railways and public works in China.

London, 3rd Aug—It is reported both at Washington and Madrid that Spain has accepted the principal conditions of the terms of peace.

London, 2nd August—The King of Siam has recovered.

London, 3rd August—In the House of Lords yesterday Lord Northbrook called attention to the speech made by Mr Thorburn at Siam, moved for the production of the official correspondence relating thereto.

London 4th Aug—Reuter telegraphing from Peking, says that the situation is causing great uneasiness. The Chinese regard the issue between Russia and England in the railway question is likely to decide the whole future of China.

The *Times* Peking correspondent telegraphs that the British Minister, on the 24th July, made a strongly-worded declaration to the Tsung li Yamen that Great Britain would not tolerate the interference of another Power with a British loan and a contract freely concluded by the Chinese Government for building a railway completing the connection between Tientsin and Newchwang, where British interests are predominant.

The next day M Pavloff, Acting Russian Minister at Peking, reiterated and emphasised his protest of the 11th July against the Newchwang extension, endeavouring to dictate conditions equivalent to abrogation of the British contract.

THE

Karnataka Prakasika.

MONDAY, AUGUST 8, 1898.

THE WAR BETWEEN SPAIN AND AMERICA.

The war between Spain and America has not yet come to an end. The two nations cannot agree about the terms. The Spaniards want the victors to take over the debt of Cuba, and this the latter do not seem inclined to do. This debt amounts to a large sum, and the Americans do not see any reason why they should pay it. They say they did not contract it, consequently they do not see the necessity of burdening themselves with it. The Spaniards will have to give in to the conquerors, and they might as well do this first as last. They have been beaten, though they showed great courage and bravery. They need not be ashamed of what they did, for they made a gallant fight of it. The Spaniards will be better off without their colonies than with them. They may not be able to see this now, but they will in time. The fact is they do not know how to colonise. They disgust the people they rule over, and hence all the trouble these possessions have caused them. Now the colonies have been lost they can devote themselves to their own land, and this requires much improvement. But although the Americans have defeated the Spaniards there is still much to be done. The people of Cuba do not want the conquerors to rule over them. They say they did not help to drive out the Spanish troops in order that those of another nation might take their place. The Cubans hoped that as soon as the nation in possession had been conquered they would be allowed to establish a republic for themselves. This the Americans do not think feasible. They are of opinion—and most people will agree with them—that the Cubans are not advanced enough to govern themselves. Many of the inhabitants of the island are Negroes, and are very ignorant. So numerous are these people that it is thought by many that they would take the lead, and a bad lot it would be. They would establish a republic like the one in Hayti where these people have sunk to the lowest stage of barbarism. Then again, the inhabitants of the Philippines refuse to submit to the Americans, and want to establish a republic on their own account. These people are less able to govern themselves than the Cubans. They know nothing whatever of constitutional government, but they fancy that because they have beaten the Spaniards they are capable of anything. The General in command says that it would require one hundred and fifty thousand men to put down the insurgents. The result will be, we fancy, that the Americans will leave them to govern themselves, or what is more probable will allow some nation of Europe to take them in hand. Germany wants the islands, and she might be inclined to attempt their conquest should the Americans not think it worth their while to take possession of them. This would be certain to cause complications. The other powers of Europe would not allow Germany to quietly appropriate the land, there would be a protest, and this would, almost to a certainty, lead to war. For the sake of peace it is to be hoped that the Americans will not leave the islands to be picked up by others. There are complications enough already in the east of Asia without any more being added to them. It may be that the powers may fall out over the division of the Celestial Empire, for signs are not wanting in this direction.

THE PLAGUE

We are sorry to find that this disease is still prevailing at Hubli. The latest report to hand is that thirty-seven cases took place a few days ago. This is very serious, and the worst of it is that the numbers have been gradually rising. We are not told how many deaths have occurred, but these must be numerous considering the many attacks. Private accounts show that the disease is even more prevalent than the official reports represent. There is no doubt about the fact that it has had hold—firm hold—of the Hubli district. We presume the authorities are doing all they can to stem its progress, and prevent it spreading to other places. Hubli may be said to be in a straight line from this place. It is on the line of rail, and, so far as can be seen, there is nothing to prevent it spreading. It is to be hoped this will not take place, but there is nothing to prevent it. It spread from Bombay to other towns and even villages, and it may do the same in the present case. The only thing to do is to take proper precautions against the spread of this dire epidemic, and this, we believe, the authorities are doing. Should the plague put in an appearance here, which it is hoped will not be the case, those whose duty it is to fight it will be prepared to do so. This is all that can be done, let us hope that the preparations that have been made will not be required to be carried out.

News and Notes

We understand that the Muthusamy Iyer Memorial statue is now finished and that it was intended to ship it from London last week.

Several Behari students have opened a shop at Bankipur, called the Behar Students' Company, their chief object being the sale of country made goods and the encouragement of native artisans and artists.

The *Rangoon Times* states that a Chulia named Ravana Nina is in custody on a charge of kidnapping two Madrassi boys in Madras, dragging them and bringing them across and then selling them for Rs 35 apiece to a Burman coolie maistry, or gaung, in Kyouktan, who is also in custody.

The Government of H H Maharajah Shivajee Rao Gaekwar of Baroda has retained Mr M P Mody Barrister-at-Law, of the Ahmedabad Bar and Mr P J Desai, Barrister-at-Law of the Bombay Bar, to conduct the prosecution instituted against the Pilvai rioters for waging war and instigating others to wage war against H H's Government.

Show me one great and noble cause for which two nations have fought in the last three centuries. Wars used to be dynastic, then they are waged for conquest. At present they are waged for markets. We may reasonably aspire to supply China with our goods, but to call the maintenance of the integrity of China a great and noble cause is mere hypocrisy.—*Truth*.

India will have another article for exportation if a novelty reported from home becomes fashionable. A home paper relates that a fashionably-dressed lady, attired in white, with a large hat, was to be seen walking down Parliament street one afternoon last month with a thin chain round her waist, to the end of the chain being attached a small live monkey which was holding on to her hip as best it could.

Says the *Simla News*:—"We understand that about six weeks ago the Nizam commanded the Minister to relieve certain high officials of their appointments, but for reasons best known to himself, Sir Vicar has not carried out the orders of His Highness. It is a mystery how the Nizam brooks such disobedience and equally a mystery how the Minister dares to defy the pleasures and commands of his Sovereign. What has the Resident to do with it?"

The following notification is published in the *Gazette*:—Her Majesty the Queen Empress of India, has been pleased to intimate through the Secretary of State for India her acceptance of the address and casket presented by the inhabitants of the Madras Presidency on the occasion of the celebration of the completion of the sixtieth year of Her Majesty's reign, and has commanded that Her Majesty's special thanks be conveyed to the presenters for this loyal offering.

Says a contemporary commenting on "the armies of Native States":—Much of the revenue in the Baroda State is wasted on an utterly useless Army of 516 Cavalry, 3 000 infantry, and 14 guns while an irregular force is maintained of 5000 Cavalry and 7 000 foot. The cost of the Baroda Army at present is 30 lakhs a year. With the exception of the mercenaries from Arabia and Scinde, this nondescript force is almost contemptible, except for mischief and rapine.

"There is plenty of work for this and kindred societies to do in Madras," writes Mr Caine in the current number of *Abkari*, "where public opinion on the Temperance question has become deplorably weak. I regret to hear that the use of intoxicating liquors is becoming a common feature at social functions in the city, and that well known Hindus are conforming to this dangerous custom. I hope the friends of Temperance will not cease to protest against this importation of western vices."

Some of the disciples of the Trivellore Jeer brought a suit in the District Court of Chingleput praying for a declaration that the appointment of the Jeer was illegal as he was guilty of immorality in the past, and for power to themselves to appoint a proper Jeer. The District Judge granted a decree as prayed for, and on appeal their Lordships the Officiating Chief Justice and Mr. Justice Davies, reversed the decree, and dismissed the suit with costs throughout and held that the disciples had no power to sue according to Section 539 C. P. C.

Here is a romance in real life which believers in omens will paticularly prize. Two benighted Nambudri travellers in a village near Katathanad, sought shelter under an Adhikari's roof and confidingly entrusted a purse containing Rs 1,300 to the village officer's safe keeping. They slept outside, but the Adhikari's greed tempted him out and he engaged Moplas to hack his holy guests and bury them for a reward of Rs 200. The deed was done and the money paid. But what was the Adhikari's horror when he saw the selfsame Nambudris issue out from the back of his house at dawn and demand their treasure. Their suspicions had been roused by a lizard screeching in the stillness of the night, and the evil omen, which they clearly

vised to indicate two coming murders, had induced them to conceal themselves Later, the Adhikari's only son and his only nephew returned home, and having knocked at the door in vain dropped themselves into the Nambudris' vacant beds. The hired ruffians obeyed the instructions to the letter, but alas! it was his own nearest and dearest that had thus been murdered for a price of Rs. 200 The father swooned at the sight of the Brahmans He soon recovered, however, and returned their money But they straightway reported to the police and the man is under arrest.—*W C. Spectator*

Local and Provincial.

The Palace —There will be a garden party at the Palace this evening

Mr E Hewetson —Left this place a few days ago for Mysore where he will remain for ten days, having obtained leave for this time

The Registrar, Chief Court —Has obtained a month's leave to go to Madras, and during his absence Mr Claphan will carry out the duties of the office

The Season —Bangalore is now full of people who have come here for the races and other festivities They will be here for another week

The Weather.—Is anything but satisfactory. Very little rain comes down, and the prospects are gloomy. If the rain does not fall within a few days the consequences will be very serious

Memorials to H H. the Maharani-Regent —It is not generally known that Her Highness has directed that all memorials addressed to Government should receive early and careful attention, and that a return be submitted every month showing the number disposed of how disposed and those remaining un-attended to, pending investigation —*Daily Post.*

Appointments —We are glad to learn from the last *Mysore Gazette* that Mr M. Ramachandra Rao, B A., Manager, City Municipal Office, has been appointed as Collector of City Municipal Taxes, on probation for six months. We also hear that Mr Abdul Khayum, Head Accountant of the said office, is now acting as Manager We hope both the above officials will be confirmed in their respective appointments

THE NEW POSTAL RATES FOR NEWSPAPERS

(*The Gazette of India*)

No 3206 S R —In supersession of the Notification of the Government of India in the Finance Department, No 5140 S R, dated the 4th December 1896, and in exercise of the powers conferred by sections 8 and 9 of the Indian Post Office Act, 1898, the Governor General in Council is pleased to direct that, with effect from 1st October 1898, the following rates of postage shall be charged on registered newspapers, as defined in section 9* of the Act, when posted for transmission by the inland post in accordance with the conditions set forth below

For every newspaper not exceeding 4 tolas in weight ...	One-quarter of an anna
For every newspaper exceeding 20 tolas in weight .	Half an anna
For every additional 20 tolas or part of that weight	Half an anna.

Nothing in this Notification shall be held to prevent newspapers being transmitted by inland post, either singly or otherwise at the rates, and under the conditions, prescribed for book-packets.

* "For the purpose of such registration, every publication, consisting wholly or in great part of political or other news, or of articles relating thereto or to other current topics, with or without advertisements, shall be deemed a newspaper, subject to the following conditions, namely

(a) that it is published in numbers at intervals of not more than thirty one days, and

(b) that it has a *bonafide* list of subscribers,

An extra or supplement to a newspaper bearing the same date as the newspaper and transmitted therewith shall be deemed to be part of the newspaper

Provided that no such extra or supplement shall be so deemed unless it consists wholly or in great part of matter like that of the newspaper and has the title and date of publication of the newspaper printed at the top of each page"

Conditions.

1 (i) The newspaper shall be registered in the office of the Postmaster General, or officer exercising the powers of the Postmaster General, of the Postal Circle in which it is published

(ii) The registration of a newspaper under these conditions shall cease to have effect at the close of the calendar year following that in which the registration was effected and must be renewed if a continuance of the privilege conferred by this Notification beyond that time is desired.

2 The postage shall be prepaid by postage stamps

3 The newspaper shall bear in print immediately above the address the word "Registered" followed by the registration number which shall be assigned to it by the Postmaster General or other officer referred to in condition 1

4 The newspaper shall be posted at the place of publication

5 The newspaper shall be posted without a cover or in a short cover open at the ends

6 There shall be no word printed on the newspaper after its publication or upon the cover (if any) thereof, nor shall any writing or mark be made upon it or upon the cover (if any) thereof, except the name and address of the person to whom it is sent and if desired the name and address of the newspaper or of the sender

7 There shall be no paper or thing enclosed in or with any such newspaper other than an extra or supplement as specified in section 9 of the Post Office Act

The Governor General in Council is further pleased to direct that, with effect from the same date, the Notification of the Government of India in the Finance Department, No 3463, dated the 6th October 1881, under which among other things, the Post Office Department was authorised to accept cash payments in advance on account of the postage on newspapers shall cease to have effect

The Mysore Gazette

Bangalore, Thursday, 4th August 1898

NOTIFICATIONS BY THE GOVERNMENT OF MYSORE

No 1451—J 132, *dated 27th July* 98

Under Section 13 of the Code of Criminal Procedure, Mr. K Doraswami Iyer, Assistant Commissioner and 1st Class Magistrate recently appointed Sub Division Officer, is placed in charge of the Chikballapur sub division

2 In addition to his ordinary powers of Sub Divisional Magistrate under Section 36 Mr K Doraswamy Iyer is invested with all the additional powers conferrable by Government under Section 37 on 1st Class Magistrates, except the power to try summarily

No 1495—M F 403 92, *dated 27th July* 98

Under Article 188 of the Mysore Service Regulation, Mr B D Raghavendra Row, Assistant Surgeon, Bangalore, is granted privilege leave of absence for one month, with effect from the 16th July 1898

No 1509—*L F* 234 96, *dated 28th July* 98

Under Section 13 of the Bangalore Municipal Regulations of 1871, Government are pleased to appoint M Ramachendra Row, B A Manager of the City Municipal office, as Collector of Municipal Taxes in the Bangalore City Municipality, on probation for six months.

No 1650—*M F* 3 93, *dated 30th July* 1898

The following transfers of Assistant Surgeons are ordered —

Assistant Surgeon—Mr O G Hanumantha Sing, from Palace Dispensary, Mysore, to d d. General Hospital Mysore

Assistant Surgeon—Mr B D Raghavendra Row from d d Lunatic and Leper Asylums and Medical Stores, Bangalore, to Palace Dispensary, Mysore

No 1662—J 161 *dated 30th July* 1898

The services of Mr A Ananda Row, Additional Munsiff of Mysore, are temporarily placed at the disposal of Government in the General Department

Mr C M Ramanujiengar, Sheristadar of the District and Sessions Court, Ashtagram Division, is appointed to act as Munsiff, 3rd Class, *sub protem*, during the employment of Mr A Ananda Row on other duty, or until further orders and is posted to Mysore as Additional Munsiff

No 735—*R* 297, *dated 20th July* 1898

Under Section 188 of the Mysore Service Regulations, Mr. K Ramachendra Row, Sub-Division officer under orders to retire on pension is, preparatory to such retirement, granted three months' privilege leave of absence with effect from such date as he may be relieved of the charge of the Chikballapur sub-division

ಕರ್ಣಾಟಕ ಪ್ರಕಾಶಿಕಾ.

೧೮೯೮ನೇ ಇಸವಿ ಆಗಸ್ಟ್ ೮ನೇ ತಾ॥ ಸೋಮವಾರ.

ಗೌಳಿಯಶಾಕುನ ನಿದರ್ಶನ.

ಶಕುನಗಳ ಅನುಕೂಲ್ಯ ಪ್ರತಿಕೂಲ್ಯಗಳ ಮೇಲೆ ಶುಭಾಶುಭಗಳಂ ನಿರ್ಣೈಸುವಂತವರಿಗೆಲ್ಲ ವೆಸ್ಟ್‌ಕೋಸ್ಟ್ ಸ್ಪೆಕ್ಟೇಟರ್ ಪತ್ರಿಕೆಯಿಂದ ಸಂಗ್ರಹಿಸಿ ಇದರಡಿ ತಿಳಿಸಲ್ಪಡುವ ಕೇವಲ ಸಂತಾಪ ಪರಿಣಾಮರೂಪವಾದ ವೃತ್ತಾಂತವು ಆಶ್ಚರ್ಯವನ್ನು ಪರಿತಾಪವನ್ನೂ ಉಂಟುಮಾಡದೆಹೋಗಲಾರದು. ಪಾಲಘಾಟ ಪ್ರಾಂತದಲ್ಲಿ ಜರಿಗಿದ ಈ ವಿಷಯವು ಕೇವಲ ಪ್ರಹಸನ ರೂಪವಾಗಿ ಪ್ರಾರಂಭಿಸಿ ಕೊನೆಗೆ ಪ್ರಾಣಹಾನಿಯೊಡನೆ ಪರಿಸಮಾಪ್ತವಾಯಿತು. ಕಡತನಾಡ್ ಎಂಬ ಪ್ರದೇಶಕ್ಕೆ ಸೇರಿದ ಒಂದು ಗ್ರಾಮಕ್ಕೆ ಮಾರ್ಗವಶಾತ್ ಆಗಂತುಕರಾಗಿ ಹೋದ ಇಬ್ಬರು ನಂಬೂದ್ರಿ ಬ್ರಾಹ್ಮಣರು ಆರಾತ್ರಿ ಅಲ್ಲಿ ಮಲಗಿದ್ದು ಮಾರನೆಯದಿನ ಮುಂದಕ್ಕೆ ಪ್ರಯಾಣ ಮಾಡುವಣವೆಂಬ ಉದ್ದೇಶದೊಡನೆ ಸದರೀ ಗ್ರಾಮಾಧಿಕಾರಿಯ ಆಶ್ರಯವಂ ಕೋರಿ ಆತನ ಆತಿಥ್ಯವಂ ಕೈಗೊಂಡು ಆತನ ಉಪಚಾರಗಳಿಂ ಸಂತೃಪ್ತರಾಗಿ ಆತನ ನೈಚ್ಯಭಾವಕ್ಕೆ ಮೋಹಿತರಾಗಿ ಆತನ ವಿಧೇಯತೆಯಿಂ ನಂಬಿ ತಮ್ಮಬಳಿ ಇಟ್ಟುಕೊಂಡಿದ್ದ ಸಾವಿರ ಮುನ್ನೂರು ರೂಪಾಯಿಗಳುಳ್ಳ ಹಣದ ಗಂಟನ್ನು ಆತನವಶಕ್ಕೊಪ್ಪಿಸಿ ಆರಾತ್ರಿ ಕಾಪಾಡಿಟ್ಟಿದ್ದು ಮಾರನೆಯದಿನ ಬೆಳಗ್ಗೆ ತಾವು ಪ್ರಯಾಣ ಹೊರಡುವಾಗ ಕೊಡಬೇಕೆಂತ ತಿಳಿಸಿ ಭೋಜನಾನಂತರ ಬ್ರಾಹ್ಮಣರಿಬ್ಬರೂ ಹೊರಗೆ ಹಜಾರದಲ್ಲಿ ಮಲಗಿಕೊಂಡರು. ಎಜಮಾನನು ಪದ್ಧತಿ ಪ್ರಕಾರ ಒಳಗೆ ಮಲಗಿಕೊಂಡನು. ಹಣದಗಂಟು ಕೈವಶವಾದ ಬಳಿಕ ಸದರೀ ಅಧಿಕಾರಿಗೆ ಧನಾಕಾಂಕ್ಷೆಯು ಹೆಚ್ಚಿ ಯುಕ್ತಾಯುಕ್ತ ಪರಿಜ್ಞಾನ ಶೂನ್ಯವಾಗಲು ಇಬ್ಬರು ಮಾಪ್ಳೆ ಜಾತಿ ಜಟ್ಟಿಯರನ್ನು ಗೊತ್ತುಮಾಡಿಟ್ಟು ಭೂಸುರರಾದ ಸದರೀ ಅತಿಥಿಗಳ ಶಿರಗಳಂ ಛೇದಿಸಿ ಗುಪ್ತವಾಗಿ ಹೂಳಿಬಿಟ್ಟರೆ ೨೦೦ ರೂಪಾಯಿಗಳು ತಾನು ಕೊಡುವದಾಗಿ ಅವರೊಡನೆ ಪ್ರತಿಜ್ಞೆ ಮಾಡಿಕೊಂಡನು. ತದ್ವತ್ ಘೋರಕೃತ್ಯವೇನೋ ಸದರೀ ಜಟ್ಟಿಗಳಿಂದ ಜರಿಗಿಸಲ್ಪಟ್ಟು ಅವರಿಗೆ ವಾಗ್ದಾನವಾಗಿದ್ದ ಮೊಬಲಗು ಸಂದಾಯವಾಯಿತು. ಇಲ್ಲಿ ಆಶ್ಚರ್ಯ ಪಡಬೇಕಾದ ದೈವಾಜ್ಞೆ ಯೆಂತೆಂದರೆ–ಮಾರನೆಯದಿನ ಬೆಳಗ್ಗೆ ಸೂರ್ಯೋದಯಾತ್ಪೂರ್ವ ಅದೇ ನಂಬೂದ್ರಿ ಬ್ರಾಹ್ಮಣರಿಬ್ಬರೂ ಗ್ರಾಮಾಧಿಕಾರಿಯ ಮನೆಯ ಹಿಂಭಾಗದಿಂದ ಒಳಗೆಬಂದು ತಾವು ಕೊಟ್ಟಿದ್ದ ಹಣದಗಂಟನ್ನು ವಾಪಸ್‌ಕೊಡುವಂತೆ ತಗಾದೆ ಮಾಡಿದಾಗ ಆ ಅಧಿಕಾರಿಯು ಭಯಪೀತಿರುತಿತ್ತೋ, ಅವನ ಚಿತ್ತವೃತ್ತಿ ಹ್ಯಾಗಿದ್ದಿರುವುದೊ ಅದಂ ವಾಚಕರೇ ಊಹಿಸಿಕೊಳ್ಳಬಹುದು. ನಂಬೂದ್ರಿ ಬ್ರಾಹ್ಮಣರಿಬ್ಬರೂ ಮಲಗಿದ್ದ ಸ್ಥಳಕ್ಕೆ ಸರಿಯಾಗಿ ಎರಡುಬಲ್ಲಿಗಳು ಅರ್ಧರಾತ್ರಿಯಲ್ಲಿ ಕೀಚಲಾಡುತಲಿದ್ದುದಂ ಅವರುಕೇಳಲು ಅವರು ಬಲ್ಲಿ ಶಕುನ ಲಕ್ಷಣಗಳನ್ನರಿತವರಾದ್ದರಿಂದ ಅವರಿಗೆ ಮೃತ್ಯುಕ ನಿವಾರ್ಯಯಿಂದ ಅನುಮಾನವು ಹೆಚ್ಚಿ ಉತ್ತರಕ್ಷಣದೊಳು ತಮ್ಮ ಶಿರಚ್ಛೇದನಾರ್ಥ ಬರುವಂತ ಘಾತುಕರ ಆಗಮನ ಸೂಚನೆಯಿಂ ತನ್ಮೂಲಕ ಸ್ವತಃ ನಿಶ್ಚಯಿಸಿಕೊಂಡು ಎದ್ದು ತಮ್ಮತಮ್ಮ ಹಾಸಿಗೆಗಳನ್ನು ಸಹ ಹಾಗೆಯೇ ತೊರೆದು ಪ್ರಾಣರಕ್ಷಣಾರ್ಥ ತಪ್ಪಿಸಿಕೊಂಡು ಹೊರಟುಹೋದರು. ಅನಂತರ ಸ್ವಲ್ಪ ಹೊತ್ತಿನಮೇಲೆ ಮನೆಯ ಎಜಮಾನನ ಪುತ್ರನೂ ತಮ್ಮನ ಮಗನೂ ಹೊರಗೆ ಹೋಗಿ ಬಂದು ಮನೆಯ ತಲೆಬಾಗಿಲಂ ತೆಗೆಯುವಂತೆ ಎರಡು ಮೂರಾವರ್ತಿ ತಟ್ಟಿದರು. ಪರಂತು ಮನೆಯವರು ಬಾಗಿಲಂ ತೆಗೆಯಲಿಲ್ಲವು. ಕಡೆಗೆ ಬೇಸತ್ತು ಸದರೀ ನಂಬೂದ್ರಿ ಬ್ರಾಹ್ಮಣರ ಹಾಸಿಗೆಯು ಮನೆಯವರದೆಂದು ನಂಬಿ ಇಬ್ಬರೂ ಅದರಮೇಲೆ ಮಲಗಿ ನಿದ್ರೆಹೋದರು. ಸ್ವಲ್ಪಹೊತ್ತಿನಮೇಲೆ ಕೊಲೆಪಾತಕಕ್ಕೆ ಗೊತ್ತುಮಾಡಿದ್ದ ಕಿರಾತಕರಿಬ್ಬರು ಖಡ್ಗಪಾಣಿಗಳಾಗಿ ಬಂದು ಮಲಗಿದ್ದ ಅಣ್ಣ ತಮ್ಮಂದಿರಿಬ್ಬರ ಶಿರಗಳನ್ನೂ ಏಕಕಾಲದಲ್ಲಿ ಛೇದಿಸಿ ಅವು ದೂರಪ್ರದೇಶದಲ್ಲಿ ಹೂಳಿಬಿಟ್ಟು ಎಜಮಾನನ ಆಜ್ಞೆಯನ್ನು ನೆರವೇರಿಸಿ ತಮ್ಮ ಬಹುಮಾನವನ್ನವರು ತೆಗೆದುಕೊಂಡು ಹೊರಟು ಹೋದರು. ಕಡೆಗೆ ಇನ್ನೂರು ರೂಪಾಯಿಗಳ ಪ್ರಯೋಜನಕ್ಕಾಗಿ ವಧಿಸಲ್ಪಟ್ಟವರು ಎಜಮಾನನ ಮತ್ತು ಆತನ ತಮ್ಮನ ಮಕ್ಕಳೆಂದೇರ್ಪಟ್ಟರು. ಮಾರನೆಯದಿನ ತಂದೆಯು ಸದರೀ ನಂಬೂದ್ರಿ ಬ್ರಾಹ್ಮಣ ಸಂದರ್ಶನವಾದ ಕೂಡಲೇ ಮೂರ್ಛಿತನಾದನು. ಕೂಡಲೆ ಆತನು ಚೇತರಿಸಿಕೊಂಡು ಅವರ ಹಣದ ಗಂಟನ್ನು ಅವರ ವಶಕ್ಕೊಪ್ಪಿಸಿಬಿಟ್ಟನು. ಅವರು ಜರಿಗಿದ ವೃತ್ತಾಂತವನ್ನೆಲ್ಲ ನೆಟ್ಟಗೆಹೋಗಿ ಪೊಲೀಸಿನವರಿಗೆ ತಿಳಿಸಿ ಹೊರಟುಹೋದಂತೆಯೂ ಆ ಅಧಿಕಾರಿಯು ಪೊಲೀಸ ಅಧಿಕಾರಿಗಳ ಅಧೀನನಾಗಿ ತನ್ನ ಅತ್ಯಾಶೆಯಿಂದುಂಟಾದ ಅವಜ್ಞತೆಯ ಫಲವನ್ನಾತುರದೊಡನೆ ನಿರೀಕ್ಷಿಸುತಲಿರುವಂತೆಯೂ ತಿಳಿಯಬರುತಿದೆ. ಅಧಿಕಾರಿಯಾದವನೊಂದೆಣಿಸಿ ಸಂಕಲ್ಪಿಸಿದ ಕಾರ್ಯವು ದೈವಸಂಕಲ್ಪದಿಂದನ್ಯತರವಾಗಿ ಪರಿಣಮಿಸಿ ಈಗ ಆತ್ಮವಿನಾಶ ಹೇತುಭೂತವಾಯಿತು. ಧನಾಕಾಂಕ್ಷೆಯು ಹೆಚ್ಚಿದರೆ ಅದರ ಪರಿಣಾಮವು ಯಾವಾಗಲು ದುಃಖರೂಪವಾಗಿಯೇ ಇರುವುದು ದಿಟವು.

ಗೋದಾವರೀ ಡಿಸ್ಟ್ರಿಕ್ಟಿಗೆ ಸೇರಿದ ಏಲೂಪುರ(ಎಲೂರು)ವೆಂಬಪ್ರದೇಶದಲ್ಲಿ "ಮಂಜುವಾಣಿ" ಎಂಬ ಅಂಕಿತದೊಡನೆ ಕಳೆದ ತಿಂಗಳ ಮೊದಲು ಆಂಧ್ರಭಾಷಾ ನಿಬದ್ಧವಾದ ಮಾಸಪತ್ರಿಕೆಯೊಂದು ಪ್ರಕಟಿಸಲ್ಪಡುತಲಿದೆ. ಇದು ಲಕ್ಷ್ಮಿನ ಜಮೀನ್ದಾರ್ ಶ್ರೀರಾಜಾ ಮಂತ್ರಿಪ್ರಗಡ ಭುಜಂಗರಾವ್ ಬಹದೂರ್ ಯವರ ಪೋಷಣೆಯಿಂದಲೂ ಪಂಡಿತರನೇಕರ ಪ್ರೋತ್ಸಾಹದಿಂದಲೂ ಉಪಕ್ರಮ ಮಾಡಲ್ಪಟ್ಟಿರುವಂತೆ ವ್ಯಕ್ತವಾಗುತಿದೆ. ಪ್ರಸಕ್ತ ಮಾಸಪತ್ರಿಕೆಯಲ್ಲಿ ಪ್ರಾಚೀನ ಅಮುದ್ರಿತ ಪುರಾತನ ಆಂಧ್ರಮಹಾಕಾವ್ಯಗಳು, ನವರಸಾಲಂಕಾರ ಚರಿತೆಗಳಾದ ನಾನಾವಿಧ ಆಧುನಿಕ ಪ್ರಬಂಧಗಳು, ಹಾಸ್ಯ ವಿನೋದ ರಸ ಚರಿತೆಗಳಾದ ವಿವಿಧ ಇತಿಹಾಸಗಳು, ಪ್ರಾಚೀನ ಹಿಂದೂಪುರುಷರ ಪೂರ್ವ ವೃತ್ತಾಂತಗಳು, ನಾನಾವಿಧ ಶಾಸ್ತ್ರವಿಚಾರಗಳು, ಇಂಗ್ಲಿಷ್ ಗ್ರಂಥಗಳ ತರ್ಜುಮೆಗಳು, ಇನ್ನೂ ಅನೇಕ ಉಪಯುಕ್ತಾಂಶಗಳು ಸಂದರ್ಭಾವಕಾಶಾನುಗುಣವಾಗಿ ಪ್ರಕಟಿಸಲ್ಪಡುವವು. ನಮಗೆ ತತ್ಪತ್ರಿಕಾಧಿಪರಿಂದ ಈ ವಾರದಲ್ಲಿ ಕಳುಹಿಸಲ್ಪಟ್ಟಿರುವ ಪ್ರಥಮ ಸಂಚಿಕೆಯಂ ನೋಡಲಾಗಿ ಇದು ವಿವಿಧ ವಿಷಯಗಳಿಂದೊಡಗೂಡಿ ಉತ್ತಮ ಕಾಗದದ ಮೇಲೆ ಸ್ಫುಟಾಕ್ಷರಗಳಿಂದ ಮುದ್ರಿತವಾದುದಾಗಿಯೂ, ಪುಸ್ತಕರೂಪವಾಗಿಯೂ, ಕೆತ್ತದ್ವಿಷಯಾನುಸಾರ ಪ್ರತ್ಯೇಕ ಪುಟಸಂಖ್ಯೆಗಳುಳ್ಳದ್ದಾಗಿಯೂ ಕಂಡು ಬರುತಿದೆ. ಪತ್ರಿಕಾಭಿದಾನವು ಸ್ತ್ರೀಲಿಂಗ ಪದ ಘಟಿತವಾದುದಾಗಿರುವದರಿಂದ ಉಪಲಕ್ಷಣಯಾ ತದುಪರಿಭಾಗದೊಳು ಕುಸುಮಾಭರಣಾಲಂಕಾರ ಯುಕ್ತೆಯಾದ ಲಲನೆಯೋರ್ವಳ ಪ್ರತಿಕೃತಿಯೊಂದು ಪ್ರದರ್ಶಿತವಾಗಿರುತಿದೆ. ಈ ಮಂಜುವಾಣಿಯು ಅಭಿನವವಾಕ್ಸಿದ್ಧಿಯೊಡನೆ ಸರಸರೀತಿ ಶಯ್ಯಾಲಂಕಾರಾದಿಗಳಿಂದ ವಿದಗ್ಧಮನೋಹಾರಿಣಿ ಯೆನಿಸಿದಾಗ್ಯೂ ಕಾಲಕ್ರಮದಿಂ ತನಗೆ ಪ್ರಾಪ್ತವಾಗಿರುವ ನಾನಾವಿಧ ವೈಕೃತ ಗುಣವಿಪರ್ಯಯಕ್ಕಾಗಿ ಶೋಕಸಂತಪ್ತಚಿತ್ತೆಯಾಗಿ ತನ್ನ ಮನೋಭಾವವಂ ವ್ಯಕ್ತಪಡಿಸಲಿಷ್ಟವಿಲ್ಲದ ಕಟಾಕ್ಷವೀಕ್ಷಣ ಪ್ರವೃತ್ತಳಾಗಿ ಕಂಡು ಬರುತಾಳೆ. ಈಕೆಯು ಜನ್ಮತಃ ಬಾಲೆ, ಸ್ವಭಾವತಃ ಚಪಲೆ, ದೃಷ್ಟ್ಯಾ ಚಟುಲೆಯಾಗಿ ತೋರುವವರಿಂದ ಈಕೆಯು ಶೋಕಭೀತಿಗಳು ನೀಂಡಿ ವಿದಗ್ಧವಶೀಕರಣ ಸಾಮರ್ಥ್ಯವುಳ್ಳ ಪ್ರಗಲ್ಭಾಂಗನೆಯಾದ ಸರಸವಾಣಿ ಯೆನಿಸಿ ಪರಂತು ಅತಿಚಾರಿಣಿ ಯೆನಿಸದಿರಬೇಕೆಂದು ಕೋರುವೆವು. ಈಕೆಯು ಮುಗ್ಧಾಂಗನೆಯಾಗಿರುವದರಿಂದ ಕೇವಲ ಸುಲಭವಿಕ್ರೀತಳಾಗಿರುತ್ತಾಳೆ, ಲೋಕದಲ್ಲಿ ಸ್ವಜಾತ್ಯಾಭಿಮಾನವೆಂಬುದು ಇದುವರೆಂ ಬಿಡಲಿಲ್ಲದಾದುದರಿಂದಲೂ, ತಥಾಪಿ ಸ್ತ್ರೀಯರಿಗೆ ತಾದೃಶಗುಣವು ವಿಶೇಷತಃ ನೆಲಸಿರುವದರಿಂದಲೂ ಇಷ್ಟದೇವತಾ ಪ್ರಾರ್ಥನಾರೂಪವಾಗಿ ವಿಕ್ಟೋರಿಯಾ ಮಹಾರಾಜ್ಞೀ ಚಕ್ರವರ್ತಿನೀಯವರಿಗೆ ಮಂಗಳಾಚರಣೆಯಂ ಮಾಡಿ ಮಂಜುಳವಾದ ತನ್ನ ಪ್ರಶಂಸೆಗಳಿಂ ಜನ್ಮಸಾಫಲ್ಯವಂ ಮಾಡಿಕೊಂಡದಕ್ಕಾಗಿ ಬಹಳ ಸಂತೋಷಿಸಬೇಕಾಗಿರುತಿದೆ. ಮುಂದಿನ ಈಕೆಯ ವಾಗ್ವಿಲಾಸವು ಅನುಭವೈಕವೇದ್ಯವಾಗಿರುವುದು.

Occasional Notes.
ನೈಮಿತ್ತಿಕವಿಷಯವ್ಯಾಸ.

ಬೆಂಕಿ ಪುರದಲ್ಲಿರುವ ಬಿಹಾರಿ ವಿದ್ಯಾರ್ಥಿಗಳೆಲ್ಲರು ಸೇರಿ, ಸ್ವದೇಶದ ತಯಾರಿ ಪದಾರ್ಥಗಳ ಬಿಕರಿಯಬಗ್ಗೆ ಒಂದು ಷಾಪನ್ನು ಯೇರ್ಪಡಿಸಿರುತ್ತಾರೆ. ಇದಕ್ಕುಂಟಾದ ಉದ್ದೇಶವು ನೇಟಿವ್ ಕೆಲಸಗಳಿಗೂ ಕೆಲಸಗಾರರಿಗೂ ಪ್ರೋತ್ಸಾಹವನ್ನುಂಟುಮಾಡುವದರ ಮೂಲಕ ಅವುಗಳನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂಬುವುದು ವಿನಾ ಬೇರೆಯಾವದೂ ಅಲ್ಲವು.

ಕಳೆದ ಜುಲೈತಿಂಗಳ ೨೯ನೆಯತಾರೀಖಿನಲ್ಲಿ ಪೂರ್ತಿಯಾದ ವಾರದಲ್ಲಿ ಮದರಾಸ ಮ್ಯುನಿಸಿಪಲ್ ಸರಹದ್ದಿನೊಳಗುಂಟಾದ ಜನನ ಮರಣ ಲೆಕ್ಕದಲ್ಲಿ ಮೂವತ್ತಾರುಮಂದಿ ವಾಂತಿ ಭೇದಿ ರೋಗದಮೂಲಕ ಮೃತಪಟ್ಟದ್ದಾಗಿ ತಿಳಿಸಲ್ಪಟ್ಟಿರುವದರಿಂದ ಸದರೀ ಪಟ್ಟಣದಲ್ಲಿ ಈಗ ವಾಂತಿ ಭೇದಿ ರೋಗವು ವ್ಯಾಪಿಸಿರುವಂತೆ ಸ್ಪಷ್ಟವಾಗುತದೆ.

ಅಮೇರಿಕಾಖಂಡಕ್ಕೆ ಸೇರಿದ ಯುನೈಟೆಡ್ ಸ್ಟೇಟ್ಸ್ ಸಂಸ್ಥಾನಕ್ಕೂ ಸ್ಪೈನ್ ದೇಶಕ್ಕೂ ಸಮಾಧಾನದ ಬಗ್ಗೆ ಕಾಗದ ಪತ್ರಗಳು ನಡೆಯುತಲಿರುವಂತೆ ಹಿಂದೆ ತಿಳಿಸಿದ್ದೆವಷ್ಟೆ. ಈಗ ಅದು ಪೂರ್ತಿಯಾಗಿ ಅಮೇರಿಕಾ ಸರಕಾರದವರು ಸೂಚಿಸಿದ ಕರತ್ತುಗಳಲ್ಲಿ ಮುಖ್ಯವಾದವುಗಳಿಗೆಲ್ಲ ಸ್ಪೈನ್ ದೇಶದವರು ಒಪ್ಪಿಕೊಂಡಂತೆ ತಂತಿ ವರ್ತಮಾನ ಬಂದಿರುತದೆ.

ಈಚೆಗೆ ಪ್ರಿನ್ಸ ಆಫ್ ವೇಲ್ಸರವರು ತಮ್ಮ ರಾಜಮಂದಿರದ ಸೋಪಾನದಿಂದಿಳಿದು ಬರುವಾಗ ಕಾಲುಜಾರಿ ಸೋಪಾನಗಳ ಮೇಲೆ ಬೀಳಲು ತಮ್ಮ ಬಲಕ ಮೊಣಕಾಲು ಸಂದಿ ಬಂಧವು ಸಡಲಿ ಸಬಾರಕ್ಕೆ ಅಸವುಖವಾಗಿ ಚಿಕಿತ್ಸೆಯೊಳಿರುತಲಿರುವಂತೆ ಕೇಳಲಿಕ್ಕೆ ವಿಷಾದಿಸುತ್ತೇವೆ. ಮಹಾರಾಜಪುತ್ರರಾದರೂ ಅಪಾಯವು ತಪ್ಪುವದಿಲ್ಲವು ಇವರ ಆರೋಗ್ಯಾಭಿವೃದ್ಧಿಯಂ ಶೀಘ್ರದೊಳು ಕೇಳಲಪೇಕ್ಷಿಸುತ್ತೇವೆ.

ಇಂಡ್ಯದೇಶದ ನೇಟಿವ್ ಸಂಸ್ಥಾನಗಳಲ್ಲಿಟ್ಟುಕೊಂಡಿರುವ ಸೈನ್ಯಗಳಂ ಕುರಿತು ವಿಚಾರಮಾಡುವ ಸಂದರ್ಭದಲ್ಲಿ, ಬರೋಡೆ ಸಂಸ್ಥಾನದೊಳು ಪ್ರಾಗಾನತಯಾರಿ ೫೧೭ ಸವಾರ್, ೩೦೦೦ ಬಾರ್ ಸೈನ್ಯಗಳು, ೪೮ ತೋಫೆಗಳು ಇಡಲ್ಪಟ್ಟಿರುವುದು ಮಾತ್ರವಲ್ಲದೆ ಬೇತಯಾರಿ ೫,೦೦೦ ಸವಾರ್, ೭,೦೦೦ ಬಾರ್ ಸೈನ್ಯ ವಿಡಲ್ಪಟ್ಟು ಆ ಬಗ್ಗೆ ಸಾಲಿಯಾನಾ ಮೂವತ್ತು ಲಕ್ಷ ರೂಪಾಯಿಗಳು ವ್ಯರ್ಥವಾಗಿ ಸಂಸ್ಥಾನಕ್ಕೆ ಖರ್ಚಾಗುತಲಿದೆಯೆಂದು ಒಂದಾನೊಂದು ಪತ್ರಿಕೆತಿಳಿಸುತದೆ

ಈಗಿನ ವೈಲಕ್ಷಣ್ಯಾಭಿವೃದ್ಧಿಗೆ ನಿದರ್ಶನರೂಪವಾಗಿ ಪ್ರಜೆಗಳ ಅಭಿರುಚಿಯೂ, ವರ್ತನವೂ ಭಿನ್ನಭಿನ್ನಗಳಾಗಿ ಆಚರಣೆಯಲ್ಲಿ ಬರುತಲಿರುವದೇನೂ ಆಶ್ಚರ್ಯವಲ್ಲವು. ಈಚೆಗೆ ಇಂಗ್ಲಾಂಡಿನಲ್ಲಿ ಒಬ್ಬ ಹೆಂಗಸು ಸೊಗಸಾದ ಬಿಳೀ ಉಡುಪುಗಳಂ ಹಾಕಿಕೊಂಡು ತಲೆಯಮೇಲೆ ದೊಡ್ಡದಾದ ಒಂದು ಟೋಪಿಯಂ ಧರಿಸಿ ನೌರಿಂದ ಸರಪಣಿಯೊಂದನ್ನು ತನ್ನ ನಡುವಿಗೆ ಕಟ್ಟಿಕೊಂಡು ಅದರಕೊನೆಯಲ್ಲಿ ಒಂದು ಕೋತಿಯಮರಿಯನ್ನು ಕಟ್ಟಿ ಅದನ್ನು ತನ್ನ ನಡುವಿನಷ್ಟಿಟ್ಟುಕೊಂಡು ಕಳೆದ ತಿಂಗಳಲ್ಲಿ ಒಂದುದಿನ ಮಧ್ಯಾನ್ಹತ್ತರ ಪಾರ್ಲಿಯಮೆಂಟ ಬೀದಿಯಲ್ಲಿ ಹೋಗುತಿದ್ದಳು. ನೂತನವಾದ ಈ ವಿಲಕ್ಷಣ ವ್ಯಾಪಾರವಂ ನೋಡಿ ಇನ್ನು ಅನೇಕರಿಗೆ ಅದರಲ್ಲಿ ಅಭಿರುಚಿಯುಂಟಾಗುವುದು ಅಸಹಜ ಮಾತ್ರ ಅಸಂಭವವಲ್ಲವಾಗಿ ಇಂಡ್ಯದೇಶದಿಂದ ಇಂಗ್ಲಾಂಡಿಗೆ ಕೋತಿಗಳಂ ಕಳುಹಿಸಿಕೊಡುವ ವ್ಯಾಪಾರವೊಂದು ಯೇರ್ಪಡಬಹುದೆಂದು ಒಂದಾನೊಂದು ಪತ್ರಿಕೆ ಅಭಿಪ್ರಾಯಪಡುತದೆ.

ಮುಂಬೈ ಗವರ್ನರವರ ಮಂತ್ರಾಲೋಚನಾಸಭೆಯ ಮೆಂಬರಾದ ಮೆ॥ ನ್ಯೂಜೆಂಟ ಯೆಂಬವರು ಸ್ವದೇಶಕ್ಕೆ ತೆರಳುವದಕ್ಕೆ ಮುಂಚಿತವಾಗಿ ಜೆಯಿಲಿನಲ್ಲಿ ಸಜಾ ಅನುಭವಿಸುತಲಿರುವ ಮೆ॥ ತಿಲಕರವರನ್ನು ನೋಡಿ ಬರುವ ಉದ್ದೇಶದೊಡನೆ ಅಲ್ಲಿಗೆ ಹೋದ ವಿಷಯದಲ್ಲಿ ಅನೇಕರು ನಾನಾವಿಧ ಭಾವಗಳಂ ವ್ಯಕ್ತಪಡಿಸಿದಾಗ್ಯೂ ಅವರ ಸಮಾಗಮದಿಂದ ಮೆ॥ ತಿಲಕರವರಿಗೆ ಯಾವದಾದರೊಂದುವಿಧ ಉಪಕಾರ ವುಂಟಾಗಬಹುದೆಂತಲೂ ಕಳೆದ ಸಂವತ್ಸರ ಮಾಡಲ್ಪಟ್ಟ ಹೊಸಜೆಯಿಲ ಆಕ್ಟಿನ ನಿಬಂಧನೆಯನ್ನನುಸರಿಸಿ ಯುಕ್ತಪ್ರವರ್ತನೆಯುಳ್ಳ ಖೈದಿಗಳು ಅನುಭವಿಸಬೇಕಾದ ಶಿಕ್ಷಾಕಾಲವು ಇನ್ನೂ ಪೂರೈಸದಿದ್ದಾಗ್ಯೂ ಅಂತವರಂ ಬಿಡುಗಡೆ ಮಾಡತಕ್ಕ ವಿಷಯದಲ್ಲಿ ಜೆಯಿಲ ಆಫಿಸರರು ಸಿಫಾರಸ್ ಮಾಡಬಹುದೆಂಬುವದಕ್ಕೆ ಅವಕಾಶವಿರುವದರಿಂದ ಅದನ್ನನುಸರಿಸಿ ಜೆಯಿಲ್ ಅಧಿಕಾರಿಗಳಿಗೆ ಸಿಫಾರಸ್ ಮಾಡಿರಬಹುದೆಂತಲೂ ಕೆಲವರ ಅಭಿಪ್ರಾಯವಾಗಿರುತಿದೆ. ಮೆ॥ ನ್ಯೂಜೆಂಟರವರಿಗೂ ಮೆ॥ ತಿಲಕರವರಿಗೂ ನಡೆದ ಸಂಭಾಷಣೆಯು ಸ್ವಕೀಯವು ಹೊರಗಾದಹೊರ್ತು ಯಾವದನ್ನೂ ನಿರ್ಧರಿಸಿ ತಿಳಿಸಲು ಸಾಧ್ಯವಲ್ಲವು.

ಮದರಾಸ್ ಮ್ಯುನಿಸಿಪಾಲಿಟಿಯಲ್ಲಿ ದೀಪದ ಕಂದಾಯದಬಗ್ಗೆ ಸಾಲಿಯಾನಾ ಮೂವತ್ತಾರು ಸಾವಿರ ರೂಪಾಯಿಗಳ ವಸೂಲಿಯೂ ಆಬಗ್ಗೆ ಅರವತ್ತೆರಡುಸಾವಿರ ಚಿಲ್ಲರೆರೂಪಾಯಿಗಳ ಖರ್ಚೂ ಆಗುತಲಿದೆ. ಈಗ ಸೇಕಡ ಒಂದೂಕಾಲು ರೂಪಾಯಿನಂತೆ ವಸೂಲಾಗುತಲಿರುವ ಸದರೀ ಕಂದಾಯವನ್ನು ಯೆರಡೂಕಾಲು ರೂಪಾಯಿಗಳಿಗೆ ಹೆಚ್ಚಿಸಿ ಈಗಿನ ಕೆರೋಸಿನ್ ಎಣ್ಣೆಯ ದೀಪಕ್ಕೆಬದಲಾಗಿ ಗ್ಯಾಸ್ ಲೈಟಿನ ಹಜೆಯ ದೀಪವನ್ನು ಹಾಕಿಸಬೇಕೆಂದು ಕೆಲವರು ಮೆಂಬರುಗಳು ಅಭಿಪ್ರಾಯಪಟ್ಟು ಆವಿಷಯವಂ ಕುರಿತು ಕಳೆದ ವಾರದಲ್ಲಿ ನಡೆದ ಬೋರ್ಡ ಮೀಟಿಂಗಿನಲ್ಲಿ ಪ್ರಬಲ ವಿಚಾರ ನಡೆದು ಈ ಪ್ರಯತ್ನಕ್ಕೆ ಪ್ರತ್ಯರ್ಥಿಗಳಾಗಿ ಕೆಲವರ ಮೆಂಬರುಗಳು ಬಲವಾಗಿ ಆಕ್ಷೇಪಿಸಿ, ಕೆಲವರು ಮೆಂಬರುಗಳು ಅವರನ್ನು ಪ್ರೋತ್ಸಾಹಿಸಿ ಮಾತಾಡಿದ್ದರಿಂದ ಇತ್ಯರ್ಥ ಯಾವದೂ ಆಗದೆ ಮೀಟಿಂಗ್ ಅಡ್ಜರ್ನ ಆಯಿತು. ಮುಂದಿನ ಮೀಟಿಂಗಿನಲ್ಲಿ ಈ ವಿಷಯವು ಹ್ಯಾಗೆ ಪರ್ಯವಸಾನವಂ ಹೊಂದುವುದೊ ನೋಡಬೇಕು. ಯೂರೋಪಿಯನ್ ಷಾಪ ಕೀಪರುಗಳ ಕೋರಿಕೆಯಮೇಲೆ ಈಪ್ರಯತ್ನಕ್ಕೆ ಅವಕಾಶವುಂಟಾದಂತೆ ತೋರುತಿದೆ

ಮದರಾಸ್ ಗವರ್ನರವರಾದ ಘನವಾದ ಸರ್ ಆರ್ಥರ್ ಹಾವಲಾಕ್ ಪ್ರಭುಗಳವರು ತಿರುಚಿನಾಪಲ್ಲಿಗೆ ದಯಮಾಡುವ ಸಂದರ್ಭದೊಳು ಅವರವುಷೋಲ್ಲಾಸಾರ್ಥ, ಚಂದಾಮೂಲಕ ಕೂಡಿಸಿಟ್ಟಿರುವ ವಿಸ್ತಾರವಾದ ಧನವನ್ನು ಕ್ಷಣಿಕಗಳಾದ ಬಾಣಬಿರುಸು ವಗೈರೆ ವಿಷಯಾನಂದಗಳಿಗಾಗಿ ವ್ಯಯಮಾಡಬೇಕೆಂಬದಾಗಿ ಅಲ್ಲಿನ ಪ್ರಮುಖರು ಕೆಲವರು ನಿಶ್ಚಯಿಸಿದಂತೆಂತಲೂ, ಇಂತ ಕ್ಷಣಿಕ ವಿಷಯಿಕಾನಂದಗಳಿಂದ ಗವರ್ನರವರಂ ತೃಪ್ತಿಪಡಿಸಲೆತ್ನಿಸುವದಕ್ಕಿಂತಲೂ ಅವರ ಸ್ಮರಣೆಗೆ ಚಿರಕಾಲಿಕವಾಗಿರುವಂತೆ ಶಾಶ್ವತವಾದ ಯಾವದಾದರೊಂದು ಕಾರ್ಯವಂ ಮಾಡುವದುತ್ತಮವೆಂದು ಮದರಾಸ್ ಹಿಂದೂ ಪತ್ರಿಕೆಯ ವೃತ್ತಾಂತಲೇಖಕರೊಬ್ಬರು ಬರೆದಿರುತ್ತಾರೆ. ಇವರ ಅಭಿಪ್ರಾಯವನ್ನು ಸದರೀ ಪತ್ರಿಕಾಲೇಖಕರು ಪುರಸ್ಕರಿಸಿ ಅನುಮೋದಿಸಿ ಅಲ್ಲಿನ ನ್ಯಾಷನಲ್ ಹೈಸ್ಕೂಲಿನೊಳು ಗವರ್ನರವರ ಹೆಸರಿನಿಂದ ವಿದ್ಯಾರ್ಥಿವೇತನವಂ ಕೊಡುವಂತೆ ಯೇತಕ್ಕೆ ತಕ್ಕ ಏರ್ಪಾಡಂ ಮಾಡಲಾಗದೆಂದು ಪ್ರಶ್ನೆ ಮಾಡಿರುತ್ತಾರೆ. ಸರ್ ಹಾವಲಾಕ್ ಯವರು ನಿರರ್ಥಕಗಳಾದ ಪರಿಥವಣೆಗಳಿಗಿಂತಲೂ ಶಾಶ್ವತ ಪ್ರಯೋಜನಕರವಾದ ವಿಷಯಗಳನ್ನ್ಯಾವಾಗಲು ಅನುಮೋದಿಸುವರೆಂದು ನಂಬುತ್ತೇವೆ.

ಧಾರ್ ಸಂಸ್ಥಾನದ ಗತಿಸಿದ ಮಹಾರಾಜರವರ ಸ್ವೀಕೃತಪುತ್ರರಾದ ಮಹಾರಾಜಾ ಉದಯಾಜಿರಾವ್ ಬಾಬಾಸಾಹೇಬ ಪವಾರ್ ಯವರಿಗೆ ಕಳೆದ ತಿಂಗಳ ೨೯ನೆಯತಾರೀಖಿನದಿನ ಸಿಂಹಾಸನಾರೋಹಣೋತ್ಸವವು ನಡೆಸಲ್ಪಟ್ಟಿತು. ಅದೇದಿನ ಸಾಯಂಕಾಲ ನಾಲ್ಕು ಘಂಟೆಗೆ ಅಲ್ಲಿನ ಅರಮನೆಯಲ್ಲಿ ಬಹಿರಂಗವಾದ ದರ್ಬಾರ್ ಜರಿಗಿ ಅನೇಕರು ಆಹೂತರಾಗಿ ಹೋಗಿದ್ದರು. ಅಲ್ಲಿನ ಪೊಲಿಟಿಕಲ್ ಏಜಂಟರಾದ ಮೇಜರ್ ಸ್ಟೀವರ್ಟ ಯವರು ವೈಸರಾಯಿಯವರ ಪ್ರತಿನಿಧಿತ್ವೇನ ಬಂದು ಗತಿಸಿದ ಮಹಾರಾಜರವರ ಶ್ಲಾಘ್ಯಗಳಾದ ಗುಣಗಳಂಪ್ರಶಂಸಿಸಿ ಅವರ ವಿಯೋಗಜನ್ಯವಾದ ಖೇದವು ಅವರ ಪ್ರಜೆಗಳಂತೆ ಇಂಡ್ಯ ಗವರ್ನಮೆಂಟಿನವರಿಂದ ಬಹಳ ಅನುಭಾವ್ಯವಾಗಿದೆಯೆಂದು ದುಃಖೋಪಶಮನಕಗಳಾದ ವಾಕ್ಯಗಳಂ ಪ್ರಕೃತ ಮಹಾರಾಜರಂ ಸಮಾಧಾನಪಡಿಸಿ ಗತಿಸಿದ ಮಹಾರಾಜರವರ ಸ್ವೀಕೃತ ಪುತ್ರರಾದ ಪ್ರಕೃತ ಮಹಾರಾಜರವರನ್ನು ಸದರೀ ಸಂಸ್ಥಾನಕ್ಕೆ ಉತ್ತರಾಧಿಕಾರಿಯಾಗಿ ಗವರ್ನಮೆಂಟನವರು ಅಂಗೀಕರಿಸಿರುವಂತೆ ಬರೆದು ಬಂದ ವೈಸರಾಯಿಯವರ ಖರೀತಾವನ್ನು ಒಪ್ಪಿಸಿದರು. ಮಹಾರಾಜರವರದನ್ನಂಗೀಕರಿಸಿ ಸಂದರ್ಭೋಚಿತಗಳಾದ ತಮ್ಮ ರಾಜಭಕ್ತಿ ಕೃತಜ್ಞತಾಭಾವವಂ ಚಕ್ರವರ್ತಿನೀಯವರಿಗೂ ವೈಸರಾಯಿಯವರಿಗೂ ಪೊಲಿಟಿಕಲ್ ಏಜಂಟರವರಿಗೂ ವ್ಯಕ್ತಪಡಿಸಿ ಉಚಿತರೀತಿಯಿಂದ ಸತ್ಕರಿಸಿ ಗೌರವಿಸಿ ಕಳುಹಿಸಿದರೆಂದು ತಿಳಿಯಬರುತಿದೆ

ಈಗ್ಗೆ ಎರಡುವರ್ಷಗಳ ಹಿಂದೆ ಮುಂಬೈಯಲ್ಲಿ ಸ್ಥಾಪಿಸಲ್ಪಟ್ಟ ಮಹಾರಾಜ್ಞೀಯವರ ಪ್ರತಿಮೆಯ ತಲೆಯಮೇಲೂ, ಕಿರೀಟದಮೇಲೂ ತುಂಟಜನರು ಯಾರೋ ಡಾಂಬರನ್ನು ಹುಯಿದು ಕೆಡಿಸಿದ್ದು ಪ್ರಸಿದ್ಧವಿಷಯವಾಗಿದೆಯಷ್ಟೆ. ಅದರಿಂದ ಸದರೀ ಪ್ರತಿಮೆಯ ಮುಖ ಮೊದಲಾದ ಭಾಗಗಳಲ್ಲುಂಟು ಮಾಡಲ್ಪಟ್ಟ ಕಪ್ಪು ಚುಕ್ಕೆಗಳಂ ಹೋಗಲಾಡಿಸುವ ವಿಷಯದಲ್ಲಿ ಅಲ್ಲಿನ ಮರಮ್ಮತ್ ಇಲಾಖೆಯವರು ಮೊದಲಾದವರು ಮಾಡಿದ ಬಹುವಿಧ ಪ್ರಯತ್ನಗಳು ಫಲಕಾರಿಯಾಗದೆ ಅದರಿಂದ ಅದುಮೊದಲು ಸದರೀ ಪ್ರತಿಮೆಯನ್ನು ಚಾಪೆಹಾಕಿ ಮುಚ್ಚಿಟ್ಟಿದ್ದರು. ಈ ವಿಷಯದಲ್ಲಿ ಮಾಡಲ್ಪಟ್ಟ ಬಹುವಿಧೋಪಾಯಗಳಲ್ಲಿ ಒಂದೂ ಕೈಗೂಡದೆ ಹೋದುದರಿಂದ ಅದರ ಶಿರೋಭಾಗವನ್ನು ಮಾತ್ರ ಪ್ರತ್ಯೇಕಿಸಿ ಇಂಗ್ಲಾಂಡಿಗೆ ಕಳುಹಿಸಿ ಅಲ್ಲಿನ ಶಿಲ್ಪಿಗಳ ಮೂಲಕ ಸದರೀ ಕಪ್ಪುಚುಕ್ಕೆಗಳನ್ನೆಲ್ಲ ತೆಗೆಯಿಸಿ ತರಿಸಬೇಕೆಂದು ನಿಶ್ಚಯಿಸಿದ್ದರು. ಹೀಗಿರುವಲ್ಲಿ ಬರೋಡೆಯ ಶಿಲ್ಪವಿದ್ಯಾ ಶಾಲೆಯಲ್ಲಿ ಪಂಡಿತರಾಗಿದ್ದ ಮೆ॥ ತ್ರಿಭುವನದಾಸ ಕಲ್ಯಾಣದಾಸ ಗಜ್ಜಾರ್ ಯೆಂಬವರು ತಾವು ಸದರೀ ಕಪ್ಪುಚುಕ್ಕೆಗಳನ್ನೆಲ್ಲ ತೆಗೆದುಹಾಕುವದಾಗಿ ತಿಳಿಸಿ ಅದನ್ನು ಗವರ್ನಮೆಂಟನವರು ಒಪ್ಪಿದರಾಗಿ ಸದರೀ ಪಂಡಿತರು ಆಕಾರ್ಯಕ್ಕೆ ಪ್ರವರ್ತಿಸಿ ಬಹಳಮಟ್ಟಿಗೆ ಕಪ್ಪುಚುಕ್ಕೆಗಳನ್ನೆಲ್ಲ ತೆಗೆದುಹಾಕಿರುವಂತೆಯೂ ಇನ್ನು ಸ್ವಲ್ಪ ದಿನಗಳೊಳಗೆ ಪೂರ್ತಿಯಾಗಿ ತೆಗೆದು ಹಾಕುವರೆಂಬುವದಕ್ಕೆ ಸಾಕಾದಕಾರಣಗಳು ಕಂಡುಬರುತಿರುವಂತೆಯೂ, ಮುಂಬೈ ಪ್ರೆಸಿಡೆನ್ಸಿಯೊಳಗಾಗಿ ಇವರಷ್ಟು ಚತುರರಿಲ್ಲವೆಂಬ ಖ್ಯಾತಿಯಂ ಪಡೆಯುವವರಾಗಿದಾರೆಂತಲೂ ಮುಂಬೈ ಗೆಜೆಟ ಪತ್ರಿಕೆ ತಿಳಿಸುತದೆ.

ಈಗ್ಗೆ ಸುಮಾರು ಹದಿನೇಳು ವರ್ಷಗಳಕಾಲದ ಮೊದಲು, ಮೂರು ರೂಪಾಯಿಗಳ ತೂಕಕ್ಕೆ ಮೀರದ ವೃತ್ತಾಂತ ಪತ್ರಿಕೆಗಳ ಹಾಸಲ್, ಪತ್ರಿಕೆ ಒಂದಕ್ಕೆ ಮೂರು ಕಾಸಿನಂತೆ ಅವರ ದರಗಳು ಕಮ್ಮಿ ಮಾಡಲ್ಪಟ್ಟು ಬರುತ್ತು. ಪ್ರತಿತಿಂಗಳಲ್ಲೂ ರವಾನೆ ಮಾಡಲ್ಪಡುವ ಪತ್ರಿಕೆಗಳ ಸಂಖ್ಯೆಯನ್ನನುಸರಿಸಿ ಆಧಮಪಕ್ಷ ಮೂರು ತಿಂಗಳಿಗೊಂದಾವರ್ತಿ ಹಾಸಲನ್ನು ಮುಂದಾಗಿಪಡೆಕೊಂಡು ಪೋಸ್ಟಾಫೀಸಿನವರು ವಿಲಾಸದಾರರಿಗೆ ರವಾನೆ ಮಾಡುತಬಂದುದು ಮಾತ್ರವಲ್ಲದೆ ಪರಸ್ಥಳಗಳಲ್ಲಿನ ವೃತ್ತಾಂತ ಪತ್ರಿಕಾ ಲೇಖಕರಿಗೆ ಕಳುಹಿಸಲ್ಪಡುವ ಪತ್ರಿಕೆಗಳಿಗೆ ಹಾಸಲಿಲ್ಲದೆ ರವಾನಿಸುತಬಂದರು. ಈಗ ಒಂದು ವರ್ಷದ ಹಿಂದೆ ಪ್ರಬಲರಾದ ಕೆಲವರು ಇಂಗ್ಲಿಷ್ ಪತ್ರಿಕಾಧಿಪರು ಮೂರು ರೂಪಾಯಿ ತೂಕವನ್ನು ಹೆಚ್ಚಿಸಬೇಕೆಂದು ಇಂಡ್ಯ ಗವರ್ನಮೆಂಟಿಗೆ ಬರೆದುಕೊಂಡ ಅರ್ಜಿಗೆ ಫಲರೂಪವಾಗಿ, ಮೂರು ಕಾಸಿನ ಹಾಸಲಿಗೆ ಮೂರುರೂಪಾಯಿ ತೂಕವನ್ನು ನಾಲ್ಕು ರೂಪಾಯಿಗಳಿಗೆ ಹೆಚ್ಚಿಸಿ, ಎಡಿಟರುಗಳಿಗೆ ಹಾಸಲಿಲ್ಲದೆ ಕಳುಹಿಸಲ್ಪಡುತ ಬಂದ ಪತ್ರಿಕೆಗಳಿಗೆ ಸಹ ಹಾಸಲ್ ಕೊಡಬೇಕೆಂದು ವಿಧಿಸಿ, ಅರ್ಧ ಆಣೆ ಹಾಸಲಿಗೆ ರವಾನಿಸುತಲಿದ್ದ ನ್ಯೂಸ್ ಪೇಪರ್ ಬಸ್ತುಗಳ ಹತ್ತುರೂಪಾಯಿಗಳ ತೂಕವನ್ನು ಇಪ್ಪತ್ತು ರೂಪಾಯಿಗಳಿಗೆ ಹೆಚ್ಚಿಸಿ, ಈ ಭಾಗದಲ್ಲಿ ಸ್ವಲ್ಪ ರಿಯಾಯತಿಯಂ ತೋರಿಸಿದಂತೆ ತೋರಿಸಿ ಬೇರೆ ಮಾರ್ಗಗಳಲ್ಲಿ ಸ್ವಪ್ರಯೋಜನವಂ ದ್ವಾರಾ ಕಾಪಾಡಿಕೊಳ್ಳುತ ಒಂದು ವಿಧ ಹೊಸ ನಿಬಂಧನೆಗಳಂಮಾಡಿ ಅವು ಮುಂದಿನ ಅಕ್ಟೋಬರ್ ತಿಂಗಳ ಮೊದಲು ಜಾರೀಯೊಳು ಬರತಕ್ಕದ್ದೆಂದು ಕೊಟ್ಟ ಹುಕುಂ ಇಂಡ್ಯ ಗವರ್ನಮೆಂಟ ಗೆಜೆಟಿನಲ್ಲಿ ಘೋಯಿಷ್ ಆಗಿರುತದೆ

ತಿರುವಳ್ಳೂರು ಅಹೋಬಿಲ ಮಠದ ಪ್ರಕೃತ ಜೆಯ್ಯರವರು ಪೂರ್ವಾಶ್ರಮದಲ್ಲಿ ಕೇವಲ ದುರಾಚಾರವರರಾಗಿದ್ದುದರಿಂದ ಅವರನ್ನು ಸದರೀ ಮಠದ ಸ್ವಾಮಿಗಳಾಗಿ ನಿಯಮಿಸಿದ್ದು ಶಾಸ್ತ್ರ ನ್ಯಾಯ ವಿರುದ್ಧವಾದ ಕಾರ್ಯವಾಗಿರುತಿದೆ, ಆದುದರಿಂದ ಅವರನ್ನು ತೆಗೆದುಹಾಕಿ ಯೋಗ್ಯರಾದ ಬೇರೆಯೊಬ್ಬರನ್ನು ನಿಯಮಿಸಿಕೊಳ್ಳುವದಕ್ಕೆ ತಮಗೆ ಅಧಿಕಾರ ಕೊಡಬೇಕೆಂದು ಸದರೀ ಮಠದ ಶಿಷ್ಯಮಂಡಲಿಗೆ ಸೇರಿದವರನೇಕರು ಈಗ್ಗೆ ಯೆರಡು ವರ್ಷಗಳ ಹಿಂದೆ ಚಂಗಲ್ಪಟ್ಟ ಡಿಸ್ಟ್ರಿಕ್ಟ ಕೋರ್ಟನಲ್ಲಿ ದಾವಾ ಮಾಡಿ, ವಾದಿಗಳ ಪ್ರಾರ್ಥನೆಯಂತೆ ಅವರನ್ನು ತೆಗೆದುಹಾಕಿ ಬೇರೆಯೊಬ್ಬರನ್ನು ನಿಯಮಿಸಿಕೊಳ್ಳಬಹುದೆಂದು ಡಿಕ್ರಿಯಂ ಪಡೆದಿದ್ದರು. ಜೆಯ್ಯರವರು ಅದರಮೇಲೆ ಮದರಾಸ್ ಹೈಕೋರ್ಟನಲ್ಲಿ ಮಾಡಿದ್ದ ಅಪೀಲ್ ಕಳೆದ ವಾರದಲ್ಲಿ ವಿಚಾರಣೆಗೆ ಬಂದು ಉಭಯವಾದಿಗಳ ತರಫೆ ಬ್ಯಾರಿಸ್ಟರುಗಳ ವಾದವು ವಿಸ್ತಾರವಾಗಿ ನಡೆದಮೇಲೆ, ಅಪೀಲನ್ನು ಕೇಳುತಿದ್ದ ಇಬ್ಬರು ಯೂರೋಪಿಯನ್ ಜಡ್ಜಿಗಳು ಸೇರಿ, ಸಿವಿಲ್ ಪ್ರೊಸಿಜ್ಯುರ್ ಕೋಡಿನ ೫೩೯ನೆಯ ಸೆಕ್ಷನ್ ಅನುಸರಿಸಿ ಗುರುವಿನಮೇಲೆ ದಾವಾ ತರುವದಕ್ಕೆ ಶಿಷ್ಯರಿಗೆ ಅಧಿಕಾರವಿಲ್ಲವೆಂದು ಅಭಿಪ್ರಾಯಪಟ್ಟು ಕೆಳ ಕೋರ್ಟಿನ ಫೈಸಲನ್ನು ರದ್ದುಮಾಡಿ ಯೆರಡು ಕೋರ್ಟುಗಳ [illegible] ಖರ್ಚುಗಳನ್ನು ವಾದಿಗಳು ಪ್ರತಿವಾದಿಗೆ ಕೊಡತಕ್ಕದ್ದೆಂದು ತೀರ್ಮಾನಿಸಿದರು. ಈ ಫೈಸಲ್ ಮಹದನರ್ಥಕಾರಿಯಾದುದೆಂಬುವದರಲ್ಲಿ ಸಂಶಯಲೇಶವೂ ಇರಲಾರದು. ನೇಟಿವ್ ಸಂಪ್ರದಾಯ ಗಂಧವನ್ನು ಸಹ ಅರಿಯದ ಯೂರೋಪಿಯನ್ ಜಡ್ಜಿಗಳ ಕೈಗೆ ಮತಸಂಬಂಧವಾದ ಇಂತ ಮೊಕದ್ದಮೆಗಳು ಸಿಕ್ಕಿದಮೇಲೆ ಪ್ರಾಯಿಕವಾಗಿ ಅವು ಕೆಡುತವೆಯೇ ಹೊರತು ನಿಜಸ್ಥಿತಿಗೆ ಅನುಗುಣವಾಗಿ ವ್ಯವಸ್ಥೆಯಂ ಹೊಂದುವದಿಲ್ಲವೆಂಬುವದಕ್ಕೆ ಅನೇಕನಿದರ್ಶನಗಳಿಲ್ಲದೆ ಹೋಗಲಿಲ್ಲವು.

ಜರ್ಮನಿ ಸಂಸ್ಥಾನದ ಸಾಬಕ್ ಮಂತ್ರಿಯವರಾದ ಪ್ರಿನ್ಸ್ ಬಿಸ್ಮಾರ್ಕ ಯವರು ಕಳೆದ ತಿಂಗಳ ೩೦ನೆಯ ತಾರೀಖುರಾತ್ರಿ ಹನ್ನೊಂದು ಘಂಟೆಗೆ ಸರಿಯಾಗಿ ಕಾಲಗತಿಯನ್ನೈದಿದರೆಂಬ ದುಃಖಕರವಾದ ವೃತ್ತಾಂತವಂ ರೂಟರವರ ತಂತಿಮೂಲಕ ಅರಿತು ಬಹಳವಿಷಾದಿಸುತ್ತೇವೆ. ಗತಿಸಿದ ಮೆ॥ಗ್ಲಾಡಸ್ಟನ್ ಯವರಿಗೆ ಪ್ರಿನ್ಸ್ ಬಿಸ್ಮಾರ್ಕರವರು ಅಧಿಕಾರ ಗೌರವ ಪ್ರಾಭವಾತಿಶಯಗಳಲ್ಲಿ ಸಮಾನರೆನಿಸಿದ್ದರೂ ಮೊದಲನೆಯವರ ವಿಯೋಗಶ್ರವಣದಿಂದ ಪ್ರಜೆಗಳ ಹೃದಯದೊಳುಂಟಾದ ಭಾವವು ಮಾತ್ರ ವಿಜಾತೀಯವಾದುದಾಗಿರುತ್ತಿತ್ತು. ಆದಾಗ್ಯೂ ವರ್ತಮಾನ ಕಾಲೀನರೊಳು ಪ್ರಖ್ಯಾತ ಚಾರಿತ್ರರಾಗಿ ಶೂರರೆನಿಸಿದ್ದವರೊಬ್ಬರು ನಷ್ಟವಾದಬಳಿಕ ಸಕಲ ದೇಶೀಯರೂ ಚಿಂತಿಸದಿರಲಾರರು. ಈಗ ಗತಿಸಿದಂತ ಪ್ರಸಿದ್ಧಪುರುಷರು ಈಗಿನ ಜರ್ಮನೀರಾಜ್ಯ ವ್ಯವಸ್ಥಾಪಕರೆಂದು ಭಾವಿಸಬಹುದಾಗಿರುತಿದೆ. ಪ್ರಿನ್ಸ ಬಿಸ್ಮಾರ್ಕ ಯವರು ಪ್ರಸಿದ್ಧ ಪುರಾತನ ವಂಶಕ್ಕೆ ಸೇರಿದವರಾಗಿರುತ್ತಾರೆ. ಇವರು ೧೮೧೫ನೆಯ ಸಂವತ್ಸರ ಏಪ್ರಿಲ್ ಮೊದಲನೆಯ ತಾರೀಖಿನಲ್ಲಿ ಜನಿಸಿದರು. ಇವರ ಜನನಿಯವರು ಸಹ ಇವರಂತೆ ಪ್ರಜ್ಞಾಬುದ್ಧಿ ವಿವೇಕಶಾಲಿನಿಯಾಗಿಯೂ, ತಮ್ಮ ಪುತ್ರನ ಪುರೋವೃದ್ಧಿಯಲ್ಲಿ ವಿಶೇಷ ಶ್ರದ್ಧೆಯುಳ್ಳವರಾಗಿಯೂ ಇದ್ದುದರಿಂದ ಅವರ ವಿಚಾರಣಾಧಿಕಾರದೊಳು ಪ್ರಿನ್ಸರವರು ಪುರೋವೃದ್ಧಿಯನ್ನೈದಿ ಜಗತ್ಪ್ರಸಿದ್ಧರೆನಿಸಿದರು. ಪ್ರಿನ್ಸ ಬಿಸ್ಮಾರ್ಕ ಯವರು ಪ್ರಥಮತಃ ಲಾಯರಾಗಿ ಲೋಕಯಾತ್ರೆಯಲ್ಲಿ ಪ್ರವರ್ತಿಸಿ ಕ್ಷಿಪ್ರವಾಗಿಯೇ ಅದಂ ತ್ಯಜಿಸಿ ತಮ್ಮ ವಿದ್ಯಾ ಬುದ್ಧಿ ಶಕ್ತಿ ಧೈರ್ಯ ಸಾಹಸಪ್ರದರ್ಶನಕ್ಕೆ ಆಕರವಾದ ರಾಜ್ಯತಂತ್ರ ವಿಷಯಗಳಲ್ಲಿ ಅಭಿಮುಖರಾಗಿ ಕ್ರಮೇಣ ಜರ್ಮನಿರಾಜ್ಯಕ್ಕೆ ಆಧಾರಭೂತರೆನಿಸಿ ಎಲ್ಲರಿಂದಲು ಗೌರವಿಸಲ್ಪಡುತಲಿದ್ದರು ಇವರ ಮರಣವು ಪ್ರಬಲನಷ್ಟರೂಪವಾಗಿಯೂ ಚಿರಸ್ಮರಣೀಯವಾದುದಾಗಿಯೂ ಇರುತಿದೆ.

ಹೈದರಾಬಾದ ಸಂಸ್ಥಾನದ ತಾತ್ಕಾಲಿಕ ಪ್ರಭುತ್ವ ಕ್ರಮವಂ ಕುರಿತು ವಿಚಾರ ಮಾಡುತ ಅಲ್ಲಿನ ಅಧಿಕಾರ ವಿಚಕ್ಷಣೆಯಂ 'ಸಿಂಲಾನ್ಯೂಸ್' ಎಂಬ ಪತ್ರಿಕೆಯು ಉಪಪಾದನ ಮಾಡಿರುವ ವಿಧಾನವಂ ನೋಡಿದರೆ ನಮಗೆ ಆಶ್ಚರ್ಯವೂ ಭೀತಿಯೂ ಉಂಟಾಗದಿರಲಿಲ್ಲವು. ಹ್ಯಾಗೆಂದರೆ, ಈಗ್ಯೆ ಐದಾರು ವಾರಗಳ ಹಿಂದೆ ಘನವನ್ನೈದಿದ ಹೈದರಾಬಾದ್ ನಿಜಾಮರವರು ಯಾವದೋ ಒಂದು ಗೂಢಕಾರಣದ ಮೇಲೆ ಕೆಲವರು ದೊಡ್ಡ ಅಧಿಕಾರಿಗಳನ್ನು ಅವರ ಕೆಲಸಗಳಿಂದ ನಿವೃತ್ತಿ ಮಾಡಿಸತಕ್ಕದ್ದೆಂಬದಾಗಿ ತಮ್ಮ ಪ್ರಧಾನ ಮಂತ್ರಿಯವರಿಗೆ ಆಜ್ಞಾಪಿಸಲು ಮಂತ್ರಿಯವರು ತಮ್ಮ ಪ್ರಭುವಿನ ಆಜ್ಞೆಯಂ ಗೌರವಿಸಿ ತದ್ವತ್‌ಜಾರಿಯಲ್ಲಿ ತರಲಿಲ್ಲವು. ನಿಜಾಮರವರು ತಮ್ಮ ಆಜ್ಞೆಯು ನೆರವೇರಿಸಲ್ಪಟ್ಟಿರಬಹುದೆಂದು ನಂಬಿದಾರೆ. ಆ ಆಜ್ಞೋಲ್ಲಂಘನ ಕಾರಣವನ್ನರಿತಿರುವರೋ ತಿಳಿಯಲಿಲ್ಲವು. ಅನುಲ್ಲಂಘನೀಯವಾದ ರಾಜಾಜ್ಞೆಗೆ ಅನ್ಯಥಾ ನಡೆದಿರಲಾರದೆಂದು ನಂಬಿರುವ ಪಕ್ಷಕ್ಕೆ ತಮ್ಮ ಸಂಸ್ಥಾನದ ಆಡಳಿತ ವಿಷಯದಲ್ಲಿ ವಹಿಸಿರುವ ಶ್ರದ್ಧೆಯೂ ಉತ್ಸಾಹವೂ ಯೋಗಕ್ಷೇಮ ಚಿಂತೆಯೂ ಇಷ್ಟರವೆಂದೆಲ್ಲರು ಅನುಮೇಯಿಸಬಹುದಾಗಿರುತಿದೆ ಒಂದುವೇಳೆ ತಮ್ಮಾಜ್ಞೋಲ್ಲಂಘನವಾದ ಅಂಶವು ವ್ಯಕ್ತವಾಗಿದ್ದ ಪಕ್ಷಕ್ಕೆ ಅದು ಅವರ ಹೃದಯ ದೌರ್ಬಲ್ಯವಂ ವ್ಯಕ್ತಗೊಳಿಸದಿರಲಾರದು ಇಂತಹ ಅಮರ್ಯಾದಾರೂಪವಾದ ಅವಿಧೇಯತೆಯಂ ಕಂಡು ನಿಜಾಮರವರು ಹ್ಯಾಗೆ ಸಹಿಸಿದರೋ, ಮಂತ್ರಿಯವರಿಗೆ ತಮ್ಮ ಪ್ರಭುಶಕ್ತಿಯಂ ಮೀರಿ ಅವರ ಆಜ್ಞೋಲ್ಲಂಘನವಂ ಮಾಡಿ ಅವರ ಅಪ್ರೀತಿಗೆ ವಿಷಯವಾಗುವಷ್ಟರ ಧೈರ್ಯಸಾಹಸಗಳು ಹ್ಯಾಗೆ ಉಂಟಾಯಿತೋ, ಈ ಎರಡೂ ಕೇವಲ ಅರಿಯಕೂಡದ ವಿಷಯಗಳಾಗಿರುತಿವೆ. ಈ ಸಂದರ್ಭದಲ್ಲಿ ರೆಸಿಡೆಂಟರವರು ಯಾವ ಪಕ್ಷವನ್ನವಲಂಬಿಸುವರೋ ಮುಂದೆ ನೋಡಬೇಕು. ನಿಜಾಮರವರ ವರ್ತನವು ಪ್ರಸಕ್ತ ಸಂದರ್ಭದಲ್ಲಿ ಶ್ಲಾಘನೀಯವಲ್ಲವೆ ಹೋದಾಗ್ಯೂ ಅವರ ಮಂತ್ರಿಯವರ ವರ್ತನವು ಸ್ವಾಮಿಭೃತ್ಯ ನ್ಯಾಯಕ್ಕೆ ಬಹಳ ದೂರವಾದುದೆಂದು ಹೇಳಬೇಕಾಗಿರುತಿದೆ

LOCAL AND PROVINCIAL NEWS.

ಒಳದೇಶವು ಮತ್ತು ತಾಲ್ಲೂಕ್‌ಜಾತ ವೃತ್ತಾಂತಗಳು

ಹಿಂದುಗಳಾದ ಪ್ಲಾಂಟರುಗಳ ಸಹಾಯಾರ್ಥವಾಗಿ ಸರ್ಕಾರದವರು ಮಂಜರಾಬಾದಿನಲ್ಲಿ ಎರಡನೆಯ ವ್ಯವಸಾಯದ ಬ್ಯಾಂಕನ್ನು ಸ್ಥಾಪಿಸಿದಾರೆ.

ಕಳೆದ ಬೃಹಸ್ಪತಿವಾರದದಿನ ಇಲ್ಲಿ ಕುದುರೆ ಜೂಜಿಗೆ ಪ್ರಾರಂಭವಾಗಿ, ಆದಿನ ಮತ್ತು ಶನಿವಾರದದಿನ ನಡೆಯಿತು. ಈ ವಿನೋದವಂ ನೋಡುವದರಲ್ಲಿ ಆಸಕ್ತಿಯುಳ್ಳವರನೇಕ ಸಹಸ್ರ ಮಂದಿ ಪರೆತ್ ಡಿನ್ನೆಯಲ್ಲಿ ಸೇರಿದ್ದರು. ವರ್ಷದ ಬಾಧೆ ವಿಶೇಷವಾಗಿಲ್ಲದೆ ಜೂಜು ನಡೆಯುತಲಿದೆ

ಕಳೆದ ಮೇ ತಿಂಗಳಲ್ಲಿ ನಡೆದ ಮದರಾಸ್ ಯೂನಿವರ್ಸಿಟಿ ಬಿ. ಎ. ಪರೀಕ್ಷೆಯ ಪ್ರಥಮಭಾಗದಲ್ಲಿ ಒಟ್ಟು ೨೦೩ ಮಂದಿ ಉಮೇದ್‌ವಾರರು ತೇರ್ಗಡೆಯಂ ಹೊಂದಿರುತ್ತಾರೆ ಅವರಲ್ಲಿ ಒಂದನೆಯ ತರಗತಿಯಲ್ಲಿಬ್ಬರು, ೨ನೆಯ ತರಗತಿಯಲ್ಲಿ ೩೬ ಮಂದಿ, ೩ನೆಯ ತರಗತಿಯಲ್ಲಿ ೧೬೬ ಮಂದಿ.

ಕೋಲಾರದಲ್ಲಿ ಅಬ್ಕಾರೀ ಕಂಟ್ರಾಕ್ಟರಾಗಿದ್ದ ಅಪ್ಪಾದೊರೆ ಮೊದಲಿ ಚೆತ್ತಿಯ್ಯ ಚೆಟ್ಟಿ ಎಂಬವರು ಚಿನ್ನದ ಗಣಿಗಳಿಂದ ಕದ್ದಂತ ಚಿನ್ನವನ್ನು ಮದರಾಸಿನಲ್ಲಿರುವ ಭೂಲ್‌ಚಂದ ಎಂಬ ಸಾಹುಕಾರನಿಗೆ ಬಿಕರೀ ಮಾಡಿದ ಹಾಗೂ ಆ ಸಾಹುಕಾರನು ಸ್ವಲ್ಪ ಚಿನ್ನವನ್ನು ಕಲ್ಕತ್ತೆಗೆ ಕಳುಹಿಸಿ ಉಳಿದದ್ದನ್ನು ಅಲ್ಲಿನ ಅಗ್ರಬ್ಯಾಂಕಿನಲ್ಲಿ ಅಡವು ಹಾಕಿದ ಹಾಗೂ ಈ ಚಿನ್ನವೆಲ್ಲ ಒಟ್ಟು ೧೦-೧೨ ಸಾವಿರ ರೂಪಾಯಿ ಆಗಬಹುದೆಂತಲೂ ಈಗ ಆ ಜನರನ್ನೆಲ್ಲ ಪೋಲೀಸಿನವರು ಹಿಡಿದು ಪರ್ಯಾಪ್ತಿ ಮಾಡುವದರಲ್ಲಿ ದಾರೆಂತಲೂ ತಿಳಿದು ಬಂದಿದೆ.

ಈಗ್ಗೆ ಐದಾರು ದಿನಗಳ ಮೊದಲು ಸದಾ ಮೋಡವಾಗುತಲೂ, ಮಧ್ಯೆ ಮಧ್ಯೆ ತುಂತುರು ಹನಿಗಳು ಬೀಳುತಲೂ ಇದೆ. ಇದು ರಾಗಿಯ ಬಿತ್ತನೆ ಕೆಲಸಕ್ಕೂ, ಬಿತ್ತಿದ ಕಡೆ ತೆನೆ ಪುಟಾಗಿ ಮೊಳಕೆ ಹೊರಡುವದಕ್ಕೂ ಅನುಕೂಲವಾಗಿರುತಿದೆ, ಪರಂತು ಕೆರೀ ಸಾಗುವಳಿಗೆ ಸುತರಾಂ ಆಧಾರವಾದುದಲ್ಲವು. ಪರಮಾವಧಿ ಇನ್ನು ಒಂದು ವಾರದೊಳಗಾಗಿ ಬಲವಾದ ವರ್ಷ ಬಿದ್ದು ಕೆರೆಗಳಿಗೆ ಅಧಮಪಕ್ಷ ಮೂರು ತಿಂಗಳಿಗಾಗುವಷ್ಟು ನೀರಾದರು ಬಾರದೆ ಹೋಗುವ ಪಕ್ಷದಲ್ಲಿ ಈಸಂವತ್ಸರದೊಳು ಕಾರ್ತೀಕದ ಕೆಸರುಗದ್ದೆ ಸಾಗುವಳಿಗೆ ಸುತರಾಂ ಅವಕಾಶವಿರಲಾರದು. ಪುಣಜಿ ಸಾಗುವಳಿ ಆಗಿರುವ ಪ್ರದೇಶಗಳಲ್ಲಿ ಬೆಳೆಯು ಆಗಬಹುದು. ಆಹಾರ ಜಿನಿಸಿಗಳ ಧಾರಣೆಗಳು ಮಟ್ಟಾಗಿ ಒಂದೇ ವಿಧವಾಗಿಯೇ ಇವೆ ಜನಾರೋಗ್ಯವು ಸಾಮಾನ್ಯವಾಗಿದೆ

ಈಗ್ಗೆ ಸುಮಾರ್ ಎರಡು ತಿಂಗಳ ಹಿಂದೆ ದಕ್ಷಿಣ ದೇಶಕ್ಕೆ ಸೇರಿದ ಉದಯಾವರ ವಾಸಸ್ಥರಾದ ಮ|| ರಾ|| ಶ್ರೀ ಪಂಚಾಪಕೇಶ ಅಯ್ಯರವರ ಶಿಷ್ಯರಾದ ಗೋಪಾಲ ಸ್ವಾಮಿ ಗೋವಿಂದಸ್ವಾಮಿ ಯೆಂಬ ಇಬ್ಬರು ಗಾಯಕರು ಈ ಪುರಿಗೆ ಬಂದಿರುತ್ತಾರೆಂದು ತಿಳಿಸಿದ್ದೆವಷ್ಟೆ. ಬಾಲಕರಾದ ಇವರೀ ಗಾಯಕರ ಗಾನವು ಈಸಂಸ್ಥಾನದ ದಿವಾನರವರು, ಮತ್ತು ಮ|| ಕೃಷ್ಣಮೂರ್ತಿಯವರು ಮೊದಲಾದ ಬಹುಮಂದಿ ದೊಡ್ಡ ಮನುಷ್ಯರ ಮನೆಗಳೊಳು ನಡೆದು ಅವರವರ ಗೌರವಾನುಗುಣವಾಗಿ ಸನ್ಮಾನ ಮಾಡಿದರು. ಇನ್ನು ಅಲ್ಲಿಯಲ್ಲಿ ಕಚ್ಚೇರಿಗಳು ನಡೆಯುತಲಿವೆ. ಈ ಗಾಯಕರು ಬಾಲ್ಯ ವಯಸ್ಸಿನವರಾಗಿದ್ದಾಗ್ಯೂ ಅವರು ಗಾನವಿದ್ಯೆಯಲ್ಲಿ ಸಂಪಾದಿಸಿರುವ ಯೋಗ್ಯತೆಯು ಶ್ಲಾಘನಾರ್ಹವಾಗಿರುವದರಿಂದ, ಅಭಿಜ್ಞರಾದವರು ಅವರ ಗಾನವಂ ಕೇಳಿ ಸನ್ಮಾನಿಸುವುದ ನಿಜರ ವಿದ್ಯಾಸಂಪಾದನಾರ್ಥ ಶ್ರಮಿಸುವಂತವರಿಗೆಲ್ಲ ಪ್ರೋತ್ಸಾಹರೂಪವಾಗಿರುವುದು ಮಾತ್ರವಲ್ಲದೆ ಈ ದೇಶೀಯರು ವಿದ್ಯಾಭಿಮಾನಿಗಳೆಂಬ ಪ್ರತಿಷ್ಠೆಗೆ ಅವರಂ ಪಾತ್ರರನ್ನಾಗಿ ಮಾಡುವುದು. ಇವರಿಬ್ಬರಲ್ಲಿ ಗೋವಿಂದಸ್ವಾಮಿ ಎಂಬವರು ಫಿಡಲ್, ಮೃದಂಗ, ಘಟ, ತಬಲ್, ಮೋರ್ಚಿಂಗ್, ಮುರಳಿ, ಇನ್ನಿತರ ವಾದ್ಯಗಳಲ್ಲಿ ಪರಿಶ್ರಮ ಉಂಟಾದವರಾಗಿರುತ್ತಾರೆ ಮ|| ಕೃಷ್ಣಮೂರ್ತಿಯವರ ಗೃಹದೊಳು ಶ್ರೀಮನ್ಮಹಾರಾಣೀ ರೀಜಂಟರವರಿಗೂ, ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದರವರಿಗೂ ಔತನ ನಡೆದದಿನ ಶ್ರೀಮನ್ಮಹಾರಾಣಿಯವರೂ ಮಹಾರಾಜರವರೂ ಇವರ ಗಾನವನ್ನೂ ವಾದ್ಯಗಳನ್ನೂ ಕೇಳಿ ಬಹಳ ಸಂತೋಷಪಟ್ಟರೆಂದು ತಿಳಿಯಬರುತಿದೆ.

THE MYSORE GAZETTE.

ಮೈಸೂರು ಗೆಜೆಟ.

ತಾರೀಖು ೪ನೇ ಆಗಸ್ಟು ೧೮೯೮.

ಅಫಿಷಿಯಲ್ ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೨೭ನೇ ಜುಲೈ ೧೮೯೮.

ನಂ|| ೧೫೬೮-ಜು ೧೩೨.—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪ನೇ ಸೆಕ್ಷನ್ ಅನುಸರಿಸಿ, ಅಸಿಸ್ಟೆಂಟ್ ಕಮಿಷನರ ವ ಮೊದಲನೇ ಕ್ಲಾಸ ಮಾಜಿಸ್ಟ್ರೇಟರಾದ ಈಚಿಗೆ ಸಬ್‌ಡಿವಿಜನ್ ಆಫೀಸರಾಗಿ ಮೊಕರರ್‌ಮಾಡಲ್ಪಟ್ಟ ಮ|| ಕೆ. ದೊರಸ್ವಾಮಿ ಅಯ್ಯರ್ ಯವರು ಚಿಕ್ಕಬಳ್ಳಾಪುರ ಸಬ್‌ಡಿವಿಜನ್ನಿನ ಚಾರ್ಜಿನಲ್ಲಿ ಇಡಲ್ಪಟ್ಟಿರುತ್ತಾರೆ.

೨. ಸದರೀ ಮ|| ಕೆ. ದೊರಸ್ವಾಮಿ ಅಯ್ಯರ್ ಯವರಿಗೆ ೩೬ನೇ ಸೆಕ್ಷನ್ ಅನುಸರಿಸಿ, ಸಬ್ ಡಿವಿಜನಲ್ ಮಾಜಿಸ್ಟ್ರೇಟರ ಸಾಧಾರಣ ಅಧಿಕಾರಗಳೊಂದಿಗೆ ೩೭ನೇ ಸೆಕ್ಷನ್ ಪ್ರಕಾರ ಮೊದಲನೇ ಕ್ಲಾಸಿನ ಮಾಜಿಸ್ಟ್ರೇಟರುಗಳಿಗೆ ಗವರ್ನ್‌ಮೆಂಟನವರಿಂದ ಕೊಡತಕ್ಕ ಮಾಮೂಲು ಜಾಸ್ತಿ ಅಧಿಕಾರಗಳೂ ಪ್ರತ್ಯೇಕವಾಗಿ ಪರ್ಯಾಪ್ತಿ ಮಾಡುವ ಬಗ್ಯೆ ಅಧಿಕಾರವಿನಾ ಕೊಡಲ್ಪಟ್ಟಿರುತ್ತೆ.

ತಾ|| ೨೭ನೇ ಜುಲೈ ೧೮೯೮.

ನಂ|| ೧೮೯೪—ಮಿ. ಫೈ. ೪೦೪—೯೭.—ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಅಸಿಸ್ಟೆಂಟ್ ಸರ್ಜನ್ ಮ|| ಬಿ. ಡಿ. ರಘುವೇಂದ್ರ ರಾಯರಿಗೆ ೧೮೯೮ನೇ ಜುಲೈ ೧೬ನೇ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು ೨೮ನೇ ಜುಲೈ ೧೮೯೮.

ನಂ|| ೧೫೯೮-ಲೋ. ಫಂ. ೨೩೮-೯೬.—ಸೆ ೧೮೭೦ನೇ ಇಸವಿಯ ಬೆಂಗಳೂರ್ ಮ್ಯುನಿಸಿಪಲ್ ರೆಗ್ಯುಲೇಷನ್‌ಗಳ ೧೪ನೇ ಸೆಕ್ಷನ್ ಅನುಸರಿಸಿ, ಸಿಟಿ ಮ್ಯುನಿಸಿಪಲ್ ಆಫೀಸಿನ ಮ್ಯಾನೇಜರ್ ಎಂ. ರಾಮಚಂದ್ರರಾವ್, ಬಿ ಎ. ಯವರನ್ನು ಆರು ತಿಂಗಳುಗಳವರೆಗೆ ಅಜಮಾಯಿಷಿ ತರೀಕೆ ಬೆಂಗಳೂರ ಷಹರ್ ಮ್ಯುನಿಸಿಪಾಲಿಟಿಯಲ್ಲಿ ಮ್ಯುನಿಸಿಪಲ್ ತೆರಿಗೆಗಳ ಕಲೆಕ್ಟರಾಗಿ ಗವರ್ನ್‌ಮೆಂಟನವರು ಮೊಕರರ್‌ಮಾಡಿರುತ್ತಾರೆ

ತಾ|| ೩೦ನೇ ಜುಲೈ ೧೮೯೮.

ನಂ|| ೧೬೫೦—ಮಿ. ಫೈ. ೩—೯೩.— ಅಸಿಸ್ಟೆಂಟ್ ಸರ್ಜನ್‌ಗಳ ಇದರಡಿ ಕಂಡ ವರ್ಗ ವರ್ಗಗಳು ಹುಕುಂ ಮಾಡಲ್ಪಟ್ಟಿರುತಿವೆ.—

ಅಸಿಸ್ಟೆಂಟ್ ಸರ್ಜನ್ ಮ||ಸಿ. ಹನುಮಂತಸಿಂಗ್, ಮೈಸೂರು ಪ್ಯಾಲೆಸ ಡಿಸ್ಪೆನ್ಸರಿಯಿಂದ ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಬಗ್ಗೆ.

ಅಸಿಸ್ಟೆಂಟ್ ಸರ್ಜನ್ ಮ|| ಬಿ. ಡಿ. ರಘುವೇಂದ್ರರಾವ್, ಬೆಂಗಳೂರಲ್ಲಿ ಹುಜೂರ ನ ಕುಷ್ಠರೋಗದವರ ಮೆಡಿಕಲ್ ಸ್ಟೋರನಿಂದ ಮೈಸೂರು ಪ್ಯಾಲೆಸ ಡಿಸ್ಪೆನ್ಸರಿಗೆ.

ನಂ|| ೧೬೬೨—ಜು. ೧೬೧.—ಮೈಸೂರು ಅಡಿಷನಲ್ ಮ್ಯಾಜಿಸ್ಟ್ರೇಟ್ ಮ|| ಏ ಅನಂದರಾಯರ ಸಾಕ್ಷೀದಾರಿಯು ಜಿಪರ್ ಇಲಾಖೆಯಲ್ಲಿ ಗವರ್ನ್‌ಮೆಂಟನವರ ತಾಬೆಯಲ್ಲಿ ಹಂಗಾಮಿಯಾಗಿ ಇಡಲ್ಪಟ್ಟಿರುತ್ತೆ.

ಅಷ್ಟಗ್ರಾಮ ಡಿವಿಜನಿನ ಡಿಸ್ಟ್ರಿಕ್ಟ್ ವ ಸೆಷನ್ಸ ಕೋರ್ಟ ಶಿರಸ್ತೇದಾರ್ ಮ|| ಸಿ ಎಂ ರಾಮಾನುಜಯ್ಯಂಗಾರರು ಸದರೀ ಮ|| ಏ ಅನಂದರಾಯರು ಬೇರೆ ಕೆಲಸದಲ್ಲಿರುವ ಕಾಲದಲ್ಲಿಯೂ ಮತ್ತೊಂದು ಹುಕುಂ ಕೊಡುವ ಪರ್ಯಂತ ೩ನೇ ಕ್ಲಾಸ ಮ್ಯಾಜಿಸ್ಟ್ರೇಟಾಗಿ ಸಬ್ಸ್ಟಿಟ್ಯೂಟ್ ತರೀಕೆ ಅಕ್ಟಿಂಗ್ ಮಾಡುವಂತೆ ಮೊಕರರ್‌ಮಾಡಲ್ಪಟ್ಟು ಅಡಿಷನಲ್ ಮ್ಯಾಜಿಸ್ಟ್ರೇಟಾಗಿ ಮೈಸೂರಿಗೆ ನಿಯಮಿಸಲ್ಪಟ್ಟಿರುತ್ತಾರೆ.

ತಾ|| ೨೯ನೇ ಜುಲೈ ೧೮೯೮.

ನಂ|| ೩೪೯೪-ರೆ. ೨೯೩—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೮೯ನೇ ಸೆಕ್ಷನ್ ಅನುಸರಿಸಿ, ಪೆನ್ಷನ್ ಮೇಲೆ ಕೆಲಸದಿಂದ ನಿವೃತ್ತರಾಗುವ ಬಗ್ಯೆ ಹುಕುಮಾಗಿರುವ ಸಬ್‌ಡಿವಿಜನ್ ಆಫೀಸರಾದ ಮ|| ಕೆ. ರಾಮಚಂದ್ರರಾಯರಿಗೆ ಅವರು ಹಾಗೆ ಕೆಲಸದಿಂದ ನಿವೃತ್ತರಾಗುವದಕ್ಕೆ ಪೂರ್ವದಲ್ಲಿ ಚಿಕ್ಕಬಳ್ಳಾಪುರ ಸಬ್‌ಡಿವಿಜನಿನ ಚಾರ್ಜನ್ನು ಒಪ್ಪಿಸಿದ ತಾರೀಖಿನಾರಭ್ಯ ಮೂರು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

SUMMARY OF NEWS.

ವೃತ್ತಾಂತ ಸಂಗ್ರಹವು.

ಒರಿಗಾನಿಯಲ್ಲಿ ಬಹು ಸ್ತ್ರೀಯರಿಗೆ ಎಲೆಕ್ಷನ್ ಅಧಿಕಾರವನ್ನು ಕೊಟ್ಟಿರುತ್ತಾರೆ

ನೆಪೋಲಿಯನ್ ಬೋನಾಪಾರ್ಟನ ತಲೆಮಿದುಳಿನ ತೂಕವು ೪೩|| ಔನ್ಸಾಯಿತ್ತು.

ನಾಗಪುರದಲ್ಲಿ ಒಂದೇ ದಿವಸದಲ್ಲಿ ೯ ಅಂಗುಲ ಮಳೆಯಾದ್ದರಿಂದ ಬಹಳ ಪ್ರಾಣಹಾನಿಯುಂಟು ವರ್ತಮಾನವಾಗಿದೆ.

ಪರದೇಶಗಳಿಂದ ಬರುವ ಚರ್ಮವಸ್ತುಗಳಿಗೆ ರೋಗ ಹಿಡಿದು ಬರುವದೆಂದು ತಿಳಿದು, ಅವುಗಳನ್ನು ಕ್ವಾರಂಟೈನಿನಲ್ಲಿ ಇರಿಸುವ ವಿಚಾರ ನಡೆದಿದೆ.

ಬರ್ಮಾದೇಶದ ಹೆಂಗುಸರಿಗೆ ಯಾವ ಬಗೆಯಾಗಿಯೂ ಗಂಡಸರ ನಿರ್ಬಂಧವಿಲ್ಲದ್ದರಿಂದ ಅವರೇ ಜಗತ್ತಿನಲ್ಲಿ ಹೆಚ್ಚು ಸುಖವಾದ ಸ್ತ್ರೀಯರೆಂದು ಬಹು ಪಾಶ್ಚಾತ್ಯ ವಿದೂಷಿಯು ಅವರನ್ನು ಹೊಗಳುತ್ತಾಳೆ.

ಒಂದೇ ಬಿಲದೊಳಗಿಂದ ಅಜಮಾಸ್ ೪೦—೫೦ ಸರ್ಪಗಳು ಹೊರಗೆ ಹೊರಟು ಒಬ್ಬ ಸ್ತ್ರೀಯಳ ದೇಹಮೇಲೆ ಏರಿ ಆಕೆಯ ಮೊಲೆಹಾಲು ಕುಡಿದುವೆಂದು ಆಗ್ರಾದ ಒಂದು ಪತ್ರದಲ್ಲಿ ಬರೆದಿರುತದೆ.

ನ್ಯಾಯಮೂರ್ತಿ ರಾನಡೆಯವರು ಯೂನಿವರ್ಸಿಟಿಯ ಪದವಿಗಳ ಪರೀಕ್ಷೆಯಲ್ಲಿ ಮರಾಟೀ ಭಾಷೆಯನ್ನು ಸೇರಿಸುವ ಬಗ್ಗೆ ಮತ್ತೆ ಬಹಳ ಪ್ರಯತ್ನ ನಡೆಸಿದ್ದಾರೆ. ಆದರೆ ಅವರ ಪ್ರಯತ್ನವು ಸಫಲವಾಗುವಂತೆ ತೋರುವದಿಲ್ಲವು.

ಇಂಡಿಯಾ ದೇಶದವರು ಪ್ರತಿವರ್ಷದಲ್ಲಿಯೂ ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರಾಗುತಿರುವರಷ್ಟೆ. ಈ ವರ್ಷ ಇತರ ವರ್ಷಗಳಿಗಿಂತ ಹೆಚ್ಚು ಜನರು ತೇರ್ಗಡೆಯಾದರು, ಅವರಲ್ಲಿ ೧೬ ಜನ ಹಿಂದುಗಳೂ ೫ ಜನ ಮುಸಲ್ಮಾನರೂ, ೩ ಜನ ಪಾರಸಿಗಳೂ ಇದ್ದಾರೆ.

ಆಫ್ರಿಕದಲ್ಲಿ ಹೊಸ ಮಾದರಿಯ ಒಂದು ರೋಗವು ಉತ್ಪನ್ನವಾಗಿದೆ, ಇದರ ಲಕ್ಷಣವೇನೆಂದರೆ—ಈ ರೋಗ ಬಂದವರಿಗೆ ನಿದ್ರೆಯು ವಿಪರೀತವಾಗಿ ಬರುತದೆ. ಆತನು ಮಲಗಿದ ನಂತರ ಸಕಾಲಕ್ಕೆ ಅವನನ್ನು ಯಾರೂ ಎಬ್ಬಿಸದಿದ್ದರೆ ಅವನು ಅಲ್ಲೇ ಸತ್ತುಹೋಗುತ್ತಾನೆ.

ಆಗ್ರಾದಲ್ಲಿ ಒಬ್ಬ ಪೋಲೀಸ್ ಹೆಡ್ ಕಾನ್ಸ್ಟೇಬಲನು ಪೋಲೀಸರ ವರ್ತನದ ಬಗ್ಯೆ ಇಟ್ಟಿರುವ ರಜಿಸ್ಟರದಲ್ಲಿ ತನ್ನ ವರ್ತನದ ಬಗ್ಯೆ ಉತ್ತಮ ಷರಾ ಬರೆದು ಡಿ. ಪೋಲೀಸ್ ಸೂಪರಿಂಟೆಂಡೆಂಟರವರ ಸಹಿಯನ್ನು ಮಾಡಿದನು ಇದು ಕೈಲಿಗೆ ಒಂದು ಅಪರಾಧಿಗೆ ೨ ವರ್ಷಗಳ ಸಕ್ತ ಮಜಕೂರಿ ಶಿಕ್ಷೆಯಾಯಿತು

ವಿವೇಕಾನಂದ ಸ್ವಾಮಿಯು ಉತ್ತರ ಹಿಂದುಸ್ಥಾನದಲ್ಲಿ ಈಗ ಸಂಚಾರಕ್ಕೆ ಹೊರಟಿದ್ದಾರೆ. ಆದರೆ ಅಮೆರಿಕದಲ್ಲಿಯೂ ಯೂರೋಪದಲ್ಲಿಯೂ ಅವರಿಗೆ ಸತ್ಕಾರವಾದಂತೆ ಈಗ ಕೆಲವು ಪತ್ರಗಳು ಅವರು ಮೋಸಗಾರರೆಂದು ದೂಷಿಸುತ್ತವೆ ಆದರೆ ಅಮೆರಿಕದಿಂದ ಬಂದ ಶಿಷ್ಯರು ಅವರನ್ನು ಹಿಂಬಾಲಿಸಿರುವರು.

ಜರ್ಮಾನ್ ದೇಶದವರು ಎಲ್ಲಾ ವಿಷಯಗಳಲ್ಲಿಯೂ ಮುಂದಾಗಿರುವ ಹಾಗೆಯೇ ಯುದ್ಧಕ್ಕೆ ಬೇಕಾಗುವ ಹಡಗುಗಳನ್ನು ತಯಾರುಮಾಡಿಕೊಳ್ಳುವುದರಲ್ಲಿಯೂ ಮುಂದರಿಸುತ್ತಲೇ ಇದ್ದಾರೆ ಈಗ ಇವರು ಪ್ರಪಂಚದ ಎಲ್ಲಾ ಸ್ಥಾನಗಳಲ್ಲಿ ಒಟ್ಟು ೧೯ ಯುದ್ಧದ ಹಡಗುಗಳನ್ನು ತಯಾರುಮಾಡಿಸುತಲಿದ್ದಾರೆ. ಅಪೈಕಿ ೧೪ ಹಡಗುಗಳು ಇಂಗ್ಲೆಂಡಿನಲ್ಲಿ ತಯಾರಾಗುತಲಿವೆ.

ಯೂರೋಪ್ ಖಂಡದಲ್ಲೆಲ್ಲಾ ಅತ್ಯಂತ ಪ್ರಖ್ಯಾತಿಗೆ ಬಂದಿದ್ದ ಪ್ರಿನ್ಸ್ ಬಿಸ್ಮಾರ್ಕ್ ಎಂಬ ಜರ್ಮನಿ ರಾಜ್ಯದ ದೊಡ್ಡ ಮನುಷ್ಯರು ಕಳೆದ ಶನಿವಾರ ರಾತ್ರಿ ತನ್ನ ೮೪ನೇ ವಯಸ್ಸಿನಲ್ಲಿ ತೀರಿಹೋದರೆಂದು ತಂತಿ ವರ್ತಮಾನ ಬಂದಿದೆ. ಈ ದೊಡ್ಡ ಮನುಷ್ಯರು ಒಬ್ಬನು, ಪ್ರಷ್ಯಾ ರಾಜ್ಯಗಳಲ್ಲಿ ಕಳೆದ ೩೦ ವರುಷಗಳಲ್ಲಿ ಅನೇಕ ರಾಜಕೀಯ ಬದಲಾವಣೆಗಳು ನಡೆದದ್ದಕ್ಕೆ ಕಾರಣರಾಗಿದ್ದರು. ಜರ್ಮನೀ ಚಕ್ರವರ್ತಿಯವರು ಇಂಥಾ ದೊಡ್ಡ ಮನುಷ್ಯನನ್ನು ಕಳೆದುಕೊಂಡದ್ದಕ್ಕಾಗಿ ತುಂಬಾ ದುಃಖಪಡುತ್ತಾರೆ.

ಹಿಂದೂಸ್ಥಾನದ ವಾಯುವ್ಯ ಪ್ರಾಂತ್ಯಗಳಲ್ಲಿ ಪಠಾಣರು ಇಂಗ್ಲಿಷ್ ಗೌರ್ನಮೆಂಟಿನವರ ಮೇಲೆ ಯುದ್ಧ ಮಾಡುತಿದ್ದದ್ದು ನಿಂತು ಹೋಯಿತಷ್ಟೆ. ಈಗ ಅದೇ ಪಠಾಣರು ಎರಡು ಗುಂಪಾಗಿ ಒಬ್ಬರ ಮೇಲೊಬ್ಬರು ಯುದ್ಧ ಮಾಡಲು ಪ್ರಾರಂಭವಾಗಿದೆ. ಒಬ್ಬ ... ನ ಸೈನ್ಯಗಳನ್ನು ಕೂಡಿಸಿಕೊಂಡು, ಕಳೆದವಾರ ... ಯುದ್ಧ ಮಾಡಿದರು. ಎರಡು ಕಡೆಯಲ್ಲೂ ಸುಮಾರು ೩೦೦ ಜನರವರೆಗೆ ಹತರಾದಂತೆ ತಿಳಿದು ಬಂದಿದೆ. ಈ ಯುದ್ಧಗಳು ಹ್ಯಾಗೆ ಅಂತ್ಯವಾಗುವವೋ ನೋಡಬೇಕು

ಇಂಗ್ಲೆಂಡಿನ ಸಾಹುಕಾರರು ಹಿಂದುಸ್ಥಾನದಲ್ಲಿ ವ್ಯಾಪಾರಗಳಲ್ಲಿಯೂ ... ಹಾಕಿ ಅಪಾರವಾದ ಲಾಭವನ್ನು ಪಡೆಯುತ್ತಾರೆ ಸರ್ವದೇಶದಲ್ಲಿರುವ ಅನೇಕ ... ಚಿನ್ನದ ಗಣಿಗಳೂ ಇತರ ಅನೇಕ ಲಾಭಕರವಾದ ಕೆಲಸಗಳೆಲ್ಲಾ ಇಂಗ್ಲೀಷರ ಸ್ವಾಧೀನ. ಈಚೆಗೆ ಇಂಗ್ಲೆಂಡಿನಲ್ಲಿ ೧ ಲಕ್ಷ ಪೌಂಡುಗಳ ಮೂಲಧನವನ್ನು ಹಾಕಿ ಒಂದು ಕಂಪೆನಿಯನ್ನು ಮಾಡಿಕೊಂಡಿದ್ದಾರೆ, ಹಿಂದುಸ್ಥಾನದ ಬಂಗಾಳ ಕೊಲ್ಲಿಯಲ್ಲಿ ಮೀನು ಹಿಡಿಯುವ ಕೆಲಸವನ್ನು ಹೆಚ್ಚು ಮಾಡಬೇಕೆಂಬುದೇ ಇವರ ಮುಖ್ಯೋದ್ದೇಶವಾಗಿದೆ.

ಅಂಡಮಾನ್ ದ್ವೀಪದಲ್ಲಿ ತಾವು ಮಾಡಿದ ದುಷ್ಕರ್ಮದ ಫಲವನ್ನು ಅನುಭವಿಸುತ್ತಿದ್ದವರಲ್ಲಿ ಕೆಲವು ಬಂದಿಗಳು ತಪ್ಪಿಸಿಕೊಂಡಿದ್ದರು. ಆ ಪೈಕಿ ೫ ಜನ ... ಎಲ್ಲಾ ಜನರು ಸ್ವಲ್ಪ ದೂರವಾಗಿದ್ದ ... ಕೆಲಸ ಮಾಡುತ್ತಿದ್ದರು ತಮಗೆ ಸ್ವಲ್ಪ ದೋಣಿ ... ಎಂದು ಹೇಳಿ ದೋಣಿಯನ್ನು ಪಡೆದು ಸ್ವಲ್ಪ ದೂರದಲ್ಲಿರುವ ಆಸ್ಪತ್ರೆಗೆ ಹೊರಟರು. ದಾರಿಯಲ್ಲಿ ತಮ್ಮ ಕಾವಲಿಗಾಗಿ ಬಂದ್ದ ಪ್ಯಾರಿಲಿ ... ವರನ್ನು ಸಮುದ್ರಕ್ಕೆ ತಳ್ಳಿ ಹಾಕಿ ಅದೇ ದೋಣಿಯಲ್ಲಿ ಬರ್ಮಾಕ್ಕೆ ಹೋಗಿರಬಹುದು ಅವರನ್ನು ಎಲ್ಲಾ ಕಡೆಯು ಹುಡುಕಿದರೂ ಸಿಕ್ಕಲಿಲ್ಲ. ಅವರು ಬಹುಶಃ ಸಮುದ್ರದಲ್ಲಿ ಮುಳುಗಿ ಸತ್ತಿರಬಹುದೆಂದು ಊಹಿಸುತ್ತಿದಾರೆ. ಇವರೆಲ್ಲಾ ಬರ್ಮಾ ದೇಶದವರು.

VAIDYASARA SANGRAHA.

A TREATISE ON THE PRINCIPLES OF

HINDU MEDICINE.

Price, including Postage Rs. 5-0-0.

ವೈದ್ಯಸಾರಸಂಗ್ರಹ.

ಇದು ಚರಕ, ಬಾಹಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ.

ಅದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸಹಿತ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

Bangalore:—Printed and Published at the KARNATAKA PRESS, No. 40, HOSPITAL ROAD,—1898.

THE

Karnataka Prakasika.

ಜಾಹೀರಾತು ರೇಟ್ } ಮೊದಲನೆಯದಫೆ ಪಙ್ಕ್ತಿ ಒಂದಕ್ಕೆ 0 2 0
} ಎರಡನೆಯ ದಫೆ ಪಙ್ಕ್ತಿ ಒಂದಕ್ಕೆ 0 1 0
[ಮೂರು ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಹಾಕಿಸಬೇಕೋ ಪಙ್ಕ್ತಿ ಒಂದಕ್ಕೆ ಅರೆಯಂತೆಯೇ ಲೆಕ್ಕ ಮಾಡಲ್ಪಡುವದು.]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು — ಸ್ಥಳದವರಿಗೆ		ಪರಸ್ಥಳದವರಿಗೆ, ಪೋಸ್ಟೇಜ್ ಸೇರಿ	
ಸಂ.ಕೆ 1 ಕ್ಕೆ	3 0 0	ಸಂ.ಕೆ 1 ಕ್ಕೆ	4 0 0
6 ತಿಂಗಳಿಗೆ	2 0 0	6 ತಿಂಗಳಿಗೆ	2 8 0
3 ತಿಂಗಳಿಗೆ	1 4 0	3 ತಿಂಗಳಿಗೆ	1 8 0

ಪ್ರಜಾನಾವಿವಿಧಪ್ರವೃತ್ತ್ಯುಪಗಮಾರ್ಥ ಶರ್ಮ್ಮ... | ...

Vol. XXV. BANGALORE:—MONDAY, AUGUST 15, 1898. No. 33

Select Telegrams

London, 6th Aug—The *Novoe Vremya* announces that Russia has acquired the sultanate over Raheita, in the Red Sea, as a naval base

The House of Lords on Friday passed a Government Bill for improving the methods of vaccination, but rejected an amendment which has been accepted by the Government and the House of Commons, whereby the compulsory clause was waived if conscientious objection was declared before the Magistrate The commons have maintained the amendment, but the Lords will probably insist upon its rejection

The papers regard the relations between Great Britain and Russia on the China question as being critical, and complications are apprehended The London Stock market is weak

London, 7th Aug—The Queen Regent has approved of Spain's reply to America, accepting the conditions of peace, which will reach the White House, Washington, by Tuesday at the latest, when after Spain expects hostilities to cease forthwith

The Tsung li Yamen has ordered the Chinese Commissioner to co-operate with the Russian authorities in arranging the expropriation of land for the Russian railway in Manchuria, which the inhabitants of the country have hitherto refused to sell This action of the Tsung li Yamen's gives Russia the desired pretext for local intervention in Manchuria

London 8th Aug—Anglo-Russian relations in China are being followed with keen interest in America

The *New York Times* and the *Sun* advocate prompt and joint action by the United States and Britain

London 8th August—Mr Curzon, being asked in the House of Commons if the rumoured appointment to the Viceroyalty of India was true, replied that the report was unauthorised

London, 10th August—A meeting of the United States Cabinet was held yesterday evening, at which Spain's reply to the American terms of peace was considered It is believed the reply was not deemed wholly satisfactory, thus necessitating a further exchange of notes

London, 9th Aug—Reuter's special correspondent at Manila telegraphs that the city is in desperate extremities. The natives are eating rats and mice, and dysentery is raging amongst the whole community

It is reported that the Spanish losses, in the engagement of the 31st ultimo were three hundred killed and one thousand wounded

Mr Curzon has been appointed to succeed Lord Elgin as Viceroy of India.

THE

Karnataka Prakasika.

MONDAY, AUGUST 15, 1898

THE IMBROGLIO IN CHINA.

China has become the land of ambition for several nations Russia, Great Britain, France, Germany are gathered there, and each is striving to obtain what it can It seems likely that a good portion of the country will cut up, if something is not done to prevent this The policy of Russia is to obtain as many concessions as possible from the moribund Chinese Government and if these are not given willingly to extort them This power has taken possession of land in Manchuria in order to construct a railway, although the people were not willing to sell it This will give Russia an opportunity of interfering in the affairs of the province and also in those of China at large But this power is doing everything it can to thwart the British The latter wish to construct a railway to the port of Newchang, but the Russians have told the Chinese Government not to concede to the request made The Czar and those about him say that the railway must not be made, although they have forcibly taken possession of land on which to construct one The Chinese say that this question of the railway will determine the future of the country—whether England or Russia is to be predominant therein It seems not unlikely that the question can only be settled by an appeal to war, and there are signs that this may take place before long There is another point in dispute between the two powers England is willing to allow all the world to trade in China She only wishes to fare as do others. Not so, however Russia Where she has taken possession she wishes to be absolute, to keep her possessions to herself, and not allow others to trade there This is the policy of the Russian wherever he settles down He wants to be exclusive, to have everything to himself, to keep out the rest of the world The British hold that the trade of China ought to be open to the whole world, any one who wishes may trade there and gain whatever there is to be gained The British wish to maintain what is called "an open door" into China, the Russians wish to keep this door shut so far as they are concerned They wish to have what are called "spheres of influence," that is tracts over which they can have absolute control This the British are not willing to concede, and hence the friction between the two nations The Prime Minister lately declared in the House of Lords that England would protect China should an attack be made upon the country by any other power By this declaration Lord Salisbury took a great responsibility upon himself and upon the country He told Russia that if she attacked the country she would be fought against This is a warning to Russia, but, as we have said the responsibility is great China may quarrel with her neighbours when she knows she has somebody to back her up But it is the object of England to train the people to help themselves, to be able to hold their own in the councils of the world It is well known that the Chinese make good soldiers when they are properly trained and led, but they were neither trained nor led as they ought to have been in the late war But with English officers to do the work of training, China might soon have an army that could stand up against any other in the world, and the country might then defy the power of Russia It is to be hoped that a settlement will be made of the disputes in the Far East without resorting to war, but there is rather a gloomy outlook at present.

THE COMING VICEROY

Reuter sends word that Mr. Curzon, M P, Under Secretary, Foreign Department, has been appointed Viceroy of India. Though this gentleman is only a member of the House of Commons, he is the eldest son of a peer—Lord Scarsdale—and as his father is an old man he may at any time be elevated to the House of Lords If he remains in India, before the time is expired he will in all probability be raised to the peerage in his own right In one respect the appointment is a good one to India. He was for sometime Under Secretary for India, and during that time he must have picked up much knowledge about the country. But the Viceroy elect has been a great traveller He knows all about Central Asia, he has been in a portion of China, and is thoroughly acquainted with the affairs of Persia He understands what Russia is doing and what she wants Mr Curzon is probably better acquainted with the Afghan question than anybody else All this knowledge will be valuable as Russia will not be able to take advantage of a Viceroy who knows what they are scheming at. The Russians will not be able so easily to plot in the dark as they have done in the past But in this there is a danger The new Viceroy may interfere too much in the affairs of the surrounding countries, and this would not be for the good of India Besides it is possible that he may decide to settle the frontier in such a manner that the tribes may rise in rebellion, and give a large amount of trouble A Viceroy is wanted who will give his attention to the internal affairs of the country as well as the external We want to see the country well governed, expenditure reduced and the people made as happy as possible It is to be hoped that Mr Curzon will be the right man for the post, and that when he leaves the country he will be universally regretted

News and Notes

No fewer than three Gladstone memorial projects are now being organised

Unhappily it is now stated that H. R. H the Prince of Wales' complete recovery is hopeless

The Sultan of Turkey is ordering from Germany 1,000 quick firing field-pieces of the newest type, costing about £400 each.

The total revenue from the forests of the whole of India for the year 1898 99 is estimated at a crore and 73 lakhs, and the total expenditure at a crore and five lakhs, leaving a net income of 68 lakhs on the year's working.

The *Hindu* understands that Mr T M Swaminatha Ayyar, son of the late Sir T Muthuswami Ayyar, has offered to the Madras University a sum of ten thousand rupees, for founding a law scholarship or prize in memory of his late father

The report of the Gurdial Singh bribery case, which recently has excited so much public interest in the Punjab, was under the consideration of the Government of India, and it has dismissed Guru Dial Sing from the service

Babu Ramakanta Roy, a promising Brahmo young man, says the *Indian Messenger* sails for Japan to study mining engineering This is, we believe, the first instance of a Bengali student visiting the Mikado's kingdom We wish our young friend every success

The Madras Congress Committee have resolved to invite our distinguished and learned countryman Mr Ananda Mohan Bose, to preside at the next session of the National Congress In the event of this gentleman's refusal, Mr. Romesh Chunder Dutt will be asked to take the Presidential chair

Two murders have just been committed in the Punjab The murdered men are said to have been among the principal witnesses for the prosecution in the recent inquiry into the charge of bribery and corruption against Sardar Gurdial Singh, Assistant Commissioner in the Punjab One man was killed in Muzaffargarh and another in Montgomery, places which are 125 miles apart

The *Tribune* says that the foaling of a mule at Kapurthala has caused great excitement in the town Such a thing has never been heard of before and large crowds go daily to see the colt The owner charges only a pice for an inspection of the freak of nature The Pundits are consulting the stars and the *Shastras* as to what is portended by the event

A humane (?) provision has just been sanctioned by the Government of India to protect old horses that have done good work in the cavalry and artillery and other branches of the public service, from falling into the hands of those likely to starve and overwork them It is to the effect that when a cast horse does not realise twenty-five rupees at a public auction it is to be destroyed instead of being allowed to be sold!

Sir William Harcourt speaking at the National Memorial Committee of Mr Gladstone, hoped that the statues it had been resolved to erect would not be simply frock coat statues, such as it would be an abuse of language to say adorn Parliament square Sir John Mowbray who followed said that on the whole it was better to represent a man—as gracefully as possible—in the dress which he wore Sir William rejoined He was a Doctor of Oxford.

Some months ago a boy discovered a collection of old silver coins in the village of Chandaar in the Rajmahal sub-division The coins lay buried under ground in a small earthen pot All of them are reported to be rupees of the independent Kings of Bengal Two were issued by Sikandar Shah (1358—89), two by Ghiasuddin (1389—96), two by Shahabuddin (1409—1414) and four by Jelaluddin (1414—30) Coins relating to the twelfth and thirteenth centuries were found in March last in the Rawalpindi district.

The *Civil and Military Gazette*, Says the Madras *Hindu*, must have a very poor opinion

of the capacity of the would-be graduate of the Allahabad University, when it objects to Bryce's Holy Roman Empire as unsuited to his intellect. It is one of the best books that a student of history should read, and we trust the Allahabad University will not take the Lahore paper for an authority on University matters. As a critic of Commissariat measures our contemporary may be worthy of notice, but not as a judge of books, much less as a judge of Indian students.

A serious fight is reported between police and dacoits in the Nassik District. Some undertrial dacoits who escaped from the Magistrate's Court committed some serious depredations in the Nassik District, maiming and torturing the inhabitants. They carried off considerable property. They also stole some police rifles and uniforms. On several applications being made to the authorities, sixty armed police were despatched against the gang, who were found in a grove near the village of Barsal. The ringleader and eighteen dacoits were shot dead. Some police also were killed and wounded.

The Government of India has ruled that a clerk who is forced to be absent from office, owing to small pox or other infectious disease in his family, should be granted any casual leave which his official superior may consider admissible, and if no such leave is thought admissible, he should be granted such leave as may be admissible under the rules, for the period of absence from duty, together with the allowance, if any, also admissible. The period of absence may, however, be reckoned, if necessary, as a *dies non*, that is, it will not count, for or against any other leave that may have been earned or may be earned in future.—*Madras Mail*

Local and Provincial.

The Planters' Conference.—This sat all last week, and much business was transacted.

The Races.—Came to a close on Saturday last. The racing this year has been good, and the attendance was large at every meeting.

Removal of Office.—The *Mysore Herald* learns that the office of the Inspector General of Education will shortly be removed to Bangalore.

Books Registered.—During the quarter ending 30th June last only the "Mysore Law Reports, Vol. XVIII," was registered in the C. and M. Station of Bangalore.

The Weather.—Is still dry. No rain worth mentioning has fallen, and the ryots cannot cultivate their land. The season for sowing is passing, and soon it will be over.

The Polo Tournament.—This terminated on Monday last the last game being played between the IV (Q O) Hussars and the Golconda team, the latter beating easily.

There were forty six cases of plague at Hubli on the 6th of this month, and the same number of deaths. There were also forty-six cases on the 7th, while on 8th the number went up to seventy-nine.

Scholarships.—The Durbar of Mysore has requested the Inspector-General of Education to submit his opinion or recommendation in regard to the institution of Scholarships for any other backward classes than Mahomedans and Pallegars.

The Board of Directors of the Madras Railway has sanctioned the expenditure of Rs. 72,190 for the gas installation at Bangalore City Junction Station, the amount to be borne by the Madras, Mysore State, and Southern Mahratta Railways proportionately, in accordance with the traffic requirements.

The Mysore Gazette.

Bangalore, Thursday, 11th August 1898

NOTIFICATIONS BY THE GOVERNMENT OF MYSORE.

No 1711—*J* 168, *dated 3rd August* 98

Mr. D A. Ballard, Superintendent of Police, is transferred from the Kolar Gold Fields to French Rocks. To join on relief.

Mr. F D Hay, Assistant Superintendent of Police, is posted to the Kolar Gold Fields *vice* Mr D A Ballard, transferred. To join forthwith.

No 1714—*J* 171, *dated 3rd August* 1898.

Under Article 218 of the Mysore Service Regulations, Mr. V. Rangachariar, Munsiff of Nanjangud, Mysore district, is granted leave on medical certificate for three weeks, with effect from the 2[illegible] July 1898.

Mr. C Subba Rao, Sheristadar of the Subordinate Judge's Court, Mysore is appointed to act as Munsiff in the 3rd Grade, *sub protem vice* Mr. Rangachariar on leave or until further orders.

No. 1717—*J* 174, *dated 3rd August* 1898

Under Section 12 of the Code of Criminal Procedure, H. R. Srinivasa Rao, Amildar and 3rd Class Magistrate, Pavagada taluk, is appointed a Magistrate of the 2nd Class.

No 1718—*M. P* 387 92, *dated 3rd August* 98

Mr. K S Chandrasekhara Aiyar B A, B L, is promoted from the 2nd to the 1st Class of Assistant Commissioners, Schedule B, with effect from the 28th July 1898.

No 153[illegible]—*J* 199, *dated* [illegible] *August* 98

Mr. Ananda Row Sinde, B A, B L, Munsiff, 3rd Class, *sub Protem* is confirmed in that appointment, with effect from the 1st July 1898, *vice* Mr M. A. Narayan Iyengar, transferred permanently from the Judicial Department.

No 691—*R P* 90 97, *dated 30th July* 98

Under Article 188 of the Mysore Service Regulations, Mr M. Nanjaraj Ars, Assistant Commissioner, Mysore district, is granted privilege leave of absence for one month, with effect from the 2nd August 1898 or such other date as he may avail himself of the same, Mr. K. Mathan, Probationary Assistant Commissioner, being in charge of the District Treasury during the absence of Mr. Nanjraj Ars on leave or until further orders.

No 901—*R* 357 *dated 30th July* 98

Under Article 188 of the Mysore Service Regulations, Mr B G Krishnaiengar, Deputy Commissioner, Hassan district, is granted three months' privilege leave of absence preparatory to retirement and, with effect from the 24th July 1898, his retirement from service taking effect after the expiration of the same.

Mr. B, J Kumaraswami Naik, Assistant Commissioner, is temporarily transferred to the Bangalore district to be located at Closepet, (to join immediately after being relieved of the charge of the Police of the French Rocks sub-division)

No 1128—*R* 470, *dated 9th August* 98

The following transfers of Deputy Amildars are ordered and should be given effect to at once:—

Narasimha Srinivas Potnis from Harihar to Hosdurga

Muhammad Obeidulla from Hosdurga to Harihar

PUBLIC WORKS

No. 781—4270, *dated 30th July* 98

Mr R T Scaldwell, Superintending Engineer, Mysore Province, is granted furlough to Europe for one and half year, under Article 220 (*b*) of the Mysore Service Regulations, with effect from 1st August 1898, or date of departure.

No 802—4406, *dated 8th August* 98

The following promotion is ordered in the Engineer Establishment of the Mysore Public Works Department, Local, with effect from 1st April 1898 —

Shimoga—Mr. C Krishnaiengar, L. C. E., Sub-Assistant Engineer, 3rd Class, pay Rs. 80, to be Sub Assistant Engineer, 2nd Class, pay Rs. 100, Permanent.

No. 821—4459, *dated 9th August* 98.

Sub-Assistant Engineer Mr. C R Srinivasaiengar, attached to the Mysore Division, is granted privilege leave of absence for one month from date of departure.

ಕರ್ಣಾಟಕ ಪ್ರಕಾಶಿಕಾ.

೧೮೯೮ನೇ ಇಸವಿ ಆಗಸ್ಟ್ ೧೫ನೇ ತಾ|| ಸೋಮವಾರ.

ಧನಾಶೆಯು ದುಷ್ಕಾರ್ಯಪ್ರೇರಕವು.

ದ್ರವ್ಯಾಕಾಂಕ್ಷೆಯು ಮಹದನರ್ಥಕಾರಿಯೆಂಬುವದಕ್ಕೆ ನಿದರ್ಶನರೂಪವಾಗಿ ಗತ ವಾರದೊಳು ಒಬ್ಬ ನಂಬೂದ್ರಿ ಬ್ರಾಹ್ಮಣರ ವೃತ್ತಾಂತವನ್ನು ತಿಳಿಸಿದ್ದೆವಷ್ಟೆ. ಈ ವಾರದೊಳು ಮತ್ತೊಂದು ವಿಜಾತೀಯವಾದ ಸ್ತ್ರೀ ಘಾತುಕ ಕೃತ್ಯವನ್ನು ವರದಿ ತಿಳಿಸುತ್ತೇವೆ, ಹ್ಯಾಗೆಂದರೆ, ಈ ತಿಂಗಳ ೭ನೆಯ ತಾರೀಖಿನ ಮದರಾಸು ಆಂಧ್ರಪ್ರಕಾಶಿಕೆಯು ಅತ್ಯಂತಘೋರವಾದ ಸ್ತ್ರೀಹತ್ಯೆ ಒಂದು ನಡೆದಿರುವಂತೆ ಪ್ರಕಟಿಸಿರುತ್ತದೇನೆಂದರೆ, ಒಬ್ಬ ತರುಣಿಯು ತನ್ನ ಸಹೋದರನೊಡನೆ ಅತ್ತೆಯ ಮನೆಯಿಂದ ಹೊರಟು ತಾಯಿಯ ಮನೆಗೆ ಹೋಗುವಾಗ್ಯೆ ಮಧ್ಯಮಾರ್ಗದಲ್ಲಿ ಅನಂತಪುರಕ್ಕೆ ೪ ಮೈಲಿಗಳ ಫಾಸಲೆಯಲ್ಲಿರುವ ಕೋಡಿಪಲ್ಲಿ ಯೆಂಬ ಗ್ರಾಮದ ಸಮೀಪಕ್ಕೆ ಹೋಗುವಾಗ್ಯೆ ಸಾಯಂಕಾಲವಾದುದರಿಂದ ಆ ರಾತ್ರಿ ಅಲ್ಲೇ ಇದ್ದು ಮಾರನೆಯ ದಿವಸ ಮುಂದೆ ಪ್ರಯಾಣ ಮಾಡಬಹುದೆಂದಾಲೋಚಿಸಿ ಅನತಿ ದೂರದ ಗ್ರಾಮ ಪ್ರವೇಶವಂ ಮಾಡಿ ಒಬ್ಬನ ಮನೆಯಲ್ಲಿ ಸ್ವಲ್ಪ ಸ್ಥಳವಂ ಕೋರಿ ಅವರು ಕೊಟ್ಟದ್ದರಿಂದ ಸಹೋದರಿಯು ಮನೆಯೊಳಗೆ ಮಲಗಿಕೊಂಡಳು, ಸಹೋದರನು ಬೀದಿಯ ಜಗುಲಿಯ ಮೇಲೆ ಮಲಗಿಕೊಂಡನು. ಸದರೀ ಮನೆಯಲ್ಲಿದ್ದ ಐದು ಜನ ಸ್ತ್ರೀಯರು ಒಗ್ಗಟ್ಟಾಗಿ ಮಲಗಿದ್ದವಳು ಧರಿಸಿಕೊಂಡಿದ್ದ ೨,೦೦೦ ರೂಪಾಯಿಗಳ ಬೆಲೆ ಬಾಳತಕ್ಕ ಆಭರಣಗಳಂ ಕಂಡು ಆಶಿಸಿ ಅಪರಾತ್ರಿಯಾಗಿ ಆಕೆಯಂ ತುಂಡುತುಂಡಾಗಿ ಕತ್ತರಿಸಿ ಒಂದು ಮಡಿಕೆಯಲ್ಲಿ ಹಾಕಿ ಮುಚ್ಚಿಟ್ಟು ಯೇನೂ ಅರಿಯದವರಂತೆ ಇದ್ದರು. ಬೆಳಕು ಹರಿದಮೇಲೆ ಅಣ್ಣನು ತನ್ನ ಸೋದರಿಯಂ ಎಬ್ಬಿಸುವದಕ್ಕಾಗಿ ತಲೆಬಾಗಿಲಂ ತೆಗೆಯುವಂತೆ ಎರಡು ಮೂರು ಸಲ ಕರೆದು ಕೇಳಲು ಅವರು ಬಾಗಿಲಂ ತೆಗೆಯುವಂತೆಯೇ "ನಿಮ್ಮ ತಂಗಿಯು ಎರಡು ಘಂಟೆಯ ಹಿಂದೆ"ಯೇ ಎದ್ದು ಹೊರಗೆ ಹೊರಟುಹೋದಳೆಂದು ಹೇಳಿದರು, ಆಗ ಅಣ್ಣನಿಗೆ ಅನುಮಾನ ತೋರಿ ಹೊರಗಿನ ಬಾಗಿಲ ಚಿಲಕವನ್ನು ಹಾಕಿ ಬಿಗಿಸಿ, ಕೂಡಲೆ ಗ್ರಾಮ ಮುನಸೀಫ ಬಳಿಗೆ ಹೋಗಿ ನಡೆದ ವೃತ್ತಾಂತವಂ ತಿಳಿಯಪಡಿಸಿದನು. ಆತನು ಬಂದು ಕದವನ್ನು ಒಡೆದು ಒಳಗೆ ಪ್ರವೇಶಿಸಿ ಕೊಲ್ಲಲ್ಪಟ್ಟ ಹುಡುಗಿಯನ್ನು ಹುಡುಕುವಾಗ ಆಕೆಯ ಶರೀರದ ನಾನಾವಯವಗಳು ಕತ್ತರಿಸಲ್ಪಟ್ಟು ಮಡಿಕೆಯಲ್ಲಿ ಹಾಕಿ ಮುಚ್ಚಲ್ಪಟ್ಟ ಜಾಡೆಯು ಗೊತ್ತಾಗಿ ತಿಳಿಯಬಂತು. ಮುಂದಿನ ವರ್ತಮಾನವೇನೋ ಪ್ರಸಿದ್ಧವಾಗಿಯೇ ಇದೆ. ಆಹಾ! ಧನವೆ ಪಟ್ಟರ ಗುಣವಿಪರ್ಯಯವನ್ನುಂಟುಮಾಡುತಿದೆ!

"ಜನ್ಮೈಕ ಹಿತೈಷಿ."

ಕಳೆದತಿಂಗಳ ೨೫ನೆಯ ತಾರೀಖಿನ ಈ ಪತ್ರಿಕೆಯಲ್ಲಿ ಋಣ ಮತ್ತು ಧನವ್ಯಯ ವಿಚಾರವಂ ಕುರಿತ ಸ್ವಾಭಿಪ್ರಾಯ ಪ್ರವರ್ತಕವಾದ ಒಂದು ಉಪನ್ಯಾಸವಂ ಅನುಕ್ರಮವಾಗಿ ನಾವು ಪ್ರಕಟಿಸಿದ್ದುದಂ ಪ್ರಿಯ ಪತ್ರಿಕಾ ವಾಚನ ಕುತೂಹಲಿಗಳಾದವರೆಲ್ಲರು ಅವಲೋಕಿಸಿರಬಹುದೆಂದು ನಂಬುತ್ತೇವೆ. ತದ್ವಿಷಯಕವಾದ ಸ್ವಾಭಿಪ್ರಾಯವು ಪಂಡಿತ ಪುರಸ್ಕೃತವಾಗುವುದೋ ಇಲ್ಲವೋ ಎಂಬ ಶಂಕೆಯು ನಮ್ಮನ್ನಾವರಿಸಿತ್ತು. ಯದ್ಯಪಿ ಸದರೀ ವಿಷಯವು ಕೇವಲ ಮುಖ್ಯವಾದುದೆಂಬ ನಮ್ಮ ಅಭಿಪ್ರಾಯವು ಇತರರಿಂದ ಅನುಮೋದಿಸಲ್ಪಟ್ಟಕಾರಣ ನಮ್ಮ ಪರಿಶ್ರಮವು ಸಾಫಲ್ಯವನ್ನೈದಿದಬಗ್ಗೆ ಸಂತೃಪ್ತರಾದೆವು. ಪ್ರಸಕ್ತ ನಮ್ಮ ಲೇಖನವನ್ನು ಆಮೂಲಾಗ್ರವಾಗಿ "ಜನ್ಮೈಕ ಹಿತೈಷಿ" ಎಂಬ ಪರಿಕಲ್ಪಿತಾಂಕಿತವುಳ್ಳವರೊಬ್ಬರು ಆಂಧ್ರಭಾಷೆಯಲ್ಲಿ ತರ್ಜುಮೆಮಾಡಿ ಸ್ವಪ್ರಣೀತವಾದುದಾಗಿ ಈ ತಿಂಗಳ ೩ನೆಯ ತಾರೀಖಿನ ಮದರಾಸ್ ಆಂಧ್ರಪ್ರಕಾಶಿಕೆಯಲ್ಲಿ ಪ್ರಕಟಿಸಿದ್ದುದಂ ನಾವು ನೋಡಿ ಆನಂದಿಸಿದೆವು. ಪರಂತು ಅದರ ಆದ್ಯಂತದೊಳೆಲ್ಲಿಯೂ ಕರ್ಣಾಟಕ ಪ್ರಕಾಶಿಕೆಯ ಸ್ಮರಣೆ ಸಹ ತಲ್ಲೇಖಕರಿಗೆ ಬಾರದಿದ್ದುದಂ ನೋಡಲಾಗಿ, ಮೇಲೆ ಕಂಡಂತೆ 'ಜನ್ಮೈಕ ಹಿತೈಷಿ' ಯೆನಿಸಿಕೊಂಡವರಿಗೆ ಗ್ರಂಥ ಚೌರ್ಯ ದೋಷವನ್ನು ಪ್ರಜೆಗಳು ಆರೋಪಿಸುವರೋ ಎಂಬ ಭೀತಿಯು ನಮಗೆ ಅಂಕುರಿಸಿದ್ದೇನೂ ಆಶ್ಚರ್ಯವಲ್ಲವು. ಪರಂತು ತಲ್ಲೇಖಕರು 'ಜನ್ಮೈಕಹಿತೈಷಿ' ಎಂದು ಹೆಸರನ್ನಿಟ್ಟುಕೊಂಡು ನಿಮಿಲಾಕ್ಷರಿಯೊಡನೆ ಸಮಾಚರಿತ ಕೃತ್ಯಪ್ರವೃತ್ತರಾಗಿ ಕಂಡುಬರುವದರಿಂದ ಅವರಮೇಲೆ ಗ್ರಂಥಚೌರ್ಯ ದೋಷವನ್ನಾರೋಪಿಸಲಿಕ್ಕೆ ಅನ್ಯರಂತೆ ನಮಗೆ ಇಷ್ಟವಿಲ್ಲವಾಗಿ, ಪ್ರಕಾಶಿಕಾ ಶಬ್ದಮಾತ್ರದಿಂದ ಉಭಯ ಪತ್ರಿಕಾ ಭೇದವನ್ನೂ ಭಾಷಾ ಭೇದವನ್ನೂ ಪಕ್ಷಭೇದವನ್ನೂ ಅವರು ಕಂಡಂಗ ಮರೆತಿರಬಹುದೆಂದು ಎಣಿಸುವೆವು. ಆದಾಗ್ಯೂ ನಾವು ಪ್ರಥಮ ಭಾಗದಲ್ಲಿ ನಮ್ಮ ಅಭಿಪ್ರಾಯಕ್ಕೆ ಪೋಷಕವಾಗಿ ಪ್ರಕಟಿಸಿದ್ದ ಭರ್ತೃಹರಿ ಮಹಾಕವಿಪ್ರಣೀತ ಸುಭಾಷಿತ ಶ್ಲೋಕವನ್ನು ತೆಗೆದುಬಿಟ್ಟಿರುವಲ್ಲಿಕ್ಕೂ, ಅಂತ್ಯಭಾಗದಲ್ಲಿ ನಮ್ಮ ಕೆಲವು ವಾಕ್ಯಗಳನ್ನು ಬಿಡಿಸಬಿಟ್ಟಿರಲಿಕ್ಕೂ ಕಾರಣವು ನಮ್ಮ ಬುದ್ಧಿಸ್ಥವಾಗಲಿಲ್ಲವು.

ಪ್ಲೇಗ್‌ರೋಗದ ವ್ಯಾಪಕತೆ.

ಹುಬ್ಬಳ್ಳಿಯಲ್ಲಿ ಪ್ಲೇಗುರೋಗವು ದಿನೇದಿನೆ ಪ್ರಬಲವಾಗುತ ಪ್ರಾಣಹಾನಿಗಳನ್ನುಂಟುಮಾಡುತಲಿದೆ. ಈ ತಿಂಗಳ ೬ನೆಯ ತಾರೀಖಿನಲ್ಲಿ ೪೬ ಮಂದಿಗೆ ಸದರೀ ರೋಗ ತಗಲಿ ಎಲ್ಲರೂ ಮೃತಪಟ್ಟರು. ೭ನೆಯ ತಾರೀಖಿನಲ್ಲಿ ೪೬ ಮಂದಿಗೂ, ೮ನೆಯ ತಾರೀಖಿನಲ್ಲಿ ೭೯ ಮಂದಿಗೂ ತಗಲಿತು. ಹುಬ್ಬಳ್ಳಿಯ ಪ್ರಸ್ತುತಸ್ಥಿತಿಯು ಕೇವಲ ಶೋಚನೀಯವಾಗಿ ಕಾಣುತಿದೆ. ಇದು ಹೀಗಿರುವಲ್ಲಿ ಮುಂಬೈನೊಳು ಅದು ಮರಳಿ ಅಲ್ಲಲ್ಲಿ ವ್ಯಾಪಿಸಿ ಆಚೆ ಶನಿವಾರದವರ ಮೂವತ್ತೊಂದು ಮಂದಿಗೆ ತಗಲಿದಂತೆ ಅಲ್ಲಿನ ವೃತ್ತಾಂತ ಪತ್ರಿಕೆಗಳ ಬಾತಿಮಿದಾರರ ಲೇಖನಗಳ ಮೂಲಕ ತಿಳಿಯಬರುತಿದೆ. ಕಲ್ಕತ್ತೆಯಲ್ಲು ಪ್ರಯಾಗ ಪ್ರದೇಶದಲ್ಲಿಯೂ ಇಬ್ಬರಿಬ್ಬರಿಗಾದರು ಸದರೀ ರೋಗವು ತಗಲದಿರುವದಿಲ್ಲವು. ದಕ್ಷಿಣ ಮಹಾರಾಷ್ಟ್ರದೇಶಕ್ಕೆ ಸೇರಿದ ಅನೇಕ ಪ್ರದೇಶಗಳೊಳು ಈ ರೋಗವು ವೃದ್ಧಿಯಾಗ ಹತ್ತುವಂತೆ ಕಾಣುತಿದೆ. ಕರಾಚಿಯಲ್ಲಿ ಇನ್ನು ನಿಶ್ಶೇಷವಾಗಿ ನಿವೃತ್ತಿಯಾದಂತೆ ತೋರಲಿಲ್ಲವು. ಹೈದರಾಬಾದ ಪ್ರಾಂತದಲ್ಲಿ ಸದರೀ ರೋಗವು ಪ್ರಾರಂಭಾಪೇಕ್ಷೆಯಾ ಬಲವಾಗಿ ಮರಳಿ ಕಾಣಿಸಿ ಇದುವರೆಗೆ ಅದರ ವ್ಯಾಪಕತೆ ಇಲ್ಲದಿದ್ದ ಅನೇಕ ಪ್ರದೇಶಗಳಲ್ಲಿ ಸಹ ವ್ಯಾಪಿಸಿ ಪ್ರಾಣಘಾತಗಳಂ ಮಾಡುತಿವೆ. ದೈವಾತ್ ಹೈದರಾಬಾದ ಪಟ್ಟಣದಲ್ಲಿ ಮಾತ್ರ ಸದ್ಯಕ್ಕೆ ಈ ದುಷ್ಟರೋಗದ ಬಾಧೆ ಇಲ್ಲವೆಂದು ತಿಳಿದು ಸಂತೋಷಿಸುತ್ತೇವೆ. ಏನೇನ ಈ ದೇಶದ ಸರಹದ್ದು ಪ್ರಾಂತ್ಯದಲ್ಲಿರುವ ಹುಬ್ಬಳ್ಳಿಗೆ ಈಗ ಪ್ರಾಪ್ತವಾಗಿರುವ ದುರ್ದಶೆಯ ಬಗ್ಗೆ ಬಹಳ ಯೋಚನೀಯವಾಗಿರುತದೆ. ಇದುವರೆಗೆ ದಿನವೊಂದಕ್ಕೆ ಸುಮಾರು ಇಪ್ಪತ್ತು ಜನರಿಗೆ ತಗಲುತಲಿದ್ದುದು ಈಚೆಗೆ ಎಂಬತ್ತು ಮಂದಿಯವರೆಗೆ ತಗಲುವದಕ್ಕೆ ಪ್ರಾರಂಭಿಸಿರುವದರಿಂದ ಮುಂದೆ ಇನ್ನೆಷ್ಟು ಪ್ರಬಲಸ್ಥಿತಿಗೆ ಬರುವುದೋ ಎಂಬ ಭೀತಿಗೆ ಪ್ರಬಲ ಕಾರಣವಿಲ್ಲದೆ ಹೋಗಲಿಲ್ಲವು.

ಇದು ಹೀಗಿರುವಲ್ಲಿ ಕಳೆದವಾರದೊಳು ಕಾಂಚೀಪುರದಲ್ಲಿ ಯಾವನೋ ಒಬ್ಬನಿಗೆ ಪ್ಲೇಗುರೋಗ ತಗಲಿ ಮೃತಪಟ್ಟದ್ದಾಗಿ ಮದರಾಸಿನಲ್ಲಿರುವ ಪ್ಲೇಗಧಿಕಾರಿಗಳಿಗೆ ವರ್ತಮಾನ ಕಳುಹಿಸಲ್ಪಟ್ಟು ಅದರ ನಿಜಸ್ಥಿತಿಯನ್ನರಿಯುವದಕ್ಕಾಗಿ ಅಲ್ಲಿಂದ ಪ್ಲೇಗ ಡಾಕ್ಟರ ಮೊದಲಾದವರು ಕೆಲವರು ಅಲ್ಲಿಗೆ ಹೋಗಿರುವಂತೆ ತಿಳಿಯಬರುತದೆ. ಅವರ ಪರೀಕ್ಷೆಯಲ್ಲಿ ಸದರೀಯವನ ಮರಣಕ್ಕೆ ಕಾರಣವು ಪ್ಲೇಗರೋಗವೆಂದು ಯೇರ್ಪಡುವ ಪಕ್ಷದಲ್ಲಿ ಮದರಾಸ್ ಪ್ರಸಿಡೆನ್ಸಿಯಲ್ಲೂ ಸದರೀ ದುಷ್ಟರೋಗವು ವ್ಯಾಪಿಸಿದಂತೆ ಯೆಣಿಸಬೇಕಾಗುತದೆ. ಇದು ಕೇವಲ ಚಿಂತನೀಯವಾದ ವಿಷಯವಾಗಿರುವುದು.

ಅನುಚಿತಪ್ರಾರ್ಥನೆ.

ಮದರಾಸ್ ಗವರ್ನರರವರಾದ ಸರ್ ಆರ್ಥರ್ ಹ್ಯಾವ್‌ಲಾಕ್ ಸಾಹೇಬರವರು ಈಗ ದಕ್ಷಿಣದೇಶ ಸಂಚಾರ ಹೊರಟಿರುತ್ತಾರೆಯಷ್ಟೆ. ಈ ತಿಂಗಳ ೧೧ನೆಯ ತಾರೀಖಿನಲ್ಲಿ ತಿರುಚನಾಪಳ್ಳಿಗೆ ದಯಮಾಡಲು ಅಲ್ಲಿನ ಪ್ರಜೆಗಳು ವಿಶೇಷ ವಿಭವದೊಡನೆ ಗವರ್ನರ್ ಸಾಹೇಬರವರನ್ನು ಬರಮಾಡಿಕೊಂಡರು. ಅಲ್ಲಿನ ಹಿಂದೂಗಳೂ, ಮುಸಲ್ಮಾನರು, ಮತ್ತು ಮ್ಯೂನಿಸಿಪಲ್ ಸಮುದಾಯದವರು ಅವರವರಿಗೆ ಅವಶ್ಯಕಗಳಾಗಿ ಕಂಡುಬಂದ ಅಂಶಗಳನ್ನೆಲ್ಲ ನಮೂದಿಸಿ ಬೇರೆಬೇರೆ ವಿಜ್ಞಾಪನ ಪತ್ರಿಕೆಗಳನ್ನೊಪ್ಪಿಸಿದರು. ಮುಸಲ್ಮಾನರು ಒಪ್ಪಿಸಿದ ವಿಜ್ಞಾಪನ ಪತ್ರಿಕೆಯಲ್ಲಿ ತಮಗೆ ಜೂಡಿಷಲ್, ಮರಮ್ಮತ್, ಪೋಲೀಸ್, ಸರ್ವೆ ಮತ್ತು ಫಾರೆಸ್ಟ ಇಲಾಖೆಗಳಲ್ಲಿ ದೊಡ್ಡ ಅಧಿಕಾರಗಳಂ ಕೊಡಬೇಕೆಂತಲೂ, ತಿರುಚನಾಪಳ್ಳಿಯಲ್ಲಿ ಬಹುಮಂದಿ ಮಹಮ್ಮದೀಯ ಜನರಿರುವದರಿಂದ ಸದರೀ ಷಹರಿಗೆ ಮುಸಲ್ಮಾನ್ ಡೆಪ್ಯುಟಿ ಕಲೆಕ್ಟರೊಬ್ಬರನ್ನು ನಿಯಮಿಸಬೇಕೆಂತಲೂ ಪ್ರಾರ್ಥಿಸಿದ್ದರು. ಸದರೀ ಜನರು ನಮೂದಿಸಿದ್ದ ಪ್ರತಿ ಅಂಶಕ್ಕೂ ಪ್ರತ್ಯುತ್ತರವಂ ಹೇಳುತ ಬರುವಲ್ಲಿ ಗವರ್ನಮೆಂಟಿನವರಿಗೆ ಮುಸಲ್ಮಾನರ ವಿಷಯದಲ್ಲಿ ಪೂರ್ಣವಾದ ಅನುರಾಗವಿರುತದೆ, ಅದು ಕೇವಲ ಶಬ್ದಮಾತ್ರದಿಂದಲ್ಲದೆ ಕಾರ್ಯದಲ್ಲೂ ತೋರಿಸಲ್ಪಟ್ಟಿರುತದೆ ಅವರ ಕೋರಿಕೆಗಳು ಫಲಪ್ರದವಾಗಬೇಕಾಗಿದ್ದರೆ ಅದಕ್ಕವರು ಅರ್ಹರೆಂದು ನಿರೂಪಿಸಬೇಕು. ಅರ್ಹರಾದವರ ವಿಷಯದಲ್ಲಿ ಗವರ್ನಮೆಂಟಿನವರು ಕಾರ್ಯದ ಸಹಾಯಮಾಡದೇ ಇರುತ್ತಾರೆ. ತಿರುಚನಾಪಳ್ಳಿ ಷಹರಿಗೆ ಮಹಮ್ಮದ್ ಡೆಪ್ಯುಟಿ ಕಲೆಕ್ಟರೊಬ್ಬರನ್ನು ನಿಯಮಿಸಬೇಕೆಂದು ಅಪೇಕ್ಷಿಸುವ ವಿಷಯದಲ್ಲಿ ಗವರ್ನಮೆಂಟಿನವರು ತಕ್ಕಂತೆ ಆಲೋಚಿಸುವರು. ತಿರುಚನಾಪಳ್ಳಿ ತಾಲೂಕಿನಲ್ಲಿ ೩,೦೨,೦೦೦ ಜಿಲ್ಲೆ ಪ್ರಜೆಗಳಿರುತ್ತಾರೆ. ಅವರಲ್ಲಿ ೧೭,೦೦೦ ಮಂದಿ ಮಹಮ್ಮದೀಯರೆಂದು ತಿಳಿಯಬರುತದೆ. ಹಿಂದೂಜನರ ಸಂಖ್ಯೆಯು ಅತ್ಯಧಿಕವಾಗಿರುವುದು ಮಾತ್ರವಲ್ಲದೆ, ಸದರೀ ಡಿಸ್ಟ್ರಿಕ್ಟಿನಲ್ಲಿ ಅವರಿಗೆ ಮಾತ್ರ ಸಂಬಂಧವಾದ ಪ್ರಯೋಜನಗಳು ಬಹುವಾಗಿರುವದರಿಂದ, ಮಹಮ್ಮದ್ ಡೆಪ್ಯುಟಿ ಕಲೆಕ್ಟರನ್ನು ನಿಯಮಿಸಬೇಕಾದ ವಿಷಯದಲ್ಲಿ ಮುಸಲ್ಮಾನರಿಗಿರುವ ಆವಶ್ಯಕತೆಗಿಂತಲೂ ಹಿಂದು ಡೆಪ್ಯುಟಿ ಕಲೆಕ್ಟರನ್ನು ಮುಕರರ್ರಮಾಡಬೇಕಾದ ವಿಷಯದಲ್ಲಿ ಅವರಿಗಿರುವ ಬಾಧ್ಯತೆಯು ಬಲವತ್ತರವಾದುದೆಂದು ತಾವು ಅಭಿಪ್ರಾಯ ಪಡುವುದಾಗಿ ಅವರಿಗೆ ತಿಳಿಸಿ ತಮ್ಮ ಉತ್ತರವಂ ಪೂರೈಸಿದರು. ತರುವಾಯ ಅಲ್ಲಿನ ಪೀಪಲ್ಸ್ ಅಸೋಸಿಯೇಷನ್ ಸಂಘದವರೂ, ತರುವಾಯ ಅಲ್ಲಿನ ಮ್ಯೂನಿಸಿಪಾಲಿಟಿಯವರೂ, ಅವರವರು ಸಿದ್ಧಪಡಿಸಿಕೊಂಡಿದ್ದ ವಿಜ್ಞಾಪನ ಪತ್ರಿಕೆಗಳನ್ನೊಪ್ಪಿಸಿದರು ಅವೆಲ್ಲವನ್ನಂಗೀಕರಿಸಿ ಅವರವರಿಗೆ ತಕ್ಕಂತೆ ಉಚಿತ ರೀತಿಯಿಂದ ಪ್ರತ್ಯುತ್ತರಗಳಂ ಕೃಪೆಗೈದರು.

Occasional Notes
ನೈಮಿತ್ತಿಕವಿಷಯನ್ಯಾಸ.

ಪಾರ್ಲಕಿಮಿಡಿ ಸಂಸ್ಥಾನದ ರಾಜಪುತ್ರಿಯವರು ಈಚೆಗೆ ಪ್ರಸವಿಸಿ, ಕಾಲಗತಿಯನ್ನೈದಿದರೆಂದು ತಿಳಿದು ವಿಷಾದಿಸುತ್ತೇವೆ.

ಗತಿಸಿದ ಮಿ॥ ಗ್ಲಾಡ್‌ಸ್ಟನ್‌ಯವರ ಜ್ಞಾಪಕವನ್ನು ಪ್ರಜೆಗಳ ಹೃದಯದಲ್ಲಿ ಸ್ಥಿರಪಡಿಸುವದಕ್ಕಾಗಿ ಮೂರುವಿಧ ಪ್ರಯತ್ನಗಳು ನಡೆಸಲ್ಪಡುತಿರುವಂತೆ ತಿಳಿಯಬರುತಿದೆ. ಇವು ಏನು ರೂಪವಾದವೆಂದು ಮುಂದೆ ತಿಳಿಯಬರಬೇಕು

ಬಂಗಾಳೀ ದೇಶದಲ್ಲಿ ಬ್ರಹ್ಮ ಸಮಾಜಕ್ಕೆ ಸೇರಿದ ಬಾಬು ರಮಾಕಾಂತರಾಯ್ ಎಂಬ ವಿದ್ಯಾರ್ಥಿಯೊಬ್ಬನು ಗನಿಗಳ ಇಂಜನಿಯರ್ ವಿದ್ಯೆಯನ್ನು ಕಲಿಯುವದಕ್ಕಾಗಿ ಜಪಾನ್ ದ್ವೀಪಕ್ಕೆ ಹೊರಡುವವನಾಗಿರುತ್ತಾನೆಂದು ಇಂಡಿಯನ್ ಮೆಸ್ಸೆಂಜರ್ ಎಂಬ ಪತ್ರಿಕೆ ತಿಳಿಸುತಿದೆ.

ಸರ್ಪವಿಷ ಚಿಕಿತ್ಸೆ—ಹಾವು ಕಚ್ಚಿದ ಕೂಡಲೆ ಹಲ್ಲುಗಳು ತಗಲಿದ ಸ್ಥಳದಲ್ಲಿ ಯಿಪ್ಪತ್ತು ಚಿಟಿಗೆ ಬಂದೂಖ್ ಮದ್ದನ್ನಿಟ್ಟು ಬೆಂಕಿ ಕಡ್ಡಿಯಂ ಗೀಚಿ ಅದರಮೇಲಿಟ್ಟು ಹತ್ತಿಸಿದರೆ ಕೂಡಲೇ ವಿಷವು ನಾಶವಾಗುವದೆಂದು ಕಲ್ಕತ್ತಾ ಪತ್ರಿಕೆಯೊಂದು ತಿಳಿಸುತಿದೆ.

ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನಿಯವರ ಜ್ಯೇಷ್ಠಪುತ್ರರಾದ ಘನತೆಯಂ ಪಡೆದ ಪ್ರಿನ್ಸ್ ಆಫ್ ವೇಲ್ಸರವರಿಗೆ ಈಚೆಗೆ ಪ್ರಾಪ್ತವಾದ ಅಪಾಯವು ಪೂರ್ಣವಾಗಿ ನಿವೃತ್ತಿಯಾಗುವ ಪ್ರತ್ಯಾಶೆ ಇಲ್ಲವೆಂದು ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ.

೧೮೯೭—೯೮ನೆಯ ಸರ್ಕಾರಿ ಸಾಲಿನಲ್ಲಿ ಇಂಡ್ಯದೇಶದ ಕಾಲುವೆಗಳಿಂದ ಒಂದು ಕೋಟಿ ಎಪ್ಪತ್ತೊಂದು ಲಕ್ಷ ರೂಪಾಯಿಗಳ ಉತ್ಪತ್ತಿಯೂ, ಅದಕ್ಕಾಗಿ ಒಂದು ಕೋಟಿ ಐದು ಲಕ್ಷ ರೂಪಾಯಿಗಳ ಖರ್ಚೂ ಆಗಿ ಅರವತ್ತಾರು ಲಕ್ಷ ರೂಪಾಯಿಗಳು ಉಳಿಯುವವೆಂದು ಅಂದಾಜ್ ಮಾಡಲ್ಪಟ್ಟಿರುತದೆ.

ಪ್ಲೇಗ ರೋಗ ನಿವೃತ್ತ್ಯರ್ಥ ಮಾಡಬೇಕಾದ ಖರ್ಚುಗಳ ಬಗ್ಗೆ ಮುಂಬೈ ಮ್ಯೂನಿಸಿಪಾಲಿಟಿಯವರು ಹತ್ತು ವರ್ಷಗಳ ಕಾಲದಲ್ಲಿ ತೀರಿಸುವ ಷರತ್ತಿನಮೇಲೆ ಮೂವತ್ತು ಲಕ್ಷ ರೂಪಾಯಿಗಳು ಸಾಲವಾಗಬೇಕೆಂದು ಯೋಚಿಸಿ ಆಬಗ್ಗೆ ಇಂಡ್ಯ ಗವರ್ನಮೆಂಟಿನವರ ಮಂಜೂರಾತಿಯಂ ಕೋರಿದ್ದಲ್ಲಿ ಅವರು ಸದರೀ ಹಣವನ್ನು ಇಪ್ಪತ್ತು ವರ್ಷಗಳಿಗೆ ವಿಸ್ತರಿಸಿ ಕೊಟ್ಟಿರುತ್ತಾರೆ

ಬರುವ ಡಿಸೆಂಬರ್ ತಿಂಗಳೊಳು ಮದರಾಸಿನಲ್ಲಿ ನಡೆಯುವ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯ ಅಗ್ರಾಸನಾಧಿಪತ್ಯವಂ ವಹಿಸಬೇಕೆಂದು ಮಿ॥ ಆನಂದ ಮೋಹನಬೋಸ್‌ಯವರನ್ನು ಪ್ರಾರ್ಥಿಸಬೇಕು, ಅವರು ಒಪ್ಪದ ಪಕ್ಷದಲ್ಲಿ ಮಿ॥ ರೋಮೇಶಚಂದ್ರದತ್ತರವರನ್ನು ಪ್ರಾರ್ಥಿಸಬೇಕೆಂದು ಮದರಾಸ್ ಕಾಂಗ್ರೆಸ್ ಕಮಿಟಿಯವರು ನಿಶ್ಚಯಿಸಿರುವಂತೆ ತಿಳಿಯಬರುತದೆ.

ಅಮೇರಿಕನರು ಯುದ್ಧರಂಗದಲ್ಲಿ ಅತಿ ತ್ವರಿತದಿಂದ ಗುಂಡುಗಳಂ ಹಾರಿಸುವದಕ್ಕೆ ಅನುಕೂಲವಾಗಿರುವ ಹೊಸ ನಮೂನೆ ಒಂದು ಸಾವಿರ ತೋಫುಗಳಂ ತಯಾರ್ಮಾಡಿಸಿ ಕಳುಹಿಸುವಂತೆ ಜರ್ಮನೀದೇಶದ ಕಾರ್ಖಾನೆದಾರರೊಬ್ಬರಿಗೆ ಹುಕುಂ ಕಳುಹಿಸಿರುತ್ತಾರೆ. ಈ ನಮೂನೆ ತೋಫು ಒಂದಕ್ಕೆ ಕ್ರಯ ನಾನೂರು ಪೌಂಡುಗಳು.

ಸ್ಪೈನ್‌ದೇಶಕ್ಕೂ ಯುನೈಟೆಡ್ ಸ್ಟೇಟ್ಸ್ ಸಂಸ್ಥಾನಕ್ಕೂ ಸಮಾಧಾನ ವಿಷಯದಲ್ಲಿ ಅಮೇರಿಕಾ ದೇಶೀಯರು ತಿಳಿಸಿದ ಷರತ್ತುಗಳನ್ನು ಸ್ಪೈನ್‌ದೇಶದವರು ಒಪ್ಪಿದರಾಗಿ ತದನುಸಾರವಾಗಿ ಕರಾರ್ ಪತ್ರ ಸಕ್ಕದ್ದೆಂದು ಉಭಯ ಕಕ್ಷಿಯವರ ಪ್ರತಿನಿಧಿಗಳು ಒಪ್ಪಿಕೊಂಡು ಆ ಬಗ್ಗೆ ತಕ್ಕ ಏರ್ಪಾಡುಗಳಂ ಮಾಡುತಲಿರುವದರಿಂದ ಸದ್ಯಃ ಯುದ್ಧವು ಮುಗಿಯಿತೆಂದು ಎಣಿಸಬಹುದಾಗಿದೆ

ಹಿಂದೆ ಮದರಾಸ್ ಹೈಕೋರ್ಟ್ ಜಡ್ಜಿಯರಲ್ಲೊಬ್ಬರಾಗಿದ್ದು ಗತಿಸಿದ ಸರ್ ಟಿ ಮುತ್ತುಸಾಮಿ ಅಯ್ಯರವರ ಕುಮಾರರವರಾದ ಮಿ ಟಿ ಎಂ. ಸ್ವಾಮಿನಾಥ ಅಯ್ಯರವರು, ತಮ್ಮ ತಂದೆಯವರ ಜ್ಞಾಪಕಾರ್ಥ ಮದರಾಸ್ ಲಾ-ಕಾಲೇಜಿನೊಳು ಅವರ ಹೆಸರಿನಲ್ಲಿ ಒಂದು ವಿದ್ಯಾರ್ಥಿವೇತನವಂ ಕಲ್ಪಿಸತಕ್ಕ ಬಗ್ಗೆ ಅಲ್ಲಿನ ಯೂನಿವರ್ಸಿಟಿ ಅಧಿಕಾರಿಗಳ ವಶಕ್ಕೆ ತಾವು ಹತ್ತುಸಾವಿರ ರೂಪಾಯಿಗಳಂ ಕೊಡುವದಾಗಿ ಸೂಚಿಸಿರುವಂತೆ ಮದರಾಸ್ ಹಿಂದೂಪತ್ರಿಕೆಯು ತಿಳಿಸುತದೆ

ಅನಾಥಪ್ರೇತವು ರಣಹದ್ದುಗಳ ಬಾಯಿಗಳಿಗೆ ಸಿಕ್ಕಿದಂತೆ, ಚೀನಾ ದೇಶವು ಈಗ್ಗೆ ಪ್ರಬಲರಾದ ಯೂರೋಪ್ ಸಂಸ್ಥಾನಾಧಿಪತಿಗಳು ಕೆಲವರು ಕೈಗೆ ಸಿಕ್ಕಿಕೊಂಡು ನಿಟ್ಟುಸಿರು ಬಿಡುತಲಿದೆಯಷ್ಟೆ. ಇದೇ ವಿಷಯದೊಳು ರಷಿಯಾ ಸರ್ಕಾರಕ್ಕೂ ಬ್ರಿಟಿಷ್ ಸರ್ಕಾರಕ್ಕೂ ಪ್ರಬಲ ಕಲಹಕ್ಕೆ ಕಾರಣ ಹುಟ್ಟಾಗಿರುವಂತೆ ಈಚೆಗೆ ಬಂದ ತಂತಿವೃತ್ತಾಂತಗಳ ಮೂಲಕ ತಿಳಿಯಬರುತಿದೆ. ಸದರೀ ಉಭಯ ಸಂಸ್ಥಾನಾಧಿಪತಿಗಳಿಗೂ ಕಲಹವು ಹೆಚ್ಚಿ ಕೈ ಕಲೆಯುವ ಸಂದರ್ಭದಲ್ಲಿ ಪ್ರಬಲಾನರ್ಥ ಹೇತುವಾಗುವದರಲ್ಲಿ ಸಂಶಯವಿರಲಾರದು.

ರಾಜೆ, ನಾಸಿಕ, ಅಹಮದನಗರ, ಈ ಡಿಸ್ಟ್ರಿಕ್ಟುಗಳಲ್ಲಿ ಈಗ್ಯೆ ಕೆಲವು ತಿಂಗಳ ಮೊದಲು ಜನಗಳಿಗೆ ಪ್ರಾಣನಾಶ ಧನ ನಾಶದೊಡನೆ ದರೋಡೆಗಳನ್ನು ನಡೆಸುತಲಿರುವ ಕಳ್ಳರ ಗುಂಪಿಗೆ ಸೇರಿದವರನ್ನು ಪತ್ತೆಮಾಡಿ ಹಿಡಿಯುವಬಗ್ಗೆ ಮುಂಬೈ ಎಂಟನೆಯ ನೇಟಿವ್ ಇನ್‌ಫೆಂಟ್ರಿ ರಿಜಮೆಂಟಿನವರು ೧೫೦ ಮಂದಿ ಆಯುಧಪಾಣಿಗಳಾಗಿ ಸದರೀ ಪ್ರಾಂತಗಳಿಗೆ ಕಳುಹಿಸಲ್ಪಟ್ಟಿರುವಂತೆ ವರ್ತಮಾನ ಬಂದಿರುತಿದೆ. ಇಷ್ಟರ ಪರಿಧಿಸಹಿತಗಳೊಡನೆ ಹೋಗಿರುವ ಸೈನಿಕರ ಪ್ರಯತ್ನವು ಯಾವ್ಮಟ್ಟಿಗೆ ಸಫಲವಾಗುವದೋ ಮುಂದೆ ನೋಡಬೇಕು

ಮದರಾಸ್ ಹೈಕೋರ್ಟ್ ವಕೀಲರಾದ ಮಿ ಶೇಷಾಚಾರ್ಯರ್ ಬಿ ಎ. ಬಿ ಎಲ್ ಯವರು ಶ್ರೀ ಶಂಕರಾಚಾರ್ಯರವರು ಉಪನಿಷತ್ತುಗಳಿಗೆ ಮಾಡಿರುವ ವ್ಯಾಖ್ಯಾನಗಳನ್ನು ಇಂಗ್ಲಿಷ್ ಭಾಷೆಯಲ್ಲಿ ತರ್ಜುಮೆಮಾಡಿ ಅದಂ ಸ್ವಂತವೆಚ್ಚದಿಂದ ಮುದ್ರಿಸಿ ಪ್ರಕಟಿಸಿರುತ್ತಾರೆಂತಲೂ, ಸದರೀ ಆಚಾರ್ಯರವರು ಉಪನಿಷದರ್ಥ ಪ್ರತಿಪಾದನದೊಳು ತಳೆದಿರುವ ಅಸಾಧಾರಣ ವೈದುಷ್ಯವಂ ಮೆಚ್ಚಿ ರಾಯಲ್ ಏಷ್ಯಾಟಿಕ್ ಸೊಸೈಟಿಯವರು ಅವರನ್ನು ತಮ್ಮ ಸಂಘದ ಸಭ್ಯರೆಂಬರಾಗಿ ಅಂಗೀಕರಿಸಿದರೆಂತಲೂ ಆಂಧ್ರಪ್ರಕಾಶಿಕಾ ಪತ್ರಿಕೆ ತಿಳಿಸುತದೆ.

ಬ್ರಿಟಿಷ್ ಸರ್ಕಾರ್ ಸೇನೆಯಲ್ಲೂ ತೋಫುಗಳ ಗಾಡಿಯಲ್ಲೂ ಇನ್ನು ಬೇರೆನಿಗವಾಗಿಯೂ ಬಹುಕಾಲದವರೆಗೆ ಉಪಯೋಗಿಸಲ್ಪಟ್ಟ ಸನ್ನಿಕಟ ಉಂಟಾದ ಬಹುಮೇಲಾದ ಎದಲು ವಾರ್ಧಕ್ಯದಿಂದಲೂ ಕೆಲಸಕ್ಕೆ ಅನುಪಯುಕ್ತಗಳಾಗಿ ಹೋದ ಕುದುರೆಗಳನ್ನು ಹರಾಜ್ ಹಾಕಿಸುವದರಲ್ಲಿ ರಾಸ್ ಒಂದಕ್ಕೆ ಇಪ್ಪತ್ತೈದು ರೂಪಾಯಿಗಳು ಉತ್ಪತ್ತಿಯಾಗದೆ ಹೋಗುವ ಪಕ್ಷದಲ್ಲಿ ಹರಾಜ್‌ಮಾಡುವದಕ್ಕೆ ಬದಲು ಅವುಗಳನ್ನು ಕೊಂದುಹಾಕತಕ್ಕದ್ದೆಂದು ಇಂಡ್ಯ ಗವರ್ನಮೆಂಟಿನವರು ಹುಕುಂ ಮಾಡಿರುವಂತೆ ಒಂದು ಪತ್ರಿಕೆಯ ಮೂಲಕ ತಿಳಿದು ಬಹಳ ವಿಷಾದಿಸುವೆವು.

ಪಂಜಾಬ್ ದೇಶದಲ್ಲಿ ಅಸಿಸ್ಟೆಂಟ್ ಕಮ್ಮಿಷನರಾಗಿದ್ದ ಸರ್ದಾರ್ ಗುರುದಯಾಳುಸಿಂಗರವರ ಮೇಲೆ ತರಲ್ಪಟ್ಟ ರುಷ್ವತ್ ಮೊಕದ್ದಮೆಯಲ್ಲಿ ಅಪರಾಧಿಗೆ ವಿರೋಧವಾಗಿ ಸಾಕ್ಷ್ಯ ಹೇಳಿದವರಿಬ್ಬರು ಈಚೆಗೆ ಖೂನಿಮಾಡಲ್ಪಟ್ಟಿರುತ್ತಾರೆ. ಸದರೀ ಇಬ್ಬರಲ್ಲೊಬ್ಬನು ಮುಜಫರ್‌ನಗರದಲ್ಲೂ ಇನ್ನೊಬ್ಬನು ಮುಂಗಾನುರಿ ಎಂಬ ಪ್ರದೇಶದಲ್ಲೂ ಕೊಲ್ಲಲ್ಪಟ್ಟರು. ಈ ಪ್ರದೇಶಗಳು ಒಂದಕ್ಕೊಂದು ೧೫೦ ಮೈಲಿಗಳ ಫಾಸಲೆಯಲ್ಲಿರುತವೆ. ಈ ಕೃತ್ಯವು ನಡೆಸಿದವರು ಪತ್ತೆ ಆಗುವ ಪಕ್ಷದಲ್ಲಿ ಇದಕ್ಕೆ ಕಾರಣಭೂತರಾದವರು ಸಹ ಹೊರಪಟ್ಟು ಪ್ರಬಲಶಿಕ್ಷೆಗೆ ಗುರಿಯಾಗದೆ ಹೋಗಲಾರರು.

ಪಂಜಾಬ್ ದೇಶದೊಳು ಒಂದು ಅಸಿಸ್ಟೆಂಟ್ ಕಮ್ಮಿಷನರಾಗಿದ್ದ ಸರ್ದಾರ್ ಗುರುದಯಾಳು ಸಿಂಗ್ ಎಂಬವರ ಮೇಲೆ ತರಲ್ಪಟ್ಟಿದ್ದ ಲಂಚದ ಮೊಕದ್ದಮೆಯಲ್ಲಿ ಅವರ ವಿಚಾರಣೆಯಬಗ್ಗೆ ಗವರ್ನಮೆಂಟಿನವರಿಂದ ಮುಕರರ್ರಮಾಡಲ್ಪಟ್ಟಿದ್ದ ಕಮಿಟಿಯವರು ತಮ್ಮ ವಿಚಾರಣೆಯ ಫಲಿತಾಂಶವನ್ನು ಕುರಿತು ಗವರ್ನಮೆಂಟಿಗೆ ರಿಪೋರ್ಟ್ ಮಾಡಿ ಅದು ಅವರ ಆಲೋಚನೆಯಲ್ಲಿದೆಯೆಂತಲೂ, ಸದರೀ ರಿಪೋರ್ಟಿನಲ್ಲಿ ಅಪರಾಧಿಯ ಮೇಲೆ ತಪ್ಪನ್ನು ಸ್ಥಿರಪಡಿಸಿ ಕಮಿಟಿಯವರು ಅಭಿಪ್ರಾಯ ಕೊಟ್ಟಿರುವಂತೆಯೂ ಒಬ್ಬ ವೃತ್ತಾಂತಲೇಖಕರು ಒಂದು ಪತ್ರಿಕೆಗೆ ಬರೆದಿರುತ್ತಾರೆ.

ಬರುವ ಡಿಸೆಂಬರ್ ತಿಂಗಳ ಅಂತ್ಯಭಾಗದೊಳು ಮದರಾಸಿನಲ್ಲಿ ನಡೆಯತಕ್ಕ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯ ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾಗಿ, ಮಿ॥ ಪಿ. ಚೆಂಚಲರಾವ್ ಪಂತುಲು ಸಿ. ಐ. ಇ. ಯವರನ್ನು ಚುನಾಯಿಸಿ ಮುಕರರ್ರಮಾಡಿದರೆ ಬಹಳ ಶ್ಲಾಘ್ಯವಾಗಿರುವುದೆಂದು ವಿಶಾಖಪಟ್ಟಣದ ಸ್ಪೆಕ್ಟೇಟರ್ ಎಂಬ ಪತ್ರಿಕೆಯು ತಾತ್ಪರ್ಯ ಪಡುತಿದೆ. ಪಂತುಲುಯವರಿಗೆ ಶರೀರಾರೋಗ್ಯ ದಾರ್ಢ್ಯವು ಮೇಲೆ ಕಂಡ ಸಭಾಧ್ಯಕ್ಷತೆಯಂ ಕೈಗೊಳ್ಳುವದಕ್ಕೆ ಅವಕಾಶವನ್ನೀಯುವ ಪಕ್ಷದಲ್ಲಿ ಇದಕ್ಕಿಂತಲು ಯೋಗ್ಯವಾದ ಏರ್ಪಾಡು ಬೇರೆ ಯಾವದೂ ಕಾಣಿಸಲಾರದು.

ಈಗ ಇಂಡ್ಯರಾಜ್ಯದ ವೈಸ್‌ರಾಯ್ ಯವರಾಗಿರುವ ಲಾರ್ಡ್ ಎಲ್ಗಿನ್ ಸಾಹೇಬರವರು ಇನ್ನು ಮೂರುತಿಂಗಳ ಕಾಲದೊಳಗಾಗಿ ತಮ್ಮ ಅಧಿಕಾರವಂ ಬಿಟ್ಟು ಸ್ವದೇಶಕ್ಕೆ ಹೊರಡು ಹೋಗುವ ಸನ್ನಾಹಗಳು ನಡೆಯುತಲಿರುವದರಿಂದ ಅವರ ಸ್ಥಾನಕ್ಕೆ ಇಂಡ್ಯರಾಜ್ಯದ ಅಂಡರ್ ಸೆಕ್ರೆಟರಿಯವರಾದ ಮಿ॥ ಕರ್ಜನ್ ಸಾಹೇಬರವರು ನಿಯಮಿಸಲ್ಪಟ್ಟಾರೆ ಕಳೆದ ವಾರದಲ್ಲಿ ವಿಲಾಯತಿಯಿಂದ ತಂತಿ ವೃತ್ತಾಂತ ಬಂದಿರುತದೆ. ಇವರ ಸ್ವಾಭಾವಿಕ ಗುಣಗಳ ವಿಷಯದಲ್ಲಿ ದೃಷ್ಟಿಭೇದದಿಂದ ವೃತ್ತಾಂತ ಪತ್ರಿಕೆಗಳ ಅಭಿಪ್ರಾಯಗಳು ಭಿನ್ನಗಳಾಗಿರುತವೆ ಅವು ಮುಂದೆ ತಿಳಿಯತಕ್ಕವು.

ಈಚೆಗೆ ಕಪರ್ತಲಾ ಸಂಸ್ಥಾನದಲ್ಲಿ ಒಂದು ಹೇಸರಕತ್ತೆಯು ಕುದುರೆ ಮರಿಯನ್ನು ಹಾಕಲು ಇದುವರೆಗೆ ಯಾವ ಕಾಲದಲ್ಲಿಯೂ ಕೇಳಿ ಅಥವಾ ನೋಡಿದ್ದಿಲ್ಲದ ಈ ವಿಚಿತ್ರ ವಿಷಯವನ್ನು ನೋಡುವದಕ್ಕೆ ಜನರು ಗುಂಪುಗುಂಪಾಗಿ ಹೋಗಿ ನೆರೆಸುವಲ್ಲಿ ಸದರೀ ಕತ್ತೆಯ ಸ್ವಾಮಿಯಾದವನು ದೊಡ್ಡಜನರಿಂದ ಫೀ ಇಷ್ಟೆಂದು ನಿಷ್ಕರ್ಷಿಸಿ ವಸೂಲ್ಮಾಡಲಾರಂಭಿಸಿರುತ್ತಾನೆ. ಸ್ವಭಾವವಿರುದ್ಧವಾಗಿ ಉಂಟಾದ ಈ ವೈಚಿತ್ರ್ಯವು ಮುಂದೆ ಪ್ರಾಪ್ತವಾಗಬಹುದಾದ ಯಾವದೋ ಒಂದು ಪ್ರಜಾನಷ್ಟಕ್ಕೆ ಸೂಚನೆಯಾಗಿರಬೇಕೆಂದು ಅಲ್ಲಿನ ಪಂಡಿತರೆಲ್ಲರು ಕೂಡಿ ಶಾಸ್ತ್ರಗಳನ್ನೂ ಗ್ರಹಗಳ ಗತಿಗಳನ್ನೂ ಶೋಧಿಸುತಲಿದಾರೆಂದು ಲಾಹೋರ್ ಪತ್ರಿಕೆಯೊಂದು ತಿಳಿಸುತದೆ.

ವೃತ್ತಾಂತಪತ್ರಿಕಾಲೇಖಕರಸ್ವಾತಂತ್ರ್ಯವು ಕಡಮೆ ಮಾಡುವದೆಷ್ಟು ಮಟ್ಟಿಗೂ ಯೋಗ್ಯವಾದ ಕಾರ್ಯವಲ್ಲವೆಂದು ಇಂಗ್ಲೀಷ್‌ದೇಶದ ಮೋರ್ಲೆಯವರ ಅಭಿಪ್ರಾಯವಾಗಿರುತದೆ. ಸದರೀ ರಾಜ್ಯದಲ್ಲಿ ಪತ್ರಿಕಾಲೇಖಕರೆಷ್ಟರ ದುರ್ನಡತೆಯುಳ್ಳವರಾಗಿದ್ದರೂ ಉಪೇಕ್ಷೆಯಾಗುವದಿಲ್ಲವೆಂತಲೂ, ಪರಂತು ಗವರ್ನಮೆಂಟಿನವರಿಗೆ ಅಪ್ರಿಯಕರವಾದ ವಿಷಯಗಳಂ ಕುರಿತು ಪತ್ರಿಕೆಗಳಲ್ಲಿ ಬರೆದು ವಿಚಾರ ಮಾಡಿದರೆ ಅಂತವರು ವಿಚಾರಣೆ ಮಾಡಲ್ಪಡದೇನೇ ಜೈಲ್‌ಶಿಕ್ಷೆ ವಿಧಿಸಲ್ಪಡುವರೆಂತಲೂ ತಿಳಿಯಬರುತದೆ. ಈ ನಿಬಂಧನೆಯು ಈ ಇಂಡ್ಯಾದೇಶದೊಳು ಜಾರಿಯಲ್ಲಿ ತರಲ್ಪಡುವದೇನೂ ಆಶ್ಚರ್ಯವಲ್ಲವು. ಈಗ ಉಪಯೋಗಿಸಲ್ಪಡುತ್ತಿರುವ ನಿಬಂಧನೆಯು ಸ್ವಲ್ಪ ಹೆಚ್ಚುಕಡಿಮೆಯಾಗಿ ತತ್ಸದೃಶವಾದುದೆಂದೇ ಎಣಿಸಲ್ಪಡಬೇಕಾಗಿದೆ.

ಮದರಾಸಿನಲ್ಲಿ ಕೆಲವರು ಶೆಟ್ಟಿಗಳು ತಮ್ಮ ಮನೆಗಳ ಬೀದಿಯ ಜಗುಲಿಯಮೇಲೆ ತಗ್ಗಡಿಗೆಳನ್ನಿಟ್ಟುಕೊಂಡು ಮಾರುತಲಿದ್ದುದಂ ಮ್ಯುನಿಸಿಪಲ್ ಅಧಿಕಾರಿಗಳು ನೋಡಿ ಸದರೀ ವ್ಯಾಪಾರ ಕಮಿಷನರ್‌ಗಳ ಹುಕುಂ ಇಲ್ಲದೆ ಮಾರ್ಕೆಟುಗಳನ್ನಿಟ್ಟುಕೊಂಡರೆಂದು ಸದರೀ ಮಾಲಕರು ಅಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಚಾರ್ಜ್ ಮಾಡಿ ನಡೆದ ವಿಚಾರಣೆಯೊಳು, ಆಕ್ಟಿನಲ್ಲಿ ವಿವರಿಸಲ್ಪಟ್ಟಿರುವಂತೆ ಮಾರ್ಕೆಟ್ಟಿಗೆ ಅವಶ್ಯವಿರಬೇಕಾದ ಲಕ್ಷಣಗಳು, ಅಂದರೆ ಒಳಗೆ ಹೋಗಿಬರಲು ಬಾಗಿಲು, ಮೋರಿಗಳು, ಕಸತಾ ತೊಟ್ಟಿ, ಪಾಯಖಾನೆ, ದುಬ್ಬಿ ಮುಖ್ಯವಾದಕ್ಕೆ ನೀರ, ನೀರಿನನಲ್ಲಿ ಮೊದಲಾದವು ಇಲ್ಲದಿರುವದರಿಂದ ಮನೆಗಳ ಬೀದಿಯ ಜಗಲಿಯು ಮಾರ್ಕೆಟ್ ಆಗಲಾರದೆಂದು ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟು ಅಪರಾಧಿಗಳನ್ನು ಖುಲಾಸೆ ಮಾಡಿದರು.

ಹೌಸ್ ಆಫ್ ಕಾಮನ್ಸ್ ಸಭಾಸದವು ಮುಂದೆ ಸೇರುವ ಕಾಲದಲ್ಲಿ ಒಂದು ಮಸೂದೆಯು ಸಭಿಕರ ವಿಮರ್ಶೆಯಬಗ್ಗೆ ತರಲ್ಪಡುವದಾಗಿರುವಂತೆ ಕೇಳುತ್ತೇವೆ. ಉದ್ದಿಷ್ಟ ಮಸೂದಾ ಕಾನೂನಿನ ದೆಸೆಯಿಂದ ಇಂಡ್ಯಾದೇಶದ ಅಟರ್ನಿಗಳ ಸ್ಥಿತಿಯು ಉತ್ತಮವಾಗುವದೆಂದು ಭಾವಿಸಬೇಕಾಗಿದೆ, ಹ್ಯಾಗೆಂದರೆ, ಇಂಗ್ಲಾಂಡ್, ಐರ್ಲ್ಯಾಂಡ್, ಸ್ಕಾಟ್ಲ್ಯಾಂಡ್ ಈ ಮೂರು ಸೇರಿದ ಸಂಯುಕ್ತರಾಜ್ಯದಲ್ಲಿರುವ ಕೋರ್ಟುಗಳಲ್ಲಿ ವ್ಯವಹರಿಸುವಂತ ಅಟರ್ನಿಗಳೂ ಇಂಡ್ಯಾದೇಶದ ಅಟರ್ನಿಗಳೂ ಸಮ ಸಮಾನ ದರ್ಜೆಯುಳ್ಳವರಾಗಿ ಎಣಿಸಲ್ಪ

of the capacity of the wood be graduate of the Allahabad University, when it objects to Bryce's Holy Roman Empire as unsuited to his intellect. It is one of the best books that a student of history should read, and we trust the Allahabad University will not take the Lahore paper for an authority on University matters. As a critic of Commissariat measures our contemporary may be worthy of notice, but not as a judge of books, much less as a judge of Indian students.

A serious fight is reported between police and dacoits in the Nassik District. Some undertrial dacoits who escaped from the Magistrate's Court committed some serious depredations in the Nassik District, maiming and torturing the inhabitants. They carried off considerable property. They also stole some police rifles and uniforms. On several applications being made to the authorities, sixty armed police were despatched against the gang, who were found in a grove near the village of Barsal. The ringleader and eighteen dacoits were shot dead. Some police also were killed and wounded.

The Government of India has ruled that a clerk who is forced to be absent from office, owing to small pox or other infectious disease in his family, should be granted any casual leave which his official superior may consider admissible, and if no such leave is thought admissible, he should be granted such leave as may be admissible under the rules, for the period of absence from duty, together with the allowance, if any, also admissible. The period of absence may, however, be reckoned, if necessary, as a *dies non*, that is, it will not count for or against any other leave that may have been earned or may be earned in future.—*Madras Mail.*

Local and Provincial.

The Planters' Conference.—This sat all last week, and much business was transacted.

The Races.—Came to a close on Saturday last. The racing this year has been good, and the attendance was large at every meeting.

Removal of Office.—The *Mysore Herald* learns that the office of the Inspector General of Education will shortly be removed to Bangalore.

Books Registered.—During the quarter ending 30th June last only the "Mysore Law Reports, Vol XVIII," was registered in the C and M Station of Bangalore.

The Weather.—Is still dry. No rain worth mentioning has fallen, and the ryots cannot cultivate their land. The season for sowing is passing, and soon it will be over.

The Polo Tournament.—This terminated on Monday last the last game being played between the IV (Q. O.) Hussars and the Golconda team, the latter beating easily.

There were forty six cases of plague at Hubli on the 6th of this month, and the same number of deaths. There were also forty six cases on the 7th, while on 8th the number went up to seventy-nine.

Scholarships.—The Durbar of Mysore has requested the Inspector-General of Education to submit his opinion or recommendation in regard to the institution of Scholarships for any other backward classes than Mahomedans and Palegars.

The Board of Directors of the Madras Railway has sanctioned the expenditure of Rs. 72,190 for the gas installation at Bangalore City Junction Station, the amount to be borne by the Madras, Mysore State, and Southern Mahratta Railways proportionately, in accordance with the traffic requirements.

The Mysore Gazette.

Bangalore, Thursday, 11th August 1898

NOTIFICATIONS BY THE GOVERNMENT OF MYSORE

No 1711—J 168, dated 3rd August 98

Mr D A Ballard, Superintendent of Police, is transferred from the Kolar Gold Fields to French Rocks. To join on relief.

Mr F C Hay, Assistant Superintendent of Police, is posted to the Kolar Gold Fields *vice* Mr D A Ballard, transferred. To join forthwith.

No 1714—J. 171, dated 3rd August 1898

Under Article 218 of the Mysore Service Regulations, Mr V. Kingaiahachar, Munsiff of Nanjangud, Mysore district is granted leave on medical certificate for three weeks, with effect from the 25th July 1898.

Mr C Subba Rao, Sheristadar of the Subordinate Judge's Court, Mysore is appointed to act as Munsiff in the 3rd Grade, *sub protem vice* Mr Kingaiahachar on leave or until further orders.

No 1737—J 174, dated 3rd August 1898

Under Section 12 of the Code of Criminal Procedure, Mr B Srinivasa Rao, Amildar and 3rd Class Magistrate, Pavagada taluk, is appointed a Magistrate of the 2nd Class.

No 1748—M F 387 92 dated 3rd August 98

Mr K S Chandrasekhara Aiyar, B A B L, is promoted from the 2nd to the 1st Class of Assistant Commissioners Schedule B, with effect from the 28th July 1898.

No 1835—J. 199 dated, 6th August 98

Mr Ananda Row S., B A L L B Munsiff, 3rd Class, *sub Protem* is confirmed in that appointment, with effect from the 1st July 1898, vice Mr M A Narayan Iyengar, transferred permanently from the Judicial Department.

No 891—*R F 90 97, dated 30th July 98*

Under Article 168 of the Mysore Service Regulations, Mr M Nanjunda Aras, Assistant Commissioner, Mysore district, is granted privilege leave of absence for one month, with effect from the 2nd August 1898 or such other date as he may avail himself of the same, Mr K Mathan, Probationary Assistant Commissioner, being in charge of the District Treasury during the absence of Mr Nanjunda Aras on leave or until further orders.

No 903—R 357 dated 30th July 98

Under Article 168 of the Mysore Service Regulations, Mr B G Krishnaiengar, Deputy Commissioner, Hassan district is granted three months' privilege leave of absence preparatory to retirement and, with effect from the 21th July 1898, his retirement from service taking effect after the expiration of the same.

Mr B J Kumarasami Naik, Assistant Commissioner, is temporarily transferred to the Bangalore district to be located at Closepet, (to join immediately after being relieved of the charge of the Police of the French Rocks sub division)

No 1128—R 470, dated 9th August 98

The following transfers of Deputy Amildars are ordered and should be given effect to at once —

Narasimha Srinivasa Potwar from Harihar to Hosdurga

Muhammad Obedulla from Hosdurga to Harihar

PUBLIC WORKS

No 781—4276, dated 30th July 98

Mr R T Scaldwell Superintending Engineer, Mysore Province, is granted furlough to Europe for one and half year, under Article 220 (b) of the Mysore Service Regulations, with effect from 1st August 1898, or date of departure.

No 802—4406, *dated 8th August 98*

The following promotion is ordered in the Engineer Establishment of the Mysore Public Works Department, Local, with effect from 1st April 1898 —

Shimoga—Mr C Krishnaiengar, L C E, Sub Assistant Engineer, 3rd Class, pay Rs. 80, to be Sub Assistant Engineer, 2nd Class, pay Rs. 100, Permanent

No 821—4459, dated 9th August 98.

Sub-Assistant Engineer Mr. C R Srinivasaiengar, attached to the Mysore Division, is granted privilege leave of absence for one month from date of departure

ಕರ್ನಾಟಕ ಪ್ರಕಾಶಿಕಾ.

೧೮೯೮ನೇ ಇಸವಿ ಅಗಸ್ಟ ೧೫ನೇ ತಾ|| ಸೋಮವಾರ.

ಧನಾಶೆಯು ದುಷ್ಕಾರ್ಯಪ್ರೇರಕವು.

ದ್ರವ್ಯಾಕಾಂಕ್ಷೆಯು ಮಹದನರ್ಥಕಾರಿಯೆಂಬುದಕ್ಕೆ ನಿದರ್ಶನರೂಪವಾಗಿ ಗತ ವಾರದೊಳು ಇಬ್ಬರು ನಂಬೂದ್ರಿ ಬ್ರಾಹ್ಮಣರ ವೃತ್ತಾಂತವನ್ನು ತಿಳಿಸಿದ್ದೆವಷ್ಟೆ. ಈ ವಾರದೊಳು ಮತ್ತೊಂದು ವಿಜಾತೀಯವಾದ ಸ್ತ್ರೀ ಘಾತುಕ ಕೃತ್ಯವನ್ನಿದರಡಿ ತಿಳಿಸುತ್ತೇವೆ, ಹ್ಯಾಗೆಂದರೆ, ಈ ತಿಂಗಳ ೬ನೆಯ ತಾರೀಖಿನ ಮದರಾಸ್ ಆಂಧ್ರ ಪ್ರಕಾಶಿಕೆಯು ಅತ್ಯಂತಘೋರವಾದ ಸ್ತ್ರೀಹತ್ಯೆ ಒಂದು ನಡೆದಿರುವಂತೆ ಪ್ರಕಟಿಸಿರುತ್ತಿದೇನೆಂದರೆ, ಒಬ್ಬ ತರುಣಿಯು ತನ್ನ ಸಹೋದರನೊಡನೆ ಅತ್ತೆಯ ಮನೆಯಿಂದ ಹೊರಟು ತಾಯಿಯ ಮನೆಗೆ ಹೋಗುವಾಗ್ಯೆ ಮಧ್ಯಮಾರ್ಗದಲ್ಲಿ ಅನಂತಪುರಕ್ಕೆ ೬ ಮೈಲಿಗಳ ಫಾಸಲೆಯಲ್ಲಿರುವ ಕೋಟಪಳ್ಳಿ ಯೆಂಬ ಗ್ರಾಮದ ಸಮೀಪಕ್ಕೆ ಹೋಗುವಾಗ್ಯೆ ಸಾಯಂಕಾಲವಾದುದರಿಂದ ಆ ರಾತ್ರಿ ಅಲ್ಲೇ ಇದ್ದು ಮಾರನೆಯದಿನ ಮುಂದೆ ಪ್ರಯಾಣ ಮಾಡಬಹುದೆಂದಾಲೋಚಿಸಿ ಅವರಿಬ್ಬರೂ ಆ ಗ್ರಾಮಪ್ರವೇಶವಂಮಾಡಿ ಒಬ್ಬರಮನೆಯಲ್ಲಿ ಸ್ವಲ್ಪ ಸ್ಥಳವುಕೇಳಿ ಅವರು ಕೊಟ್ಟದ್ದರಿಂದ ಸಹೋದರಿಯು ಮನೆಯೊಳಗೆ ಮಲಗಿಕೊಂಡಳು, ಸಹೋದರನು ಬೀದಿಯ ಜಗುಲಿಯಮೇಲೆ ಮಲಗಿಕೊಂಡನು. ಸದರೀ ಮನೆಯಲ್ಲಿದ್ದ ಐದುಜನ ಸ್ತ್ರೀಯರು ಒಗ್ಗಟ್ಟಾಗಿ ಮಲಗಿದ್ದವಳು ಧರಿಸಿಕೊಂಡಿದ್ದ ೨,೫೦೦ ರೂಪಾಯಿಗಳ ಬೆಲೆಬಾಳತಕ್ಕ ಆಭರಣಗಳಂ ಕಂಡು ಆಸೆ ಅವಕ್ಕಾಗಿ ಆಕೆಯಂ ತುಂಡುತುಂಡಾಗಿ ಕತ್ತರಿಸಿ ಒಂದು ಮಡಿಕೆಯಲ್ಲಿ ಹಾಕಿ ಹೂತಿಟ್ಟು ಯೇನೂ ಅರಿಯದವರಂತೆ ಇದ್ದರು. ಬೆಳಕು ಹರಿದಮೇಲೆ ಅಣ್ಣನು ತನ್ನ ಸೋದರಿಯಂ ಎಬ್ಬಿಸುವದಕ್ಕಾಗಿ ತಲೆಬಾಗಿಲಂ ತೆರೆಯುವಂತೆ ಮನೆಯವರಂ ಕರೆದು ಕೇಳಲು ಅವರು ಬಾಗಿಲಂ ತೆರೆಯದಂತೆಯೇ "ನಿಮ್ಮ ತಂಗಿಯು ಒಂದು ಘಂಟೆಯ ಹಿಂದೆ"ಯೇ ಎದ್ದು ಹೊರಗೆ ಹೊರಟುಹೋದಳೆಂದು ಹೇಳಿದರು, ಆಗ ಅಣ್ಣನಿಗೆ ಅನುಮಾನ ಹುಟ್ಟಾಗಿ ಹೊರಗಿನ ಬಾಗಿಲ ಚಿಲಕವನ್ನು ಹಾಕಿ ಬಿಗಿಸಿ, ಕೂಡಲೆ ಗ್ರಾಮ ಮುನಸಫ ಬಳಿಗೆ ಹೋಗಿ ನಡೆದ ವೃತ್ತಾಂತವಂ ತಿಳಿಯಪಡಿಸಿದನು. ಆತನು ಬಂದು ತಿರೆಬಾಗಿಲನ್ನು ಒಡೆದು ಒಳಗೆ ಪ್ರವೇಶಿಸಿ ಕೊಲ್ಲಲ್ಪಟ್ಟ ಹುಡಿಗಿಯನ್ನು ಹುಡುಕುವಾಗ ಆಕೆಯ ಕರಚರಣಾದ್ಯವಯವಗಳು ಕತ್ತರಿಸಲ್ಪಟ್ಟು ಮಡಿಕೆಯಲ್ಲಿಹಾಕಿ ಹೂಳಲ್ಪಟ್ಟ ಜಾಡೆಯು ಗೊತ್ತಾಗಿ ತಿಳಿಯಬಂತು. ಮುಂದಿನ ಪರ್ಯವಸಾನವೇನೋ ಪ್ರಸಿದ್ಧವಾಗಿಯೇ ಇದೆ. ಆಹಾ! ಧನವೆಷ್ಟರ ಗುಣವಿಪರ್ಯಯವನ್ನುಂಟುಮಾಡುತಿದೆ!

"ಜನೈಕ ಹಿತೈಷಿ."

ಕಳೆದತಿಂಗಳ ೨೫ನೆಯ ತಾರೀಖಿನ ಈಪತ್ರಿಕೆಯಲ್ಲಿ ಋಣ ಮತ್ತು ಧನವ್ಯಯ ವಿಚಾರವಂ ಕುರಿತ ಸ್ವಾಭಿಪ್ರಾಯ ಪೂರ್ವಕವಾದ ಒಂದು ಉಪನ್ಯಾಸವಂ ಅಸಂಪೂರ್ತಿಯಾಗಿ ನಾವು ಪ್ರಕಟಿಸಿದ್ದುದಂ ಪ್ರಾಯಶಃ ಏತತ್ಪತ್ರಿಕಾ ಪಠನಕುತೂಹಲಿಗಳಾದವರೆಲ್ಲರು ಅವಲೋಕಿಸಿರಬಹುದೆಂದು ನಂಬುತ್ತೇವೆ. ತದ್ವಿಷಯಕವಾದ ಸ್ವಾಭಿಪ್ರಾಯವು ಪಂಡಿತ ಪುರಸ್ಕೃತವಾಗುವುದೋ ಇಲ್ಲವೋ ಎಂಬ ಶಂಕೆಯು ನಮ್ಮನ್ನಾವರಿಸಿತ್ತು. ಯದ್ಯಪಿ ಸದರೀ ವಿಷಯವು ಕೇವಲ ಮುಖ್ಯವಾದುದೆಂಬ ನಮ್ಮ ಅಭಿಪ್ರಾಯವು ಇತರರಿಂದ ಅನುಮೋದಿಸಲ್ಪಟ್ಟಕಾರಣ ನಮ್ಮ ಪರಿಶ್ರಮವು ಸಾಫಲ್ಯವನ್ನೈದಿದಬಗ್ಗೆ ಸಂತೃಪ್ತರಾದೆವು. ಪ್ರಸಕ್ತ ನಮ್ಮ ಲೇಖನವನ್ನು ಆಮೂಲಾಗ್ರವಾಗಿ "ಜನೈಕ ಹಿತೈಷಿ" ಎಂಬ ಪರಿಕಲ್ಪಿತಾಂಕಿತವುಳ್ಳವರೊಬ್ಬರು ಆಂಧ್ರಭಾಷೆಯಲ್ಲಿ ತರ್ಜುಮೆಮಾಡಿ ಸ್ವಪ್ರಣೀತವಾದುದಾಗಿ ಈ ತಿಂಗಳ ೩ನೆಯ ತಾರೀಖಿನ ಮದರಾಸ್ ಆಂಧ್ರಪ್ರಕಾಶಿಕೆಯಲ್ಲಿ ಪ್ರಕಟಿಸಿದ್ದುದಂ ನಾವು ನೋಡಿ ಆನಂದಿಸಿದೆವು. ಪರಂತು ಅದರ ಆದ್ಯಂತದೊಳಗೆಲ್ಲಿಯೂ ಕರ್ಣಾಟಕ ಪ್ರಕಾಶಿಕೆಯ ಸ್ಮರಣೆ ಸಹ ತಲ್ಲೇಖಕರಿಗೆ ಬಾರದಿದ್ದುದಂ ನೋಡಲಾಗಿ, ಮೇಲೆಕಂಡಂತೆ 'ಜನೈಕ ಹಿತೈಷಿ' ಯೆನಿಸಿಕೊಂಡವರಿಗೆ ಗ್ರಂಥ ಚೌರ್ಯ ದೋಷವನ್ನು ಪ್ರಜೆಗಳು ಆರೋಪಿಸುವರೋ ಎಂಬ ಚಿಂತೆಯು ನಮಗೆ ಅಂಕುರಿಸಿದ್ದೇನೂ ಆಶ್ಚರ್ಯವಲ್ಲವು. ಪರಂತು ತಲ್ಲೇಖಕರು 'ಜನೈಕಹಿತೈಷಿ' ಎಂದು ಹೆಸರನ್ನಿಟ್ಟುಕೊಂಡು ವಿಮಲಾಶಯದೊಡನೆ ಸಮಾಚರಿತ ಕೃತ್ಯಾನ್ವಿತರಾಗಿ ಕಂಡುಬರುವದರಿಂದ ಅವರಮೇಲೆ ಗ್ರಂಥಚೌರ್ಯ ದೋಷವನ್ನಾರೋಪಿಸಲಿಕ್ಕೆ ಅನ್ಯರಂತೆ ನಮಗೆ ಇಷ್ಟವಿಲ್ಲವಾಗಿ, ಪ್ರಕಾಶಿಕಾ ಶಬ್ದಮಾತ್ರದಿಂದ ಉಭಯ ಪತ್ರಿಕಾ ಭೇದವನ್ನು ಭಾಷಾ ಭೇದವನ್ನು ಪತ್ರ್ಯಭೇದವನ್ನೂ ಅವರು ಕ್ಷುದ್ರಾಂಗ ಮರೆತಿರಬಹುದೆಂದು ಎಣಿಸುವೆವು. ಅದಾಗ್ಯೂ ನಾವು ಪ್ರಥಮ ಭಾಗದಲ್ಲಿ ನಮ್ಮ ಅಭಿಪ್ರಾಯಕ್ಕೆ ಪೋಷಕವಾಗಿ ಪ್ರಕಟಿಸಿದ್ದ ಭರ್ತೃಹರಿ ಮಹಾಕವಿ ಪ್ರಣೀತ ಸುಭಾಷಿತ ಶ್ಲೋಕವನ್ನು ತೆಗೆಯಲಿಕ್ಕೂ, ಅಂತ್ಯಭಾಗದಲ್ಲಿ ನಮ್ಮ ಕೆಲವು ವಾಕ್ಯಗಳನ್ನು ಲೋಪಪಡಿಸಲಿಕ್ಕೂ ಕಾರಣವು ನಮ್ಮ ಬುದ್ಧಿಸ್ಥವಾಗಲಿಲ್ಲವು.

ಪ್ಲೇಗ್‌ರೋಗದ ವ್ಯಾಪಕತೆ.

ಹುಬ್ಬಳ್ಳಿಯಲ್ಲಿ ಪ್ಲೇಗ್‌ರೋಗವು ದಿನೇದಿನೆ ಪ್ರಬಲವಾಗುತ ಪ್ರಾಣಹಾನಿಗಳನ್ನುಂಟುಮಾಡುತಲಿದೆ. ಈ ತಿಂಗಳ ೬ನೆಯ ತಾರೀಖಿನಲ್ಲಿ ೪೬ಮಂದಿಗೆ ಸದರೀ ರೋಗ ತಗಲಿ ೪೬ರೂ ಮೃತಪಟ್ಟರು ೭ನೆಯ ತಾರೀಖಿನಲ್ಲಿ ೪೬ಮಂದಿಗೂ ೮ನೆಯ ತಾರೀಖಿನಲ್ಲಿ ೭೯ ಮಂದಿಗೂ ತಗಲಿತು ಹುಬ್ಬಳ್ಳಿಯ ಪ್ರಕೃತಸ್ಥಿತಿಯು ಕೇವಲ ಶೋಚನೀಯವಾಗಿ ಕಾಣುತಿದೆ. ಇದು ಹೀಗಿರುವಲ್ಲಿ ಮುಂಬೈಯೊಳು ಅದು ಮರಳಿ ಅಲ್ಲಿಯಲ್ಲಿ ವ್ಯಾಪಿಸಿ ಆಚೇ ಶನಿವಾರದಿನ ಮೂವತ್ತೊಂದುಮಂದಿಗೆ ತಗಲಿದಂತೆ ಅಲ್ಲಿನವೃತ್ತಾಂತ ಪತ್ರಿಕೆಗಳ ಬಾತಮೀದಾರರ ಲೇಖನಗಳ ಮೂಲಕ ತಿಳಿಯಬರುತಿದೆ. ಕಲ್ಕತ್ತೆಯಲ್ಲು ಪ್ರತಿದಿನವೂ ಒಬ್ಬರಿಬ್ಬರಿಗಾದರು ಸದರೀ ರೋಗವು ತಗಲದಿರುವದಿಲ್ಲವು. ದಕ್ಷಿಣ ಮಹಾರಾಷ್ಟ್ರದೇಶಕ್ಕೆ ಸೇರಿದ ಅನೇಕ ಪ್ರದೇಶಗಳೊಳು ಈ ರೋಗವು ವೃದ್ಧಿಯಾಗುತಲಿರುವಂತೆ ಕಾಣುತಿದೆ. ಕರಾಚಿಯಲ್ಲಿ ಇನ್ನು ನಿಶ್ಶೇಷವಾಗಿ ನಿವೃತ್ತಿಯಾದಂತೆ ತೋರಲಿಲ್ಲವು. ಹೈದರಾಬಾದ ಪ್ರಾಂತದಲ್ಲಿ ಸದರೀ ರೋಗವು ಗವರ್ನಮೆಂಟಿನ ಉಪೇಕ್ಷೆಯೂ ಬಲವಾಗಿ ಮರಳಿ ಕಾಣಿಸಿ ಇದುವರೆಗೆ ಅದರ ವ್ಯಾಪಕತೆ ಇಲ್ಲದಿದ್ದ ಅನೇಕ ಪ್ರದೇಶಗಳಲ್ಲಿ ಸಹ ವ್ಯಾಪಿಸಿ ಪ್ರಾಣಹಾನಿಗಳುಂಟಾಗುತಿವೆ. ದೈವಾತ್ ಹೈದರಾಬಾದ ಷಹರಿನಲ್ಲಿ ಮಾತ್ರ ಸದ್ಯಃ ಈ ದುಷ್ಟರೋಗದ ಬಾಧೆ ಇಲ್ಲವೆಂದು ತಿಳಿದು ಸಂತೋಷಿಸುತ್ತೇವೆ. ಏತೇನ ಈ ದೇಶದ ಸರಹದ್ದು ಪ್ರಾಂತದಲ್ಲಿರುವ ಹುಬ್ಬಳ್ಳಿಗೆ ಈಗ ಪ್ರಾಪ್ತವಾಗಿರುವ ದುರ್ದಶೆಯ ಬಗ್ಗೆ ಬಹಳ ಚಿಂತಿಸಬೇಕಾಗಿರುತದೆ. ಇದುವರೆಗೆ ದಿನವೊಂದಕ್ಕೆ ಸುಮಾರು ಇಪ್ಪತ್ತು ಜನರಿಗೆ ತಗಲುತಲಿದ್ದುದು ಈಚೆಗೆ ಎಂಬತ್ತು ಮಂದಿಯವರೆಗೆ ತಗಲುವದಕ್ಕೆ ಪ್ರಾರಂಭಿಸಿರುವದರಿಂದ ಮುಂದೆ ಇನ್ನೆಷ್ಟು ಪ್ರಾಬಲ್ಯಸ್ಥಿತಿಗೆ ಬರುವುದೊ ಎಂಬ ಭೀತಿಗೆ ಪೂರ್ಣಾವಕಾಶವಿಲ್ಲದೆ ಹೋಗಲಿಲ್ಲವು.

ಇದು ಹೀಗಿರುವಲ್ಲಿ ಕಳೆದವಾರದೊಳು ಕಾಂಚೀಪುರದಲ್ಲಿ ಯಾವನೋ ಒಬ್ಬನಿಗೆ ಪ್ಲೇಗ್‌ರೋಗ ತಗಲಿ ಮೃತಪಟ್ಟದ್ದಾಗಿ ಮದರಾಸಿನಲ್ಲಿರುವ ಪ್ಲೇಗ್‌ಅಧಿಕಾರಿಗಳಿಗೆ ವರ್ತಮಾನ ಕಳುಹಿಸಲ್ಪಟ್ಟು ಅದರ ನಿಜಸ್ಥಿತಿಯನ್ನರಿಯುವದಕ್ಕಾಗಿ ಅಲ್ಲಿಂದ ಪ್ಲೇಗ್ ಡಾಕ್ಟರ್ ಮೊದಲಾದವರು ಕೆಲವರು ಅಲ್ಲಿಗೆ ಹೋಗಿರುವಂತೆ ತಿಳಿಯಬರುತದೆ. ಅವರ ಪರೀಕ್ಷೆಯಲ್ಲಿ ಸದರೀಯವನ ಮರಣಕ್ಕೆ ಕಾರಣವು ಪ್ಲೇಗ್‌ರೋಗವೆಂದು ದೋರ್ಪಡುವ ಪಕ್ಷದಲ್ಲಿ ಮದರಾಸ್ ಪ್ರೆಸಿಡೆನ್ಸಿಯಲ್ಲೂ ಸದರೀ ದುಷ್ಟರೋಗವು ವ್ಯಾಪಿಸಿದಂತೆ ಯೆಣಿಸಬೇಕಾಗುತದೆ. ಇದು ಕೇವಲ ಚಿಂತನೀಯವಾದ ವಿಷಯವಾಗಿರುವುದು.

ಅನುಚಿತಪ್ರಾರ್ಥನೆ.

ಮದರಾಸ್ ಗವರ್ನರವರಾದ ಸರ್ ಆರ್ಥರ್ ಹಾವಲಾಕ್ ಸಾಹೆಬರವರು ಈಗದಕ್ಷಿಣದೇಶ ಸಂಚಾರ ಹೊರಟಿರುತ್ತಾರೆಯಷ್ಟೆ. ಈ ತಿಂಗಳ ೧೧ನೆಯ ತಾರೀಖಿನಲ್ಲಿ ತಿರುಚಿನಾಪಲ್ಲಿಗೆ ದಯಮಾಡಲು ಅಲ್ಲಿನ ಪ್ರಜೆಗಳು ವಿಶೇಷ ವಿಭವದೊಡನೆ ಗವರ್ನರ್ ಸಾಹೆಬರವರನ್ನು ಬರಮಾಡಿಕೊಂಡರು. ಅಲ್ಲಿನ ಹಿಂದೂಗಳೂ, ಮುಸಲ್ಮಾನರು, ಮತ್ತು ಮ್ಯುನಿಸಿಪಲ್ ಸಂಘದವರು ಅವರವರಿಗೆ ಆವಶ್ಯಕಗಳಾಗಿ ಕಂಡುಬಂದ ಅಂಶಗಳನ್ನೆಲ್ಲ ನಮೂದಿಸಿ ಬೇರೆಬೇರೆ ವಿಜ್ಞಾಪನ ಪತ್ರಿಕೆಗಳನ್ನೊಪ್ಪಿಸಿದರು. ಮುಸಲ್ಮಾನರು ಒಪ್ಪಿಸಿದ ವಿಜ್ಞಾಪನ ಪತ್ರಿಕೆಯಲ್ಲಿ ತಮಗೆ ಜುಡಿಷಲ್, ಮರಮ್ಮತ್, ಪೊಲೀಸ್, ನಮ್ಮಕ್ ಮತ್ತು ಫಾರೆಸ್ಟ್ ಇಲಾಖೆಗಳಲ್ಲಿ ದೊಡ್ಡ ಅಧಿಕಾರಗಳಂ ಕೊಡಬೇಕೆಂತಲೂ, ತಿರುಚಿನಾಪಲ್ಲಿಯಲ್ಲಿ ೨೦ಸಾವಿರ ಮಹಮ್ಮದೀಯ ಜನರಿರುವದರಿಂದ ಸದರೀ ಪುರಿಗೆ ಮುಸಲ್ಮಾನ್ ಡೆಪ್ಯುಟಿ ಕಲೆಕ್ಟರೊಬ್ಬರನ್ನು ನಿಯಮಿಸಬೇಕೆಂತಲೂ ಪ್ರಾರ್ಥಿಸಿದ್ದರು. ಸದರೀ ಜನರು ನಮೂದಿಸಿದ್ದ ಪ್ರತಿ ಅಂಶಕ್ಕೂ ಪ್ರತ್ಯುತ್ತರಮ ಹೇಳುತ ಬರುವಲ್ಲಿ ಗವರ್ನರ್ಮೆಂಟಿನವರಿಗೆ ಮುಸಲ್ಮಾನರ ವಿಷಯದಲ್ಲಿ ಪೂರ್ಣವಾದ ಅನುರಾಗವಿರುತದೆ, ಅದು ಕೇವಲ ಶಬ್ದಮಾತ್ರದಿಂದಲ್ಲದೆ ಕಾರ್ಯದಲ್ಲೂ ತೋರಿಸಲ್ಪಟ್ಟಿರುತದೆ ಅವರ ಕೋರಿಕೆಗಳು ಫಲಪ್ರದವಾಗಬೇಕಾಗಿದ್ದರೆ ಅದಕ್ಕೆ ಅವರು ಅರ್ಹರೆಂದುನಿರೂಪಿಸಬೇಕು. ಅರ್ಹರಾದವರ ವಿಷಯದಲ್ಲಿ ಗವರ್ನಮೆಂಟಿನವರು ಕಾರ್ಯತಃ ಸಹಾಯಮಾಡಿಯೇ ಇರುತ್ತಾರೆ. ತಿರುಚನಾಪಲ್ಲಿ ಪುರಿಗೆ ಮಹಮ್ಮದೀಯ ಡೆಪ್ಯುಟಿ ಕಲೆಕ್ಟರೊಬ್ಬರನ್ನು ನಿಯಮಿಸಬೇಕೆಂದು ಅಪೇಕ್ಷಿಸುವ ವಿಷಯದಲ್ಲಿ ಗವರ್ನಮೆಂಟಿನವರು ತಕ್ಕಂತೆ ಆಲೋಚಿಸುವರು. ತಿರುಚನಾಪಲ್ಲಿ ತಾಲ್ಲೂಕಿನಲ್ಲಿ ೩,೦೦,೦೦೦ ಚಿಲ್ಲರೆ ಪ್ರಜೆಗಳಿರುತ್ತಾರೆ, ಅವರಲ್ಲಿ ೧೫,೦೦೦ ಮಂದಿ ಮಹಮ್ಮದೀಯರೆಂದು ತಿಳಿಯಬರುತದೆ. ಹಿಂದೂಜನರ ಸಂಖ್ಯೆಯು ಅತ್ಯಧಿಕವಾಗಿರುವುದು ಮಾತ್ರವಲ್ಲದೆ, ಸದರೀ ಡಿಸ್ಟ್ರಿಕ್ಟಿನಲ್ಲಿ ಅವರಿಗೆ ಮತ ಸಂಬಂಧವಾದ ಪ್ರಯೋಜನಗಳು ಬಹುವಾಗಿರುವದರಿಂದ, ಮಹಮ್ಮದೀಯ ಡೆಪ್ಯುಟಿ ಕಲೆಕ್ಟರನ್ನು ನಿಯಮಿಸಬೇಕಾದ ವಿಷಯದಲ್ಲಿ ಮುಸಲ್ಮಾನರಿಗಿರುವ ಬಾಧ್ಯತೆಗಿಂತಲೂ ಹಿಂದು ಡೆಪ್ಯುಟಿ ಕಲೆಕ್ಟರನ್ನು ಮುಕರರ್ಮಾಡಬೇಕಾದ ವಿಷಯದಲ್ಲಿ ಅವರಿಗಿರುವ ಬಾಧ್ಯತೆಯು ಬಲವತ್ತರವಾದುದೆಂದು ತಾವು ಅಭಿಪ್ರಾಯ ಪಡುವಂತೆ ಅವರಿಗೆ ತಿಳಿಸಿ ತಮ್ಮ ಉತ್ತರವಂ ಪೂರೈಸಿದರು. ತರುವಾಯ ಅಲ್ಲಿನ ಪೀಪಲ್ಸ್ ಅಸೋಸಿಯೇಷನ್ ಸಂಘದವರೂ, ತರುವಾಯ ಅಲ್ಲಿನಮ್ಯುನಿಸಿಪಾಲಿಟಿಯವರೂ, ಅವರವರು ಸಿದ್ಧಪಡಿಸಿಕೊಂಡಿದ್ದ ವಿಜ್ಞಾಪನ ಪತ್ರಿಕೆಗಳನ್ನೊಪ್ಪಿಸಿದರು. ಅವೆಲ್ಲವನ್ನಂಗೀಕರಿಸಿ ಅವರವರಿಗೆ ತಕ್ಕಂತೆ ಉಚಿತ ರೀತಿಯಿಂದ ಪ್ರತ್ಯುತ್ತರಗಳಂ ಕೃಪೆಗೈವರು.

Occasional Notes.
ನೈಮಿತ್ತಿಕವಿಷಯನ್ಯಾಸ.

ಪಾರ್ಲಕಿಮಿಡಿ ಸಂಸ್ಥಾನದ ರಾಜಪುತ್ರಿಯವರು ಈಚೆಗೆ ಪ್ರಸವಿಸಿ, ಕಾಲಗತಿಯನ್ನೈದಿದರೆಂದು ತಿಳಿದು ವಿಷಾದಿಸುತ್ತೇವೆ.

ಗತಿಸಿದ ಮಿ॥ ಗ್ಲಾಡ್ಸ್ಟನ್ಯವರ ಜ್ಞಾಪಕವನ್ನು ಪ್ರಜೆಗಳ ಹೃದಯದಲ್ಲಿ ಸ್ಥಿರಪಡಿಸುವದಕ್ಕಾಗಿ ಮೂರುವಿಧ ಪ್ರಯತ್ನಗಳು ನಡೆಸಲ್ಪಡುತಿರುವಂತೆ ತಿಳಿಯಬರುತಿದೆ. ಇವು ಏತದ್ರೂಪವಾದವೆಂದು ಮುಂದೆ ತಿಳಿಯಬರಬೇಕು

ಬಂಗಾಳೇ ದೇಶದಲ್ಲಿ ಬ್ರಹ್ಮ ಸಮಾಜಕ್ಕೆ ಸೇರಿದ ಬಾಬು ರಮಾಕಾಂತರಾಯ್ ಎಂಬ ವಿದ್ಯಾರ್ಥಿಯೊಬ್ಬಾತನು ಗನಿಗಳ ಇಂಜಿನಿಯರ್ ವಿದ್ಯೆಯನ್ನು ಕಲಿಯುವದಕ್ಕಾಗಿ ಜಪಾನ್ ದ್ವೀಪಕ್ಕೆ ಹೊರಡುವವನಾಗಿರುತ್ತಾನೆಂದು ಇಂಡಿಯನ್ ಮೆಸ್ಸೆಂಜರ್ ಎಂಬ ಪತ್ರಿಕೆ ತಿಳಸುತಿದೆ.

ಸರ್ಪವಿಷ ಚಿಕಿತ್ಸೆ—ಹಾವು ಕಚ್ಚಿದ ಕೂಡಲೆ ಹಲ್ಲುಗಳು ತಗಲಿದ ಸ್ಥಳದಲ್ಲಿ ಮೊದಲು ಚಿಟಿಗೆ ಬಂದೂಕ್ ಮದ್ದನ್ನಿಟ್ಟು ಬೆಂಕಿ ಕಡ್ಡಿಯಂಗೀಚಿ ಆದರಮೇಲಿಟ್ಟು ಹತ್ತಿಸಿದರೆ ಕೂಡಲೇ ವಿಷವು ನಾಶವಾಗುವದೆಂದು ಕಲ್ಕತ್ತೆ ಪತ್ರಿಕೆಯೊಂದು ತಿಳಿಸುತಿದೆ.

ಮಹಾರಾಜ್ಞೀ ಇಂಡ್ಯಾಚಕ್ರವರ್ತಿನೀಯವರ ಜ್ಯೇಷ್ಠಪುತ್ರರಾದ ಘನತೆಯಂ ಪಡೆದ ಪ್ರಿನ್ಸಫವೇಲ್ಸರವರಿಗೆ ಈಚೆಗೆ ಪ್ರಾಪ್ತವಾದ ಅಪಾಯವು ಪೂರ್ಣವಾಗಿ ನಿವೃತ್ತಿಯಾಗುವ ಪ್ರತ್ಯಾಶೆ ಇಲ್ಲವೆಂದು ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ.

೧೮೯೮—೯೯ನೆಯ ಸರ್ಕಾರ್ ಸಾಲಿನಲ್ಲಿ ಇಂಡ್ಯದೇಶದ ಕಾಡುಗಳಿಂದ ಒಂದು ಕೋಟಿ ಎಪ್ಪತ್ತೊಂಭತು ಲಕ್ಷ ರೂಪಾಯಿಗಳ ಹುಟ್ಟುವಳಿಯೂ, ಅದಕ್ಕಾಗಿ ಒಂದು ಕೋಟಿ ಐದುಲಕ್ಷ ರೂಪಾಯಿಗಳ ಖರ್ಚೂ ಆಗಿ ಅರವತ್ತೆಂಟುಲಕ್ಷ ರೂಪಾಯಿಗಳು ಉಳಿಯುವವೆಂದು ಅಂದಾಜ್ ಮಾಡಲ್ಪಟ್ಟಿರುತದೆ.

ಪ್ಲೇಗ್ ರೋಗ ನಿವೃತ್ತ್ಯರ್ಥ ಮಾಡಬೇಕಾದ ಖರ್ಚುಗಳ ಬಗ್ಗೆ ಮುಂಬೈ ಮ್ಯುನಿಸಿಪಾಲಿಟಿಯವರು ಹತ್ತು ವರ್ಷಗಳ ಕಾಲದಲ್ಲಿ ತೀರಿಸುವ ಷರತ್ತಿನಮೇಲೆ ೫ಇಪ್ಪತ್ತು ಲಕ್ಷರೂಪಾಯಿಗಳು ಸಾಲವಾಡಬೇಕೆಂದು ಯೋಚಿಸಿ ಆಬಗ್ಗೆ ಇಂಡ್ಯ ಗವರ್ನಮೆಂಟಿನವರ ಮಂಜೂರಾತಿಯಂ ಕೋರಿರುವಲ್ಲಿ ಅವರು ಸದರೀ ಪಾಯಿದೆಯನ್ನು ಇಪ್ಪತ್ತು ವರ್ಷಗಳಿಗೆ ಹೆಚ್ಚಿಸಿ ಹುಕುಂಕೊಟ್ಟಿರುತ್ತಾರೆ.

ಬರುವ ಡಿಸಂಬರ್ ತಿಂಗಳೊಳು ಮದರಾಸಿನಲ್ಲಿ ನಡೆಯುವ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯ ಅಗ್ರಾಸನಾಧಿಪತ್ಯವಂ ವಹಿಸಬೇಕೆಂದು ಮಿ॥ ಆನಂದ ಮೋಹನಬೋಸ್ ಯವರನ್ನು ಪ್ರಾರ್ಥಿಸಬೇಕು, ಅವರು ಒಪ್ಪದ ಪಕ್ಷದಲ್ಲಿ ಮಿ॥ ರೋಮೇಶಚಂದ್ರದತ್ತರವರನ್ನು ಪ್ರಾರ್ಥಿಸಬೇಕೆಂದು ಮದರಾಸ್ ಕಾಂಗ್ರೆಸ್ ಕಮಿಟಿಯವರು ನಿಷ್ಕರ್ಷಿಸಿರುವಂತೆ ತಿಳಿಯಬರುತದೆ.

ತುರ್ಕಿಸುಲ್ತಾನರವರು ಯುದ್ಧರಂಗದಲ್ಲಿ ಅತಿ ತ್ವರಿತದಿಂದ ಗುಂಡುಗಳಂ ಹಾರಿಸುವದಕ್ಕೆ ಅನುಕೂಲವಾಗಿರುವ ಹೊಸನಮೂನೆ ಒಂದು ಸಾವಿರ ತೋಪುಗಳಂ ತಯಾರ್ಮಾಡಿಸಿ ಕಳುಹಿಸುವಂತೆ ಜರ್ಮನೀದೇಶದ ಕಾರ್ಖಾನೆದಾರರೊಬ್ಬರಿಗೆ ಹುಕುಂ ಕಳುಹಿಸಿರುತ್ತಾರೆ. ಈ ನಮೂನೆ ತೋಪು ಒಂದಕ್ಕೆ ಕ್ರಯ ನಾನೂರು ಪೌಂಡುಗಳು.

ಸ್ಪೇಯಿನ್ ದೇಶಕ್ಕೂ ಯುನೈಟೆಡ್ ಸ್ಟೇಟ್ಸ್ ಸಂಸ್ಥಾನಕ್ಕೂ ಸಮಾಧಾನ ವಿಷಯದಲ್ಲಿ ಅಮೆರಿಕಾ ದೇಶೀಯರು ತಿಳಿಸಿದ ಷರತ್ತುಗಳನ್ನು ಸ್ಪೇಯಿನ್ದೇಶದವರು ಒಪ್ಪಿದರಾಗಿ ತದನುಸಾರವಾಗಿ ಕರಾರ್ ಪತ್ರ ವಾಗಬೇಕೆಂದು ಉಭಯ ಕಕ್ಷಿಯವರ ಪ್ರತಿನಿಧಿಗಳು ಒಪ್ಪಿಕೊಂಡು ಆ ಬಗ್ಗೆ ತಕ್ಕ ಏರ್ಪಾಡುಗಳಂ ಮಾಡುತಲಿರುವದರಿಂದ ಸದ್ಯಃ ಯುದ್ಧವು ಮುಗಿಯಿತೆಂದು ಯೆಣಿಸಬಹುದಾಗಿದೆ.

ಹಿಂದೆ ಮದರಾಸ್ ಹೈಕೋರ್ಟ್ ಜಡ್ಜಿಯರಲ್ಲೊಬ್ಬರಾಗಿದ್ದ ಗತಿಸಿದ ಸರ್ ಟಿ ಮುತ್ತುಸಾಮಿ ಅಯ್ಯರವರ ಕುಮಾರರವರಾದ ಮಿ॥ ಟಿ. ಎಂ. ಸ್ವಾಮಿನಾಥ ಅಯ್ಯರವರು, ತಮ್ಮ ತಂದೆಯವರ ಜ್ಞಾಪಕಾರ್ಥ ಮದರಾಸ್ ಲಾ ಕಾಲೇಜ್ನೊಳು ಅವರ ಹೆಸರಿನಲ್ಲಿ ಒಂದು ವಿದ್ಯಾರ್ಥಿವೇತನವಂ ಕಲ್ಪಿಸತಕ್ಕ ಬಗ್ಗೆ ಅಲ್ಲಿನ ಯೂನಿವರ್ಸಿಟಿ ಅಧಿಕಾರಿಗಳ ವಶಕ್ಕೆ ತಾವು ಹತ್ತುಸಾವಿರ ರೂಪಾಯಿಗಳಂ ಕೊಡುವದಾಗಿ ಸೂಚಿಸಿರುವಂತೆಮದರಾಸ್ಹಿಂದೂಪತ್ರಿಕೆಯುತಿಳಿಸುತದೆ

ಅನಾಥವ್ರೇತವು ರಣಹದ್ದುಗಳ ಬಾಯಿಗಳಿಗೆ ಸಿಕ್ಕಿದಂತೆ, ಚೀನಾ ದೇಶವು ಈಗ್ಗೆ ಪ್ರಬಲರಾದ ಯೂರೋಪ್ ಸಂಸ್ಥಾನಾಧಿಪತಿಗಳು ಕೆಲವರು ಕೈಗೆ ಸಿಕ್ಕಿಕೊಂಡು ನಿಟ್ಟುಸುರು ಬಿಡುತಲಿದೆಯಷ್ಟೆ. ಇದೇ ವಿಷಯದೊಳು ರಷಿಯಾ ಸರ್ಕಾರಕ್ಕೂ ಬ್ರಿಟಿಷ್ ಸರ್ಕಾರಕ್ಕೂ ಪ್ರಬಲ ಕಲಹಕ್ಕೆ ಕಾರಣ ಪುಟ್ಟಾಗಿರುವಂತೆ ಈಚೆಗೆ ಬಂದ ತಂತಿವೃತ್ತಾಂತಗಳ ಮೂಲಕ ತಿಳಿಯಬರುತಿದೆ. ಸದರೀ ಉಭಯ ಸಂಸ್ಥಾನಾಧಿಪತಿಗಳಗೂ ಕಲಹವು ಹೆಚ್ಚಿ ಕೈ ಕಲೆಯುವ ಸಂದರ್ಭದಲ್ಲಿ ಪ್ರಬಲಾನರ್ಥ ಹೇತುವಾಗುವದರಲ್ಲಿ ಸಂಶಯವಿರಲಾರದು.

ಠಾಣೆ, ನಾಸಿಕ, ಅಹಮದನಗರ, ಈ ಡಿಸ್ಟ್ರಿಕ್ಟುಗಳಲ್ಲಿ ಈಗ್ಗೆ ಕೆಲವು ತಿಂಗಳ ಮೊದಲು ಜನಗಳಿಗೆ ಪ್ರಾಣಮಾನ ಧನ ನಾಶವೊಡನೆ ದರೋಡೆಗಳನ್ನು ನಡೆಸುತಲಿರುವ ಕಳ್ಳರ ಗುಂಪಿಗೆ ಸೇರಿದವರನ್ನು ಪತ್ತೆಮಾಡಿ ಹಿಡಿಯುವಬಗ್ಗೆ ಮುಂಬೈ ೨ನೆಯ ನೇಟಿವ್ ಇನ್ಫೆಂಟ್ರಿ ರಿಜಮೆಂಟಿನವರು ೧೫೦ಮಂದಿ ಆಯುಧಪಾಣಿಗಳಾಗಿ ಸದರೀ ಪ್ರಾಂತಗಳಿಗೆ ಕಳುಹಿಸಲ್ಪಟ್ಟಿರುವಂತೆ ವರ್ತಮಾನ ಬಂದಿರುತಿದೆ. ಇಷ್ಟರ ಪರಿಧನಹೆಗಳೊಡನೆ ಹೋಗಿರುವ ಸೈನಿಕರ ಪ್ರಯತ್ನವು ಯೆಷ್ಟುಮಟ್ಟಿಗೆ ಸಫಲವಾಗುವದೊ ಮುಂದೆ ನೋಡಬೇಕು

ಮದರಾಸ್ ಹೈಕೋರ್ಟ್ ವಕೀಲರಾದ ಮಿ॥ ಶೇಷಾಚಾರ್ಯರ್ ಬಿ. ಎ ಬಿ. ಎಲ್ ಯವರು ಶ್ರೀ ಶಂಕರಾಚಾರ್ಯರವರು ಉಪನಿಷತ್ತುಗಳಿಗೆ ಮಾಡಿರುವ ವ್ಯಾಖ್ಯಾನಗಳನ್ನು ಇಂಗ್ಲಿಷ್ ಭಾಷೆಯಲ್ಲಿ ತರ್ಜುಮೆಮಾಡಿ ಅದಾ ಸ್ವಾಕಾರ್ಚಿನಿಂದ ಮುದ್ರಿಸಿ ಪ್ರಕಟಿಸಿರುತ್ತಾರೆಂತಲೂ, ಸದರೀ ಆಚಾರ್ಯರವರು ಉಪನಿಷದರ್ಥ ಪ್ರತಿಪಾದನದೊಳು ಪಡೆದಿರುವ ಅಸಾಧಾರಣ ವೈದುಷ್ಯದಂ ಮೆಚ್ಚಿ ರಾಯಲ್ ಏಷ್ಯಾಟಿಕ್ ಸೊಸೈಟಿಯವರು ಅವರನ್ನು ತಮ್ಮ ಸಂಘದ ಒಬ್ಬ ಮೆಂಬರಾಗಿ ಅಂಗೀಕರಿಸಿದರೆಂತಲೂ ಆಂಧ್ರಪ್ರಕಾಶಿಕಾ ಪತ್ರಿಕೆ ತಿಳಸುತದೆ.

ಬ್ರಿಟಿಷ ಸವಾರ್ ಸೇನೆಯಲ್ಲೂ ತೋಪುಗಳ ಗಾಡಿಯಲ್ಲೂ ಇನ್ನು ಬೇರೆವಿಧವಾಗಿಯೂ ಬಹುಕಾಲದವರೆಗೆ ಉಪಯೋಗಿಸಲ್ಪಟ್ಟು ಪನ್ನುಕ್ಕದ ಉಂಟಾದ ಬಹುಹೀನಸೆ ಇಂಥಾ ವಾರ್ಧಕ್ಯದಿಂದಂ ಕೆಲಸಕ್ಕೆ ಅನುಪಯುಕ್ತಗಳಾಗಿ ಹೋದ ಕುದುರೆಗಳನ್ನು ಹರಾಜ್ ಹಾಕಿಸುವದರಲ್ಲಿ ರಾಸ್ ಒಂದಕ್ಕೆ ಇಪ್ಪತ್ತೈದು ರೂಪಾಯಿಗಳು ಹುಟ್ಟುವಳಿಯಾಗದೆ ಹೋಗುವ ಪಕ್ಷದಲ್ಲಿ ಹರಾಜ್ಹಾಕುವದಕ್ಕೆ ಬದಲು ಅವುಗಳನ್ನು ಕೊಂದುಹಾಕತಕ್ಕದ್ದೆಂದು ಇಂಡ್ಯ ಗವರ್ನಮೆಂಟನವರು ಹುಕುಂ ಮಾಡಿರುವಂತೆ ಒಂದು ಪತ್ರಿಕೆಯಮೂಲಕ ತಿಳಿದು ಬಹಳ ವಿಷಾದಿಸುವೆವು.

ಪಂಜಾಬ ದೇಶದಲ್ಲಿ ಅಸಿಸ್ಟೆಂಟ್ ಕಮಿಷನರ್ ರಾಗಿದ್ದ ಸರ್ದಾರ್ ಗುರುದಯಾಳುಸಿಂಗರವರ ಮೇಲೆ ತರಲ್ಪಟ್ಟ ಲಂಚದ ಮೊಕದ್ದಮೆಯಲ್ಲಿ ಅಪರಾಧಿಗೆ ವಿರೋಧವಾಗಿ ಸಾಕ್ಷ್ಯ ಹೇಳಿದವರಿಬ್ಬರು ಈಚೆಗೆ ಖೂನಮಾಡಲ್ಪಟ್ಟಿರುತ್ತಾರೆ ಸದರೀ ಇಬ್ಬರಲ್ಲೊಬ್ಬನು ಮುಜಫರ್ಘರಿನಲ್ಲೂ ಇನ್ನೊಬ್ಬನು ಮುಂಗಾಮರಿ ಎಂಬ ಪ್ರದೇಶದಲ್ಲೂ ಕೊಲ್ಲಲ್ಪಟ್ಟರು. ಈ ಪ್ರದೇಶಗಳು ಒಂದಕ್ಕೊಂದು ೧೨೦ ಮೈಲಿಗಳ ಫಾಸಲೆಯಲ್ಲಿರುತವೆ. ಈ ಕೃತ್ಯವಂ ನಡೆಸಿದವರು ಪತ್ತೆ ಆಗುವಪಕ್ಷದಲ್ಲಿ ಇದಕ್ಕೆ ಕಾರಣಭೂತರಾದವರು ಸಹ ಹೇರವಷ್ಟು ಪ್ರಬಲಶಿಕ್ಷೆಗೆ ಗುರಿಯಾಗುದೆ ಹೋಗಲಾರರು.

ಪಂಜಾಬ ದೇಶದೊಳು ಒಂದು ಅಸಿಸ್ಟೆಂಟ್ ಕಮಿಷನರಾಗಿದ್ದ ಸರ್ದಾರ್ ಗುರುದಯಾಳುಸಿಂಗ್ ಎಂಬವರ ಮೇಲೆ ತರಲ್ಪಟ್ಟಿದ್ದ ಲಂಚದ ಮೊಕದ್ದಮೆಯಲ್ಲಿ ಅವರ ವಿಚಾರಣೆಯಬಗ್ಗೆ ಗವರ್ನಮೆಂಟಿನವರಿಂದ ಮುಕರರ್ಮಾಡಲ್ಪಟ್ಟಿದ್ದ ಕಮಿಟಿಯವರು ತಮ್ಮ ವಿಚಾರಣೆಯ ಫಲಿತಾಂಶವನ್ನು ಕುರಿತು ಗವರ್ನಮೆಂಟಿಗೆ ರಿಪೋರ್ಟ್ಮಾಡಿ ಅದು ಅವರ ಆಲೋಚನೆಯಲ್ಲಿದೆಯೆಂತಲೂ, ಸದರೀ ರಿಪೊರ್ಟಿನಲ್ಲಿ ಅಪರಾಧಿಯ ಮೇಲೆ ತಪ್ಪನ್ನು ಸ್ಥಿರಪಡಿಸಿ ಕಮಿಟಿಯವರು ಅಭಿಪ್ರಾಯ ಕೊಟ್ಟಿರುವಂತೆಯೂ ಒಬ್ಬ ವೃತ್ತಾಂತಲೇಖಕರು ಒಂದು ಪತ್ರಿಕೆಗೆ ಬರದಿರುತ್ತಾರೆ.

ಬರುವ ಡಿಸಂಬರ್ ತಿಂಗಳ ಅಂತ್ಯಭಾಗದೊಳು ಮದರಾಸಿನಲ್ಲಿ ನಡೆಯತಕ್ಕ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯ ರಿಸೆಪ್ಷನ್ ಕಮಿಟಿಯ ಪ್ರಸಿಡೆಂಟರಾಗಿ, ಮಿ॥ ಪಿ. ಚೆಂಚಲರಾವ್ ಪಂತುಲು ಸಿ. ಐ. ಇ. ಯವರನ್ನು ಚುನಾಯಿಸಿ ಮುಕರರ್ಮಾಡಿದರೆ ಬಹಳ ಶ್ಲಾಘ್ಯವಾಗಿರುವುದೆಂದು ವಿಶಾಖ ಪಟ್ಟಣದ ಸ್ಪೆಕ್ಟೇಟರ್ ಯೆಂಬ ಪತ್ರಿಕೆಯು ತಾತ್ಪರ್ಯ ಪಡುತಿದೆ. ಪಂತುಲುಯವರಿಗೆ ಶರೀರಾರೋಗ್ಯ ದಾರ್ಢ್ಯವು ಮೇಲೆ ಕಂಡ ಸಭಾಧ್ಯಕ್ಷತೆಯಂ ಕೈಗೊಳ್ಳುವದಕ್ಕೆ ಅವಕಾಶವನ್ನೀಯುವ ಪಕ್ಷದಲ್ಲಿ ಇದಕ್ಕಿಂತಲು ಯೋಗ್ಯವಾದ ಏರ್ಪಾಡು ಬೇರೆ ಯಾವದೂ ಕಾಣಿಸಲಾರದು.

ಈಗ ಇಂಡ್ಯರಾಜ್ಯದ ವೈಸರಾಯ್ ಯವರಾಗಿರುವ ಲಾರ್ಡ್ ಎಲ್ಗಿನ್ ಸಾಹೆಬರವರು ಇನ್ನು ಮೂರುತಿಂಗಳ ಕಾಲದೊಳಗಾಗಿ ತಮ್ಮ ಅಧಿಕಾರವಂ ಬಿಟ್ಟು ಸ್ವದೇಶಕ್ಕೆ ಹೊರಡುಹೋಗುವ ಸನ್ನಾಹಗಳು ನಡೆಯುತಲಿರುವದರಿಂದ ಅವರ ಸ್ಥಾನಕ್ಕೆ ಇಂಡ್ಯರಾಜ್ಯದ ಅಂಡರ್ ಸೆಕ್ರಿಟರಿಯವರಾದ ಮಿ॥ ಕರ್ಜನ್ ಸಾಹೆಬರವರು ನಿಯಮಿಸಲ್ಪಟ್ಟಂತೆ ಕಳೆದ ವಾರದಲ್ಲಿ ವಿಲಾಯತಿಯಿಂದ ತಂತಿ ವೃತ್ತಾಂತ ಬಂದಿರುತಿದೆ. ಇವರ ಸ್ವಾಭಾವಿಕ ಗುಣಗಳ ವಿಷಯದಲ್ಲಿ ಪಕ್ಷಭೇದದಿಂದ ವೃತ್ತಾಂತ ಪತ್ರಿಕೆಗಳ ಅಭಿಪ್ರಾಯಗಳು ಭಿನ್ನಗಳಾಗಿರುತವೆ ಅವು ಮುಂದೆ ತಿಳಿಯತಕ್ಕವು.

ಈಚೆಗೆ ಕಪುರ್ಥಲಾ ಸಂಸ್ಥಾನದಲ್ಲಿ ಒಂದು ಹೇಸರಕತ್ತೆಯು ಕುದುರೆ ಮರಿಯನ್ನು ಹಾಕಿಲು ಇದುವರೆಗೆ ಯಾವ ಕಾಲದಲ್ಲೂ ಕೇಳಿ ಅಥವಾ ನೋಡಿದ್ದಲ್ಲದ ಈ ವಿಚಿತ್ರ ವಿಷಯನನ್ನು ನೋಡುವದಕ್ಕೆ ಜನರು ಗುಂಪುಗುಂಪಾಗಿ ಹೋಗಲಿಕ್ಕಿಸುವಲ್ಲಿ ಸದರೀ ಕತ್ತೆಯ ಸ್ವಾಮ್ಯದಾರನು ಹೋಪವನರಿಂದ ಫೀ ಇಸಂ ಒಂದುಕಾಸಿನಂತೆ ವಸೂಲ್ಮಾಡಲಾರಂಭಿಸಿರುತ್ತಾನೆ. ಸೃಷ್ಟಿಯಲ್ಲುಂಟಾದ ಈ ವೈಚಿತ್ರ್ಯವು ಮುಂದೆ ಪ್ರಾಪ್ತವಾಗಬಹುದಾದ ಯಾವದೊ ಒಂದು ಪ್ರಬಲ ವಿಷಯಕ್ಕೆ ಸೂಚನೆಯಾಗಿರಬೇಕೆಂದು ಅಲ್ಲಿನ ಪಂಡಿತರೆಲ್ಲರು ಕೂಡಿ ಶಾಸ್ತ್ರಗಳನ್ನೂ ಗ್ರಹಗಳ ಗತಿಗಳನ್ನೂ ಶೋಧಿಸುತಲಿದಾರೆಂದು ಲಾಹೋರ್ ಪತ್ರಿಕೆ ಯೊಂದು ತಿಳಸುತದೆ.

ವೃತ್ತಾಂತಪತ್ರಿಕಾಲೇಖಕರಸ್ವಾತಂತ್ರ್ಯವಂ ಕಡಮೆ ಮಾಡುವದೆಷ್ಟು ಮಟ್ಟಿಗೂ ಯೋಗ್ಯವಾದ ಕಾರ್ಯವಲ್ಲವೆಂದು ಇಂಗಲೀಡೇಶದ ಪೋಪ್ಯವರ ಅಭಿಪ್ರಾಯವಾಗಿರುತದೆ. ಸದರೀ ರಾಜ್ಯದಲ್ಲಿ ಪತ್ರಿಕಾಲೇಖಕರೆಷ್ಟರ ದುರ್ನಡತೆಯುಳ್ಳವರಾಗಿದ್ದರೂ ಆಕ್ಷೇಪಣೆಯ್ಯವಾಗುವದಿಲ್ಲವೆಂತಲೂ, ಪರಂತು ಗವರ್ನಮೆಂಟಿನವರಿಗೆ ಅವಿಶ್ವಾಸಕರವಾದ ವಿಷಯಗಳಂ ಕುರಿತು ಪತ್ರಿಕೆಗಳಲ್ಲಿ ಬರೆದು ವಿಚಾರ ಮಾಡಿದರೆ ಅಂತವರು ವಿಚಾರಣೆ ಮಾಡಲ್ಪಡದೇನೇ ಖೈದುಸಜಾ ವಿಧಿಸಲ್ಪಡುವರೆಂತಲೂ ತಿಳಿಯಬರುತಿದೆ. ಈ ನಿಬಂಧನೆಯು ಈ ಇಂಡ್ಯಾದೇಶದೊಳು ಜಾರಿಯಲ್ಲಿ ತರಲ್ಪಡುವದೇನೂ ಆಶ್ಚರ್ಯವಲ್ಲವು ಈಗ ಉಂಟುಮಾಡಲ್ಪಟ್ಟಿರುವ ನಿರ್ಬಂಧವು ಸ್ವಲ್ಪ ಹೆಚ್ಚುಕಡಿಮೆಯಾಗಿ ತತ್ಸದೃಶವಾದುದೆಂತಲೇ ಎಣಿಸಲ್ಪಡಬೇಕಾಗಿದೆ.

ಮದರಾಸ್ನಲ್ಲಿ ಕೆಲವರು ಶೆಟ್ಟಿಗಳು ತಮ್ಮ ಮನೆಗಳ ಬೀದಿಯ ಜಗುಲಿಯಮೇಲೆ ತಂಗ್ಕರಿ ಇನ್ನಿಟ್ಟುಕೊಂಡು ಮಾರುತಲಿದ್ದದಂ ಮ್ಯುನಿಸಿಪಲ್ ಅಧಿಕಾರಿಗಳು ನೋಡಿ ಸದರೀ ಇಲಾಖಾ ಕಮಿಷನರ್‌ಗಳ ಹುಕುಂ ಇಲ್ಲದೆ ಮಾರ್ಕೆಟ್ಟುಗಳನ್ನಿಟ್ಟುಕೊಂಡರೆಂದು ಸದರೀ ಮಾಲಿಕರು ಅಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಚಾರ್ಜ್ ಮಾಡಿ ನಡೆದವಿಚಾರಣೆಯೊಳು, ಆಕ್ಟಿನಲ್ಲಿ ವಿವರಿಸಲ್ಪಟ್ಟಿರುವಂತೆ ಮಾರ್ಕೆಟ್ಟಿಗೆ ಅವಶ್ಯವಿರಬೇಕಾದ ಲಕ್ಷಣಗಳು, ಅಂದರೆ ಒಳಗೆ ಹೋಗಿಬರಲು ಬಾಗಿಲು, ಮೋರಿಗಳು, ಕಚಡಾ ತೊಟ್ಟಿ, ಪಾಯಖಾನೆ, ಹುಚ್ಚ ಹುಯ್ಯುವದಕ್ಕೆ ಮರೆ, ನೀರಿನನಲ್ಲಿ ಮೊದಲಾದವು ಇಲ್ಲದಿರುವದರಿಂದ ಮನೆಗಳ ಬೀದಿಯ ಜಗಲಿಯು ಮಾರ್ಕೆಟ್ ಆಗಲಾರದೆಂದು ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟು ಅಪರಾಧಿಗಳನ್ನು ಖುಲಾಸೆ ಮಾಡಿದರು.

ಹೌಸಾಫ್ ಕಾಮನ್ಸ್ ಸಮಾಜವು ಮುಂದೆ ಸೇರುವ ಕಾಲದಲ್ಲಿ ಒಂದು ಮಸನಿದೆಯು ಸಭಿಕರ ವಿಮರ್ಶೆಯಬಗ್ಗೆ ತರಲ್ಪಡುವದಾಗಿರುವಂತೆ ಕೇಳುತ್ತೇವೆ. ಉದ್ದಿಷ್ಟ ಮಸನಿದಾ ಕಾನೂನಿನ ದೆಸೆಯಿಂದ ಇಂಡ್ಯದೇಶದ ಅಪುರ್ನಿಗಳ ಸ್ಥಿತಿಯು ಉತ್ತಮವಾಗುವದೆಂದು ಭಾವಿಸಬೇಕಾಗಿದೆ, ಪ್ಯಾಗೂದರೆ, ಇಂಗ್ಲಾಂಡ್, ಐರ್ಲ್ಯಾಂಡ್, ಸ್ಕಾಟಿಲ್ಯಾಂಡ್ ಈ ಮೂರು ಸೇರಿದ ಸಂಯುಕ್ತ ರಾಜ್ಯದಲ್ಲಿರುವ ಕೋರ್ಟುಗಳಲ್ಲಿ ವ್ಯವಹರಿಸುವ ಮತ ಅಪುರ್ನಿಗಳೂ ಇಂಡ್ಯದೇಶದ ಅಪುರ್ನಿಗಳು ಸಹ ಸಮಾನ ದರ್ಜೆಯುಳ್ಳವರಾಗಿ ಎಣಿಸಲ್ಪ

ಷ್ಟು ಅವರು ಬ್ರಿಟಿಷ್ ರಾಜ್ಯದೊಳಿನ್ಯಾವ ಕೋರ್ಟಿನೊಳಾದರು ವ್ಯವಹರಿಸಲಿಕ್ಕೆ ಅರ್ಹರಾಗಿರತಕ್ಕದ್ದೆಂದು ನಿಬಂಧಿಸಿ ಇದಂ ಕುರಿತ ಅಭಿಪ್ರಾಯವಂ ತಿಳಿಸುವಂತೆ ಅಯಾ ಹೈ ಕೋರ್ಟಿನವರಿಗೂ, ಅಟರ್ನಿ ಸಂಘಗಳಿಗೂ ಬರೆಯಲ್ಪಟ್ಟಿರುವಂತೆ ಕೇಳುತ್ತೇವೆ.

ನಾಸಿಕ ಡಿಸ್ಟ್ರಿಕ್ಟಿನಲ್ಲಿ ದರೋಡೆ ಕಳ್ಳರು ಕೆಲವರು ದಸ್ತಗಿರಿಯಿಂದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದರ್ಯಾಫ್ತೀ ಆಗುವ ಕಾಲದೊಳು ತಪ್ಪಿಸಿಕೊಂಡು ಓಡಿಹೋಗಿದ್ದವರು ಅಲ್ಲಿ ಅನೇಕ ಗ್ರಾಮಗಳನ್ನು ಲೂಟಿಮಾಡುತಲೂ ಜನರನ್ನು ನಾನಾವಿಧದಿಂ ಹಿಂಸಿಸುತಲೂ ಇದ್ದುದರಿಂದ ಇವರ ಹಿಂಸೆಯಂ ತಡೆಯಲಾರದೆ ಅಲ್ಲಿನ ಪ್ರಜೆಗಳು ಸರ್ಕಾರಕ್ಕೆ ಅನೇಕ ಅರ್ಜಿಗಳಂ ಬರೆದುಕೊಂಡ ಮೇಲೆ ಅರವತ್ತುಮಂದಿ ಪೋಲೀಸ್ ಜನರು ಆಯುಧಗಳೊಡನೆ ಕಳ್ಳರಂ ಹುಡಿಕಿಕೊಂಡು ಹೋಗುವಲ್ಲಿ ಅವರ ಗುಂಪು ಒಂದು ಗ್ರಾಮದಬಳಿ ಒಂದು ತೋಪಿನಲ್ಲಿ ಕಂಡುಬಂತು. ಅವರಿಗೂ ಪೋಲೀಸರಿಗೂ ಕೈಕಲೆತು ದರೋಡೆ ಗುಂಪಿಗೆ ತಲೆವನಾದವನೂ ಬೇರೆ ಆರುಮಂದಿಯೂ ಗೋಲಿದೆಬ್ಬೆ ತಗಲಿ ಸತ್ತುಬಿದ್ದರು. ಪೋಲೀಸ್ ಜನರಲ್ಲಿ ಕೆಲವರು ಸತ್ತರು ಕೆಲವರಿಗೆ ಘಾಯಗಳಾದವು.

ಸರ್ಕಾರ್ ನೌಕರಿಯಲ್ಲಿರುವ ರೈಟರ್ ಮೊದಲಾದ ತಾಬೇದಾರಿ ಉದ್ಯೋಗಸ್ಥರು ಯಾರಾದರು ತಮ್ಮ ಕುಟುಂಬದೊಳು ಯಾರಿಗಾದರು ಸಿಡುಬು ಅಥವಾ ಬೇರೆವಿಧ ಸಾಂಕ್ರಾಮಿಕ ರೋಗ ತಗಲಿ ತನ್ಮೂಲಕ ಕಚ್ಚೇರಿಗೆ ಹೋಗುವದಕ್ಕೆ ಸಾಧ್ಯವಲ್ಲದೆ ಗೈರುಹಾಜರಾಗುವ ಪಕ್ಷದಲ್ಲಿ ಅಂತವನಿಗೆ ಅವನ ಇಲಾಖಾ ಅಧಿಕಾರಿಯು ನ್ಯಾಯವಾಗಿ ಕೊಡಬಹುದಾದ ಕ್ಯಾಜುಯಲ್ ರಜಾ ಕೊಡತಕ್ಕದ್ದು, ಅಂತೆ ರಜಾ ಕೊಡುವದಕ್ಕೆ ಅವಕಾಶವಿಲ್ಲವೆಂದು ತೋರುವ ಪಕ್ಷದಲ್ಲಿ ರೂಲ್ಸ್ ಅನುಸರಿಸಿ ಯಾವರಜಾ ಕೊಡಬಹುದೋ ಸದರೀ ರಜಾವನ್ನು ಅವನು ಗೈರುಹಾಜರಾಗುವ ಕಾಲದವರೆಗೆ ಕೊಡತಕ್ಕದ್ದು ಮಾತ್ರವಲ್ಲದೆ ಅವನಿಗೆ ಸಂಬಳ ಬಾಕಿಯಿದ್ದರೆ ಅದನ್ನು ಸಹ ಕೊಟ್ಟುಬಿಡತಕ್ಕದ್ದು, ಈ ಗೈರುಹಾಜರೀ ದಿನಗಳು ಇದುವರೆಗೆ ಅವನು ಪಡೆದುಕೊಳ್ಳುವದಕ್ಕೆ ಅರ್ಹನಾಗಿರುವ ಅಥವಾ ಮುಂದೆ ಅರ್ಹತೆಯಂಪಡೆಯಬಹುದಾದ ರಜಾದಿನಗಳಿಂದ ವಜಾ ಆಗತಕ್ಕದ್ದಲ್ಲವೆಂದು ಈಚೆಗೆ ಇಂಡ್ಯ ಗವರ್ನಮೆಂಟಿನವರು ನಿಬಂಧನೆ ಮಾಡಿರುತ್ತಾರೆ.

LOCAL AND PROVINCIAL NEWS.
ಒಳದೇಶವಾರ್ತೆ ತಾಲ್ಲೂಕ್‍ಜಾತ್ ವೃತ್ತಾಂತಗಳು.

ಈ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯು ಶೀಘ್ರದಲ್ಲಿ ಮೈಸೂರಿಂದ ಬೆಂಗಳೂರಿಗೆ ವಾಪಸ್ ಬರುವುದೆಂದು ಮೈಸೂರ್ ಹೆರಲ್ಡ್ ಪತ್ರಿಕೆ ತಿಳಿಸುತದೆ

ಕುಮರಿ ಪರತ್ತು ನಿನ್ನೆಯದಿನ ಇಲ್ಲಿ ಪೂರೈಸಲಾಯಿತು. ಅಗರದ ದಿನ್ನೆಯಲ್ಲಿ ನಡೆಯಬೇಕಾದ ಕಡೇ ಜಾಜಿನ ವಿಷಯದಲ್ಲಿ ಅಲ್ಲಿ ರಸ್ತೆ ಸರಿಯಾಗಿಲ್ಲದಿರುವದರಿಂದ ಮುಂದೆ ಅದನ್ನು ಸರಿಪಡಿಸಿ ಜಾಜಿಗೆ ದಿನ ನಿಷ್ಕರ್ಷೆ ಮಾಡಲ್ಪಡುವದೆಂದು ಕೇಳುತ್ತೇವೆ.

ಕೆಲವು ಸಬ್‍ರಿಜಿಸ್ಟ್ರಾರುಗಳ ವರ್ಗಾವರ್ಗಿ ವಿಷಯದಲ್ಲಿ ರಿಜಿಸ್ಟ್ರಾರ್ ಜನರಲ್ ರವರು ಗವರ್ನಮೆಂಟ್ ಮಂಜೂರಾತಿಗಾಗಿ ಬರೆದಿರುವದಾಗಿ ಆಚೇವಾರದ ನಮ್ಮ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಈಚೆಗೆ ತಿಳಿಯಬಂದಿರುವದರಲ್ಲಿ ಆ ವರ್ಗಾವರ್ಗಿಗಳ ಪೈಕಿ ಕೆಲವು ಬದಲಾವಣೆಗಳಾಗಿ ಈಗ ದಾವಣಗೆರೆ ಸಬ್‍ರಿಜಿಸ್ಟ್ರಾರನ್ನು ಅಲ್ಲಿಯೇ ಕಾಯಂ ಮಾಡಿರುವಂತೆ ಸರಿಯಾದ ಮೂಲಕ ತಿಳಿಯಬಂದಿರುತದೆ.

ಈಗ್ಗೆ ನಾಲ್ಕಾರು ದಿನಗಳ ಮೊದಲು ಬಿಸಿಲಿಲ್ಲದೆ ಯಾವಾಗ್ಯೂ ಮೋಡವಾಗುತಲಿದೆ. ಮಧ್ಯಾನ್ಹತ್ತರ ಕೆಲವುವೇಳೆ ತುಂತುರು ಮಳೆಯೂ ಬೀಳುತದೆ. ಪರಂತು ಈ ವರ್ಷವು ಸುತರಾಂ ಪ್ರಯೋಜನಕಾರಿಯೆಂದು ಯೋಚಿಸುವದಕ್ಕಾಗುವದಿಲ್ಲವು, ಆಶ್ಲೇಷ ನಾಲ್ಕನೆಪಾದವು ಪೂರ್ತಿಯಾಗುತ ಬಂದುದರಿಂದ ಕಾರ್ತಿಕ ಸ್ಯ ಗುವಳಿಯು ಕಾಲವೂ ಪೂರ್ತಿಯಾಯಿತೆಂತಲೇ ಯೋಚಿಸಬೇಕು. ಇದರಿಂದ ಇದುವರೆಗೆ ವ್ಯಕ್ತವಾಗಿದ್ದ ಮುಂದಿನ ಸ್ಥಿತಿಯು ವ್ಯಕ್ತವಾಯಿತೆಂದು ತಿಳಿಯಬಹುದು.

ಕಳೆದವಾರ ಅತ್ತಿಕುಪ್ಪೆಯಲ್ಲಿ ಒಬ್ಬ ಭಾರೀ ಗೌಡನ ಮನೆಗೆ ಕೆಲವರು ಕಳ್ಳರು ನುಗ್ಗಿ ನೂವಿರಾರು ರೂಪಾಯಿಗಳ ಜೊದಗಿಯನ್ನು ಕದ್ದು ಕೊನೆಗೆ ಸಿಕ್ಕಿಬಿದ್ದರು. ಅವರು ಕದ್ದ ಮಾಲುಗಳ ಪೈಕಿ ಕೆಲವು ಮೈಸೂರು ದೊಡ್ಡಪೇಟೆಯಲ್ಲಿರುವ ಪಟ್ಟಾಭಿಶೆಟ್ಟಿಯ ಮನೆಯಲ್ಲಿ ಸಿಕ್ಕಿದವು. ಆಶೆಟ್ಟಿಯನ್ನೂ, ಕಳ್ಳರನ್ನೂ, ಇಲ್ಲಿನ ಐನ್ನಿಬ್ಬರನ್ನೂ ಹಿಡಿದುಕೊಂಡಿದಾರೆ ಅತ್ತಿಗುಪ್ಪೆಯ ಇನ್ಸ್‍ಪೆಕ್ಟರು ಮೋ|| ರಂಗರಾಜೇ ಅರಸಿನವರು ಈಕೆಲಸವನ್ನು ಪತ್ತೆಮಾಡುವದರಲ್ಲಿ ಬಹಳ ಸಾಹಸಪಟ್ಟರೆಂದು ತಿಳಿದುಬಂದಿದೆ—ವೃ. ಪ.

ಶಿಡ್ಲಘಟ್ಟ ತಾಲ್ಲೂಕು ಮುರಗ್ಗೂರು ಅಗ್ರಹಾರದ ಪಾರ್ಶ್ವಂದರ ದೈವಜ್ಞ ಎಂಬ ಜೋಯಿಸರು ಮುಂದೆ ಬರುವ ಸಂವತ್ಸರದಲ್ಲಿ “ಈ ದಕ್ಷಿಣ ಕರ್ನಾಟಕ ದೇಶದೊಳು ಯಾವ ವಿಧವಾದ ಭುವಿನೋತ್ಪಾತಗಳ ದುಷ್ಟ ಫಲಗಳೂ ಉಂಟಾಗಲಾರವೆಂದು ಶೋಧಿಸಿ ನಿರ್ಣಯಿಸಿದ ಪ್ರತಿಜ್ಞಾಪತ್ರಿಕೆ” ಎಂಬ ಹೆಸರಿನ ಸೂಚನೆಯನ್ನು ಬರೆದು, ಚಿಕ್ಕಬಳ್ಳಾಪುರದ ಮ|| ವೆಂಕಟರಾಮಶಾಸ್ತ್ರಿ ಸಿದ್ಧಾಂತಿಗಳಿಂದ ಪರಿಶೋಧನೆ ಮಾಡಿಸಿ, ಅಚ್ಚು ಹಾಕಿಸಿ, ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುತ್ತಾರೆ. ಈ ಪತ್ರಿಕೆಯಲ್ಲಿರುವ ಗ್ರಹಚಾರಗಳನ್ನು ಇಲ್ಲಿನ ಕೆಲವು ಜೋಯಿಸರಿಗೆ ತೋರಿಸಿದಾಗ, ಒಬ್ಬಿಬ್ಬರು ಅದು ವಿಧಿ ಪೂರ್ವಕವಾದದ್ದಾಗಿಲ್ಲವೆಂದು ಆಕ್ಷೇಪಣೆ ಮಾಡಿ, ಫಲಾಂಶಗಳ ವಿಷಯದಲ್ಲಿ ಸಂಶಯ ಪಡುತ್ತಿದ್ದಾರೆ. ಹ್ಯಾಗೂ ಮ|| ಶ್ರೀಕಂಠ ದೈವಜ್ಞರು ಬರುವ ಸಂವತ್ಸರದಲ್ಲಿ ದುಷ್ಫಲಗಳೇನೂ ಸಂಭವಿಸುವದಿಲ್ಲವೆಂದು ಪ್ರಜೆಗಳಿಗೆ ತಿಳಿಸುವದರಿಂದ, ಅವರ ಭೀತಿಯನ್ನು ಕಡಿಮೆ ಮಾಡಿದಾರೆ.—ವೃ. ಪ.

ಕಡೂರಿನಲ್ಲಿರುವ ಹಿಂದುಸ್ಥಾನಿ ಮದರಸ ಉಪಾಧ್ಯಾಯನ ಶಿಷ್ಯರಲ್ಲಿ ಅಣ್ಣತಮ್ಮಂದಿರಾದ ಇಬ್ಬರು ಅವನಬಳಿ ವಿದ್ಯೆ ಕಲಿಯಬಾರದೆಂದು ತಮ್ಮ ತಾಯಿಗೆ ತಿಳಿಸಿ ಆಕೆಯಿಂದ ಅಪ್ಪಣೆ ಪಡೆದು ಬುತ್ತಿಯೊಂದಿಗೆ ಹಳೇಬೀಡಿನಲ್ಲಿರುವ ತಮ್ಮ ಮಾವನ ಬಳಿಗೆ ಹೋಗುತ್ತಿರಲು ಆ ಉಪಾಧ್ಯನು ಸದರೀ ಹುಡುಗರ ಬೆನ್ನು ಹತ್ತಿ ಹೋಗಿ ಕಡೂರಿಗೆ ೬—೭ ಮೈಲಿ ದೂರದಲ್ಲಿ ಅವರನ್ನು ಸಂಧಿಸಿ ತನ್ನ ಸೊಂಟದಲ್ಲಿದ್ದ ಬಾಕಿನಿಂದ ಹಿರಿಯವನನ್ನು ಇರಿದು ಕೊಂದನು. ನಂತರ ಕಿರಿಯವನನ್ನು ತಿವಿದು ಕಾಲಿಗೆ ಬಿದ್ದು ಹೇಳಿದನು. ಮೊದಲನೆಯವನ ಕೂಡಲೆ ಸತ್ತನು. ಎರಡನೆಯವನು ತನ್ನ ಹೊಟ್ಟೆಯಿಂದ ಜಾರುತ್ತಿದ್ದ ಕರುಳನ್ನೆಲ್ಲಾ ಬಹು ಸಾಹಸದಿಂದ ಒಳಕ್ಕೆ ನೂಕಿ ಸಂಚಿಯಿಂದ ತನ್ನ ಹೊಟ್ಟೆಯನ್ನು ಭದ್ರವಾಗಿ ಕಟ್ಟಿಕೊಂಡು ಪುನಃ ಕಡೂರಿಗೆ ಬಂದು ತನ್ನ ತಾಯಿಗೂ ಸರ್ಕಾರದವರಿಗೂ ದಾರಿಯಲ್ಲಿ ನಡೆದ ಸಂಗತಿಯನ್ನು ತಿಳಿಸಿದನು. ಅಸ್ಪತ್ರೆಯಲ್ಲಿ ಅವನಿಗೆ ಬಹು ಸುಸ್ಥಿರ ಕಾರಣ ಇವನನ್ನು ಚಿಕಿತ್ಸೆಗೆ ಕಳುಹಿಸಿದಾಗ್ಯೂ ಅವನು ಬದುಕುವಹಾಗಿಲ್ಲವೆಂದು ಕೇಳುತ್ತೇವೆ—ವೃ. ಪ.

THE MYSORE GAZETTE
ಮೈಸೂರು ಗೆಜೆಟು.

ತಾರೀಖು ೧೧ನೇ ಆಗಸ್ಟು ೧೮೯೮.

ಡಿಪ್ಪಾರ್ಟ್ಮೆಂಟ್ ನಾವೆಗಳು
ಜನರಲ್ ಮತ್ತು ರೆವಿನ್ಯೂ.

ತಾ|| ೪ನೇ ಆಗಸ್ಟು ೧೮೯೮.

ನಂ|| ೧೭೦೦—ಜಾ ೧೬೮.—ಪೋಲೀಸ ಸೂಪರಿಂಟೆಂಡೆಂಟ್ ಮೈ|| ಡಿ. ಪಿ ಬಾಲಸ್ವಾಮಿಯವರು ಕೋಲಾರ್ ಭಂಗಾರದ ಗಣಿಗಳಿಂದ ಫ್ರೆಂಚ್‍ರಾಕ್ಸ್‍ಗೆ ವರ್ಗ ಮಾಡಲ್ಪಟ್ಟಿರುತ್ತಾರೆ ಚಾರ್ಜ ಒಪ್ಪಿಸಿದ ತರುವಾಯ ಕೆಲಸಕ್ಕೆ ದಾಖಲಾಗತಕ್ಕದ್ದು

ಪೋಲೀಸ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೈ|| ಎನ್. ಸಿ. ಜೋಯವರು ವರ್ಗಮಾಡಲ್ಪಟ್ಟ ಮೈ|| ಡಿ. ಪಿ. ಬಾಲಸ್ವಾಮಿಯವರಿಗೆ ಬದಲಾಗಿ ಕೋಲಾರ ಭಂಗಾರಗಣಿಗಳಿಗೆ ನಿಯಮಿಸಲ್ಪಟ್ಟಿರುತ್ತಾರೆ. ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ನಂ|| ೧೭೧೭—ಜಾ. ೧೭೨—ಮೈಸೂರ್ ಸರ್ವಿಸ ರೆಗ್ಯುಲೇಷನ್‍ಗಳ ೫೯೮ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟು ಸರ್ವೆಗೂಡಿನ ಮುನಿಸಿಫ್ ಮೈ|| ವಿ. ರಂಗಾಚಾರ್ಯರ್ ರವರಿಗೆ ೧೮೯೮ನೇ ಜುಲೈ ೨೫ನೇ ತಾರೀಖು ಮೊದಲು ಮೂರು ವಾರಗಳ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರು ಸುಪರ್ನಿಸೆಪಿ ಹಸ್ಟ್ಚರ ಕೋರ್ಟು ಇನ್ಸ್ಪೆಕ್ಟರ್ ಮೈ|| ಸಿ. ಸುಬ್ಬರಾಯರು ರಜಾದ ಮೇಲಿರುವ ಮೈ|| ರಂಗಾಚಾರ್ಯರ್ ರವರಿಗೆ ಬದಲಾಗಿ ಆ ಮುಕ್ತ್ಯಾರದು ಮಾಳುಂ ಕೊಡುವ ಪರಿಯಂತ ೪ನೇ ಗ್ರೇಡಿನಲ್ಲಿ ಸಬ್‍ಕೋರ್ಟ್ ತರ್ಕ ಮುನಸಿಫರಾಗಿ ಆಕ್ಟು ಮಾಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ|| ೧೭೩೭ ಜಾ. ೧೭೬.—ಶ್ರೀಮನ್ನಹಾರಾಜರವರ ಕೋರ್ಟ್ ದಿನ ೧ನೇ ಸರ್ಕ್ಯುಲರ್ ಅನುಸಾರ, ಮಾಗಡಿ ತಾಲ್ಲೂಕಿನ ಅಮಲ್ದಾರ್ ವ ೪ನೇ ಕ್ಲಾಸ ಮ್ಯಾಜಿಸ್ಟ್ರೇಟರಾದ ಎಚ್, ಆರ್, ಶ್ರೀನಿವಾಸರಾಯರು ಎರಡನೇ ಕ್ಲಾಸಿನ ಮ್ಯಾಜಿಸ್ಟ್ರೇಟ್ ರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾ|| ೩ನೇ ಆಗಸ್ಟು ೧೮೯೮.

ನಂ|| ೧೭೪೮—ಜಿ. ಪೈ ೩೯೬—೯೭ —ಮೈ|| ಕೆ. ಎಸ್. ಚಂದ್ರಶೇಖರ ಅಯ್ಯರ್ ಬಿ. ಎ. ಬಿ ಎಲ್. ರವರು ೧೮೯೮ನೇ ಜುಲೈ ೨೮ನೇ ತಾರೀಖಿನಾರಭ್ಯ ಬಿ. ಹಿನ್ನೂಲಿನ ಅಸಿಸ್ಟೆಂಟ್ ಕಮಿಷನರುಗಳ ಎರಡನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು ೬ನೇ ಆಗಸ್ಟ ೧೮೯೮.

ನಂ|| ೧೮೩೩-ಜಾ ೧೯೦.—ಜ್ಯುಡಿಷಿಯಲ್ ಇಲಾಖೆಯಿಂದ ಕಾಯಮಾಗಿ ವರ್ಗಮಾಡಲ್ಪಟ್ಟ ಮೈ|| ಎಂ ಎ. ನಾರಾಯಣ ಅಯ್ಯಂಗಾರ್ರಿಗೆ ಬದಲಾಗಿ ಸಬ್‍ಕೋರ್ಟಿಂ ಮೂರನೇ ಕ್ಲಾಸ್ ಮುನಸಿಫರಾದ ಮೈ|| ಅನಂತರಾವ ಸಿರಸಿ, ಬಿ ಎ ಎಲ್ ಎಲ್ ಬಿ, ರವರು ೧೮೯೮ನೇ ಜುಲೈ ಗುರ್ತ್ರೇ ಲಾಗಾಯಿತು ಸದರೀ ಕೆಲಸದಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ

ತಾ|| ೩೦ನೇ ಜುಲೈ ೧೮೯೮,

ನಂ|| ೮೯೧—ರೆ. ಫೈ. ೯೦—೯೭ —ಮೈಸೂರ್ ಸರ್ವಿಸ ರೆಗ್ಯುಲೇಷನ್‍ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರ್ ಮೈ|| ಎಂ. ನಂಜುಂಡ ಅರಸಿನವರಿಗೆ ೧೮೯೮ನೇ ಆಗಸ್ಟ ೭ನೇ ತಾರೀಖಿನ ಲಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ಅತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೈ|| ಕೆ ಮತ್ತೂರಯರು ಸದರೀ ಮೈ|| ನಂಜುಂಡ ಅರಸಿನವರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟು ಟ್ರೆಜರಿಯ ಚಾರ್ಜಿನಲ್ಲಿರತಕ್ಕದ್ದು.

ನಂ|| ೯೦೪—ರೆ. ೩೫೬.—ಮೈಸೂರ್ ಸರ್ವಿಸ ರೆಗ್ಯುಲೇಷನ್‍ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮೈ|| ಬಿ ಜೆ. ಕೃಷ್ಣಯ್ಯಂಗಾರ್ರಿಗೆ ೧೮೯೮ನೇ ಜುಲೈ ೨೫ನೇ ತಾರೀಖಿನಾರಭ್ಯ ಅವರು ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗುವದಕ್ಕೆ ಪೂರ್ವ ಮೂರು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಸದರೀಯವರು ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗೋಣವು ಸದರೀ ರಜಾ ಪೂರೈಸಿದ ತರುವಾಯ ಜಾರಿಗೆ ಬರತಕ್ಕದ್ದು

ತಾ|| ೪ನೇ ಆಗಸ್ಟ.

ನಂ|| ೯೩೧—ರೆ ೩೯೧.—ಅಸಿಸ್ಟೆಂಟ್ ಕಮಿಷನರ್ ಬಿ ಜಿ ಕುಮಾರಸ್ವಾಮಿ ನಾಯಕರು ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಬಗ್ಗಿ ಬೆಂಗಳೂರು ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ. (ಫ್ರೆಂಚ್‍ರಾಕ್ಸ್ ಸಬ್‍ಡಿವಿಜನಿನ ಪೋಲೀಸ್ ಚಾರ್ಜನ್ನು ಒಪ್ಪಿಸಿದ ತರುವಾಯ ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು)

ತಾ|| ೩ನೇ ಆಗಸ್ಟ ೧೮೯೮

ನಂ|| ೧೧೩೮—ರೆ ೪೩೦ —ಡೆಪ್ಯುಟಿ ಅಮಲ್ದಾರರುಗಳ ಇವರಡಿ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ ಮತ್ತು ಕೂಡ್ಲೆ ಜಾರಿಗೆ ಬರತಕ್ಕದ್ದು :—

ನರಸಿಂಹ ಶ್ರೀನಿವಾಸ ಪೋಟ್ನಿಸರವರು ಹರಿಹರದಿಂದ ಹೊಸದುರ್ಗಕ್ಕೆ.

ಮಹಮ್ಮದ್ ಒಜಿಮುಲ್ಲಾ ರವರು ಹೊಸದುರ್ಗದಿಂದ ಹರಿಹರಕ್ಕೆ

ಪಬ್ಲಿಕ್‍ವರ್ಕ್ಸ ಇಲಾಖಾ.
ಇಸ್ತಹಾರ್‍ನಾಮಾ.

ತಾ|| ೩೦ನೇ ಜುಲೈ ೧೮೯೮.

ನಂ|| ೩೪೧—೪೭೨.—ಮೈಸೂರು ಡಿವಿಜನಿನ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಿ| ಆರ್. ಟಿ ಸ್ಕಾಟ್ಲೆವೆಲ್ ರವರಿಗೆ ಮೈಸೂರ್ ಸರ್ವಿಸ್ ರೆಗ್ಯುಲೇಷನ್‍ಗಳ ೨೭೨ (ಬಿ) ನೇ ಆರ್ಟಿಕಲ್ ಅನುಸರಿಸಿ, ೧೮೯೮ನೇ ಆಗಸ್ಟ ಗುರ್ತ್ರೇ ಲಾಗಾಯಿತು ಯಾ ಅವರು ಹೊರಟ ತಾರೀಖಿನಾರಭ್ಯ ಯೂರೋಪಿಗೆ ಹೋಗುವ ಬಗ್ಗೆ ಒಂದೂವರೆ ವರ್ಷಗಳ ರಜಾ ಕೊಡಲ್ಪಟ್ಟಿರುತ್ತೆ.

ತಾ|| ೮ನೇ ಆಗಸ್ಟ ೧೮೯೮.

ನಂ|| ೪೦೭—೪೭೦೬ —ಮೈಸೂರು ಪಬ್ಲಿಕ್‍ವರ್ಕ್ಸ ಇಲಾಖೆಯ ಲೋಕಲ್ ಇಂಜಿನಿಯರ್ ಶಿಬ್ಬಂದಿಯಲ್ಲಿ ಇವರಡಿ ಕಂಡ ಬಡ್ತಿಯು ೧೮೯೮ನೇ ಏಪ್ರಿಲ್ ಗುರ್ತ್ರೇ ಲಾಗಾಯಿತು ಹುಕುಂ ಮಾಡಲ್ಪಟ್ಟಿರುತ್ತೆ :—

ಗೋಪಾಲಸ್ವಾಮಿ ಡಿಪ್ಲೊಮಾ ಮೈ||ಸಿ ಕೃಷ್ಣಯ್ಯಂಗಾರ್, ಎಲ್. ಸಿ. ಇ. ರವರು ೮೦ ರೂಪಾಯಿ ತಲಬುಳ್ಳ ೪ನೇ ಕ್ಲಾಸ ಸಬ್ ಅಸಿಸ್ಟೆಂಟ್ ಇಂಜಿನಿಯರ್ ದರ್ಜೆಯಿಂದ ೧೦೦ ರೂಪಾಯಿ ಕಾಯಂ ತಲಬುಳ್ಳ ಎರಡನೇ ಕ್ಲಾಸ ಅಸಿಸ್ಟೆಂಟ್ ಇಂಜಿನಿಯರ್ ಕೆಲಸಕ್ಕೆ.

ತಾ|| ೪ನೇ ಆಗಸ್ಟ ೧೮೯೮.

ನಂ|| ೪೨೧—೪೪೮೯.—ಮೈಸೂರು ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜಿನಿಯರ್ ಮೈ|| ಸಿ. ಆರ್. ಶ್ರೀನಿವಾಸಯ್ಯಂಗಾರ್ರಿಗೆ ಅವರು ಹೊರಟ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಹೈದರಾಬಾದ್ ಸಂಸ್ಥಾನದಲ್ಲಿ ಈಚೆಗೆ ಪ್ಲೇಗ್ ಜಾಡ್ಯವು ನಿಂತು ಹೋಗಿದ್ದದ್ದು ಕಳೆದ ವಾರ ೨ ಗ್ರಾಮಗಳಲ್ಲಿ ಪುನಃ ಕಾಣಿಸಿಕೊಂಡು, ಸುಮಾರು ೩೦ ಜನರನ್ನು ಕೊಂದು ಹಾಕಿರುತ್ತೆ.

ಮುಂಬಯಿಯ ಉಭಯ ಮುಸಲ್ಮಾನರು ಅಲ್ಲಿಯ ಅತಿಶಿಭಾಗವೆಂಬ ರಸ್ತೆಯ ಮೇಲಿರುವ ಹಿಂದೂ ದೇವಾಲಯದಲ್ಲಿ ಪ್ರವೇಶಿಸಿ ಅಲ್ಲಿಯ ಮೂರ್ತಿಯನ್ನು ಸ್ಥಾನಭ್ರಷ್ಟ ಮಾಡಿದ ಮೂಲಕ ಖಟ್ಲೆಯಾಗಿ ಪ್ರತಿಸಿಬ್ಬನಿಗೆ ೧೦೦ ರೂಪಾಯಿ ದಂಡವಾಯಿತು.

ದಾಮೋದರ ಚಾಪೇಕರನ ಒಡಹುಟ್ಟಿದ ತಮ್ಮನಾದ ವಾಸುದೇವನೆಂಬವನು ಪೋಲೀಸರ ಕೈಸೇರಿ, ತನ್ನ ನಡುವಿನ ಅಣ್ಣನಾದ ಬಾಲಕೃಷ್ಣನು ತ ಜಾವ್ವಾರ್ ಡಿಸ್ಟ್ರಿಕ್ಟಿನ ಒಂದು ಹಳ್ಳಿಯಲ್ಲಿ ಇದ್ದಾನೆಂದು ತಿಳಿಸಿದ್ದರಿಂದ, ಪೋಲೀಸನವರು ಕೂಡಲೆ ಅಲ್ಲಿಗೆ ಹೋಗಿ ಬಾಲಕೃಷ್ಣನನ್ನು ಹಿಡಿದರು ಚಾಪೇಕರ ಸತ್ರುವು ಮತ್ತೆ ನಡೆಯುವದು.

ಇಟಲೀ ರಾಜ್ಯದಲ್ಲಿ ಕಳೆದ ತಿಂಗಳಲ್ಲಿ ನಡೆದ ಪ್ರಜೆಗಳ ಭಯಂಕರವಾದ ದೊಂಬೀ ಕಲಹಗಳಿಗೆ ಆ ರಾಜ್ಯದ ಮಂತ್ರಾಲೋಚನಾ ಸಭಿಕರಲ್ಲಿ ಇಬ್ಬರು ಸೇರಿ, ಪಿತೂರಿ ಮಾಡಿದ್ದರೆಂದು ಗೊತ್ತಾದ ಕಾರಣ ಕಳೆದವಾರ ಆವರಿಬ್ಬರಿಗೂ ಏಳು ವರುಷದಂತೆ ಸಜಾ ಶಿಕ್ಷೆಯನ್ನು ಕೊಟ್ಟಿರುತ್ತಾರೆ.

ಚೀಣರಾಜ್ಯದಲ್ಲಿ ರೈಲು ದಾರಿ, ವ್ಯಾಪಾರ ಮಾಡುವ ದಕ್ಕೆ ಚೀಣಾ ರಾಜ್ಯಕ್ಕೆ ಹಣ ಸಾಲ ಕೊಡುವದಕ್ಕೂ ಇಂಗ್ಲೀಷಿನವರೂ, ರಷ್ಯದವರೂ ಪ್ರಯತ್ನ ಮಾಡುತ್ತಿದ್ದಾರೆ. ಚೀಣೆಯವರು ಇಂಗ್ಲೀಷಿನವರನ್ನು ಸಾಲ ಕೇಳದೆ ರಷ್ಯದವರು ಆದಕ್ಕೆ ಅಡ್ಡಿ ಮಾಡುತ್ತಿದಾರೆ. ಇದಲ್ಲದೆ ಪರ್ಷಿಯಾ ದೇಶದಲ್ಲಿ ಕೂಡ ಆ ರಾಜ್ಯದ ಷಾ ರಾಜರು ವಿಲಾಯತಿ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಳ್ಳಬೇಕೆಂದು ಪ್ರಯತ್ನ ಪಟ್ಟದ್ದು ರಷ್ಯಾರಾಜ್ಯದವರಿಗೆ ತಿಳಿದು, ಪರ್ಷಿಯಾ ದೇಶದ ಷಾ ರವರನ್ನು ಅಡ್ಡಿ ಮಾಡಿದ್ದರಿಂದ, ಷಾ ರವರು ಸಾಲ ತೆಗೆದುಕೊಳ್ಳದೆ ನಿಲ್ಲಿಸಿ ಬಿಟ್ಟಿದ್ದಾರು ಪರ್ಷಿಯಾನಬಂದರು, ಇತ್ತಲಾಗಿ ಹಾಂಕಾಂಗಿನಲ್ಲಿ ರಷ್ಯಾ ದವರು ಒಂದು ರೇವು ಪಟ್ಟಣವನ್ನು ಸ್ವಾಧೀನ ಮಾಡಿಕೊಂಡು, ಅಲ್ಲಿಗೆ ತಮ್ಮ ಜಹಜುಗಳನ್ನು ತಂದು, ಇರಬೇಕೆಂದು ಪ್ರಯತ್ನ ಪಡುತ್ತಿರುವದಾಗಿ ತಿಳಿದು ಬಂದಿದೆ, ಈ ವಿಷಯಗಳನ್ನು ಕುರಿತು ವಿಲಾಯತಿಯಲ್ಲಿ ಪ್ರಜೆಗಳು ಅನುಮಾನ ಪಡುತ್ತಲೂ, ಇಷ್ಟರಲ್ಲೇ ಇಂಗ್ಲೀಷಿನವರಿಗೂ ರಷ್ಯಾದವರಿಗೂ ಕಲಹ ಪ್ರಾರಂಭವಾಗಬಹುದೆಂದು ಹೇಳುತ್ತಲೂ ಇದ್ದಾರೆ.

ಹುಬ್ಬಳ್ಳಿಯಲ್ಲಿ ಪ್ಲೇಗಿನ ಬೇನೆಯು ದಿನಾಲು ಸುಮಾರು ೩೦ ಜನರಿಗೆ ಬರುತ್ತಿದ್ದು ಅದರಲ್ಲಿ ದಿನಾಲು ೨೦ ಜನರು ಮೃತಪಡುತಲಿದ್ದಾರೆ ಎಲ್ಲಿನೋಡಿದರೂ ಪಟ್ಟಣದಲ್ಲೆಲ್ಲ ದೊಡ್ಡದೊಡ್ಡ ಅನರ್ಥಗಳು ಒದಗುತ್ತಿದ್ದು ಆಕ್ರೋಶ ಕೇಳಿಬರುವ ಸ್ವರವೇ ಯಾಲ್ಲಿಯೂ ಕೇಳಬರುವದಿಲ್ಲ. ದೊಡ್ಡಿಗಳಲ್ಲಿಯೂ, ಮಾನೆಗಳಲ್ಲಿಯೂ, ಶಾಲೆಗಳಲ್ಲಿಯೂ, ಬೀದಿಗಳಲ್ಲಿಯೂ ಹೆಣಗಳು ಬಿದ್ದಿರುವದು ದಿನಾಲು ದೃಷ್ಟಿಗೋಚರವಾಗುತವೆ ಗಂಡನು ಹೆಂಡತಿಯನ್ನು ಹೆಂಡತಿಯು ಗಂಡನನ್ನು ಇಲ್ಲವೆ ತಾಯಿಯು ಮಗನನ್ನು ಮಗನು ತಂದೆಯನ್ನು ಪ್ರೇತವು ಎಲ್ಲಿಯಾದರೂ ಹೊತ್ತು ಸಾಗಿಸಿ ಹೊಲದಲ್ಲಿ ಯಾ ಮೊಟ್ಟೆ ದಲ್ಲಿ ಯಾ ಹಾಳುಬಾವಿ ಕೆರೆಗಳಲ್ಲಿ ಬಿಸಾಡು ತಮಗೆ ಆವರ ಬಗ್ಗೆ ಗೊತ್ತಿಲ್ಲದವರಂತೆ ತಿರುಗುತ್ತಾರೆ. ಇದು ಬಹು ಆಶ್ಚರ್ಯಕರ ಸಂಗತಿಯು, ಹುಬ್ಬಳ್ಳಿಯೆಂದರೆ ಸದ್ಯಕ್ಕೆ ಎಮಪಟ್ಟಣದಂತೆ ಭಾಸವಾಗುತಲಿದೆ, ಹುಬ್ಬಳ್ಳಿ ಜನರ ಮೇಲೆ ಎಮರಾಜನಿಗೆ ಕರುಣೆಯು ಎಂದು ಯಾವದಿವಸ ಬರುವುದೋ ಅಲ್ಲಿಂದ ತನ್ನ ಸ್ಥಾನವನ್ನು ಬಿಟ್ಟು ಹೋಗುವನೋ ಅದೇ ದಿವಸ ಸುದಿನವೆಂದೆಣಿಸಬಹುದು ಸರ್ಕಾರದವರು ಈ ಪಿಡುಗಿನ ಬೇನೆಯನ್ನು ಕಿತ್ತುಹಾಕಲು ತಮಗೆ ಸಾಧ್ಯವಿರುವ ಮಟ್ಟಿಗೆ ಅನೇಕ ಉಪಾಯಗಳನ್ನು ಮಾಡುತಿದ್ದಾರೆ. ಆದರೆ ಜನರ ಹಾಗು ರಾಷ್ಟ್ರದ ದುರ್ದೈವಕ್ಕೆ ಆವ ಉಪಾಯವೂ ಫಲಿಸುವದಿಲ್ಲ ?

VAIDYASARA SANGRAHA.

A TREATISE ON THE PRINCIPLES OF
HINDU MEDICINE.

Price, including Postage Rs. 5-0-0.

ವೈದ್ಯಸಾರಸಂಗ್ರಹ.

ಇದು ಚರಕ, ವಾಹಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿಸಿ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

☞ Bangalore:—Printed and Published at the KARNATAKA PRESS, No. 40, HOSPITAL ROAD,—1898.

THE

Karnataka Prakasika.

[illegible] } [illegible] 0 2 0
[illegible] 0 1 0
[illegible]

ಕರ್ಣಾಟಕ ಪ್ರಕಾಶಿಕಾ.

Published Every Monday Morning

[illegible]	[illegible]
ಸಂ. 1 ಕ್ಕೆ . 3 0 0	ಸಂ. 1 ಕ್ಕೆ . 4 0 0
6 ತಿಂಗಳಿಗೆ . . 2 0 0	6 ತಿಂಗಳಿಗೆ . . 2 8 0
3 ತಿಂಗಳಿಗೆ . 1 4 0	3 ತಿಂಗಳಿಗೆ ··· 1 8 0

[illegible]

VOL. XXV. BANGALORE:—MONDAY, AUGUST 22, 1898. No. 34.

Select Telegrams

London, 14th Aug—The Spanish Press deplores Spain's late humiliation. The republican journal *Pais* publishes the Protocol of Peace edged with a heavy black border.

London, 15th Aug—A semi-official Russian statement says that Russia is solely anxious to secure the recently granted advantages in the Far East and contemplates no fresh acquisitions. It is further stated that Russia has no desire to injure the economic interests of Britain.

London, 16th Aug—The bombardment of Manila began at 9 o'clock on the morning of the 13th instant, and lasted two hours, but only caused little damage. Ten thousand American infantry then stormed the trenches and drove the Spaniards numbering 3,000, back to the citadel, when further resistance was hopeless and the Spanish Commander surrendered. It is stated that the American losses were heavy.

London, 17th August—General Merritt has taken precautions to prevent the insurgents entering Manila.

After the Spanish troops had left the town of Cuba, Porto Rico, the inhabitants hoisted the American flag. The troops then returned, tore down the flag, and machined ninety persons.

THE

Karnataka Prakasika.

MONDAY, AUGUST 22, 1898.

THE COMING VICEROY

In our last issue we had a short notice of the coming Viceroy, and in to-day's we intend saying something more on the subject. Surprise has been expressed in a good many quarters at the choice that has been made. In the first place, Mr. Curzon is young for such a responsible post as that of Viceroy. He is only thirty-nine and only two have come to India at an earlier age, the first being very much older. But though the Viceroy elect is young he is not without experience. As we said in our last issue, he has travelled a great deal. He has been in Central Asia, in Persia and China. He has also visited India, though he did not remain here long. He was Under Secretary for India for sometime, and this must have enabled him to gain some knowledge of the country. Thus his mind is not by any means a blank as regards this land, as has been the case with others who came here in the same capacity. He is a man of great energy; has much power of will, and is a good speaker. One thing is certain. He will not submit to be governed from London, and it is equally clear that he will not blindly be led by those about him. He is essentially a strong man with a will of his own. India, for some time past, has had a succession of weak Viceroys, and, therefore, it will be a change to have a strong one. What is done during his *regime* will be done by the Viceroy, not by the officials about him. We may rest assured that the coming Viceroy will have a policy of his own, that he will not quietly take up one that may be provided by the officials who surround him. But there is another side of the shield. Mr. Curzon has committed himself—and very deeply—to the forward policy as regards the frontier. He would not have stopped at what was done during the late war, but would have proceeded much further. We believe this policy to be bad in every respect. The best plan would be to let the tribes on the frontier alone, to let them fight out their battles among themselves. But they should be plainly told that should they enter, with an hostile intent, into British territory they would be punished, and punished severely. So long as they behaved themselves nothing need be done to them, and this they should be made distinctly to understand. We do not say that Mr. Curzon will follow out in India the policy he has advocated for home, but it is possible he may do so. Perhaps when he comes here he may see matters in a better light than he did in England; he will be able to discern that the exigencies of the situation are not such as he was led to believe, and that the forward policy must be abandoned for a long time, at least. Whether the new Viceroy will see the matter in this light remains to be seen. In the next place Mr. Curzon has a better knowledge of the tactics Russia is pursuing towards India than any other man. It is believed by many that the former is looking forward to an attack upon this country, that sooner or later the two must come in contact. It is said that the Czar and his ministers are preparing towards this end, and that they look forward to it as a certainty. This may be the case, but, we fancy, it will be many years before a move is made in this direction, consequently the time has not yet come for a large sum of money to be spent in guarding against such an attack. It is to be hoped, therefore, that while Mr. Curzon keeps a watch on the doings of Russia he will not launch out into any extravagant expenditure on the plea that sometime or other the country may be invaded. It is to the internal affairs of India that the new Viceroy should turn his attention. It is the prosperity of the country that he should think most about, not the defence of the North West frontier. The latter may be necessary, but the necessity is far less than the former. Much is required to be done. The burdens upon the people are heavy, the margin of profit on which they have to live is small, consequently the poverty in the land is great. The new Viceroy should do his best to bring about a change; he should endeavour to make the people richer and happier than they are at present. Then there are many Acts that require to be repealed. The wretched gagging Act should be knocked on the head. It is a disgrace to the country; it was not wanted, and the sooner it is sent to oblivion the better for the people of India and for the Government. Whether Mr. Curzon will take this Act in hand we cannot say, but we hope he will. Let us hope for the best from the coming Viceroy. He has many points in his favour, he is young, and he may be everything that is required in a ruler.

News and Notes

THE Right Hon'ble Mr Curzon's date of sailing from home is unfixed, but it is believed he will arrive here in December.

THE Viceroy has now officially assented to the Bombay Improvement Bill. The Bill was referred to the Secretary of State and he has since assented.

A Plot to overthrow the Korean Government has been discovered, and a number of high officials implicated have been imprisoned. General Ahn has fled. The guard at the Palace of Seoul has been largely increased. Great excitement prevails at Seoul.

IT is notified for general information that the rate of Rupees ninety four annas four for every hundred rupees has been fixed as the minimum rate at which tenders will be accepted for the Three-and-a-half per cent loan of one hundred and twenty lakhs announced in the notification of the 30th July 1898.

IT is understood that H. E. Lord Sandhurst will shortly pay a brief visit to several of the Districts where plague is most rife. No arrangements have yet been made respecting His Excellency's proposed visit to Simla, and it may possibly be abandoned if the present increase of plague in various parts of the Presidency is continued.

AT the Warwick Assizes Mr Justice Darling sentenced Herbert Morris to six months imprisonment for bigamy. His Lordship said the prisoner was a gentleman in everything but behaviour. It was not, however, because he was the son of a baronet and could employ Counsel to plead for him that he would escape the consequences of a serious crime.

IN his speech at the Madrassa Hall, Calcutta on Saturday last, His Honour the Lieutenant-Governor of Bengal commended the co-operation of the Hindus with the Mahomedans instances of which, he went on to say, he had noticed all over the country. It was a new and very auspicious departure in the utterances of responsible officials, to encourage mutual co-operation between the two great creeds which inhabit India.

A NEW reason for acquitting Europeans who shoot Indians accidentally, is "faulty construction of the gun." "Mr. Dosnett," says the *Advocate of India*, "who, on the 31st ultimo accidentally shot a *gharriwala* in the leg while out shooting at Hyderabad (Sind), the latter dying after amputation has been discharged by the Magistrate of the Hyderabad Division. The Court found that the shot was purely accidental owing to the faulty construction of the gun."

A few days ago it will be remembered that Mr Lalljee Sait received a telegram from his servant at Conjeevaram apprising him that his (the servant's) mother died of plague. On the information being communicated to Doctor Thompson, Acting Sanitary Commissioner, that gentleman with his staff left for the place to verify the truth of the telegram. We now learn that the servant's mother who was three score and odd died of fever from which she was laid up for the past two and half months.

OUR readers will be glad to learn, says the *Bengalee*, that Mr Herbert Lewis, M. P., has undertaken to interpellate the Secretary of State for India with regard to all well-authenticated cases of outrage upon Indians by Europeans in India. These cases have become so common of late and the punishment inflicted on the offenders is so inadequate that a strong agitation in England is necessary in the interests of the people of this country. We wish, however, some way could be found whereby such occurrences may be put a final stop to. Interpellation after the deed is done is but poor satisfaction to the sufferers.

The Denkanikota Sub-Magistrate's Murder Case. The Empress of India *versus* Ranganami (Police Constable.) Mr P T Subramania Iyer, B A and B L, Public Prosecutor and Government Pleader, appeared for the prosecution and Mr C Pritchard, Barrister-at-Law, appeared for the defence.

Mr P Sundaram Pillay, B A, Headmaster, London Mission High School, Salem, and Mr. Ponnusami Naicker, clerk, Collector's office, Salem were the assessors in this case. 52 witnesses were examined for the prosecution and two only examined for the defence. The arguments for the defence and for prosecution were closed on the 17th instant. The assessors returned a verdict of not guilty. The Court reserved judgment till some other date.

PERHAPS we may draw attention to the hopeful reply of His Excellency at Trichinopoly in the matter of legislation for a better control of Hindu Religious Endowments. His Excellency said that just before he left Ootacamund he had a very large file of papers brought under his eyes dealing with this subject and very likely the Government would be able to make a strong representation to persuade the Government of India to change the attitude they had till now unfortunately adopted in this matter. We are glad that Sir Arthur Havelock is aware that he is backed by public opinion which is singularly unanimous and strong. The Government of India's policy of non interference with the Temple endowments is entirely a misconception, and any improved legislation will no more be such interference than the extremely unworkable enactment under which these endowments are now administered.

THE extremities some Policemen will resort to obtain a conviction is well illustrated in a judgment delivered by the Sessions Judge of Poona, acquitting and discharging a person charged before him of murder. From the judgment it appears that the Police took a very young girl and tutored her to give certain evidence. When the child appeared to give evidence she was accompanied to the witness box by a police sepoy in plain clothes. He was ordered by the Judge to withdraw. The girl was asked the usual preliminary questions, but would give no answer. Finally she burst into tears, and protested that she knew nothing of the matter, and that the Police had tutored her. Her father then went into the box and stated that the Police had taken away the girl and detained her for two days, and that when she returned home she told him in detail how she had been induced by threats to make the statement which she did make in the lower Court. "The case is only too common," says the learned Sessions Judge in his judgment, "it is its exposure that is unfortunately rare. And it is difficult to see how an end can be put to these abominable malpractices which are a disgrace to the Police department. It is almost impossible to speak temperately of such things when one remembers that an innocent man's life may be put in jeopardy by such foul means. In the present instance, I would strongly urge the necessity of an immediate and thorough enquiry into the manner in which the Police investigation was conducted to be made by an independent officer."

ಟ್ಟು ಅವರು ಬ್ರಿಟಿಷ್ ರಾಜ್ಯದೊಳಗಿನ ಕೋರ್ಟುಗಳೊಳಗೆ ವ್ಯವಹರಿಸಲಿಕ್ಕೆ ಅರ್ಹರಾಗಿರತಕ್ಕದ್ದೆಂದು ವಿಚಾರಿಸಿ ಇದಂ ಕುರಿತ ಅಭಿಪ್ರಾಯವಂ ತಿಳಿಸುವಂತೆ ಆಯಾ ಹೈಕೋರ್ಟಿನವರಿಗೂ, ಅಟರ್ನಿ ಸುಭಾಗಳಿಗೂ ಬರೆಯಲ್ಪಟ್ಟಿರುವಂತೆ ಕೇಳುತ್ತೇವೆ.

ನಾಸಿಕ ಡಿಸ್ಟ್ರಿಕ್ಟಿನಲ್ಲಿ ದರೋಡೆ ಕಳ್ಳರು ಕೆಲವರು ದಸ್ತಗಿರಿಯಿಂದ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ದರ್ಯಾಫ್ತಿ ಆಗುವ ಕಾಲದೊಳು ತಪ್ಪಿಸಿಕೊಂಡು ಓಡಿಹೋಗಿದ್ದವರು ಅಲ್ಲಿ ಅನೇಕ ಗ್ರಾಮಗಳನ್ನು ಲೂಟಿಮಾಡುತಲೂ ಜನರನ್ನು ನಾನಾವಿಧದಿಂ ಹಿಂಸಿಸುತಲೂ ಇದ್ದುದರಿಂದ ಇವರ ಹಿಂಸೆಯಂ ತಡೆಯಲಾರದೆ ಅಲ್ಲಿನ ಪ್ರಜೆಗಳು ಸರ್ಕಾರಕ್ಕೆ ಅನೇಕ ಅರ್ಜಿಗಳಂ ಬರೆದುಕೊಂಡ ಮೇಲೆ ಅರವತ್ತುಮಂದಿ ಪೋಲೀಸ್ ಜನರು ಆಯುಧಗಳೊಡನೆ ಕಳ್ಳರಂ ಹುಡುಕಿಕೊಂಡು ಹೋಗುವಲ್ಲಿ ಅವರ ಗುಂಪು ಒಂದು ಗ್ರಾಮದಬಳಿ ಒಂದು ತೋಪಿನಲ್ಲಿ ಕಂಡುಬಂತು. ಅವರಿಗೂ ಪೋಲೀಸರಿಗೂ ಕೈಕಲೆತು ದರೋಡೆ ಗುಂಪಿಗೆ ತಲೆವನಾದವನೂ ಬೇರೆ ಹದಿನೆಂಟು ಮಂದಿಯೂ ಗೋಲಿದೆಬ್ಬೆ ತಗಲಿ ಸತ್ತುಬಿದ್ದರು. ಪೋಲೀಸ್ ಜನರಲ್ಲಿ ಕೆಲವರು ಸತ್ತರು ಕೆಲವರಿಗೆ ಘಾಯಗಳಾದವು.

ಸರ್ಕಾರ ನೌಕರಿಯಲ್ಲಿರುವ ರೈಟರ್ ಮೊದಲಾದ ತಾಬೇದಾರಿ ಉದ್ಯೋಗಸ್ಥರು ಯಾರಾದರು ತಮ್ಮ ಕುಟುಂಬದೊಳು ಯಾರಿಗಾದರು ಸಿಡುಬು ಅಥವಾ ಬೇರೆವಿಧ ಸಾಂಕ್ರಾಮಿಕ ರೋಗ ತಗಲಿ ತನ್ಮೂಲಕ ಕಚ್ಚೇರಿಗೆ ಹೋಗುವದಕ್ಕೆ ಸಾಧ್ಯವಲ್ಲದೆ ಗೈರ್ಹಾಜರಾಗುವ ಪಕ್ಷದಲ್ಲಿ ಅಂತವನಿಗೆ ಅವನ ಇಲಾಖಾ ಅಧಿಕಾರಿಯು ನ್ಯಾಯವಾಗಿ ಕೊಡಬಹುದಾದ ಕ್ಯಾಜುಯಲ್ ರಜಾ ಕೊಡತಕ್ಕದ್ದು, ಅಂತೆ ರಜಾಕೊಡುವದಕ್ಕೆ ಅವಕಾಶವಿಲ್ಲವೆಂದು ತೋರುವ ಪಕ್ಷದಲ್ಲಿ ರೂಲ್ಸ್ ಅನುಸರಿಸಿ ಯಾವರಜಾಕೊಡಬಹುದೋ ಸದರೀ ರಜಾವನ್ನು ಅವನು ಗೈರ್ಹಾಜರಾಗುವ ಕಾಲದವರೆಗೆ ಕೊಡತಕ್ಕದ್ದು ಮಾತ್ರವಲ್ಲದೆ ಅವನಿಗೆ ಸಂಬಳ ಬಾಕಿಯಿದ್ದರೆ ಅದನ್ನು ಸಹ ಕೊಟ್ಟುಬಿಡತಕ್ಕದ್ದು. ಈ ಗೈರ್ಹಾಜರೀ ದಿನಗಳು ಇದುವರೆಗೆ ಅವನು ಪಡೆದುಕೊಳ್ಳುವದಕ್ಕೆ ಅರ್ಹನಾಗಿರುವ ಅಥವಾ ಮುಂದೆ ಅರ್ಹತೆಯಂಪಡೆಯಬಹುದಾದ ರಜಾದಿನಗಳಿಂದ ವಜಾ ಆಗತಕ್ಕದ್ದಲ್ಲವೆಂದು ಈಚೆಗೆ ಇಂಡ್ಯ ಗವರ್ನಮೆಂಟಿನವರು ನಿಬಂಧನೆ ಮಾಡಿರುತ್ತಾರೆ.

LOCAL AND PROVINCIAL NEWS.

ಸ್ಥಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

ಈ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯು ಶೀಘ್ರದಲ್ಲಿ ಮೈಸೂರಿಂದ ಬೆಂಗಳೂರಿಗೆ ವಾಪಸ್ ಬರುವುದೆಂದು ಮೈಸೂರ್ ಹೆರಲ್ಡ್ ಪತ್ರಿಕೆ ತಿಳಿಸುತದೆ

ಕುಮಾರಿ ದೇವತ್ತು ನಿನ್ನೆಯದಿನ ಇಲ್ಲಿ ಪೂರ್ತಿಯಾಯಿತು. ಅಗರದ ದಿನ್ನೆಯಲ್ಲಿ ನಡೆಯಬೇಕಾದ ಕಡೇ ಜೂಜಿನ ವಿಷಯದಲ್ಲಿ ಅಲ್ಲಿ ರಸ್ತೆ ಸರಿಯಾಗಿಲ್ಲದಿರುವದರಿಂದ ಮುಂದೆ ಅದನ್ನು ಸರಿಪಡಿಸಿ ಜೂಜಿಗೆ ದಿನ ನಿಷ್ಕರ್ಷೆ ಮಾಡಲ್ಪಡುವದೆಂದು ಕೇಳುತ್ತೇವೆ.

ಕೆಲವು ಸಬ್‌ರಿಜಿಸ್ಟ್ರಾರುಗಳ ವರ್ಗಾವರ್ಗಿ ವಿಷಯದಲ್ಲಿ ರಿಜಿಸ್ಟ್ರಾರ್ ಜನರಲ್ ಯವರು ಗವರ್ನಮೆಂಟ್ ಮಂಜೂರಾತಿಗು ಬಗ್ಗೆ ಬರೆದಿರುವದಾಗಿ ಆಚೇವಾರದ ನಮ್ಮ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಈಚೆಗೆ ತಿಳಿಯಬಂದಿರುವದರಲ್ಲಿ ಆ ವರ್ಗಾವರ್ಗಿಗಳ ಪೈಕಿ ಕೆಲವು ಬದಲಾವಣೆಗಳಾಗಿ ಈಗ ದಾವಣಗೆರೆ ಸಬ್‌ರಿಜಿಸ್ಟ್ರಾರನ್ನೆ ಅಲ್ಲಿಯೇ ಕಾಯಂ ಮಾಡಿರುವಂತೆ ಸರಿಯಾದ ಮೂಲಕ ತಿಳಿಯಬಂದಿರುತದೆ.

ಈಗ್ಗೆ ನಾಲ್ಕೈದು ದಿನಗಳ ಮೊದಲು ಬಿಸಲಿಲ್ಲದೆ ಯಾವಾಗ್ಲೂ ಮೋಡವಾಗುತಲಿದೆ. ಮಧ್ಯಾಹ್ನಾತ್ಪರ ಕೆಲವುವೇಳೆ ತುಂತುರು ಮಳೆಯೂ ಬೀಳುತದೆ. ಪರಂತು ಈ ವರ್ಷವು ಸುತರಾಂ ಪ್ರಯೋಜನಕಾರಿಯೆಂದು ಯೋಚಿಸುವದಕ್ಕಾಗುವದಿಲ್ಲವು, ಆಶ್ಲೇಷೆ ನಾಲ್ಕನೇದಿವಸ, ಪೂರ್ತಿಯಾಗುತ ಬುದುಧರಿಂದ ಕಾರ್ತಿಕ ಸ್ನ

ಗುವಳಿಯ ಕಾಲವೂ ಪೂರ್ತಿಯಾಯಿತೆಂತಲೇ ಯೋಚಿಸಬೇಕು. ಇದರಿಂದ ಇದುವರೆಗೆ ವ್ಯಕ್ತವಾಗಿದ್ದ ಮುಂದಿನ ಸ್ಥಿತಿಯು ವ್ಯಕ್ತವಾಯಿತೆಂದು ತಿಳಿಯಬಹುದು.

ಕಳೆದವಾರ ಅತ್ತಿಕುಪ್ಪೆಯಲ್ಲಿ ಒಬ್ಬ ಭಾರೀ ಗೌಡನ ಮನೆಗೆ ಕೆಲವರು ಕಳ್ಳರು ನುಗ್ಗಿ ಸಾವಿರಾರು ರೂಪಾಯಿಗಳ ಚಿಂದಿಗೆಯನ್ನು ಕದ್ದು ಕೊಂಡೆಗೆ ಸಿಕ್ಕಿಬಿದ್ದರು. ಅವರು ಕದ್ದ ಮಾಲುಗಳ ಪೈಕಿ ಕೆಲವು ಮೈಸೂರು ದೊಡ್ಡಪೇಟೆಯಲ್ಲಿರುವ ಪಟ್ಟಾಭಿಶೆಟ್ಟಿಯ ಮನೆಯಲ್ಲಿ ಸಿಕ್ಕಿದವು. ಆಶೆಟ್ಟಿಯನ್ನೂ, ಕಳ್ಳರನ್ನೂ, ಇಲ್ಲಿನ ಇನ್ನಿಬ್ಬರನ್ನೂ ಹಿಡಿದುಕೊಂಡದಾರೆ ಅತ್ತಿಗುಪ್ಪೆಯ ಇನ್‌ಸ್ಪೆಕ್ಟರು ಮೆ|| ರಂಗರಾಜೇ ಅರಸಿನವರು ಈಕೆಲಸವನ್ನು ಪತ್ತೇಮಾಡುವದರಲ್ಲಿ ಬಹಳ ಸಾಹಸಪಟ್ಟರೆಂದು ತಿಳಿದುಬಂದಿದೆ—ವೃ ಪ.

ಶಿಡ್ಲಘಟ್ಟ ತಾಲ್ಲೂಕ್ಸ್ಟೇರು ಮುತ್ತೆಸ್ತರು ಆಗ್ರಹಾರದ ಮ|| ಶ್ರೀಕಂಠ ದೈವಜ್ಞ ಎಂಬ ಜೋಯಿಸರು ಮುಂದೆ ವಿಕಾರಿ ಸಂವತ್ಸರದಲ್ಲಿ "ಈ ದಕ್ಷಿಣ ಕರ್ಣಾಟಕ ದೇಶದೊಳು ಯಾವ ವಿಧವಾದ ಬಹೋತ್ಪಾತಾದಿ ದುಷ್ಟ ಫಲಗಳೂ ಲಭಿಸಲಾರವೆಂದು ಶೋಧಿಸಿ ತಿಳಿದ ಪ್ರಮೋಫಲದ ಪತ್ರಿಕೆ" ಎಂಬ ಒಂದು ನೋಟೀಸನ್ನು ಬರೆದು, ಬಕ್ಕ ಲಾಘ್ನವ ರದ ಮ|| ಬೀರೇಗೌಡರ ಮಕಟವೃತ್ತಿ ಸಿದ್ಧಾಂತಗಳಿಂದ ಪರಿಶೋಧನೆ ಮಾಡಿಸಿ, ಅಚ್ಚು ಹಾಕಿಸಿ, ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುತ್ತಾರೆ. ಈ ಪತ್ರಿಕೆಯಲ್ಲಿರುವ ಗುಣಾಕಾರಗಳನ್ನು ಇಲ್ಲಿನ ಕೆಲವು ಜೋಯಿಸರಿಗೆ ತೋರಿಸಿದಾಗ, ಒಬ್ಬೊಬ್ಬರು ಅದು ವಿಧಿ ಪೂರ್ವಕವಾದದ್ದಾಗಿಲ್ಲವೆಂದು ಆಕ್ಷೇಪಣೆ ಮಾಡಿ, ಫಲಾಂಶಗಳ ವಿಷಯದಲ್ಲಿ ಸಮ್ಮತಪಡುತ್ತಿದ್ದಾರೆ. ಹ್ಯಾಗೂ ಮೆ|| ಶ್ರೀಕಂಠ ದೈವಜ್ಞರು ವಿಕಾರಿ ಸಂವತ್ಸರದಲ್ಲಿ ದುಷ್ಫಲಗಳೇನೂ ಸಂಭವಿಸುವದಿಲ್ಲವೆಂದು ಪ್ರಜೆಗಳಿಗೆ ತಿಳಿಸುವದರಿಂದ, ಅವರ ಭೀತಿಯನ್ನು ಕಡಿಮೆ ಮಾಡಿ ಧೈರ್ಯ—ವೃ ಪ.

ಕಡೂರಿನಲ್ಲಿರುವ ಹಿಂದುಸ್ಥಾನಿ ಮಠದ ಉಪಾಧ್ಯಾಯನ ಶಿಷ್ಯರಲ್ಲಿ ಅಣ್ಣತಮ್ಮಂದಿರಾದ ಇಬ್ಬರು ಅವನಬಳಿ ವಿದ್ಯೆ ಕಲಿಯಬಾರದೆಂದು ತಮ್ಮ ತಾಯಿಗೆ ತಿಳಿಸಿ ಆಕೆಯಿಂದ ಅಪ್ಪಣೆ ಪಡೆದು ಬುತ್ತಿಯೊಂದಿಗೆ ಹಳೇಬೀಡಿನಲ್ಲಿರುವ ತಮ್ಮ ಮಾವನ ಬಳಿಗೆ ಹೋಗುತ್ತಿರಲು ಆ ಉಪಾಧ್ಯಾಯನು ನದರೀ ಹುಡುಗರ ಬೆನ್ನು ಹತ್ತಿಹೋಗಿ ಕಡೂರಿಗೆ ೬-೭ ಮೈಲಿ ದೂರದಲ್ಲಿ ಅವರನ್ನು ಸಂಧಿಸಿ ತನ್ನ ಸೊಂಟದಲ್ಲಿದ್ದ ಬಾಕಿನಿಂದ ಹಿರಿಯವನನ್ನು ಇರಿದು ಕೊಂದನು. ನಂತರ ಕಿರಿಯವನನ್ನು ತಿವಿದು ಕಾಲಿಗೆ ಬಿದ್ದು ಹೇಳಿದನು. ಮೊದಲನೆಯವನ ಕೂಡಲೆ ಸತ್ತನು. ಎರಡನೆಯವನು ತನ್ನ ಹೊಟ್ಟೆಯಿಂದ ಜೋಲಾಡುತ್ತಿದ್ದ ಕರುಳನ್ನೆಲ್ಲಾ ಬಸ್ಸಿ ಸಿಸಟಿಂದ ಒಳಕ್ಕೆ ನೂಕಿ ಪಂಚೆಯಿಂದ ತನ್ನ ಹೊಟ್ಟೆಯನ್ನು ಘಟ್ಟಿಯಾಗಿ ಕಟ್ಟಿಕೊಂಡು ಪುನಃ ಕಡೂರಿಗೆ ಬಂದು ತನ್ನ ತಾಯಿಗೂ ಸರ್ಕಾರದವರಿಗೂ ದಾರಿಯಲ್ಲಿ ನಡೆದ ಸಂಗತಿಯನ್ನು ತಿಳಿಸಿದನು. ಅಷ್ಟರಲ್ಲಿ ಅವನಿಗೆ ಬಹು ನುಸ್ತಾದ ಕಾರಣ ಇವನನ್ನು ಚಿಕಿತ್ಸೆಗೆ ಕಳುಹಿಸಿದಾಗ್ಯೂ ಅವನು ಬದುಕುವದಾಗಿಲ್ಲವೆಂದು ಕೇಳುತ್ತೇವೆ—ವೃ. ಪ.

THE MYSORE GAZETTE

ಮೈಸೂರು ಗೆಜೆಟ.

ತಾರೀಖು ೧೧ನೇ ಆಗಸ್ಟು ೧೮೯೮.

ಅಪ್ಪಟ್ಟಾರ್ ನೈತುಗಳು

ಜನರಲ್ ಮುತ್ತು ರೆವಿನ್ಯೂ.

ತಾ|| ೩ನೇ ಆಗಸ್ಟು ೧೮೯೮.

ನಂ|| ೧೩೧೦—ಜಿ ೧೬೯.—ಪೋಲೀಸ ಸೂಪರ್ಇಂಟೆಂಡೆಂಟ ಮೆ|| ಡಿ ಪಿ ಬಿಲ್ಲಿನ್ನ್ಡಯವರು ಕೋಲಾರ ಭಂಗಾರಗಣಿಗಳಿಂದ ಪ್ರೆಂಚ್‌ರಾಕ್ಸ್‌ಗೆ ವರ್ಗ ಮಾಡಲ್ಪಟ್ಟಿರುತ್ತಾರೆ ಚಾರ್ಜ ಒಪ್ಪಿಸಿದ ತರುವಾಯ ಕೆಲಸಕ್ಕೆ ದಾಖಲಾಗತಕ್ಕದ್ದು.

ಪೋಲೀಸ ಅಸಿಸ್ಟೆಂಟ ಸೂಪರ್ಇಂಟೆಂಡೆಂಟ ಮೆ|| ಎಸ್. ಸಿ. ಹೇಯರರು ವರ್ಗಮಾಡಲ್ಪಟ್ಟ ಮೆ|| ಡಿ. ಪಿ. ಬಿಲ್ಲಿನ್ನ್ಡ ಯವರಿಗೆ ಬದಲಾಗಿ ಕೋಲಾರ ಭಂಗಾರಗಣಿಗಳಿಗೆ ನಿಯಮಿಸಲ್ಪಟ್ಟಿರುತ್ತಾರೆ. ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ನಂ|| ೧೩೧೪—ಜಿ. ೧೩೦—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೨೧೯ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ ನಂಜನಗೂಡಿನ ಮುನ್ಸಿಫ್ ಮೆ|| ಎ. ರಂಗಾಚಾರ್ಯರ ಯವರಿಗೆ ೧೮೯೮ನೇ ಜುಲೈ ೨೫ನೇ ತಾರೀಖಿನಾರಭ್ಯ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಮೂರು ವಾರಗಳ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರು ಸಬಾರ್ಡಿನೇಟ ಜಡ್ಜರ ಕೋರ್ಟಿನ ಶಿರಸ್ತೇದಾರ್ ಮೆ|| ಸಿ. ಸುಬ್ಬರಾಯರು ರಜಾದ ಮೇಲಿರುವ ಮೆ|| ರಂಗಾಚಾರ್ಯರ ಯವರಿಗೆ ಬದಲಾಗಿ ಯಾ ಮತ್ತ್ಯು

ಹುಕುಂ ಕೊಡುವ ಪರಿಯಂತ ೩ನೇ ಗ್ರೇಡಿನಲ್ಲಿ ಸಬ್‌ಪ್ರೋಬೇಟಂ ತರ್ಕ್ ಮುನ್ಸಿಫಾಗಿ ಆಕ್ಟಿಂಗ ಮಾಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ|| ೧೩೪೭ ಜಿ. ೧೩೬.—ಶ್ರೀಮತಿ ಫೋರೆಸ್ಟ್ ಸರ್ವೀಸ್ ಡಿನ ೨೧ನೇ ಸರ್ಕ್ಯುಲರ್ ಅನುಸಾರ, ಮಾಗಡಿ ತಾಲ್ಲೂಕಿನ ಆರ್ಮರಿ ೩ನೇ ಕ್ಲಾಸ್ ರೇಂಜರ್ ಎಸ್. ಆರ್. ಶ್ರೀನಿವಾಸರಾಯರು ಎರಡನೇ ಕ್ಲಾಸಿನ ರೇಂಜರ್ ರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾ|| ೩ನೇ ಆಗಸ್ಟು ೧೮೯೮.

ನಂ|| ೧೬೪೮—ಮಿ, ಫೈ ೩೯೬—೯೩.—ಮೆ|| ಕೆ ಎಸ್ ಚಂದ್ರಶೇಖರ ಅಯ್ಯರ್ ಬಿ. ಎ ಬಿ ಎಲ್, ಯವರು ೧೮೯೮ನೇ ಜುಲೈ ೨೫ನೇ ತಾರೀಖಿನಾರಭ್ಯ ಬಿ. ಷಡ್ಯೂಲಿನ ಅಸಿಸ್ಟೆಂಟ ಕಮ್ಮಿಷನರುಗಳ ಎರಡನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು ೩ನೇ ಆಗಸ್ಟ್ ೧೮೯೮.

ನಂ|| ೧೮೯೬-ಜಿ ೧೮೦—ಜ್ಯುಡಿಷಿಯಲ್ ಇಲಾಖೆಯಿಂದ ಕಾಯಮಾಗಿ ವರ್ಗಮಾಡಲ್ಪಟ್ಟ ಮೆ|| ಎಂ. ಎ. ನಾರಾಯಣ ಅಯ್ಯಂಗಾರರಿಗೆ ಬದಲಾಗಿ ಸಬ್‌ಪ್ರೋಬೇಟಂ ಮೂರನೇ ಕ್ಲಾಸ ಮುನ್ಸಿಫರಾದ ಮೆ|| ಅನಂದರಾವ್ ಸಿರಸಿ, ಬಿ. ಎ ಎಲ್ ಎಲ್ ಬಿ, ಯವರು ೧೮೯೮ನೇ ಜುಲೈ ಗುರ್ರೇ ಲಾಗಾಯಿತು ಸದರೀ ಕೆಲಸದಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ

ತಾ|| ೩೦ನೇ ಜುಲೈ ೧೮೯೮.

ನಂ|| ೪೯೧—ರೆ. ಫೈ. ೯೦—೯೭.—ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟಿನ ಅಸಿಸ್ಟೆಂಟ ಕಮ್ಮಿಷನರ್ ಮೆ|| ಎಂ ನಂಜರಾಜ ಅರಸಿನವರಿಗೆ ೧೮೯೮ನೇ ಆಗಸ್ಟ್ ೨ನೇ ತಾರೀಖಿನ ಲಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಪ್ರೊಬೇಷನರಿ ಅಸಿಸ್ಟೆಂಟ ಕಮ್ಮಿಷನರ ಮೆ|| ಕೆ ಮತ್ತಾರಯವರು ಸದರೀ ಮೆ|| ನಂಜರಾಜ ಅರಸಿನವರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟ ಟ್ರೆಜರಿಯ ಚಾರ್ಜಿನಲ್ಲಿರತಕ್ಕದ್ದು.

ನಂ|| ೯೦೩—ರೆ. ೩೫೭.—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ಮೆ|| ಬಿ ಜೆ ಕೃಷ್ಣಯ್ಯಂಗಾರ್ರಿಗೆ ೧೮೯೮ನೇ ಜುಲೈ ೨೮ನೇ ತಾರೀಖಿನಾರಭ್ಯ ಅವರು ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗುವದಕ್ಕೆ ಪೂರ್ವ ಮೂರು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಸದರೀಯವರು ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗೋಣವು ಸದರೀ ರಜಾ ಪೂರೈಸಿದ ತರುವಾಯ ಜಾರಿಗೆ ಬರತಕ್ಕದ್ದು

ತಾ|| ೪ನೇ ಆಗಸ್ಟ್.

ನಂ|| ೯೫೧೦—ರೆ ೩೮೧,—ಅಸಿಸ್ಟೆಂಟ ಕಮ್ಮಿಷನರ್ ಬಿ ಜೆ. ಕುಮಾರಸ್ವಾಮಿ ನಾಯಕರು ಕೋಲಾರ ಸೆಟಲ್ಮೆಂಟಿನಲ್ಲಿರುವ ಬಗ್ಗೆ ಬೆಂಗಳೂರು ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ. (ಫ್ರೆಂಚ್‌ರಾಕ್ಸ್ ಸಬ್‌ಡಿವಿಜನಿನ ಪೋಲೀಸ್‌ಚಾರ್ಜನ್ನು ಒಪ್ಪಿಸಿದ ತರುವಾಯ ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು)

ತಾ|| ೩ನೇ ಆಗಸ್ಟ್ ೧೮೯೮

ನಂ|| ೧೧೨೮—ರೆ ೪೬೦.—ಡೆಪ್ಯುಟಿ ಅಮಲ್ದಾರರುಗಳ ಇವರಡಿ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ ಮತ್ತು ಕೂಡಲೆ ಜಾರಿಗೆ ಬರತಕ್ಕದ್ದು :—

ನರಸಿಪ್ಪ ಶ್ರೀನಿವಾಸ ಪೋಟ್ಟಿಸವರು ಚಿಕ್ಕಪೇಟೆಯಿಂದ ಹೊಸದುರ್ಗಕ್ಕೆ.

ಮಹಮ್ಮದ್ ಜಿಡೆಯುಲ್ಲಾ ಯವರು ಹೊಸದುರ್ಗದಿಂದ ಹರಿಹರಕ್ಕೆ

ಪಬ್ಲಿಕ್‌ವರ್ಕ್ಸ್ ಇಲಾಖಾ.

ಇಸ್ತಹಾರನಾಮಾ.

ತಾ|| ೩೦ನೇ ಜುಲೈ ೧೮೯೮.

ನಂ|| ೩೯೧—೪೨೭.—ಮೈಸೂರು ಡಿವಿಜನ ಸೂಪರಿಂಟೆಂಡಿಂಗ್ ಇಂಜಿನಿಯರ್ ಮೆ|| ಆರ್. ಟಿ ಸ್ಕಾಲ್ಡ್‌ವೆಲ್ ಯವರಿಗೆ ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೨೩೦ (ಬಿ) ನೇ ಆರ್ಟಿಕಲ್ ಅನುಸರಿಸಿ, ೧೮೯೮ನೇ ಆಗಸ್ಟ್ ಗುರ್ರೇ ಲಾಗಾಯಿತು ಯಾ ಅವರು ಹೊರಟ ತಾರೀಖಿನಾರಭ್ಯ ಯೂರೋಪಿಗೆ ಹೋಗುವ ಬಗ್ಗೆ ಒಂದೂವರೆ ವರ್ಷಗಳ ರಜಾ ಕೊಡಲ್ಪಟ್ಟಿರುತ್ತೆ.

ತಾ|| ೪ನೇ ಆಗಸ್ಟ್ ೧೮೯೮.

ನಂ|| ೪೦೨—೪೩೦೬.—ಮೈಸೂರು ಪಬ್ಲಿಕ್‌ವರ್ಕ್ಸ ಇಲಾಖೆಯ ಲೋಕಲ್ ಇಂಜಿನಿಯರ್ ಕಟ್ಟಡದಲ್ಲಿ ಇವರಡಿ ಕಂಡ ಬಡ್ತಿಯು ೧೮೯೮ನೇ ಏಪ್ರಿಲ್ ಗುರ್ರೇ ಲಾಗಾಯಿತು ಹುಕುಂ ಮಾಡಲ್ಪಟ್ಟಿರುತ್ತೆ :—

ಶಿವಮೊಗ್ಗಾ ಡಿವಿಜನ್ ಮೆ||ಸಿ. ಕೃಷ್ಣಯ್ಯಂಗಾರ, ಎಲ್. ಸಿ. ಇ. ಯವರು ೪೦ ರೂಪಾಯಿ ಪಲಬುಳ್ಳ ೩ನೇ ಕ್ಲಾಸ ಸಬ್ ಅಸಿಸ್ಟೆಂಟ ಇಂಜಿನಿಯರ್ ದರ್ಜೆಯಿಂದ ೧೦೦ ರೂಪಾಯಿ ಕಾಯಂ ಪಲಬುಳ್ಳ ಎರಡನೇ ಕ್ಲಾಸ ಅಸಿಸ್ಟೆಂಟ ಇಂಜಿನಿಯರ್ ಕೆಲಸಕ್ಕೆ.

ತಾ|| ೩ನೇ ಆಗಸ್ಟ್ ೧೮೯೮.

ನಂ|| ೪೨೧—೪೩೪೯.—ಮೈಸೂರು ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟ ಇಂಜಿನಿಯರ್ ಮೆ|| ಸಿ. ಆರ್. ಶ್ರೀನಿವಾಸಯ್ಯಂಗಾರರಿಗೆ ಅವರು ಹೊರಟ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

SUMMARY OF NEWS.

ವೃತ್ತಾಂತ ಸಂಗ್ರಹವು.

ಹೈದರಾಬಾದ್ ಸಂಸ್ಥಾನದಲ್ಲಿ ಈಚೆಗೆ ಪ್ಲೇಗ್ ಜಾಸ್ತಿಯಾಗಿ ನಿಂತು ಹೋಗಿದ್ದದ್ದು ಕಳೆದ ವಾರ ೨ ಗ್ರಾಮಗಳಲ್ಲಿ ಪುನಹ ಕಾಣಿಸಿಕೊಂಡು, ಸುಮಾರು ೩೦ ಜನರನ್ನು ಕೊಂದು ಹಾಕಿರುತ್ತೆ.

ಮುಂಬಯಿಯ ಉಭಯ ಮುಸಲ್ಮಾನರು ಅಲ್ಲಿಯ ಅದಿಕಿಭಾಗದೊಳು ರಕ್ತೆಯ ಮೇಲಿರುವ ಹಿಂದೂ ದೇವಾಲಯದಲ್ಲಿ ಪ್ರವೇಶಿಸಿ ಅಲ್ಲಿಯ ಮೂರ್ತಿಯನ್ನು ಸ್ಥಾನಭ್ರಷ್ಟ ಮಾಡಿದ ಮೂಲಕ ಖಟ್ಲೆಯಾಗಿ ಪ್ರತಿ ನೊಬ್ಬನಿಗೆ ೧೦೦ ರೂಪಾಯಿ ದಂಡವಾಯಿತು.

ದಾವಣಗೆರೆ ಚಾಟೀಕರನ ಯೆರಡನೇ ತಮ್ಮನಾದ ವಾಸುದೇವನೆಂಬವನು ಪೋಲೀಸ ಕೈಸೆರಿ, ತನ್ನ ಸದುವಿನ ಅಣ್ಣನಾದ ಬಾಲಕೃಷ್ಣನು ತಂಜಾವೂರ್ ಡಿಸ್ಟ್ರಿಕ್ಟಿನ ಒಂದು ಹಳ್ಳಿಯಲ್ಲಿ ಇರುತ್ತಾನೆಂದು ತಿಳಿಸಿದ್ದರಿಂದ, ಪೋಲೀಸಿನವರು ಕೂಡಲೆ ಅಲ್ಲಿಗೆ ಹೋಗಿ ಬಾಲಕೃಷ್ಣನನ್ನು ಹಿಡಿದರು ಚಾಪೇಕರ ಸಹೋದರರು ಮತ್ತೆ ನಡೆಯುವದು.

ಇತರೇ ರಾಜ್ಯದಲ್ಲಿ ಕಳೆದ ತಿಂಗಳಲ್ಲಿ ನಡೆದ ಪ್ರಜೆಗಳ ಭಯಂಕರವಾದ ದೊಂಬಿ ಕಲಹಗಳಿಗೆ ಆ ರಾಜ್ಯದ ಮಂತ್ರಾಲೋಚನಾ ಸಭಿಕರಲ್ಲಿ ಇಬ್ಬರು ಸೇರಿ, ಪಿತೂರಿ ಮಾಡಿದ್ದರೆಂದು ಗೊತ್ತಾದ ಕಾರಣ ಕಳೆದವಾರ ಆವರಿಬ್ಬರಿಗೂ ಹನ್ನೆರಡು ವರುಷದಂತೆ ಸಜಾ ಶಿಕ್ಷೆಯನ್ನು ಕೊಟ್ಟಿರುತ್ತಾರೆ.

ಚೀನಾರಾಜ್ಯದಲ್ಲಿ ರೈಲು ಹಾಕಿ, ವ್ಯಾಪಾರ ನಡೆಸುವದಕ್ಕೂ ಚೀನಾ ರಾಜ್ಯಕ್ಕೆ ಹಣ ಸಾಲ ಕೊಡುವದಕ್ಕೂ ಇಂಗ್ಲಿಷಿನವರೂ, ರಷ್ಯದವರೂ ಪ್ರಯತ್ನ ಮಾಡುತ್ತಿದ್ದಾರೆ. ಚೀನೀಯರು ಇಂಗ್ಲಿಷಿನವರನ್ನು ಸಾಲ ಕೇಳದರೆ ರಷ್ಯದವರು ಅದಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಇದಲ್ಲದೆ ಪರ್ಷಿಯಾ ದೇಶದಲ್ಲಿ ಕೂಡ ಆ ರಾಜ್ಯದ ಷಾ ರವರು ವಿಲಾಯತಿ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಳ್ಳಬೇಕೆಂದು ಪ್ರಯತ್ನ ಪಟ್ಟಿದ್ದು ರಷ್ಯಾರಾಜ್ಯದವರಿಗೆ ತಿಳಿದು, ಪರ್ಷಿಯಾ ದೇಶದ ಷಾ ರವರನ್ನು ಅಡ್ಡಿ ಮಾಡಿದ್ದರಿಂದ, ಷಾ ರವರು ಸಾಲ ತೆಗೆದುಕೊಳ್ಳದೆ ನಿಲ್ಲಿಸಿ ಬಿಟ್ಟರೆಂದು ವರ್ತಮಾನಬಂದಿದೆ. ಇತ್ತಲಾಗಿ ಕಾಸ್ಪಿಯನ್‌ಸಮುದ್ರದ ರಷ್ಯಾರಾಜ್ಯದವರು ಒಂದು ರೇವು ಪಟ್ಟಣವನ್ನು ಸ್ವಾಧೀನ ಮಾಡಿಕೊಂಡು, ಅಲ್ಲಿಗೆ ತಮ್ಮ ಹಡಗುಗಳನ್ನು ತಂದು, ಇಡಬೇಕೆಂದು ಪ್ರಯತ್ನ ಪಡುತ್ತಿರುವದಾಗಿ ತಿಳಿದು ಬಂದಿದೆ. ಈ ವಿಷಯಗಳನ್ನು ಕುರಿತು ವಿಲಾಯತಿಯಲ್ಲಿ ಪ್ರಜೆಗಳು ಅನುಮಾನ ಪಡುತ್ತಲೂ, ಇವರಿಬ್ಬರಲ್ಲೇ ಇಂಗ್ಲಿಷಿನವರಿಗೂ ರಷ್ಯಾದವರಿಗೂ ಕಲಹ ಪ್ರಾರಂಭವಾಗಬಹುದೆಂದು ಹೇಳುತ್ತಲೂ ಇದ್ದಾರೆ.

ಹುಬ್ಬಳ್ಳಿಯಲ್ಲಿ ಪ್ಲೇಗಿನ ಬೇನೆಯು ದಿನಂಪ್ರತಿ ಸುಮಾರು ೩೦ ಜನರಿಗೆ ಬರುತ್ತಿದ್ದು ಅದರಲ್ಲಿ ದಿನಂಪ್ರತಿ ೨೦ ಜನರು ಮೃತಪಡುತಲಿದ್ದಾರೆ ಎಲ್ಲಿನೋಡಿದರೂ ಜುಪ್ಪ ಕಾದಲ್ಲೆಲ್ಲ ದೊಡ್ಡದೊಡ್ಡ ಅನರ್ಥಗಳು ಒದಗುತ್ತಿದ್ದು ಆಕ್ರೋಶ ಶಬ್ದಗಳೇ ಹೊರತು ನಿರ್ಮಲವಾದ ಶಬ್ದ ಕೇಳಬರುವದಿಲ್ಲ. ರೋಡ್ಡುಗಳಲ್ಲಿಯೂ, ಮನೆಗಳಲ್ಲಿಯೂ, ಕಾಲುವೆಗಳಲ್ಲಿಯೂ, ಬೀದಿಗಳಲ್ಲಿಯೂ ಪ್ರೇತಗಳು ಬಿದ್ದಿರುವದು ದಿನಾಲು ದೃಷ್ಟಿಗೋಚರವಾಗುತವೆ ಇಂತಾ ಹೆಂಡತಿಯಿದ್ದರು ಹೆಂಡತಿಯು ಗಂಡನನ್ನು ಇಲ್ಲವೆ ತಂದೆಯು ಮಗನನ್ನು ಮಗನು ತಂದೆಯನ್ನು ಪ್ರೇತವು ಎಲ್ಲಿದೆ ಎಂದು ನೋಡದೆ, ಸತ್ತವನನ್ನು ಕುಡುಕಿ ಹೊಲದಲ್ಲಿ ಯಾ ಬೇಲಿ ಸಾಲಿನಲ್ಲಿ ಯಾ ಹಾಳುಬಾವಿ ಕೆರೆಗಳಲ್ಲಿ ಬಿಸಾಡಿ ತಮಗೇನೂ ಅದರ ಬಗ್ಗೆ ಗೊತ್ತಿಲ್ಲದವರಂತೆ ತಿರುಗಾಡುತ್ತಾರೆ. ಇದು ಬಹು ಆಶ್ಚರ್ಯಕರವಾದ ಸಂಗತಿಯು. ಹುಬ್ಬಳ್ಳಿಯಂತಹ ಸದ್ಯಕ್ಕೆ ಎಷ್ಟೋ ಪಟ್ಟಣದ ಭಾಗವಾಗಿರುವ ಹುಬ್ಬಳ್ಳಿ ಜನರ ಮೇಲೆ ಎಷ್ಟು ರಾಜನಿಗೆ ಕರ ತೆರುವರೆಂದು ಯಾವ ದಿವಸ ಆತನು ಅಲ್ಲಿಂದ ತನ್ನ ಸ್ಥಾನವನ್ನು ಬಿಟ್ಟು ಹೋಗುವನೋ ಆದೇ ದಿವಸ ಸುದಿನವೆಂದಾಗಬಹುದು ಸರ್ಕಾರದವರು ಈ ಪಿಡುಗಿನ ಬೇನೆಯನ್ನು ಕಿತ್ತುಹಾಕಲು ತಮಗೆ ಸಾಧ್ಯವಿರುವ ಮಟ್ಟಿಗೆ ಅನೇಕ ಉಪಾಯಗಳನ್ನು ಮಾಡಲಾದ ಕಿಂಡಿದ್ದಾರೆ. ಆದರೆ ಜನರ ಹಾಗು ರಾಜ್ಯದ ದುರ್ದೈವಕ್ಕೆ ಅವರಾದರೂ ಮಾಡುವದೇನು?

VAIDYASARA SANGRAHA.

A TREATISE ON THE PRINCIPLES OF

HINDU MEDICINE.

Price, including Postage Rs. 5–0–0.

ವೈದ್ಯಸಾರಸಂಗ್ರಹ.

ಇದು ಚರಕ, ವಾಹಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತದೆ,

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಪಾರಸಲ್

ವೆಚ್ಚವುಳ್ಳ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

Bangalore :—Printed and Published at the KARNATAKA PRESS, No. 40, HOSPITAL ROAD,—1898.

THE

Karnataka Prakasika.

ಕರ್ನಾಟಕ ಪ್ರಕಾಶಿಕ.

Published Every Monday Morning

[illegible]

Vol. XXV. BANGALORE:—MONDAY, AUGUST 22, 1898. **No. 34.**

Select Telegrams.

London, 15th Aug.—The Spanish Press places Spain's bitter humiliation. The ...publican journal *Pais* publishes the Proto... of Peace edged with a heavy black border.

London, 15th Aug.—A semi official Russian ...atement says that Russia is solely anxious ...secure her recently granted advantage in ...e Far-East, and contemplates no fresh ac...tions. It is further stated that Russia ...s no desire to injure the economic interests ...Britain.

London, 15th Aug.—The bombardment of ... began at 9 o'clock on the morning of ...13th ... and lasted two hours, but ... [illegible] ... Ten thousand ... stormed the trenches ... Spaniards, numbering 3,000 ... [illegible] ... and the Spanish Commander ... surrendered. It is stated that the American ... were heavy.

London, 15th August.—General Merritt has ... [illegible] ... to prevent the ... [illegible].

... the Spanish troops had left the town ... [illegible] ... the inhabitants hoisted the American flag. The troops thereupon ... [illegible] ... the flag and marched ... [illegible].

THE

Karnataka Prakasika.

MONDAY, AUGUST 22, 1898.

THE COMING VICEROY.

In our last issue we had a short notice of the coming Viceroy, and in to-day's we intend saying something more on the subject. Surprise has been expressed in a good many quarters at the choice that has been made. In the first place, Mr. Curzon is young for such a responsible post as that of Viceroy. He is only thirty-nine, and only two have come to India at an earlier age, the rest being very much older. But though the Viceroy elect is young he is not without experience. As we said in our last issue, he has travelled a great deal. He has been in Central Asia, in Persia and China. He has also visited India, though he did not remain here long. He was Under Secretary for India for sometime, and this must have enabled him to gain some knowledge of the country. Thus his mind is not by any means a blank as regards this land, as has been the case with others who came here in the same capacity. He is a man of great energy; has much power of will, and is a good speaker. One thing is certain. He will not submit to be governed from London, and it is equally clear that he will not blindly be led by those about him. He is essentially a strong man with a will of his own. India, for some time past, has had a succession of weak Viceroys, and, therefore, it will be a change to have a strong one. What is done during his regime will be done by the Viceroy, not by the officials about him. We may rest assured that the coming Viceroy will have a policy of his own; that he will not quietly take up one that may be provided by the officials who surround him. But there is another side of the shield. Mr. Curzon has committed himself—and very deeply—to the forward policy as regards the frontier. He would not have stopped at what was done during the late war, but would have proceeded much farther. We believe that policy to be bad in every respect. The best plan would be to let the tribes on the frontier alone; to let them fight out their battles among themselves. But they should be plainly told that should they enter, with an hostile intent, into British territory they would be punished, and punished severely. So long as they behaved themselves nothing need be done to them, and that they should be made distinctly to understand. We do not say that Mr. Curzon will follow out in India the policy he has advocated at home, but it is possible he may do so. Perhaps when he comes here he may see matters in a better light than he did in England; he will be able to discern that the exigencies of the situation are not such as he was led to believe, and that the forward policy must be abandoned for a long time, at least. Whether the new Viceroy will see the matter in this light remains to be seen. In the next place Mr. Curzon has a better knowledge of the ... Russia is pursuing towards India than any other man. It is believed by many that the former is looking forward to an attack upon this country: the sooner or later the two must come in contact. It is said that the Czar and his ministers are preparing towards this end, and that they look forward to it as a certainty. This may be the case, but, we fancy, it will be many years before a move is made in this direction, consequently the time has not yet come for a large sum of money to be spent in guarding against such an attack. It is to be hoped, therefore, that while Mr. Curzon keeps a watch on the doings of Russia he will not launch out into any extravagant expenditure on the plea that sometime or other the country may be invaded. It is to the internal affairs of India that the new Viceroy should turn his attention. It is the prosperity of the country that he should think most about, not the defence of the North West frontier. The latter may be necessary, but the necessity is far less than the former. Much is required to be done. The burdens upon the people are heavy; the margin of profit on which they have to live is small, consequently the poverty in the land is great. The new Viceroy should do his best to bring about a change; he should endeavour to make the people richer and happier than they are at present. Then there are many Acts that require to be repealed. The wretched gagging Act should be knocked on the head. It is a disgrace to the country; it was not wanted, and the sooner it is sent to oblivion the better for the people of India and for the Government. Whether Mr. Curzon will take this Act in hand we cannot say, but we hope he will. Let us hope for the best from the coming Viceroy. He has many points in his favour; he is young, and he may be everything that is required in a ruler.

News and Notes.

The Right Hon'ble Mr Curzon's date of sailing from home is not fixed, but it is believed he will arrive here in December.

The Viceroy has now officially assented to the Bombay Improvement Bill. The Bill was referred to the Secretary of State and he has since assented.

A Plot to overthrow the Kurdish Government has been discovered, and a number of high officials implicated have been imprisoned. General Abu Bar Kal. The guard at the Palace of Seoul has been largely increased. Great excitement prevails at Seoul.

It is notified for general information that the issue of Rupees ninety-four ... for every hundred ... has been fixed as the minimum rate at which tenders will be accepted for the Three-and-a-half per cent. loan of one hundred and twenty lakhs announced in the notification of the 29th July 1898.

It is understood that H. E. Lord Sandhurst will shortly pay a brief visit to several of the Districts where plague is most rife. No arrangements have yet been made respecting His Excellency's projected visit to Sind, and it may possibly be abandoned if the present increase of plague in various parts of the Presidency is continued.

At the Warwick Assizes Mr. Justice Darling sentenced Herbert Morris to six months' imprisonment for bigamy. His Lordship said the prisoner was a gentleman in everything but behaviour. It was not, however, because he was the son of a baronet and could employ Counsel to plead for him that he should escape the consequences of a serious crime.

In his speech at the Medical Hostel, Calcutta, on Saturday last, His Honour the Lieutenant-Governor of Bengal commended the cooperation of the Hindus with the Mahomedans instances of which, he went on to say, he had noticed all over the country. This is a new and very auspicious departure in the utterances of responsible officials to encourage mutual cooperation between the two great creeds which inhabit India.

A new reason for acquitting Europeans who shoot Indians accidently, is "faulty construction of the gun." "Mr. Dosmer, says the *Advocate of India*, "who, on the 31st ultimo accidently shot a *gharriwala* in the leg while out shooting at Hyderabad (Sind), the latter dying after amputation, has been discharged by the Magistrate of the ... The Court found that the shot was purely accidental owing to the faulty construction of the gun."

A few days ago, it will be remembered that Mr. Lalji Sait received a telegram from his servant at Conjeevaram, apprising him that his (the servant's) mother died of plague. On the information being communicated to Doctor Thompson, Acting Sanitary Commissioner, that gentleman with his staff left for the place to verify the truth of the ... We have learnt that the servant's mother ... [illegible] ... was laid up ... [illegible].

Our readers will be glad to learn, says the *Bengali*, that Mr. ... M.P., has ... [illegible] ... [illegible] ... years in India. These ... have ... [illegible]

... of law and the punishment inflicted on the offenders is so inadequate that a strong agitation in England is necessary in the interests of the people of this country. We wish, however, some way could be found whereby such occurrences may be put a final stop to. Interpellation after the deed is done is but poor satisfaction to the sufferers.

The Dodballapur Sub-Registrar's Murder Case. In Empress of India versus Ranganapal (Police Constable) Mr. P. T. Subramania Iyer, B. A. ... Public Prosecutor and Government Pleader, appeared for the prosecution and Mr. C. Portheus, Barrister-at-Law, appeared for the defence.

Mr. P. Sundaram Pillay, B.A., Headmaster, London Mission High School, Salem, and Mr. Ponnusami Naidu, ... College, ... Salem, were the assessors in this case. ... witnesses were examined for the prosecution and two only examined for the defence. The arguments for the defence and for prosecution were closed on the 17th instant. The assessors returned a verdict of not guilty. The Court reserved judgment till some other date.

Perhaps we may draw attention to the hopeful reply of His Excellency at Trichinopoly in the matter of legislation for a better control of Hindu Religious Endowments. His Excellency said that just before he took command he had a very large file of papers brought under his eyes dealing with this subject and very likely the Government will be able to make ... [illegible] ... persuade the Government of India to change the attitude they had till now ... adopted in this matter. ... Sir Arthur Havelock is aware that he ... by public opinion which is singularly ... The Government ... policy of non-interference ... endowments is entirely a misconception, and any improved legislation will ... such interference ... the ... able enactment under which these endowments are now administered.

The extremities some Policemen ... to ... Poona, acquitting and ... a person ... very young girl and ... tutored her to ... witnesses by ... The girl was asked the usual ...

LOCAL AND PROVINCIAL NEWS.

[illegible]

Local and Provincial.

There were 71 attacks and 70 deaths at Hubli on the 15th, and 80 attacks and 71 deaths on the 14th.

THE RESIDENT.—Returned from Mysore on Thursday on account of the news of the plague having entered Bangalore. On his arrival he visited the segregation camp.

THE WEATHER.—A shower of rain fell last Sunday week, but since than there has been no rain worth mentioning. It is very much wanted, and fears are expressed about the failure of the crops.

THE BIRUR SHIMOGA RAILWAY.—M. K. R. Srinivasa Iyengar, General Assistant Commissioner of the *Kadur district*, has been *specially* appointed to perform the functions of acquiring lands for the above railway under the provisions of the Mysore Land Acquisition Act No. VII of 1894.

ACCOUNT PROBATIONERS.—Messrs. Suthya Raju Chetti and Bistopanth Badami, who have been admitted into the service of the Mysore State as Account Probationers have been exempted by the Durbar from the operation of the rule *limiting the age* of candidates to the public service to 25 years.

INTIMATION BY WIRE.—The Government of Mysore, through the Senior Surgeon and Sanitary Commissioner, intimated to Dr. Arumugn Mudaliar, M. B. C. M., Civil Surgeon, by wire, that he should leave Harihar, whither he was sent from Shimoga to be in charge of plague duty, some months ago, and that he should come to *Bangalore* at once, as a few cases of plague have been reported here.

THE PLAGUE.—We are very sorry to have to inform our readers that this terrible disease has entered the city. Already suspicious cases have occurred. We shall acquaint the public of its progress should it make any stay in the place. The authorities are doing all they can to eradicate it. It is to be hoped they willl be successful. The first case was imported from Hubli.

REMUNERATION TO SUB-REGISTRARS.—The Inspector General of Registration having submitted *the case of the Sub-Registrars* of the Mysore Province for the favourable consideration of Government, sanction has been accorded to the grant of a certain percentage of the fees collected as commission in addition to their fixed salary, as in the Madras Presidency, where a Sub-Registrar of the last grade earns an income of not less than Rs. 50 per mensem. This encouragement will prove an incentive to their discharging their daily increasing work with zeal and efficiency.—D. P.

Extracts.

THE VICEROY-ELECT.

The Indian Spectator says.—We see Mr. Curzon has already accepted India. Why should not India accept Mr. Curzon? Beggars cannot be choosers. After all, the Viceroy-elect has some very good points in his favour. He knows the East better than most others; and his special acquaintance with *Afghanistan, Persia and China* will stand him in good stead. We know he has been rather badly smitten with the fever of the forward policy. But he is young as we have said, and may change his mind with the burden of personal responsibility, crushing even for a much stronger man.

The Mahratta says:—India is glad that a strong and capable ruler is coming out to rule over her at such a time. Of one thing we may now be sure. It is this, that whatever Mr. Curzon may do he will do on his own responsibility and initiation, and will not blindly be led by *his Councillors*, and as a result the public shall have the satisfaction of knowing exactly whom to praise or censure whenever an important administrative measure may be taken. The marking out, therefore, of the individuality of a Viceroy is a good thing perhaps for all concerned. Mr. Curzon's strong and also arrogant individuality is a point to recommend him to the people of India though these qualities are not a guarantee for his doing only what is good to India.

The Champion writes:—Alas! for poor India, when she has to rest content with a *variety of superior clerks—pushing mediocrities* with not an iota of the ripe wisdom and statesmanlike experience of the Viceroys of a past generation. But she may thank her stars that she has escaped perhaps a worse infliction than Mr. Curzon. Let her bear and grin it. We should not be surprised if after this selection *Prime Ministers descend even lower to that strata* of cierkdom as those who now administer the affairs of France. But what more can be expected when the race of Prime Ministers themselves has degenerated? May Providence look over India and protect her—that is our only prayer!

The Native Opinion writes:—Though we *cannot say that the New Governor-General* is all that could be desired, he does possess some good qualities which if allowed to have their natural influence on his policy will shape it in such a way as to do good to the people.

The Gujerati writes.—We refuse to prejudge the new Viceroy. We are prepared *to give him a free and fair field*. We are ready to wait and give our judgment when he has been sufficiently weighed in the balance. Anglo India has already begun to sing his praises in a tone of evident jubilation. That may be a bad omen in the opinion of many Indians. But patience has its uses, and we think it should be our endeavour to let the Viceroy-elect know that we shall judge him not by his books on Asiatic politics nor by his eloquence nor by honeyed phrases and plentiful promises, but by the zeal and sincerity, sympathy *and capacity, and the principles of British* justice and rectitude he exhibits in the government of this voiceless, unhappy and bankrupt country.

The Kaiser-i-Hind writes:—We fear his Viceroyalty bodes no good to India. Military expenditure is certain to increase, involving most probably further taxation which *the country has not the ability to bear*. The English and the majority of the Anglo-Indian press extol his virtues and prognosticate for us a prosperous and successful Viceroyalty. That is a prospect in which we refuse to indulge, because it is based on no solid foundation and is altogether irreconcilable with the declared utterances of this "superior" man. No previous Viceroy could be said to have met with so much goodluck as he. *But it is ill luck* for India.

ನೋಟೀಸ್.

ಕಳೆದ ಶನಿ ಮತ್ತು ಭಾನುವಾರಗಳಲ್ಲಿ ಗೌರೀಗಣೇಶನ ಹಬ್ಬದಬಗ್ಗೆ ನಮ್ಮ ಕಾರ್ಖಾನೆ ಕೆಲಸಗಾರರಿಗೆ ರಜಾ ಕೊಡಬೇಕಾಗಿದ್ದುದರಿಂದ ಈವಾರದಲ್ಲಿ ನಮ್ಮ ಪತ್ರಿಕೆಯು ಒಂದು ದಿನ ಸಾವಕಾಶವಾಗಿ ನಮ್ಮ ಚಂದಾದಾರರಿಗೆ ಕಳುಹಿಸಲ್ಪಟ್ಟಿರುತದೆ.

ಕರ್ಣಾಟಕ ಪ್ರಕಾಶಿಕಾ.

೧೮೯೮ನೇ ಇಸವಿ ಆಗಸ್ಟ್ ೨೨ನೇ ತಾ|| ಸೋಮವಾರ.

ಪ್ಲೇಗ್ ರೋಗದ ವ್ಯಾಪಕತೆ.

ಈ ದೇಶದ ಸರಹದ್ದಿಗೆ ಕೇವಲ ಸಮೀಪದಲ್ಲಿರುವ ಹುಬ್ಬಳ್ಳಿಯಲ್ಲಿ ಪ್ರಾರಂಭದೊಳು ಸಾಮಾನ್ಯವಾಗಿ ವ್ಯಾಪಿಸಿ ಪರಿಮಿತವಾಗಿ ಪ್ರಾಣಹಾನಿಯನ್ನುಂಟುಮಾಡುತ ಬಂದ ಪ್ಲೇಗ್ ಎಂಬ ರೋಗವು ಕ್ರಮೇಣ ಬಲಪಡುತಬಂದು ಈಗ್ಗೆ ಮೂರು ನಾಲ್ಕು ವಾರಗಳ ಮೊದಲು ಘೋರರೂಪವಂ ತಾಳ್ದು ಪ್ರತಿದಿನದಲ್ಲೂ ಎಪ್ಪತ್ತು ಎಂಭತ್ತು ಮಂದಿಯವರೆಗೆ ತಗಲಿ ಅವರಲ್ಲಿ ಕೇಳಿದ ತೊಂಭತ್ತು ಮಂದಿಯವರೆಗೆ ಸಾಯುತ್ತಲಿರುವಂತೆ ಪ್ರತಿದಿನವಲ್ಲೂ ಇಲ್ಲಿಗೆ ತಂತಿವರ್ತಮಾನ ಬರುತಲಿದೆ. ಈ ದೇಶಕ್ಕೆ ಕೇವಲ ಸಮೀಪದಲ್ಲಿ ಬಲವತ್ತರವಾಗಿ ವ್ಯಾಪಿಸಿರುವ ಈ ದುಷ್ಟರೋಗವು ದಿನಕ್ರಮದಿಂ ಇಲ್ಲಿಯೂ ತಲೆದೋರಬಹುದೆಂಬ ಭೀತಿಯು ನಮ್ಮನ್ನಗಲಿರಲಿಲ್ಲವು. ಅದಕ್ಕನುಸಾರವಾಗಿ ಕಳೆದ ಮಂಗಳ ಮತ್ತು ಬುಧವಾರಗಳಲ್ಲಿ ಈ ಪ್ರೂರು ಅರಳೇಪೇಟೆಯಲ್ಲಿ ಮೂರು ನಾಲ್ಕು ಜನರಿಗೆ ಸದರೀ ಕ್ರೂರರೋಗ ತಗಲಿ ತನ್ನಿಮಿತ್ತ ಮೃತಪಟ್ಟರೆಂದು ಕೇಳುತ್ತೇವೆ. ಈ ಅಂಶವು ಇಲ್ಲಿನ ಪ್ಲೇಗ್ ಅಧಿಕಾರಿಗಳಿಗೆ ತಿಳಿಯಬಂದು ಅವರು ಕೂಡಲೆ ಸದರೀ ಪ್ರದೇಶಗಳಿಗೆ ಹೋಗಿ ರೋಗಪೀಡಿತರಾದವರು ವಾಸಮಾಡುತಲಿದ್ದ ಮನೆಗಳ ಕೊಠಡಿಗಳ ಛಾವಣಿಗಳನ್ನೆಲ್ಲ ಕಿತ್ತುಹಾಕಿಸಿ ಚಿಕಿತ್ಸಾ ಸಂಬಂಧ ರೋಗನಿರೋಧಕಗಳೆಂದು ಇಂಗ್ಲಿಷ್ ವೈದ್ಯಶಾಸ್ತ್ರದಿಂದ ವಿಧಿಸಲ್ಪಟ್ಟಿರುವ ಇತರ ಕ್ರಿಯೆಗಳನ್ನೆಲ್ಲ ಪೂರ್ಣವಾಗಿ ಆಚರಿಸಿ ತಮಗೆ ಸಾಧ್ಯಗಳಾಗಿಯೂ ಮತ್ತು ಆವಶ್ಯಕಗಳಾಗಿಯೂ ಕಂಡು ಬಂದ ಬಹುವಿಧ ಯೋಜನೆಗಳಂ ಮಾಡಿಯೂ ಮಾಡುತಲೂ ಇದ್ದಾರೆ. ಈಗ ಈ ಪ್ರೂರಲ್ಲಿ ಕೆಲವರ ಮರಣಕ್ಕೆ ಕಾರಣವೆಂದ ಭಾವಿಸಲ್ಪಟ್ಟಿರುವ ಪ್ರಕೃತ ರೋಗ ಪ್ರಸ್ವದೇಶಜನ್ಯವಾದುದೆ, ಅಥವಾ ರೋಗಪೀಡಿತರಗಳಾದ ಪ್ರದೇಶಗಳಿಂದ ಇಲ್ಲಿಗೆ ಬಂದವರಿಂದ ಬೀಜಾಪಾದ ಮಾಡಲ್ಪಟ್ಟದ್ದೋ ಎಂಬುವ ಅಂಶವು ವಿಚಾರಾರ್ಹವಾಗಿರುತದೆ. ಈ ರೋಗವು ಸಾಂಕ್ರಾಮಿಕವಾದುದೆಂದು ಅನೇಕ ನಿದರ್ಶನಗಳ ಮೂಲಕ ಇದುವರೆಗೇನೇ ಸ್ಥಿರಪಟ್ಟಿರುವ ಕಾರಣ ಈ ಸ್ವದೇಶಜನ್ಯವಾದುದೆಂದು ಊಹಿಸುವದಕ್ಕಿಂತಲೂ ಹುಬ್ಬಳ್ಳಿ ಪ್ರಾಂತದಿಂದ ಇಲ್ಲಿಗೆ ಬಂದವರಿಂದ ತರಲ್ಪಟ್ಟದ್ದೆಂದು ನಿರ್ಧರಿಸುವದಕ್ಕೆ ಆಧಾರಗಳೂ ಕಾರ್ಯಕಾರಣಗಳೂ ಬಲವತ್ತರವಾಗಿರುವವು. ಈ ವಿಷಯವು ಹ್ಯಾಗಾದರಿರಲಿ, ಯಾವ ಮೂಲಕವಾಗಿದ್ದರು ರೋಗ ಪ್ರಾಪ್ತವಾದ ಮೇಲೆ ತನ್ನಿರೋಧಕೋಪಾಯಗಳಂ ಕುರಿತ ಯೋಚಿಸಬೇಕಾದ್ದು ಅವಶ್ಯಕರಣೀಯವು. ದೈವಾಜ್ಞೆಯಿಂದ ಈ ರೋಗವು ವೃದ್ಧಿಯನ್ನೈದದೆ ಇದುವರೆಗೆ ಉಂಟುಮಾಡಿದ ನಾಲ್ಕರು ಜನರ ಪ್ರಾಣಹಾನಿಗಳಿಂದಲೆ ಶಾಂತವಾಗುವ ಪಕ್ಷದಲ್ಲಿ ಇದು ಸ್ವದೇಶಜನ್ಯವಲ್ಲವೆಂದು ಸ್ಥಿರಪಡುವದು ಮಾತ್ರವಲ್ಲದೆ ತನ್ಮೂಲಕ ಈಗ ಇಲ್ಲಿನ ಪ್ರಜೆಗಳಿಗುಂಟಾಗಿರುವ ಭೀತಿಯು ತಪ್ಪುವದು.

ಈ ಸಂದರ್ಭದೊಳು ಇದಕ್ಕೆ ಸಂಬಂಧಪಟ್ಟ ಕೇವಲ ಮುಖ್ಯಗಳಾದ ಕೆಲವು ಅಂಶಗಳನ್ನು ವಿಧೇಯತೆಯಿಂದ ಪ್ಲೇಗ್ ಅಧಿಕಾರಿಗಳ ಮುಖ್ಯವಧಾನಕ್ಕೆ ತರಬೇಕಾದುದು ಅವಶ್ಯಕವೆಂದು ಭಾವಿಸುವೆವು. ಒಂದನೇಯದು—ಪ್ರಕೃತ ರೋಗವು ಸಾಂಕ್ರಾಮಿಕವಾದುದೆಂದು ಸಿದ್ಧರವಾಗಿರುವದರಿಂದ ಪ್ರತಿದಿನವೂ ಬೆಳಗ್ಗೆ ಏಳುಘಂಟೆಯು ಮೊದಲು ಹನ್ನೊಂದು ಘಂಟೆಯವರೆಗೆ ಕೈಯಲ್ಲಿ ತಂಬಿಗೆಗಳನ್ನು ಅಥವಾ ಚೊಂಬುಗಳಂ ಹಿಡಿದುಕೊಂಡು ಪ್ರತಿಯೊಂದು ಬೀದಿಗೂ ಹೋಗಿ ಭಿಕ್ಷಬೇಡತಕ್ಕ ಜನರನ್ನು ಜಾತಿಮತ ತಾರತಮ್ಯವಂ ಪರಿಗಣಿಸದೆ ನಿರೋಧಿಸಿ ಅವರಿಗೆಲ್ಲ ಲಂಗರಖಾನೆಯಲ್ಲಿ ಅಥವಾ ಉಚಿತವಾಗಿ ಕಂಡು ಬರುವ ಬೇರೆಯೊಂದು ಸ್ಥಳದಲ್ಲಿ ವಾರಕ್ಕೊಂದಾವರ್ತಿ ಅಕ್ಕಿ ಅಥವಾ ರಾಗಿ ಕೊಡಿಸಬೇಕು. ಎರಡನೆ—ಈಗ್ಗೆ ನಾಲ್ಕಾರು ಸಂವತ್ಸರಗಳ ಕಾಲದ ಮೊದಲು ಜೀವನಾರ್ಥ ಬೊಂಬಾಯಿ, ತಿರುನಾಮಲೆ ಮೊದಲಾದ ಪ್ರದೇಶಗಳಿಂದ ನಾಲ್ಕಾರು ಸಹಸ್ರ ಪ್ರಜೆಗಳು ಈ ಪ್ರೂರಿಗೆ ಬಂದು ಇಲ್ಲಿ ಹಗಲುಹೊತ್ತು ಕೂಲಿಮಾಡುವದರಿಂದಲೂ ರಾತ್ರಿ ಕಾಲದಲ್ಲಿ ಬೀದಿಬೀದಿ ತಿರುಗಿ ಸಂಧಿಕಬಳ ಬೇಡುವವರ ಮೂಲಕವಾಗಿಯೂ ಜೀವಿಸುತಲಿದ್ದಾರೆ. ಈ ಜನರು ಮೂರು ತಿಂಗಳಿಗೊಂದಾವರ್ತಿಯಾದರು ತಮ್ಮ ಬಟ್ಟೆಗಳಂ ಒಗೆಯುವದಾಗಲಿ ಮೈಮೇಲಿನ ಕೊಳಕಂ ತೊಳೆಯುವದಾಗಲಿ ಸುತರಾಂ ಇಲ್ಲವು. ಈ ಜನರನ್ನು ಕೂಡಲೆ ಅವರವರ ಸ್ಥಳಗಳಿಗೆ ಸಾಗಿಸಿಬಿಡಬೇಕಾದುದು ಅವಶ್ಯಕವು. ಆರೀತಿ ಮಾಡದೆ ಹೋದರೆ ಮನಸ್ಸು ಬೀದಿಬೀದಿಗೂ ತಿರುಗಾಡುವ ಮೇಲೆ ತಿಳಿಸಿದ ಯೆರಕುಲಗೆಯವರ ಮೂಲಕ ಸಾಂಕ್ರಾಮಿಕವಾದ ಪ್ರಕೃತರೋಗವು ಒಂದು ಬೀದಿಯಿಂದ ಮತ್ತೊಂದು ಬೀದಿಗೆ ನಿರಾತಂಕವಾಗಿ ವ್ಯಾಪಿಸುವದರಲ್ಲಿ ಅಭ್ಯಂತರ ಲೇಶವೂ ಇರಲಾರದು. ಮೂರನೆಯದು—ಈಗ ಹುಬ್ಬಳ್ಳಿಯಲ್ಲಿ ಪ್ಲೇಗ್‌ರೋಗ ಪೀಡಿತರಾದವರು ಆಬಗ್ಗೆ ಯೇರ್ಪಟ್ಟಿರುವ ಅಧಿಕಾರಿಗಳ ದುನಸ್ವೀ ಆಪಳತಗಳ ಮೂಲಕ ಅನುಭವಿಸುತಲಿರುವ ನಾನಾವಿಧ ಪರಿಭವಗಳು ಆಪ್ರಾಂತದ ಇಂಗ್ಲಿಷ್ ಮತ್ತು ದೇಶಭಾಷಾ ವೃತ್ತಾಂತ ಪತ್ರಿಕೆಗಳ ಮೂಲಕ ಪ್ರಸಿದ್ಧವಾಗಿ ಯೆಲ್ಲರಿಗೂ ತಿಳಿಯಬಂದಿದೆಯಷ್ಟೆ. ಪ್ರಕೃತ ರೋಗವು ದೌರ್ಭಾಗ್ಯವಶಾತ್ ಈ ದೇಶದಲ್ಲಿ ಅಥವಾ ಈ ಪ್ರೂರಲ್ಲಿ ಪ್ರಬಲಗೊಳ್ಳುವ ಸಂಭವದೊಳು, ರೋಗಪೀಡಿತರಾದವರ ವಿಷಯದಲ್ಲಿ ಹುಬ್ಬಳ್ಳಿಯಲ್ಲಿ ನಡೆಸಲ್ಪಡುತಲಿರುವ ಕೇವಲ ಕಠಿಣಗಳಾದ ಪ್ರಮಾಣಗಳಂ ಇಲ್ಲಿಯೂ ಅನುಸರಿಸದೆ ಸಾಧ್ಯವಾದ ಮಟ್ಟಿಗೆ ರೋಗನಿರೋಧಕಗಳಾದ ಪರಂತು ಜನಾನುಕೂಲಗಳಾದ ಮಾರ್ಗಗಳಂ ಆಲೋಚಿಸಿ ತದ್ವ್ಯತಿ ನಡೆಸುತ ಬರುವವರ ಮೂಲಕ ಪ್ಲೇಗ ಅಧಿಕಾರಿಗಳು ಪ್ರಜೆಗಳ ಶ್ರೇಯಃ ಪ್ರಾರ್ಥನೆ ಮತ್ತು ಪ್ರೀತಿ ಗೌರವಗಳಿಗೆ ಸಂಪೂರ್ಣ ವಿಷಯರಾಗುವರೆಂದು ಸೂಚಿಸುವೆವು

ದೇವಸ್ಥಾನಗಳ ಧರ್ಮಾದಾಯವನ್ನು ಕುರಿತ ಆಕ್ಟು.

ಮದರಾಸ್ ಗವರ್ನರವರಾದ ಸರ್ ಆರ್ಥರ್ ಹಾವಲಾಕ್ ಸಾಹೇಬರವರು ಈಗ ದಕ್ಷಿಣದೇಶ ಸಂಚಾರ ಮಾಡುತ ಅಲ್ಲಿಯ ಪ್ರಜಾಸಂಘದವರಿಂದ ಒಪ್ಪಿಸಲ್ಪಡುವ ವಿಜ್ಞಾಪನಾ ಪತ್ರಿಕೆಗಳಲ್ಲಿ ತಿಳಿಸಲ್ಪಟ್ಟಿರುವ ಅಲ್ಲಿನ ಪ್ರಜೆಗಳ ಅಸಂತುಷ್ಟಾಂಶಗಳಂ ಬಹಳ ಅಕ್ಕರೆಯಿಂದನೆ ಕೇಳಿ ಅವರವರಿಗೆ ಉಚಿತರೀತಿಯಿಂದ ಉತ್ತರಗಳಂ ಕೊಡುತ ಪ್ರಜೆಗಳ ಅಂತರಂಗದ ಪ್ರೀತಿಗೌರವಗಳಿಗೆ ಸಂಪೂರ್ಣ ವಿಷಯರಾಗುತಿರುವರಷ್ಟೆ. ತಿರುಚನಾಪಲ್ಲಿ ಡಿಸ್ಟ್ರಿಕ್ಟ ಜಮೀನ್ದಾರರ ಸಂಘದಿಂದ ಒಪ್ಪಿಸಲ್ಪಟ್ಟ ವಿಜ್ಞಾಪನಾ ಪತ್ರಿಕೆಯಲ್ಲಿ ಕಾಣಿಸಲ್ಪಟ್ಟಿದ್ದ ಅನೇಕ ಅಂಶಗಳಿಗೆ ಪ್ರತ್ಯುತ್ತರವಂ ಹೇಳುವ ಸಂದರ್ಭದಲ್ಲಿ, ದೇವಸ್ಥಾನಗಳ ಧರ್ಮದ್ರವ್ಯವು ದುರುಪಯೋಗವಾಗುತಲಿರುವ ವಿಷಯದೊಳು ತಿಳಿಸಿದ ಅಭಿಪ್ರಾಯವು, ಅವುಗಳ ತಾತ್ಕಾಲಿಕ ಸ್ಥಿತಿಯಂ ಕುರಿತು, ಚಿಂತಿಸುತ ಭಗ್ನಮನಸ್ಕರಾಗಿರುವಂತವರಿಗೆಲ್ಲ ಪ್ರತ್ಯಾಶಾವಕಾಶವನ್ನುಂಟುಮಾಡುತ್ತಿದ್ದುದರಿಂದ ಅದನ್ನಿದರಡಿ ಸಂಗ್ರಹವಾಗಿ ತಿಳಿಸಬೇಕಾದ್ದವಶ್ಯಕವೆಂದು ಭಾವಿಸುತ್ತೇವೆ, ಏನೆಂದರೆ—ದೇವಸ್ಥಾನಗಳ ಧರ್ಮದ್ರವ್ಯವು ದುರುಪಯೋಗವಾಗದಂತೆ ಅದನ್ನು ಕಾಪಾಡಬೇಕಾದ ವಿಷಯದಲ್ಲಿ ಒಂದು ಕಾನೂನು ರಚಿಸಬೇಕಾದ್ದವಶ್ಯಕವೆಂದು ಸೂಚಿಸುತ್ತೀರಿ, ನೀವು ತಿಳಿಸಿರುವಂತೆ ಸದರೀ ದ್ರವ್ಯವು ದುರ್ವಿನಿಯೋಗವಾಗುವದನ್ನು ತಪ್ಪಿಸತಕ್ಕಬಗ್ಗೆ ಒಂದು ಕಾನೂನು ರಚಿಸಲ್ಪಟ್ಟು ಜಾರಿಯೊಳು ತರಲ್ಪಡಬೇಕೆಂದು ಪ್ರಜೆಗಳಿಗೆ ಬಲವಾದ ಅಭಿಪ್ರಾಯವಿರುತದೆಂಬುವದನ್ನು ನಾವು ಚೆನ್ನಾಗಿ ಬಲ್ಲೆವು. ಈ ದೇಶದಲ್ಲಿನ ದೇವಸ್ಥಾನಗಳ ಧರ್ಮದ್ರವ್ಯ ವಿನಿಯೋಗ ವಿಷಯದಲ್ಲಿ ತಾವು ಪ್ರವೇಶಿಸಕೂಡದೆಂದು ಇಂಡ್ಯ ಗವರ್ನಮೆಂಟಿಗೆ ಬಲವಾದ ಅಭಿಪ್ರಾಯವಿರುತದೆ. ಈ ವಿಷಯದಲ್ಲಿ ಒಂದು ಕಾನೂನು ರಚಿಸಲ್ಪಡಬೇಕೆಂದು ಪ್ರಜೆಗಳಿಗೆ ಆಂತರವಾದ ಅಭಿಪ್ರಾಯವಿರುತದೆಂಬುವದನ್ನು ಇಂಡ್ಯ ಗವರ್ನಮೆಂಟಿನವರ ತಿಳುವಳಿಕೆಗೆ ತರಬೇಕಾದುದು ಕೇವಲ ಆವಶ್ಯಕವಾಗಿರುತದೆ. ನಾನು ನೀಲಗಿರಿಯಿಂದ ಹೊರಡುವದಕ್ಕೆ ಮುಂಚೆ, ದೇವಸ್ಥಾನಗಳ ಆದಾಯಗಳ ವಿಷಯದಲ್ಲಿ ಒಂದು ಕಾನೂನನ್ನು ರಚಿಸಬೇಕಾದ ಕಾರ್ಯಕ್ಕೆ ಸಂಬಂಧಪಟ್ಟ ಕಾಗದಗಳ ಒಂದು ದೊಡ್ಡ ಕಟ್ಟು ಬಂದು ಅದು ನನ್ನ ದೃಷ್ಟಿಗೆ ಬಿತ್ತು. ಈ ವಿಷಯದಲ್ಲಿ ನಾವು ಇಂಡ್ಯಾ ಗವರ್ನಮೆಂಟಿಗೆ ಬಲವಾಗಿ ಬರೆದು ತಿಳಿಸಬೇಕೆಂದು ಯೋಚಿಸಿರುತ್ತೇವೆ. 'ಯಾವರೀತಿ ಸದರೀ ಕಾನೂನನ್ನು ಮಾಡಿದರೆ ಅದು ಕ್ರಮವಾಗಿ ಜಾರಿಯಲ್ಲಿ ತರಲ್ಪಟ್ಟು ನಡೆದುಬರುವುದೋ ಅದಕ್ಕೆ ಅನುಗುಣವಾದ ಅಂಶಗಳಂ ಯೋಚಿಸಿರುತ್ತೇವೆ. ಪರಂತು ಈ ಕೆಲಸವು ಪೂರ್ತಿಯಾಗುವದಕ್ಕೆ ಇನ್ನು ಸ್ವಲ್ಪದಿನಗಳು ಹಿಡಿಯುವ

ವ್ವ ಎಂಬುದು. ಘನವಂತರಾದ ಗವರ್ನರ್ ಸಾಹೇಬರವರು ವ್ಯಕ್ತಪಡಿಸಿದ ಮೇಲಿನ ಅಭಿಪ್ರಾಯದ ದೆಸೆಯಿಂದ, ದೇವಸ್ಥಾನಗಳ ಧರ್ಮದ್ರವ್ಯಗಳ ದುರುಪಯೋಗವನ್ನು ನಿರೋಧಿಸಬೇಕಾದ ವಿಷಯದಲ್ಲಿ ಅವರಿಗೆ ಉತ್ತಮವಾದ ಅಕ್ಕರೆಯಿರುವಂತೆ ಸ್ಪಷ್ಟವಾಗುತಿದೆ. ಇವನ್ನು ಕುರಿತ ಮುಸವಿದಾಕಾನೂನ್ ತಯಾರುಮಾಡಲ್ಪಟ್ಟ ಆ ವಿಷಯದಲ್ಲಿ ಪ್ರಜಾಭಿಪ್ರಾಯವನ್ನರಿಯತಕ್ಕ ಬಗ್ಗೆ ಅದು ಪ್ರಕಟಿಸಲ್ಪಟ್ಟ ಮೇಲೆ ಅದರಿಂದ ನಿರೀಕ್ಷಿಸಲ್ಪಡುತಿರುವ ಫಲವು ಏತದ್ರೂಪವಾದುದೆಂದು ತಿಳಿಯಬರಬೇಕು. ಹಿತ್ತೀನ ಈಗಿನ ಗವರ್ನರ್ ಸಾಹೇಬರವರು ದೇವಸ್ಥಾನಗಳ ಆದಾಯವು ಧರ್ಮಕರ್ತರೆಂಬ ದೈವದ್ರೋಹಿಗಳ ಕೈಗಳಿಗೆ ಸಿಕ್ಕಿ ನಾನಾಮಾರ್ಗದಿಂ ನಿರರ್ಥಕವಾಗಿ ದುರ್ವಿನಿಯೋಗವಾಗುತಲಿರುವುದಂ ತಪ್ಪಿಸಿ ಅದು ದೇವತಾಸೇವೆಗೆ ಪೂರ್ಣವಾಗಿ ಉಪಯೋಗವಾಗ, ಸತ್ಕಾರ್ಯ ತನ್ಮೂಲಕವಾದ ಶಿಕ್ಷಣಪ್ರತಿಷ್ಠೆಗಳಿಗೆ ಉಪಯೋಗವಾಗುವದೆಂದು ಕೇಳಿ ಸಂತೋಷಿಸುತ್ತೇವೆ. ಈ ವಿಷಯದಲ್ಲಿ ಎಷ್ಟೋ ಸಲ ಅನೇಕ ಸಂದರ್ಭಗಳಲ್ಲಿಯು ಸವಿಸ್ತಾರವಾದ ಲೇಖನಗಳು ರಚಿಸಲ್ಪಟ್ಟು ಅವುಗಳೆಲ್ಲವು ಬಹುದಿವಸ ಉದ್ದಿಷ್ಟ ಫಲಪ್ರದವಾಗದೆ ಎಷ್ಟು ನಿಷ್ಫಲವಾಗಿ ಹೋದವಾಗ, ಈತನವರು ಹೀಗೆ ಮಾಡಿದರೆ ಆಗದೆ ಪ್ರಯೋಜನಕರವಾದ ಹಿತಕಾರಿಯಾದುದಾಗಿಯೂ, ಈ ವಿಷಯದಲ್ಲಿ ಪ್ರಜೆಗಳಿಗುಂಟಾಗಿರುವ ದೀರ್ಘಕಾಲಿಕವಾದ ಚಿಂತೆಯುಂ ಹೋಗಲಾಡಿಸುವ ಸ್ಥಿತಿ ಸಂತೋಷದಾಯಕವಾಗಿಯೂ ಇರುವದೆ ಮ ನುಯುಕ್ತವೆ.

ಪ್ಲೇಗ್ ರೋಗದ ಮೂಲಕ ಹುಬ್ಬಳ್ಳಿಗೆ ಈಗ ಪ್ರಾಪ್ತವಾಗಿರುವ ದುರವಸ್ಥೆಯಂ ಕುರಿತು ಮರಾಠಾ ಪತ್ರಿಕೆಯೊಂದಕ್ಕೆ ಅಲ್ಲಿನ ವೃತ್ತಾಂತ ಲೇಖಕರೊಬ್ಬರು ಬರೆದಿರುವ ಲೇಖನದ ಸಾರಾಂಶವಂ ಇದರಡಿ ತಿಳಿಸುತ್ತೇವೆ. –ಹುಬ್ಬಳ್ಳಿಗೆ ಮುಂದೆ ಎಂಥ ಸ್ಥಿತಿ ಪ್ರಾಪ್ತವಾಗುವದೆಂದು ಖಂಡಿತವಾಗಿ ಹೇಳುವದಕ್ಕೆ ಸಾಧ್ಯವಲ್ಲದೆ ಇದ್ದಾಗ್ಯೂ ವ್ಯಾಪಾರ ಪಟ್ಟಣಗಳಲ್ಲಿ ಭಾಗ್ಯಹೀನವಾದ ಈ ಶಹರವು ನಾಶವಾಗುವ ಕಾಲವು ಬಹಳ ದೂರವಿಲ್ಲವೆಂದು ಹೇಳಬೇಕಾಗಿದೆ. ಮುವತ್ತೈದು ಸಾವಿರ ಜನ, ಅಂದರೆ ಇಲ್ಲಿನ ಜನಸಂಖ್ಯೆಯಲ್ಲಿ ನೂರಕ್ಕೆ ತೊಂಬತ್ತರಷ್ಟು ಜನರು ರೋಗದ ಭಯದಿಂದ ಪ್ರಾಣಗಳಂ ಹಿಡಿದುಕೊಂಡು ಹೊರಟುಹೋಗಿದ್ದಾರೆ, ಮತ್ತು ಪ್ರತಿದಿವಸದಲ್ಲಿಯು ಜನ ಹೊರಟು ಹೋಗುವುದು ಕಡಿಮೆ ಇಲ್ಲದೆ ನಡೆಯುತಲಿದೆ. ಕಳೆದ ವಾರದೊಳಗೆ ಮೃತಪಟ್ಟವರ ಸಂಖ್ಯೆಯು ಬಹಳ ಹೆಚ್ಚಿಹೋದುದರಿಂದ ಕೇವಲ ಧೈರ್ಯವಂತರಾದವರಿಗೆ ಸಹ ಭೀತಿಯುಂಟಾಗುವದೇನೂ ಆಶ್ಚರ್ಯವಲ್ಲವು. ಅನುಕೂಲವಿದ್ದವರೆಲ್ಲರು ರೋಗದ ಬಾಧೆ ಇಲ್ಲದ ಪ್ರದೇಶಗಳಿಗೆ ಹೊರಟುಹೋಗುತಲಿದ್ದಾರೆ. ಇಲ್ಲಿ ಕೆಲಸದ ನಿಮಿತ್ತವಿರತಕ್ಕವರೆಲ್ಲರು ತಮ್ಮ ತಮ್ಮ ಸಂಸಾರಗಳನ್ನೆಲ್ಲ ಪರಸ್ಥಳಗಳಿಗೆ ಕಳುಹಿಸುತಲಿದ್ದಾರೆ. ರೋಗವು ಈಗ ಮೆಲ್ಲಮೆಲ್ಲನೆ ಆಸ್ಪಾಸಿನ ಗ್ರಾಮಗಳಿಗೆ ಸಹ ವ್ಯಾಪಿಸುತಲಿದೆ. ಇದು ಕ್ರಮೇಣ ಧಾರ್ವಾಡ ವೊದಲಾದ ಆಸ್ಪಾಸಿನ ಶಹರಗಳಿಗೆ ವ್ಯಾಪಿಸಬಹುದೆಂಬ ಭೀತಿ ಯುಂಟಾಗಿದೆ. ಅವಿವೇಕಿಗಳಾದ ಜನರು ರೋಗದ ಮೂಲಕ ಮೃತಪಡುವಂತವರನ್ನು ಅವರವರ ಮನೆಗಳಲ್ಲೇ ಹೂಳಿ ಬಿಡುತ್ತಾರೆ, ಅಥವಾ ಭಾವಿಗಳಲ್ಲಿ ಎಸೆದುಬಿಡುತ್ತಾರೆ. ಈರೀತಿ ಮಾಡುವದಕ್ಕೆ ಪ್ಲೇಗ್ ಆಫಿಸರ್‌ಗಳ ಕೈಗೆ ತಾವೂ ತಮ್ಮ ಕುಟುಂಬಕ್ಕೆ ಸೇರಿದವರೂ ಸಿಕ್ಕಬಾರದೆಂಬ ಉದ್ದೇಶವಿನಾ ಬೇರೊಂದಿಲ್ಲವು. ಜೀವಾರೋಗ್ಯಶಾಲೆಗಳು ಮತ್ತು ಬೇರ್ಪಡಿಸುವ ಮನೆಗಳಲ್ಲೂ ಜನಸಂಚಾರವಿಲ್ಲದ ಪ್ರದೇಶಗಳಲ್ಲೂ ಅಗ್ಗದಾಗ್ಗೆ ಸಿಕ್ಕುತವೆ. ಮುಖ್ಯವಾಗಿ ಪ್ಲೇಗ್ ಆಫಿಸರ್‌ಗಳ ಭೀತಿಮತ್ತು ಹಿಂಸೆಯಿಂದ ಪ್ಲೇಗ್‌ರೋಗ ತಗಲಿದರೆ ಅದನ್ನು ಹೊರಪಡಿಸದೇನೇ ಮುರ್ದೆಗಳನ್ನು ರಹಸ್ಯವಾಗಿ ಹೂಳಿಬಿಡುತ್ತಾರೆ, ಅಥವಾ ತೆಗೆದುಕೊಂಡು ಹೋಗಿ ಎಲ್ಲಾದರು ಎಳದುಹಾಕಿಬಿಟ್ಟು ಏನೂ ತಿಳಿಯದವರಂತೆ ಇರುತ್ತಾರೆ. ಪ್ಲೇಗ್‌ರೋಗ ಪೀಡಿತರಾದ ಗಂಡಸರು ಮತ್ತು ಹೆಂಗಸರನ್ನು ಈಚಿಗೆ ಕಟ್ಟಲ್ಪಟ್ಟಿರುವ ಒಂದು ಮನೆಯಲ್ಲಿ ಹಾಕಿ ಅವರ ಮೈಗಳಂ ತೊಳೆಸುತ್ತಾರೆ. ಈ ವಿಷಯದಲ್ಲಿ ಪೋಲೀಸಿನವರು ನಡೆಸುವ ದುಷ್ಕೃತ್ಯಗಳನ್ನು ಕೇಳುವದಕ್ಕೆ ದಿಕ್ಕೇ ಯಿಲ್ಲವಾಗಿದೆ, ಎಂಬುವುದು ವಗೈರೆ.

ಈ ತಿಂಗಳ ೯ನೇ ತಾರೀಖ್ ಮಂಗಳವಾರದ ದಿನ ಪ್ರಾತಃಕಾಲ ೧೧ ಘಂಟೆಯ ಸಮಯದಲ್ಲಿ ಹೌರಾ ಸ್ಟೇಷನಿಗೆ ೧೮೩ ಮೈಲುಗಳ ಫಾಸಲೆಯಲ್ಲಿರುವ ಮಾಧುರಪುರವೆಂಬ ಒಂದು ಷಹರಿನ ಮಧ್ಯೆ ಕಟ್ಟಲ್ಪಟ್ಟಿದ್ದ ಒಂದು ಮನೆಯ ಅಂಗಳದಲ್ಲಿ ಸಿಡಿಲು ಬಿದ್ದು ಅದು ಒಂದು ಕಬ್ಬಿಣ ತುಂಡಿನ ಮೂಲಕ ಹೊಗೆ ಗೂಡಿನದ್ವಾರಾ ಮತ್ತೊಂದು ಕೋಣೆಯೊಳಗೆ ಪ್ರವೇಶಿಸಿ, ಆಕೋಣೆಗೆ ಹಾಕಿದ್ದ ಕಬ್ಬಿಣದ ದೂಲದ ಮೂಲಕ ಛಾವಣಿಯೊಳಗೆ ಪ್ರವೇಶಿಸಿ, ತ[illegible]ರದಲ್ಲಿ ತಗಲಿಸಿದ್ದ ಲಸ್ಟರ್‌ಮೇಲೆ ಹಾದು ಆಲಸ್ಟರನ್ನೂ ಕುರ್ಚಿ ಮೇಜು ವಗೈರೆ ಅಜಬಾಪಗಳನ್ನೂ ನಾಶಪಡಿಸಿತಲ್ಲದೆ, ಸದರೀ ಲಸ್ಟರಿನ ಕೆಳಗೆ ಹಾಕಿದ್ದ ಒಂದು ಕುರ್ಚಿಯಮೇಲೆ ಕುಳಿತು ಮೇಜಿನ ಮೇಲೆ ಕಾಗದ ಬರೆಯುತಲಿದ್ದ ೧೮ ವರುಷಗಳ ವಯಸ್ಸುಳ್ಳ ಮಿಸ್ ಸೋಲಾ ಯೆಂಬುಕೆಯು ಧರಿಸಿದ್ದ ಶಿರೋಭೂಷಣದಲ್ಲಿದ್ದ ಸೂಜಿಯಿಂದ ಆಕರ್ಷಿತನಾಗಿ ಆ ಸೂಜಿಗಳಲ್ಲಿ ಕೆಲವು ಕರಗಿ ಆಕೆಯ ಶರೀರದ ವಾಮಪಾರ್ಶ್ವವಾಗ ಒಳಗೆ ಪ್ರವೇಶಿಸಿ, ಅವಳ ಬಲಕಾಲಿನಲ್ಲಿ ವ್ಯಾಪಿಸಿದ್ದಲ್ಲದೆ ಆಕೆ ಧರಿಸಿದ್ದ ವಸ್ತ್ರ ಬೂಟ್ಸ್ ಮೊದಲಾದವನ್ನೆಲ್ಲ ದಗ್ಧಮಾಡಿ ಅವಳಿಗೆ ಪ್ರಾಣಾಪಾಯವನ್ನುಂಟುಮಾಡಿ, ಅನಂತರ ಭೂಮಿಯಲ್ಲಿ ಮೂರು ಕಡೆಗಳೊಳು ಕೊರೆದುಕೊಂಡು ಒಳಗೆ ಪ್ರವೇಶಿಸಿತು. ಅದರ ಬಾಜೂ ಕೋಣೆಯಲ್ಲಿ ಕುಳಿತಿದ್ದ ಮೃತಪಟ್ಟ ಸೋಲಾ ಎಂಬವಳ ಸಹೋದರಿಯು ಹೊಗೆಯನ್ನು ಮತ್ತು ಚಿಕಿಯಿಂದ ಒಟ್ಟಿ ಸುಡಲ್ಪಟ್ಟ ವಾಸನೆಯನ್ನು ಕಂಡು ತನ್ನ ತಂಗಿಯು ಕುಳಿತಿದ್ದ ಕೋಣೆಯಂ ಪ್ರವೇಶಿಸಿ ನೋಡಲಾಗಿ ಆಕೆ ಅಗ್ನಿಜ್ವಾಲೆಯಿಂದಾವೃತಳಾಗಿ ಉರಿಯುತಲಿದ್ದುದಂ ಕಂಡು ಆಕೆಯು ಧರಿಸಿದ್ದ ವಸ್ತ್ರಗಳನ್ನು ತೆಗೆಯಲು ಪ್ರಯತ್ನಪಟ್ಟಳಂತೆ. ಆ ಕೋಣೆಯೆಲ್ಲವು ಮಿಂಚಿನ ಕಾಂತಿಯಿಂದ ಪ್ರಜ್ವಲಿಸುತಲಿತ್ತಲ್ಲದೆ ಒಳಗೆ ಹೋದ ಒಂದು ನಾಯಿಯ ಮುಂದಿನ ಕಾಲ್ಗಳೆರಡೂ ಸುಟ್ಟುಹೋದವು. ಅದೇ ಸಮಯದೊಳು ಅದರಸಮೀಪದಲ್ಲಿರುವ ಮತ್ತೊಂದ ಗ್ರಾಮದಲ್ಲಿ ಇಬ್ಬರು ಹುಡುಗರೂ ಏಳು ಎತ್ತುಗಳೂ ಮೃತಪಟ್ಟವಲ್ಲದೆ ಮನೆಗಳ ಅಸ್ತಿಭಾರವು ಕದಲಿ, ತಂತಿಗಳು ತುಂಡು ತುಂಡಾಗಿ ಕಿತ್ತುಹೋದವಂತೆ ತಿಳಿಯಬರುತಿದೆ.

ಈ ತಿಂಗಳ ೧೩ನೇ ತಾರೀಖಿಗೆ ಪೂರ್ತಿಯಾದ ವಾರದೊಳು ಮದರಾಸ್ ಮ್ಯುನಿಸಿಪಲ್ ಸರಹದ್ದಿನೊಳಗೆ ವಾಂತಿ ಭೇದಿ ರೋಗದ ಮೂಲಕ ಎಪ್ಪತ್ತೊಂದು ಮಂದಿ ಮೃತಪಟ್ಟಂತೆ ಅಲ್ಲಿನ ಜನನ ಮರಣ ಇಲಾಖಾ ಲೆಕ್ಕದಿಂದ ವ್ಯಕ್ತವಾಗುತಿದೆ.

ಡುಕಣಕೋಟೆ ಸಬ್ ಮ್ಯಾಜಿಸ್ಟ್ರೇಟರು ಕೋರ್ಟ ಮಾಡುತ್ತಿರುವಲ್ಲಿ ಹಿಂದಿನಿಂದ ಯಾವನೊ ಒಬ್ಬ ದುರಾತ್ಮನು ಅವರನ್ನು ಬಾಕೂಬ್ ನಿಂದ ಹೊಡೆದು ಕೊಂದುಹಾಕಿದ ಮೊಕದ್ದಮೆಯು ಸೆಷನ್ಸ್ ಕಮಿಟಾಗಿರುವಂತೆ ಹಿಂದೆ ತಿಳಿಸಿದ್ದೆವಷ್ಟೆ. ಅಲ್ಲಿ ನಡೆದ ವಿಚಾರಣೆಯಲ್ಲಿ ಅಪರಾಧಿಯ ಮೇಲೆ ತಪ್ಪಿತ ರುಜುವಾಗಲಿಲ್ಲವೆಂದು ಅಸ್ಸೆಸರ್‌ಗಳು ಅಭಿಪ್ರಾಯ ಕೊಟ್ಟಂತೆಯೂ ಜಡ್ಜಿಯವರು ಇನ್ನು ಫೈಸಲ್ ಹೇಳಲಿಲ್ಲವೆಂತಲೂ ತಿಳಿಯಬರುತದೆ.

ಸಿಹ್ಮಳ ದ್ವೀಪಕ್ಕೆ ಸೇರಿದ ಗ್ಯಾಲಿ ಎಂಬ ಪ್ರದೇಶದಲ್ಲಿರುವವನೊಬ್ಬನಿಗೆ ಈಚೆಗೆ ಕೋಳೀ ಮೊಟ್ಟೆಯ ಆಕೃತಿಯುಳ್ಳ ವೈಡೂರ್ಯದ ಹರಳು ಒಂದು ದೊರೆಯಿತೆಂತಲೂ, ಮೂಢನು ಮತ್ತು ನಿರ್ಭಾಗ್ಯನಾದ ಸದರೀ ಪುರುಷನು ಅದರ ಗುಣವನ್ನರಿಯದೆ ಒಬ್ಬ ವಾಜರವನಿಗೆ ಅತ್ಯಲ್ಪ ಕ್ರಯಕ್ಕೆ ಕೊಟ್ಟನೆಂತಲೂ, ಅವನು ಅದಂ ಸಾಣೆ ಹಿಡಿಸಿ ಲಂಡನ್ ಪಟ್ಟಣಕ್ಕೆ ವಿಕರಿಗಾಗಿ ಕಳುಹಿಸಲು ಅಲ್ಲಿ ಅದಕ್ಕೆ ೮೦ ಪೌಂಗಳ ಕಿಮ್ಮತ್ ಅಂದಾಜ್ ಕಟ್ಟಿದಾರೆಂತಲೂ ಕೇಳುತ್ತೇವೆ.

ಈಚೆಗೆ ಗುಂಟಕಲ್ ಪ್ರಾಂತದಲ್ಲಿ ಒಬ್ಬನು ಸತ್ತಕೂಡಲೆ ಮತ್ತೊಬ್ಬನಂತೆ ಮೂವರು ಮಿರಾಯಿ ಅಂಗಡಿಯವರು ಮೃತಪಡಲು ಅವರ ಮರಣಕ್ಕೆ ಪ್ಲೇಗ್‌ರೋಗವೇ ಕಾರಣವಾಗಿರಬೇಕೆಂಬ ಸಂಶಯವುಂಟಾಗಿ ಅಲ್ಲಿನವರು ಬಹಳ ಹೆದರಿಕೊಂಡಿದ್ದರು. ಈಸಂಗತಿ ಅಳ್ಳಿಗೆ ಸಮೀಪದಲ್ಲಿರುವ ಡಾಕ್ಟರ್‌ಗಳಿಗೂ ಮ್ಯಾಜಿಸ್ಟ್ರೇಟರಿಗೂ ತಿಳಿದು ಅವರಿಬ್ಬರು ಸದರೀ ಸ್ಥಳಕ್ಕೆ ಬಂದು ಚೆನ್ನಾಗಿ ಪರಿಶೋಧಿಸಿ ಪ್ಲೇಗ್‌ರೋಗವಲ್ಲವೆಂದು ತಿಳಿಸಿದ ಮೇಲೆ ಅದುವರೆಗೆ ಉಂಟಾಗಿದ್ದ ಗಾಬರಿಯು ಶಮನವಾಯಿತು.

ಕೆಲವು ದಿನಗಳ ಹಿಂದೆ ಕಾಂಚೀಪುರದಲ್ಲಿ ಯಾವನೊ ಒಬ್ಬ ಮುದಿಯಂಗಸಿಗೆ ಪ್ಲೇಗ್‌ರೋಗ ತಗಲಿ ಮೃತಪಟ್ಟದ್ದಾಗಿ ಮದರಾಸಿಗೆ ವರ್ತಮಾನ ಹೋಗಿ ಅಲ್ಲಿಂದ ಡಾಕ್ಟರ್‌ಗಳು ಓಡಿಬಂದು ಮೃತಪಟ್ಟವಳ ಮುರ್ದೆಯನ್ನು ಅಜಮಾಯಿಷಿ ಮಾಡಿ ನೋಡಿದ್ದರಲ್ಲಿ ಅದು ಪ್ಲೇಗ್ ರೋಗವಲ್ಲವೆಂದು ಯೇರ್ಪಟ್ಟು ಆಬಗ್ಗೆ ಉಂಟಾಗಿದ್ದ ಭೀತಿಯು ಅಡಗಿತು. ಮನುಷ್ಯನ ಮರಣಕ್ಕೆ ಅನೇಕ ಕಾರಣಗಳುಂಟಾಗುತವೆ. ಅವಿಚಾರವಾಗಿ ಯೆಲ್ಲವನ್ನು ಪ್ಲೇಗ್ ರೋಗ ಮೂಲಕವಾದವೆಂದು ನಂಬಿ ಗಾಬರಿ ಪಡುವುದು ವಿವೇಕಿಗಳ ಕಾರ್ಯವಲ್ಲವು

ಮುಂಬೈಯಲ್ಲಿ ಬಹಳ ಪ್ರಾಶಸ್ತ್ಯವಂ ಪಡೆದಿದ್ದ ಡಾಕ್ಟರ್ ಭಾಹುದೂರ್ಜಿ ಎಂಬವರು ವಿಷಮಶೀತಜ್ವರಪೀಡಿತರಾಗಿ ನಾಲ್ಕಾರು ದಿನಗಳಿಂದಲು ಕಷ್ಟಪಡುತಲಿದ್ದು ಅದರ ನಿವೃತ್ತಿಯ ಬಗ್ಗೆ ಮಾಡಲ್ಪಟ್ಟ ಬಹುವಿಧ ಚಿಕಿತ್ಸೆಗಳೆಲ್ಲವು ನಿಷ್ಪ್ರಯೋಜಕಗಳಾಗಿ ಈತಿಂಗಳ ೧೫ನೆಯ ತಾರೀಖಿನ ಸಾಯಂಕಾಲ ೫ ಘಂಟೆಗೆ ಕಾಲಗತಿಯನ್ನೈದಿದರೆಂದು ತಿಳಿದು ಬಹಳ ವಿಷಾದಿಸುತ್ತೇವೆ. ಇವರ ಮರಣಕ್ಕಾಗಿ ಮುಂಬೈಯಲ್ಲಿನ ಹಿಂದೂಗಳು, ಮಹಮ್ಮದಿಯರು, ಪಾರ್ಸಿಗಳು ಮೊದಲಾದವರು ಬಹಳ ವ್ಯಸನಪಡುವಂತೆ ತಿಳಿಯಲಾದೆವು

ಇಂಗ್ಲೆಂಡದೇಶದ ಮಕ್ಕಳಸಂರಕ್ಷಣೆಯ ಬಗ್ಗೆ ಆಚೆ ಶುಕ್ರವಾರದ ದಿನ ಕಲ್ಕತ್ತೆಯ ಕ್ರಿಶ್ಚಿಯನ್ ಅಸೋಸಿಯೇಷನ್ ರೂಂಸ್ ಎಂಬ ಕಟ್ಟಡದಲ್ಲಿ ಒಂದು ಸಮಾಜಸೇರಿ ಅದರಲ್ಲಿ ಅಲ್ಲಿನಹೈಕೋರ್ಟ ಜಡ್ಜಿಯವರಾದ ಮಿ॥ ಪ್ರಾಟ್ಎಂಬವರು ಅಗ್ರಾಸನವಹಿಸಿದ್ದರು. ರೆವರೆಂಡ್ ಮಿ॥ ಹಾರ್ಡಿಎಂಬವರು ಇಂಗ್ಲೆಂಡದೊಳು ಅನಾಥರಾದ ಬಾಲಕರ ಸಂರಕ್ಷಣೆಯವಿಷಯದಲ್ಲಿ ಜನರಿಗೆ ಕರುಣೆಯಿಲ್ಲವಾಗಿ ಅವರರಕ್ಷಣಾರ್ಥ ಪ್ರಸಕ್ತ ಸಂಘವೇರ್ಪಡಿಸಲ್ಪಟ್ಟಿತೆಂದು ತಿಳಿಸಿದರು. ಈ ಪ್ರಾಡ್ ಸಾಹೇಬರವರ ಪ್ರಕೃತ ಪ್ರಯತ್ನವು ಅನಾಥರಾದ ಬಾಲಕರ ಸಂರಕ್ಷಣಾರ್ಥವೊ ಅಥವಾ ಅವರನ್ನೆಲ್ಲ ಮತಭ್ರಷ್ಟರನ್ನಾಗಿ ಮಾಡುವದಕ್ಕೊ ಮುಂದೆ ತಿಳಿಯಬರಬೇಕು.

ಸಿಹ್ಮಳದ್ವೀಪ ನಿವಾಸಿಗಳು ಬಾಳೆ ಹಣ್ಣುಗಳನ್ನು ಚೆನ್ನಾಗಿ ಒಣಗಿಸಿ ಅದಂ ಹಿಟ್ಟುಮಾಡಿ ಕೋಟಸಿ ಡಬ್ಬಿಗಳಲ್ಲಿ ಹಾಕಿ ಸೀಲ್‌ಮಾಡಿ ಇಂಗ್ಲಂಡಿಗೆ ವಿಶೇಷವಾಗಿ ರವಾನಿಸುತಲಿದಾರೆಂತಲೂ, ಸದರೀ ಹಿಟ್ಟು ಗೋಧುಮೆ ವಗೈರೆ ಧಾನ್ಯಗಳ ಹಿಟ್ಟುಗಳಿಗಿಂತಲೂ ಆರೋಗ್ಯಪ್ರದವೆಂತಲೂ ಬಲವರ್ಧಕವೆಂತಲೂ ತಿಳಿಯಬರುತಿದೆ, ನಾವಿಲ್ಲಿ ಪ್ರತಿನಿತ್ಯ ಉಪಯೋಗಿಸಿಕೊಳ್ಳುವ ಪದಾರ್ಥಗಳ ಸ್ವಭಾವ ಗುಣಗಳನ್ನು ತಿಳಿದುಕೊಳ್ಳುವದಕ್ಕೆ ಪ್ರಯತ್ನ ಪಡದಿರುವದರಿಂದಲೇ ಈ ದೇಶದ ಪದಾರ್ಥಗಳು ಅನ್ಯದೇಶಗಳಿಗೆ ವಿಶೇಷವಾಗಿ ಸಾಗಲಿಕ್ಕೂ ಅವುಗಳಿಗೆ ಪ್ರತಿಯಾಗಿ ನಿರರ್ಥಕ ಪದಾರ್ಥಗಳನ್ನು ಪಡೆಯಲಿಕ್ಕೂ ಅವಕಾಶವಾಯಿತು.

ಜನಗಳಿಗೆ ದುರಾಲೋಚನೆ ಮತ್ತು ದುಷ್ಪ್ರವೃತ್ತಿಯು ವೃದ್ಧಿಯಾಗುತ ಬರುವಂತೆಲ್ಲ ತನ್ನಿವಾರಕೋಪಾಯಗಳು ವಿಧವಿಧವಾಗಿ ಕಲ್ಪಿಸಲ್ಪಡುತಿವೆ. ಕೆಲವು ಬೀಗಗಳಿಗೆ ಮಾರುಬೀಗ ಹಾಕಿ ಅನ್ಯರ್‍ಯಾರಾದರು ಮೋಸದಿಂದ ತೆಗೆದರೆ ಅದು ಕೂಡಲೆ ಹೊರಪಡುವದಕ್ಕಾಗಿ ಘಂಟೆಯೊಂದು ಇಟ್ಟಿರುವಂತ ಬೀಗಗಳನೇಕವ ನಾವು ನೋಡಿದೇವೆ. ಈಚೆಗೆ ಹೊಸದಾಗಿ ತಯಾರಾಗ್ಮಾಡಲ್ಪಡತಕ್ಕ ಬೀಗಗಳಲ್ಲಿ ಕಳ್ಳಬೀಗಗಳು ಹಾಕಿ ತೆಗೆಯುವದನ್ನಾಗಲಿ ಕಳ್ಳರು ಪ್ರವೇಶಿಸಿ ಬೀಗಗಳಂ ಒಡೆದು ಹಾಕುವದನ್ನಾಗಲಿ ಮನೆಯ ಯಜಮಾನನ, ಕೂಡಲೆ ಕಂಡುಕೊಳ್ಳುವಂತೆ ಬೀಗದಲ್ಲಿ ತುಪಾಕಿ ಮದ್ದು ಇಡಲಿಕ್ಕೆ ತಕ್ಕ ಏರ್ಪಾಡು ಮಾಡಿರುವದಾಗಿಯೂ ಅದನ್ನರಿಯದವರು ಯಾರಾದರು ತೆಗೆದರೆ ಕೂಡಲೆತೋಫಿನ ಶಬ್ದವಾಗಿ ಎಚ್ಚರಿಕೆಯುಂಟಾಗುವದೆಂತಲೂ ತಿಳಿಯಬರುತಿದೆ.

ನೇಟಿವ್‌ಗಳನ್ನು ಆಕಸ್ಮಾತ್ತಾಗಿ ಗೋಲಿಯಿಂದ ಹೊಡೆದು ಕೊಂದುಹಾಕುವ ಯೂರೋಪಿಯನ್ನರು ನಿರಪರಾಧಿಗಳಾಗಿ ಖುಲಾಸೆ ಮಾಡಲ್ಪಡುವದಕ್ಕೆ ಅವರನ್ನು ದರ್ಯಾಪ್ತಿಮಾಡುವ ಮ್ಯಾಜಿಸ್ಟ್ರೇಟರು ನೂತನವಾದ ಒಂದು ಕಾರಣವಂ ಕಂಡುಹಿಡಿದಿರುತ್ತಾರೆ. ಈಚೆಗೆ ಸಿಂಧು ಕ್ಯಾಂಟೊನ್ಮೆಂಟಿನಲ್ಲಿ ಒಬ್ಬ ಯೂರೋಪಿಯನು ಒಬ್ಬ ಗಾಡಿಯವನನ್ನು ಗೋಲಿಯಿಂದ ಹೊಡೆದು ಅದು ಅವನಕಾಲಿಗೆ ತಗಲಿ ಕಾಲನ್ನೇ ಕತ್ತರಿಸಬೇಕಾಗಿಬಂದುದರಿಂದ ಆರೀತಿ ಮಾಡದ ಕೂಡಲೆ ಅವನು ಸತ್ತುಹೋದನು. ಈ ಮೊಕದ್ದಮೆಯು ಅಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟನಲ್ಲಿ ವಿಚಾರಣೆಗೆ ಬಂದೂಖ್ ನಿರ್ಧಾರಣವು ತಪ್ಪಾಗಿರುವದರಿಂದ ತನ್ಮೂಲಕ ದೈವಿಕವಾದ ಇಂತ ಪ್ರಾಣಾಪಾಯಕ್ಕೆ ಅವಕಾಶವುಂಟಾಯಿತೆಂದು ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟು ಅಪರಾಧಿಯನ್ನು ಖುಲಾಸೆ ಮಾಡಿದರೆಂದು ಮುಂಬೈ ಪತ್ರಿಕೆಯೊಂದು ತಿಳಿಸುತದೆ.

ಚಂದಾದಾರರಿಗೆ.

ಈಗ್ಗೆ ಕೆಲವುದಿನಗಳವೊದಲು ನಮ್ಮಚಂದಾದಾರರ ಉದಾಸೀನತೆಯಿಂದ ನಮಗುಂಟುಮಾಡಲ್ಪಟ್ಟಿರುವ ಅರ್ಥವಿಷಯಕವಾದ ಕಷ್ಟವನ್ನು ನಾವು ನಮ್ಮ ಚಂದಾದಾರರಿಗೆಲ್ಲ ಬರೆದು ತಿಳಿಸಿ ಈ ಕಾಲದಲ್ಲಿ ಯೆಲ್ಲರು ಮನಸ್ಕರಿಸಿ ಅವರವರ ಚಂದಾಬಾಕಿಗಳಂ ಕಳುಹಿಸಿ ಸಹಾಯ ಮಾಡಬೇಕೆಂದು ಯಥೋಚಿತವಾಗಿ ಪ್ರಾರ್ಥಿಸಿದಾಗ್ಯೂ ಕೇವಲ ಪರಿಮಿತವಾಗಿ ಕೆಲವರು ವಿನಾ ಮಿಕ್ಕವರ್‍ಯಾರೂ ನಮ್ಮ ಪ್ರಾರ್ಥನೆಯಂ ಲಾಲಿಸಿ ಸಹಾಯ ಮಾಡದಿರುವದನ್ನಾಲೋಚಿಸಲಾಗಿ ನಮಗುಂಟಾದ ಆಶ್ಚರ್ಯಕ್ಕೆ ಪಾರವೇ ಇಲ್ಲದಿರುತದೆ. ಈಗಲು ನಮ್ಮ ಚಂದಾದಾರರೆಲ್ಲರು ಕೃಪಾಪೂರ್ವಕ ಕೂಡಲೆ ಚಂದಾ ಹಣವನ್ನು ಕಳುಹಿಸಿ ಸಹಾಯ ಮಾಡುವದರ ಮೂಲಕ ನಮಗೆ ಸ್ವಲ್ಪ ಪ್ರೋತ್ಸಾಹವನ್ನುಂಟು ಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಆರೀತಿ ಮಾಡದೆ ಇದುವರೆಗೆ ತೋರಿಸುತ ಬಂದ ಉದಾಸೀನತೆಯನ್ನೇ ಮುಂದೆಯೂ ತೋರಿಸುವ ಪಕ್ಷಕ್ಕೆ ಮುಂದಿನ ತಿಂಗಳಲ್ಲಿ ಈಪತ್ರಿಕೆಯಂ ನಿಲ್ಲಿಸಬೇಕಾದ ನಿರ್ಬಂಧಕ್ಕೆ ನಾವು ಒಳಗಾಗಬೇಕಾಗಿರುವದೆಂದು ತಿಳಿಸಲು ಬಹಳ ವಿಷಾದಿಸುತ್ತೇವೆ.

LOCAL AND PROVINCIAL NEWS

ಒಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

ಈತಿಂಗಳ ೧೪ನೆಯ ತಾರೀಖ್‌ನಲ್ಲಿ ಹುಬ್ಬಳ್ಳಿಯೊಳು ೮೦ ಮಂದಿಗೆ ಪ್ಲೇಗ್‌ರೋಗ ತಗಲಿ ಅವರಲ್ಲಿ ೭೧ ಮಂದಿ ಮೃತಪಟ್ಟರು. ೧೫ನೆಯ ತಾರೀಖ್‌ನಲ್ಲಿ ೭೧ ಮಂದಿಗೆ ತಗಲಿ ೭೦ ಮಂದಿ ಮೃತಪಟ್ಟರೆಂದು ತಂತಿ ವರ್ತಮಾನ ಬಂದಿರುತಿದೆ.

ಇಲ್ಲಿನ ಸವಾರ್‌ಲೈನನ್ನು ಮುನಿಸಿಪಾಲಿಟಿಯವರು ಹೊಸದಾಗಿ ಕಟ್ಟಿಸಿದ ಬ್ಯಾರಕ್ಸಿಗೆ ಕಳುಹಿಸಿಬಿಟ್ಟು ಅದನ್ನು ರಿಪೇರಿ ಮಾಡಿಸಿ ಅದರಲ್ಲಿ ರಿಜರವ್ ಪೋಲೀಸ್ ಸೈನ್ಯವನ್ನು ಇಡಿಸಬೇಕೆಂದು ಗವರ್ನಮೆಂಟನವರು ಆಲೋಚಿಸಿರುವದಾಗಿ ಕೇಳುತ್ತೇವೆ.

ಕಳೆದ ಶನಿ ಆದಿತ್ಯವಾರಗಳು ಗೌರಿ ಮತ್ತು ವಿನಾಯಕರ ಹಬ್ಬವಾದುದರಿಂದ ಆಬಗ್ಗೆ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿತ್ತು. ಗಣೇಶನ ಹಬ್ಬವು ಈ ಸಲ ಆದಿತ್ಯವಾರದಲ್ಲಿ ಸೇರಿ ಬಂದುದಿನ ರಜಾಹೋಗಿ ಬಿಟ್ಟಬಗ್ಗೆ ಸರ್ಕಾರ್ ನೌಕರರಿಗೆ ಸೇರಿದವರೆಲ್ಲರು ಬಹಳ ಚಿಂತಿಸುತಲಿದ್ದರು.

ಕೋಲಾರಕ್ಕೆ ಸೇರಿದ ಉರಿಗದ ಚಿನ್ನದ ಗಣಿಯಲ್ಲಿ ಕೆಲಸ ಮಾಡುವ ಮಾಪಿಳ್ಳೆಯ ಗುಂಪಿನವರಿಗೆ ವಾಂತಿ ಭೇದಿ ಉದ್ಭವಿಸಿ ತಗಲಿ ೭-೮ ಜನರು ಸತ್ತುಹೋದರಂತಲೂ ಡಾಕ್ಟರ್ ಚೇಸರ್‌ಸಾಹೆಬರೂ ಚಿಟ್ಟಿ ಕಮೀಷನರರೂ ಆಚೆಯ ತ್ಯ ಹೋಗಿ ತಕ್ಕ ಏರ್ಪಾಡುಗಳನ್ನೆಲ್ಲಾ ಮಾಡಿಬಂದರೆಂತಲೂ ತಿಳಿದು ಬಂದಿದೆ.

ಅನೇಕ ಸಂವತ್ಸರಗಳ ಕಾಲದ ಮೊದಲು ಇಲ್ಲಿನ ಗವರ್ನಮೆಂಟ್ ಪ್ರೆಸ್ ಆಫೀಸಿನಲ್ಲಿ ಹೆಡ್ ಕ್ಲಾರ್ಕ್ ಕೆಲಸದಲ್ಲಿದ್ದು ಈಗ್ಗೆ ಒಂದು ವರ್ಷದಿಂದೆ ಸ್ಟೇಷನರಿ ಡಿಪೋ ಮ್ಯಾನೇಜರಾಗಿ ಬದಲಾಯಿಸಲ್ಪಟ್ಟಿರುವ ಮ॥ ಜೀ. ಕೃಷ್ಣರಾಯರವರು ಸುಮಾರು ದಿನಗಳಕಾಲ ಜ್ವರ ರೋಗಪೀಡಿತರಾಗಿದ್ದು ಕಳೆದವಾರದಲ್ಲಿ ಮೃತಪಟ್ಟರೆಂದು ತಿಳಿದು ಬಹಳ ವಿಷಾದಿಸುತ್ತೇವೆ.

ಇಲ್ಲಿನ ಮ್ಯೂನಿಸಿಪಲ್ ಕೆಲಸಕ್ಕೆ ಆವಶ್ಯಕವಾಗಿ ಕಂಡುಬರುವ ಜಮೀನುಗಳನ್ನು ಪಡೆದು ಅದಕ್ಕೆ ಕಂಪೆನ್ಸೇಷನ್ ದರಾವ್ ಮಾಡುವ ಕಾರ್ಯಕ್ಕಾಗಿ ಬೆಂಗಳೂರು ತಾಲ್ಲೂಕು ಶಿರಸ್ತೇದಾರರು ಮಹಾರಾಜಶ್ರೀ ಸುಬ್ಬರಾಯರು ಮಾಹೆಯಾನಾ ೧೦೦ ರೂಪಾಯಿಗಳ ತಲಬಿನ ಮೇಲೆ ಡೆಪ್ಯುಟಿ ಅಮಲ್ದಾರರಾಗಿ ನೇಮಕಮಾಡಲ್ಪಟ್ಟಂತೆ ಕೇಳುತ್ತೇವೆ.

ಮದರಾಸು ಪ್ರೆಸಿಡೆನ್ಸಿಯಲ್ಲಿ ಸಬ್ ರಿಜಿಸ್ಟ್ರಾರ್‌ಗಳಿಗೆ ಅವರವರ ತಲಬಲ್ಲದೆ, ರಿಜಿಸ್ಟ್ರೇಷನ್ ಫೀಬಗ್ಗೆ ವಸೂಲಾಗುವ ರುಸುಂನಲ್ಲಿ ಸೇಕಡ ಇಷ್ಟೆಂದು ಕಮಿಷನ್ ಸಹ ಸಲ್ಲುತಲಿರುವುದು ಪ್ರಸಿದ್ಧವಾಗಿ ಯೆಲ್ಲರಿಗೂ ತಿಳಿದ ವಿಷಯವಾಗಿರುತದೆಯಷ್ಟೆ. ಈ ದೇಶದಲ್ಲೂ ಸದರೀ ಕ್ರಮವಂ ಆಚರಣೆಯೊಳು ತರಬೇಕೆಂದು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲವರು ಗವರ್ನಮೆಂಟಿಗೆ ಸಿಫಾರಸ್ ಮಾಡಿ ಅದರಂತೆ ಮಂಜೂರು ಮಾಡಲ್ಪಟ್ಟಿತೆಂದಾಗಿ ಬಿಳಿದೇಶದ ಡೈಲಿ ಪೋಸ್ಟ್ ಎಂಬ ಇಂಗ್ಲೀಷ್ ಪತ್ರಿಕೆ ಪ್ರಕಟಿಸಿರುತದೆ. ಇದು ಯೆಷ್ಟರಮಟ್ಟಿಗೆ ನಂಬಿಕೆಗೆ ಅರ್ಹವಾದುದೋ ನಾವರಿಯೆವು, ಪರಂತು ಇದರ ನಿಜಸ್ಥಿತಿಯನ್ನರಿತು ಮುಂದಿನವಾರದಲ್ಲಿ ಪ್ರಕಟಿಸುವೆವು

ಈಗ್ಗೆ ಒಂದು ವಾರದ ಮೊದಲು ಪ್ರಾಯಶಃ ಮೋಡವಾಡುವುದು ಸಹ ನಿಂತುಹೋಗಿ ಚುರುಕಾಗಿ ಬಿಸಿಲು ಕಾಯುತಲಿದೆ. ಬಿತ್ತಿದ ಕಪಿ ನಾಲ್ಕಂಗುಲ ಬೆಳೆದುಬಂದ ರಾಗಿಯುಬೆಳೆ ಚೆನ್ನಾಗಿ ಒಣಗುತಲಿದೆ. ಕಾರ್ತಿಕದ ತರೀಸಾಗುವಳಿಗೆ ವ ಬೆಳೆಯನ್ನು ಅನೇಕರು ನಿರೀಕ್ಷಿಸುತಲಿದ್ದರು. ಅದರಲ್ಲಿಯೂ ಯೆರಡು ವಾದಗಳು ಕಳೆದು ಮೂರನೆಯ ವಾದ ಪ್ರಾರಂಭವಾಯಿತು. ಸುತರಾಂ ವರ್ಷ ಸೂಚನೆಗಳು ಕಂಡುಬರಲಿಲ್ಲವು. ಇದರಿಂದ ಆಹಾರ ಪದಾರ್ಥಗಳ ಧಾರಣೆಗಳು ದಿನೇ ದಿನೆ ಹೆಚ್ಚುತ ಬರುತಿವೆ. ಮುಂದಿನ ಕಾಲಸ್ಥಿತಿಯು ಅನುಕೂಲವಾಗಿರಲಾರದೆಂಬುವದಕ್ಕೆ ಈಗಲೇ ಸೂಚನೆಗಳು ಕಂಡುಬರುತಿವೆ.

ಈದಿನ ನಾವು ವಿಚಾರಿಸಿದ್ದರಲ್ಲಿ ಇದುವರೆಗುಂಟಾಗಿದ್ದ ಪ್ಲೇಗ್‌ರೋಗ ಸಂಬಂಧವಾದ ಭೀತಿಯೂ ತತ್ಪ್ರಯುಕ್ತಗಳಾದ ಗಲಭೆಯೂ ಸುತರಾಂ ನಿರವಕಾಶವಾದವೆಂದು ಖಂಡಿತವಾಗಿ ತಿಳಿಯಬರುತದೆ. ಇವೆಲ್ಲವು ಅಧಿಕಾರಿಗಳು ಅವಲಂಬಿಸಿದ ಆತುರಪ್ರಯತ್ನಗಳಿಂದಲೂ ಮೂಢರಾದ ಜನರ ಮುನ್ನರ ಸ್ವಭಾವದಿಂದಲೂ ಸ್ವಯಂಕೃತಾಪರಾಧ ಫಲರೂಪವಾಗಿ ಪ್ರಾಪ್ತವಾದವಲ್ಲದೆ ತಾತ್ವಿಕವಾದ ವಸ್ತುಸ್ಥಿತಿಯನ್ನನುಸರಿಸಿದ್ದಲ್ಲವು, ಪರಂತು ಈಗ್ಗೆ ಮೂರು ಒಂದು ವಾರಕಾಲದ ಮೊದಲು ಸ್ಥಳವರಸ್ಥಳಗಳಲ್ಲುಂಟಾಗಿರುವ ಪ್ಲೇಗ್ ಸಂಬಂಧವಾದ ಗಾಬರಿಯ ಮೂಲಕ ಸರ್ಕಾರದವರೂ ಸಾಮಾನ್ಯವಾಗಿ ಪ್ರಜೆಗಳೂ ಪ್ರಸಕ್ತರೋಗ ನಿರೋಧಕಗಳಾದ ಕಾರ್ಯಗಳಂ ಪೂರ್ವಾಪೇಕ್ಷೆಯಾ ವಿಶೇಷ ಶ್ರದ್ಧೆಯೊಡನೆ ಮಾಡುವದಕ್ಕಾರಂಭಿಸಿರುವ ಬಗ್ಗೆ ಸಂತೋಷಿಸಬೇಕಾಗಿದೆ.

ಮುಜರಾಯ್ ಇಲಾಖಾ ಸೆಕ್ರೆಟರಿ ಮತ್ತು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲವರಾದ ರಾಯಬಹದೂರ್ ಮ॥ ಏ. ಶ್ರೀನಿವಾಸಾ ಚಾರ್ಯರವರು ಮುಂದಿನ ಅಕ್ಟೋಬರ್ ತಿಂಗಳ ೧ನೇ ತಾರೀಖ್‌ನಲ್ಲಿ ತಮ್ಮ ಅಧಿಕಾರವಂ ಬಿಟ್ಟು ನಿವೃತ್ತಿ ಸುಖವಂ ಪಡೆಯಲುದ್ದೇಶಿಸಿರುವಂತೆಯೂ, ಮುಜರಾಯ್ ಸೆಕ್ರೆಟರಿ ಅಧಿಕಾರಕ್ಕೆ ಸಿಟಿ ಮ್ಯಾಜಿಸ್ಟ್ರೇಟರಾದ ಮ॥ ವೈದ್ಯನಾಥ ಅಯ್ಯರವರು ನೇಮಕರಾಗಲ್ಪಡುವರು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲರ ಅಧಿಕಾರವು ಮಾಹೆಯಾನಾ ೩೦೦ ರೂಪಾಯಿಗಳ ಅಲೋವನ್ಸಿನ ಮೇಲೆ ಕಂಟ್ರೋಲರ್ ಮ॥ ಸುಬ್ಬರಾಯರವರಿಗೆ ಕೊಡಲ್ಪಡುವದೆಂತಲೂ, ಈಗ್ಗೆ ಒಂದು ವಾರದ ಮೊದಲು ಈ ಪ್ರಾಂತದಲ್ಲೊಂದು ಪ್ರವಾದ ಹಟ್ಟಿರುತದೆ. ಈರೀತಿಯಾದ ಕಲ್ಪಿತ ಗಾಳಿಗಳು ಈಪ್ರಾಂತದಲ್ಲಿ ಪ್ರಕಟಿಸಲ್ಪಡುವುದು ಸಹಜವಾಗಿರುವದರಿಂದ ಈ ವರ್ತಮಾನವು ನಂಬಿಕೆಗೆ ಅರ್ಹವಾದುದೆಂದು ತಿಳಿಸಲು ಬೆದರುತ್ತೇವೆ

ಕುಪ್ಪೂರು ಗೌತಮ ಪೇಟೆಯಲ್ಲಿ ಮುಸಲ್ಮಾನ್ ಹೆಂಗಸೊಬ್ಬಳು ಕೆಲವು ಕಾಲದ ಮೊದಲು ಕ್ಷಯರೋಗ ಪೀಡಿತಳಾಗಿದ್ದು ಕಳೆದ ಶುಕ್ರವಾರದ ದಿನ ಮೃತಪಟ್ಟಳು. ಇವಳ ಮರಣಕ್ಕೆ ಪ್ಲೇಗ್ ರೋಗ ಕಾರಣವಾಗಿರುವುದೋ ಎಂಬ ಸಂಶಯದ ಮೇಲೆ ಪೋಲೀಸಿನವರು ಹೋಗಿ ವಿಚಾರಿಸಲು ಮೃತಪಟ್ಟವಳ ಬಂಧುಗಳು ಕಾಯಿಲೆಯಾಗಿದ್ದು ಸತ್ತುಹೋದಳೆಂದು ಹೇಳಿದರು. ಪೋಲೀಸಿನವರು ಅದರಿಂದ ತೃಪ್ತಿಪಡದೆ, ಶವವನ್ನು ಆಪತ್ಸಮಾಯಿಸುವ ಬಗ್ಗೆ ತಮ್ಮ ವಶಕ್ಕೆ ಕೊಡಬೇಕೆಂದು ಬಲಾತ್ಕರಿಸಿ ತಮ್ಮ ಮೇಲ್ಪಟ್ಟ ಅಧಿಕಾರಿಗಳಿಗೆ ರಿಪೋರ್ಟ್ ಮಾಡಲು, ಪ್ಲೇಗ್ ಕಮಿಷನರು, ಅವರ ಅಸಿಸ್ಟೆಂಟರು, ಡಾಕ್ಟರುಗಳು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೊದಲಾದವರು ಸದರೀ ಸ್ಥಳಕ್ಕೆ ಹೋಗಿ, ಮುರ್ದೆಯನ್ನು ತಮ್ಮ ವಶಕ್ಕೆ ಕೊಟ್ಟರೆ ತೀರಬೇಕೆಂದು ಚತುರ್ವಿಧ ಉಪಾಯಗಳನ್ನು ಪ್ರಯೋಗಿಸುವರು, ಪರಂತು ಮುಸಲ್ಮಾನ್ ಜನರು ಗುಂಪುಗೂಡಿ ಮುರ್ದೆಯನ್ನು ಆಪತ್ಸಮಾಯಿಸುಗೆ ಕೊಡುವದಿಲ್ಲವೆಂದು ಮುಷ್ಕರದಿಂದವೆ ಸ್ಮಶಾನಕ್ಕೆ ಸಾಗಿಸಿ ದಫನ್ ಮಾಡಿಬಿಟ್ಟರು. ಸದರೀ ಜನರಂತೆಯೇ ಸರ್ಕಾರದವರೂ ತಮ್ಮ ಕರ್ತವ್ಯದಲ್ಲಿ ಮುಷ್ಕರ ಹಿಡಿದು ವ್ಯರ್ಥವಾದ ಪ್ರಬಲ ಕಲಹಕ್ಕೆ ಕಾರಣವನ್ನುಂಟುಮಾಡಿ ಈಗ ಉಂಟಾಗಿರುವ ಗಾಬರಿಯನ್ನು ವೃದ್ಧಿಪಡಿಸದೆ ಬಿಟ್ಟದ್ದು ಉಚಿತವಾದ ಕಾರ್ಯವೆಂದು ಯೆಣಿಸುವೆವು, ಪರಂತು ಪ್ಲೇಗ್ ಅಧಿಕಾರಿಗಳು ಪ್ರಜೆಗಳ ಕ್ಷೇಮದಲ್ಲಿ ಆತುರವಾದ ಆಸಕ್ತಿಯೊಡನೆ ಮಾಡುತಲಿರುವ ನಾನಾವಿಧ ಕಾರ್ಯಗಳಲ್ಲಿ ಪ್ರಜೆಗಳು ಅವರಿಗೆ ಸಹಾಯಕರಾಗುವುದು ಅವಶ್ಯಕರ್ತವ್ಯವೆಂದು ತಿಳಿಸುವೆವು

SUMMARY OF NEWS.
ವೃತ್ತಾಂತ ಸಂಗ್ರಹವು.

ದಾಮೋದರ ಚಾಪೇಕರರ ತಮ್ಮನಾದ ಬಾಳಕೃಷ್ಣನು ಸಿಕ್ಕಿದ ಸುದ್ದಿಯನ್ನು ಧಾರವಾಡದಲ್ಲಿ ತಿಳಿಸಿದ್ದೇನೆ. ಆದರೆ ಸಿಕ್ಕಿದ ಮನುಷ್ಯನು ಬಾಲಕೃಷ್ಣನಲ್ಲವೆಂದು ಈಗ ಪ್ರಸಿದ್ಧವಾಗಿರುತದೆ.

ಪಂಡಿತ ರಮಾಬಾಯಿಯು ಹೋದ ತಿಂಗಳಲ್ಲಿ ಪ್ರೌಢೆಯಾದ ೩೦ ಜನ ವಿಧವೆಗಳಿಗೆ ಕ್ರಿಸ್ತೀ ಧರ್ಮದೀಕ್ಷೆಯನ್ನು ಕೊಟ್ಟಳು. ಮಹಾರಾಯಿಯ ಕಾರವಾಳದವಳೆಂಬ ಒಡಿಯಾಳಿಗೆ ಸಿಕ್ಕಿ ಗತಿಗೆಟ್ಟ ಬಾಲವಿಧವೆಯರು ಇದುವರೆಗೆ ೩೦೦ ಜನರು ಕ್ರಿಸ್ತೀ ಮತಕ್ಕೆ ಸೇರಿದರು.

ನಾಮತವಾಡಿಯು ದಿವಾಣನ ಮಗನ ಮೇಲೆ ಖೂನಿಯ ಆರೋಪ ಬಂದಿರುತ್ತದೆ. ಆ ದಿವಾಣನಿಗೆ ಬಂಗಾರದವರ ಹೊಟ್ಟೆಯ ಮಗನೊಬ್ಬ ನಿದ್ದನು. ಅವನಿಗೆ ದಿವಾಣನು ಬಹಳ ಪ್ರೀತಿ ಮಾಡುತ್ತಿದ್ದು, ಒಂದು ಹೊಲವನ್ನು ಆ ಹುಡುಗನಿಗೆ ಕೊಟ್ಟದ್ದರಿಂದ ತನ್ನ ಮಗನಿಗೆ ಹೊಟ್ಟೆಕಿಚ್ಚು ಹುಟ್ಟಿ ಬೇರೆ ನಾಲ್ಕು ಜನ ಹುಡುಗರ ಸಹಾಯದಿಂದ ಅವನು ಆ ಬಂಗಾರದವರ ಮಗನನ್ನು ಕೊಂದು ಹಾಕಿದನು. ಪೊಲಿಟಿಕಲ್ ಸೂಪರಿಂಟೆಂಡೆಂಟರ ಕೋರ್ಟಿನಲ್ಲಿ ಮೊಕದ್ದಮೆ ನಡೆದಿರುತ್ತದೆ.

ಹೋದ ಶನಿವಾರದಿಂದ ಧಾರವಾಡದಲ್ಲಿ ಪ್ಲೇಗ್‌ರೋಗವು ಪ್ರವೇಶವಾಯಿತು. ಶನಿವಾರ ಇಬ್ಬರೂ, ಆದಿತ್ಯವಾರ ಒಬ್ಬನು, ಸೋಮವಾರ ಇಬ್ಬರು ಮತ್ತು ಈ ಹೊತ್ತು ನಾಲ್ವರು ಅಂತೂ ೯ ಜನರಿಗೆ ಪ್ಲೇಗ್‌ಬಂತು.

ಆದಿತ್ಯವಾರ ಸತ್ತವನು ಹೊರ್ತು ಉಳಿದವರೆಲ್ಲರು ಟ್ರೈನ ಪೇಟೆಯ ಕಾಕರ ಓಣಿಯೊಳಗಿನವರು. ಮಾರಿಕಾ ಉಪದ್ರವವು ಮಾಳಿಗೆಕೇರಿಯೊಳಗೆ ತಲೆ ದೋರುವಂತೆ, ಪ್ಲೇಗು ಕಾಕರ ಜನರೊಳಗೆ ಮೊದಲು ಪ್ರಾರಂಭವಾಗುತ್ತಿದೆಂದು ಅನುಭವಕ್ಕೆ ಬಂದಿದೆ.

ಗದಗು ತಾಲೂಕ ಹಿರೇ ಹಂದಿಗೊಳದಲ್ಲಿ ಅವ್ಯಾಹತವಾಗಿ ಬಹುಂಕರವಾಗಿ ಪ್ಲೇಗ್ ತಲೆದೋರಿತು ಒಂದೇ ವಾರದೊಳಗೆ ಅಲ್ಲಿ ೧೮೪ ಜನರು ಸತ್ತರು. ಈ ಊರ ವಸತಿಯು ೯೦೦ ಇದ್ದು, ಇಷ್ಟು ಜನರು ಸತ್ತದ್ದರಿಂದ ಜನರೊಳಗೆ ಹಾಹಾಕಾರ ಉಂಟಾಗಿದೆ, ಆ ಊರು ತೆರವು ಮಾಡಲ್ಪಟ್ಟಿದ್ದು, ಸುತ್ತಲಿನ ಹಳ್ಳಿಯವರನ್ನು ಗದಿಗೆ ಬರಗೊಡದಂತೆ ಕಾವಲು ಇಡಲಾಗಿದೆ.

ಗುಜರಾತಿನಲ್ಲಿ ಬಹಳ ಮಳೆಯಾಗಿ ಕೆಲ ಕೆಲವು ಭಾಗಗಳಲ್ಲಿ ಬಹಳ ಲುಕ್ಸಾನಾಯಿತು ಅನೇಕ ಸ್ಥಳಗಳ ರೈಲ್ವೆಯು ತ್ರೈನು ಕೊಚ್ಚಿಕೊಂಡು ಹೋಗಿ ಕೆಲವೆಡೆಗಳಲ್ಲಿ ನದಿಗಳು ಸೇತುವೆಗಳಮೇಲೆಯೂ ಹರಿದು ಗಾಡಿಗಳು ಹೋಗಿ ಬರುವದಕ್ಕಾಗದಿತ್ತು ರೇಗ ಪ್ರವಾಹವು ಕಡಿಮೆಯಾಗಿ ಕೆಲಸಗಳು ನಡೆಯುತ್ತಿದೆಯೆಂದು ವರ್ತಮಾನ ತಿಳಿಯುತ್ತದೆ

ನಾಯಕನೂರಿನಿಂದ ಮಾಂತಲಿ ಚಿನ್ನದ ಗಣಿಯವರಿಗೆ ಒಂದು ಹೊಸ ರೈಲ್ ಲೈನ್ನನ್ನು ಮಾಡಬೇಕೆಂಬ ಆಪ್ರಸ್ತಾಪವು ಸ್ವಲ್ಪವು ಸರ್ಕಾರದವರಿಗೂ ಸರ್ ಶ್ರೀಧರ ಬ್ಲಾಡ್ ರವರಿಗೂ ಪಸಂದಾಗಿದೆ, ಇದನ್ನು ಮಾಡಬೇಕೆಂದಿರುವ ಬೋರ್ಡಿನವರ ಕಾರಣಿಗೆ ಯಾವನಿರವಾದ ಜಮೀನು ಬೇಕಾಗಿರುವುದಿಲ್ಲವಾದುದರಿಂದ ಬೇಗನೇ ಕೆಲಸಕ್ಕೆ ಆರಂಭವಾಗುವುದೆಂದು ತೋರುತ್ತದೆ.

ಡಾಕ್ಟರ್ ಪ್ರತಾಪಚಂದ್ರನಾಥ ಬಾನರ್ಜಿ ಯವರು ಕಲ್ಕತ್ತಾ ಜರ್ನಲ್ ಆಫ್ ಮೆಡಿಸಿನ್ ಎಂಬ ಮಾಸಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿರುವದೇನೆ ದರೇ — ವಿಪ್ರಲೇಸಿಂಗಳಲ್ಲಿ ನಾನು ಹವಾ ಬದಲಾಯಿಸುವುದಕ್ಕಾಗಿ ಬೊಂಬಾಯಿಗೆ ಹೋದೆನು. ಅಲ್ಲಿ ಒಬ್ಬ ಸನ್ಯಾಸಿಯು ಒಂದು ಔಷಧಿಯನ್ನು ಕೊಡಲು ಅದರಿಂದ ನನ್ನ ರೋಗವೆಲ್ಲಾ ಹೋಗಿ ನಾನು ಸ್ವಸ್ಥನಾದೆನು. ಈತನು ನನಗೆ ಸ್ವಲ್ಪವೂ ಪರಿಚಿತನಲ್ಲ. ಇವನು ನನ್ನ ರೋಗವನ್ನೂ ನನ್ನ ತಂದೆ ಮತ್ತು ಇತರರುಗಳ ದೇಹದಲ್ಲಿನ ರೋಗಗಳನ್ನೂ ಸ್ಪಷ್ಟವಾಗಿ ತಿಳಿಸಿದನು ನನಗೆ ಸ್ವಭಾವವಾಗಿ ಯೋಗವಿದ್ಯೆಯಲ್ಲಿ ನಂಬಿಗೆ ಇರುವದರಿಂದ ಈ ವಿಷಯವು ನಡೆದಮೇಲೆ ನನ್ನ ನಂಬಿಗೆಯು ಇನಿತು ಬಲವಾಯಿತು.

'ಅರಿಂಗಾಕಿವರು' ಎಂಬ ಒಂದು ಜಾತಿಯ ಜೋಗಿಕಡೆಗಳು ರಂಗೂನಿನಲ್ಲಿ ಅಕ್ಕಿಯನ್ನು ತುಂಬಿಕೊಂಡು ಜಪಾನಿಗೆ ಹೋಗುತ್ತಿದೆ ಜಪಾನಿಗೆ ಅಕ್ಕಿಯನ್ನು ತುಂಬಿಕೊಂಡು ಹೋದ ಹಡಗ ಗಳಲ್ಲಿ ಇದೇ ಮೊದಲನೆಯದಲ್ಲ. ಆ ಕಡೆ ಹಡಗಿನವರೆಲ್ಲಾ ಕೆಲಸಗಾರರು. ಜಪಾನಿನ ಶೇ ಸೇರಿ ಹೊರಟ ಹಡಗು ಇದೇ ಮೊದಲಿನದು. ಹಡಗಿನಲ್ಲಿ ಎಲ್ಲಾ ವ್ಯವಸ್ಥೆಯು ಯೂರೋಪಿನ ಹಡಗಿನಲ್ಲಿದ್ದಂತೆಯೇ ಇತ್ತೆಂದು ನೋಡಿದವರೆಲ್ಲರೂ ಹೇಳುತ್ತಾರೆ. ಕಪ್ತಾನರೂ ಮತ್ತು ಇತರ ಅಧಿಕಾರಿಗಳು ಇಂಗ್ಲೀಷನ್ನು ಮಾತಾಡುತ್ತಾರೆ. ಜಪಾನಿಗಳು ತಮಗೆ ಬೇಕಾಗುವದನ್ನೆಲ್ಲಾ ತಾವೇ ಮಾಡಿಕೊಳ್ಳುವರೆಂದು ತೋರುತ್ತಾರೆ. ಬೇಗನೆ ಅವರವ್ಯಾಪಾರದ ಹಡಗುಗಳೆಲ್ಲಾ ಬೇರೆ ದೇಶದ ಜನಗಳನ್ನೆಲ್ಲಾ ಆ ಕಾರ್ಯಗಳನ್ನು ಬಿಡಿಸುವರು.

VAIDYASARA SANGRAHA.

A TREATISE ON THE PRINCIPLES OF
HINDU MEDICINE.
Price, including Postage Rs 5-0-0.

BANGALORE CITY MUNICIPALITY.
ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ

ನೋಟೀಸ್.

ತಾರೀಖ್ ೧೫ನೇ ಜುಲೈ ೧೮೯೮

ಸನ್ ೧೮೯೮ನೇ ಇಸವಿ ಆಗಸ್ಟ್ ೩ನೇ ತಾರೀಖ್ ಬೃಹಸ್ಪತಿವಾರದ ದಿನ ಹೊತ್ತಾಗಿ ೭ ಘಂಟೆಗೆ ಬೆಂಗಳೂರು ಸಿಟಿ ಮ್ಯೂನಿಸಿಪಲ್ ಕಮಿಷನರರುಗಳು ತಮ್ಮ ಆಫೀಸ್ ಕಟ್ಟಡದಲ್ಲಿ ಸಾಮಾನ್ಯ ಸಭೆಸೇರುವಾಗ ಇದರಡಿ ಬರೆಸಲ್ಪಡುವ ಕೆಲಸಗಳು ನಡೆಸಲ್ಪಡುವವು :—

ನಿಷ್ಕರ್ಷಿಸಲ್ಪಟ್ಟದ್ದ ವಿಷಯಗಳು.

೧. ಸನ್ ೧೮೯೮ನೇ ಇಸವಿ ಜೂನ್ ತಿಂಗಳ ಬಾಬತು ಬಾಕಿ ಜಮಾಖರ್ಚು ಲೆಕ್ಕಗಳು

೨. ಮುಂದಿನ ಪಸಲು ಜಮೀನಿಗೆ ಪ್ರತಿನಿಧಿಗಳ ಚುನಾವಣೆ ಮತ್ತು ಸದರೀ ಸಭೆಯಲ್ಲಿ ತಿಳಿಸಬೇಕೆಂದು ಉದ್ದೇಶಿಸಲ್ಪಟ್ಟಿರುವ ವಿಷಯಗಳು.

೩. ಸಿಟಿಯಲ್ಲಿ ಆದರಾಮ್ಮನ ರೋಗಮುಕ್ತರಾದವರಿಗಾಗಿ ಸ್ಥಾಪಿಸಲ್ಪಟ್ಟಿರುವ ಬಿಡಾರವನ್ನು ತೆಗೆಯಬೇಕೆ, ಇದರಲ್ಲಿರುವಂತವರನ್ನು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಲ್ಲಿರುವ ಗರ್ಡಿನರ್ ಮಾತ್ರ ಎಂಬ ಕಟ್ಟಡಕ್ಕೆ ಸಾಗಿಸುವದಕ್ಕೆ ತಕ್ಕ ಏರ್ಪಾಡುಗಳಂ ಮಾಡಬೇಕೆಂದು ಪ್ರೆಸಿಡೆಂಟರವರು ತಿಳಿಸಿದ ಅಭಿಪ್ರಾಯ

ಸಾಮಾನ್ಯ ವಿಷಯ

೧. ಸನ್ ೧೮೯೮ನೇ ಇಸವಿ ಜುಲೈ ತಿಂಗಳ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರರ ಲೆಕ್ಕ, ತಗಾದೆ, ವಸೂಲಿ ಮತ್ತು ಬಾಕಿ ಪಟ್ಟಿ, ಕಾರ್ಖಾನೆಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ಲೈಬ್ರೆರಿಗೆ ಹೋಗಿದ್ದ ಜನರನ್ನು ಕುರಿತ ಯಾದಿ, ಸಿಟಿ ಮ್ಯೂನಿಸಿಪಲ್ ಇಂಗ್ಲೀಷ್ ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ದೀಪಗಳನ್ನು ಹಚ್ಚದ ದಿನಗಳ ಸಂಗ್ರಹ, ಪ್ರಸವಾಸ್ಪತ್ರೆಯ ಲೆಕ್ಕ, ಲಂಗರಖಾನೆಯ ಲೆಕ್ಕ, ದಳವಾಯಿ ಲೆಕ್ಕ, ನಾಯಿಗಳನ್ನು ಹಿಡಿಯುವದಕ್ಕೆ ಕೊಡಲ್ಪಟ್ಟ ಇನಾಂಗಳ ಲೆಕ್ಕ, ಮತ್ತು ಕ್ರಿಮಿನಲ್ ಪ್ರೈವೆಟಿಗಳ ಲೆಕ್ಕ.

ಚಿಕಿತ್ಸೆ

ರೋಗಿಯನ್ನು ಪ್ರತ್ಯೇಕವಾಗಿ ಬಂದುಕಡೆ [illegible] ರೋಗ ಸಂಬಂಧವುಳ್ಳ ಜನರು ಅವರ [illegible] ಬಾರದು [illegible]. ಪ್ರಾರಂಭದಲ್ಲಿ ಜ್ವರವು ಬಲವಾಗಿರುವ ಸಂದರ್ಭದಲ್ಲಿ ರೋಗಿಗೆ ಶೈತ್ಯೋಪಚಾರ ಮಾಡಬೇಕು [illegible] ಪಿಚಕಾರಿಯಿಂದ [illegible] ನೀರು ಸೇರಿಸಬೇಕು, ಕೀವು ಹಿಡಿಯು [illegible] ಗಡ್ಡೆಗಳ [illegible] ಕೊಡಬೇಕು, ಮುಂತಾದ.

ಇನಾಕ್ಯುಲೇಷನ್

ಹುಬ್ಬಳ್ಳಿಯಲ್ಲಿ ಅತಿ ಕ್ರೌರ್ಯದಿಂದ ಪ್ರಾಣಹಾನಿಯನ್ನುಂಟುಮಾಡುತ್ತಿದ್ದ ಪ್ಲೇಗ್ ರೋಗವು ಈಚೆಗೆ ಕೆಲವು ದಿನಗಳ ಮೊದಲು ಶಾಂತವಾಗುತ, ಅಂದರೆ ದಿನ [illegible] ಮೃತರ ಸಂಖ್ಯೆಯು ಕಡಮೆ [illegible] ವುದು ಮಾತ್ರವಲ್ಲದೆ ಸಹರೋಗ [illegible] ತೀವ್ರವಾಗಿ ಶಾಂತವಾಗಬಹುದೆಂದು [illegible] ಕಾರಣಗಳು ಕಾಣಬರುತಿವೆ. ಹುಬ್ಬಳ್ಳಿಯ ಈಗಿನ ಪ್ರಜಾಸಂಖ್ಯೆಯು [illegible] ವಿರಬಹುದೆಂದು ಇದರಲ್ಲಿ ಇದುವರೆಗೆ [illegible] ಹನ್ನೆರಡು ಸಾವಿರ ಮಂದಿ ಇನಾಕ್ಯುಲೇಷನ್ [illegible] ಗುರ್ತು ಹಾಕಿಸಿಕೊಂಡವರಲ್ಲದೆ ಇವರಲ್ಲಿ [illegible] ಇಪ್ಪತ್ತನಾಲ್ಕು [illegible] ಗುರ್ತು ಹಾಕಿಸಿಕೊಂಡವರು ರೋಗದ ಮೂಲಕ ಸಾಯಕ್ಕವರು ಗುರ್ತು ಹಾಕಿಸಿಕೊಳ್ಳದ [illegible] ಎಂದು ಸ್ಪಷ್ಟವಾಗಿ ಕಾಣುತದೆ. ಗುರ್ತು ಹಾಕಿಸಿಕೊಂಡವರಿಗುಂಟಾದ ಪ್ರಯೋಜನವನ್ನು ಇತರರಿಗೆ ತಿಳಿಯಬೇಕೆಂದು [illegible] ಗುಂಪಾಗಿ ರೋಗ ಗುರ್ತುಹಾಕುವ ಡಾಕ್ಟರ [illegible] ಬಾಗಿಲಲ್ಲಿ ಕಾಯುವದಕ್ಕೆ ಪ್ರಾರಂಭಿಸಿದರು ಡಾಕ್ಟರೂ ಪ್ರತಿದಿನ [illegible] ಮಂದಿಗೆ ಗುರ್ತು ಹಾಕು [illegible] ಗುರ್ತು ಹಾಕಿಸಿಕೊಳ್ಳುವವರ ಮೂಲಕ [illegible] ಅಲ್ಪ ಕಷ್ಟಕ್ಕಾಗಿ ಹೊರತು ಯಾರೂ [illegible] ದಾನ ಪಡುವದಿಲ್ಲವು. ಎಲ್ಲರೂ ಅಂತ ಕಷ್ಟವಂ ಸಹ್ಯಮಾಡಿ [illegible] ಗುರ್ತು ಹಾಕಿಸಿಕೊಳ್ಳುವಂತೆ ಸ್ಪಷ್ಟವಾಗಿ ತಿಳಿಯಬರುತಿದೆ ಎರಡು ತಡವೆ ಗುರ್ತುಹಾಕಿಸಿಕೊಂಡವರಿಗೆ ಸೆಗ್ರಿಗೇಷನ್ ಕ್ಯಾಂಪ್ ಮೊದಲಾದ ನಿರ್ಬಂಧಗಳು ತಪ್ಪಿಸಲ್ಪಡುತವೆ.

ಅಚೇವಾರದ ಲೆಕ್ಕವನ್ನು ನೋಡಲಾಗಿ ಗುರ್ತುಹಾಕಿಸಿಕೊಂಡ ೩೦,೦೦೦ ಮಂದಿಯಲ್ಲಿ ಸಾವಿರಕ್ಕೆ ಯೆರಡರಂತೆ ೬೦ ಮಂದಿಗೆ ಪ್ಲೇಗ್‌ರೋಗ ತಗಲಿತು. ಗುರ್ತು ಹಾಕಿಸಿಕೊಳ್ಳದ [illegible] ಜನರಲ್ಲಿ ಸಾವಿರಕ್ಕೆ ಐವತ್ತರಂತೆ [illegible] ಮಂದಿಗೆ ತಗಲಿತು. ಇದರಿಂದಲೇ ಗುರ್ತು ಹಾಕಿಸಿಕೊ

ಳ್ಳುವದರಿಂದುಂಟಾಗುವ ಪ್ರಯೋಜನವು ಸ್ಪಷ್ಟವಾಗುತಲಿದೆ. ಪ್ರಾರಂಭತಃ ಮೊದಲು ಗುರ್ತು ಹಾಕಿಸಿಕೊಳ್ಳುವ ವಿಷಯದಲ್ಲಿ ವಿರುದ್ಧಾಭಿಪ್ರಾಯವುಳ್ಳವರಾಗಿ ಗುರ್ತು ಹಾಕಿಸಿಕೊಳ್ಳುವುದು ಅಪಾಯಕಾರ್ಯವೆಂದು ತಮಗೆ ಬೇಕಾದವರಿಗೆ ಪ್ರಬೋಧಿಸುತಲಿದ್ದವರೆಲ್ಲರು, ಅದರ ಪ್ರಯೋಜನವು ಸ್ಪಷ್ಟವಾಗಿ ತಿಳಿಯಬಂದ ಕೂಡಲೆ ತಾವು ಹಾಕಿಸಿಕೊಳ್ಳುವುದು ಮಾತ್ರವಲ್ಲದೆ ತಮಗೆ ಆಪ್ತರಾದವರಿಗೆಲ್ಲ ಬೋಧಿಸಿ ಹಾಕಿಸಿಕೊಳ್ಳುವಂತೆ ಮಾಡುತಲಿದ್ದಾರೆ. ಈ ದುಷ್ಟರೋಗಕ್ಕೆ ಗುರ್ತು ಹಾಕುವ ಚಿಕಿತ್ಸೆಗಿಂತಲು ಪ್ರಬಲವಾದ ಔಷಧವು ಬೇರೆ ಯಾವದೂ ಕಂಡುಬರಲಿಲ್ಲವೆಂದು ಇಂಗ್ಲಿಷ್ ವೈದ್ಯಶ್ರೇಷ್ಠರು ಅಭಿಪ್ರಾಯಪಟ್ಟಿರುವುದು ಮಾತ್ರವಲ್ಲದೆ ಈಗಿನ ಅನುಭವದಲ್ಲೂ ಗುರ್ತು ಹಾಕುವ ಚಿಕಿತ್ಸೆಯೇ ಪ್ರಮುಖ ರೋಗನಿರೋಧಕವಾಗಿ ಕಂಡುಬರುವದರಿಂದ ಇದರ ಪ್ರಯೋಜನವನ್ನು ಈದೇಶೀಯರು ನಿಃಶಂಕರಾಗಿ ಪಡೆಯಬೇಕೆಂದು ಕೋರುತ್ತೇವೆ.

ವೃತ್ತಾಂತಪತ್ರಿಕೆಗಳು ಮತ್ತು ಬ್ರಿಟಿಷ್ ಪೋಸ್ಟಾಫೀಸ್.

ಸನ್ ೧೮೯೮ನೆಯ ಇಸವಿ ಅಕ್ಟೋಬರ್ ೧ನೆ ತಾರೀಖಿನಲ್ಲಿ ಇಂಡ್ಯಾ ಗವರ್ನಮೆಂಟಿನವರು ಸಂಪ್ರಕಟಿಸಿದ ಎಕ್ಸ್ಟ್ರಾರ್ಡಿನರಿಯ ಮೂಲಕ, ಅವರು ಸೋದಲು ಪೋಸ್ಟಿನಲ್ಲಿ ಕಳುಹಿಸಲ್ಪಡುತಬರುವ ವೃತ್ತಾಂತ ಪತ್ರಿಕೆಗಳು ಮೂರು ರೂಪಾಯಿಗಳ ಕೋರ್ಟು ಫೀ ಒಳಪಟ್ಟಿರುವ ಪಕ್ಷದಲ್ಲಿ ಪತ್ರಿಕೆ ಒಂದಕ್ಕೆ ಮೂರು ಕಾಸಿನಂತೆ ಹಾಸಲನ್ನು ಮೂರು ತಿಂಗಳಿಗೆ ಕನಿಷ್ಠ ಇಲ್ಲದ ಹಿಂದು ಕಾಲಕ್ಕೆ ಮುಂಗಡವಾಗಿ ನಗದ್ ತೆಗೆದುಕೊಂಡು ರವಾನಿಸುವಂತೆ ಪೋಸ್ಟಾಫೀಸಿನವರಿಗೆ ಅಧಿಕಾರ ಪ್ರದಾನ ಮಾಡಲ್ಪಟ್ಟು ನಡೆಯಬಹುದು ಮಾತ್ರವಲ್ಲದೆ ಏಜೆಂಟರುಗಳಿಗೆ ಕಳುಹಿಸಲ್ಪಡುವ ಪತ್ರಿಕೆಗಳಿಗೆ ಹಾಸಲ್ ಇಲ್ಲದೇನೇ ರವಾನಿಸಲ್ಪಡುತಬಂದದ್ದು ಈಗ್ಗೆ ಓದುವವರು ಹಿಂದೆ, ಮೂರು ಕಾಸಿನ ಕಳುಹಿಸಲ್ಪಡುವ ಪತ್ರಿಕೆಗಳ ೩ ಗುಲ್ಲೆಗಳನ್ನು ೪ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಪ್ರಬಲವಾದ ಇಂಗ್ಲಿಷ್ ವೃತ್ತಾಂತ ಪತ್ರಿಕಾಧಿಪರೇ ಕೇವಲ ತಮ್ಮ ತಮ್ಮ ಪತ್ರಿಕೆಗಳ ಮಾರಾಟವು ಕಡಿಮೆಯಾಗದಂತೆ ಗವರ್ನಮೆಂಟಿನವರಿಗೆ ತಿಳಿಸಲು, ಅವರು ಆ ಮೊದಲು ಈ ವಿಷಯದ ಕುರಿತು ಚೆನ್ನಾಗಿ ಆಲೋಚಿಸಿ, ಮೂರು ರೂಪಾಯಿಗಳ ಹಾಸಲನ್ನು ನಾಲ್ಕು ರೂಪಾಯಿಗಳ ತನಕಕ್ಕೆ ಹೆಚ್ಚಿಸಿ, ಇದರಿಂದ ತಮಗುಂಟಾಗಬಹುದೆಂದು ಅವರು ಭಾವಿಸಿದ ನಷ್ಟಕ್ಕೆ ಈಡು ಮಾಡಿಕೊಳ್ಳುವ ಬದಲು, ಏಜೆಂಟರುಗಳಿಗೆ ಹಾಸಲಿಲ್ಲದೆ ಕಳುಹಿಸಲ್ಪಡುತ್ತಿರುವ ಪತ್ರಿಕೆಗಳಿಗೆ ಸಹ ಮೂರು ಕಾಸು ಕೊಡಬೇಕೆಂದು ವಿಧಿಸಿ, ಹಾಸಲನ್ನು ಸಂಗತವಾಗಿ ಜಮಾವತಿ ಮಾಡಬೇಕೆಂದಿದ್ದ ನಿಬಂಧನೆಯನ್ನು ರದ್ದು ಮಾಡಿ, ಪ್ರತಿ ಒಂದು ಪತ್ರಿಕೆಗೂ ಮೂರು ಕಾಸಿನ ಲೇಬಲ್ ಹಚ್ಚಿಸಿ ಕಳುಹಿಸಬೇಕೆಂದು ಹೊಸ ನಿಬಂಧನೆಯನ್ನು ಮಾಡಿ ಬರುವ ಅಕ್ಟೋಬರ್ ತಿಂಗಳ ಗುರ್ತು ತಾರೀಖು ಮೊದಲು ಈ ನೂತನ ನಿರ್ಬಂಧವು ಜಾರಿಯಲ್ಲಿ ತರಲ್ಪಡತಕ್ಕದ್ದೆಂದು ಹುಕುಂ ಮಾಡಿರುತ್ತಾರೆ. ವೃತ್ತಾಂತ ಪತ್ರಿಕೆಗಳಿಗಾಗಿಯೇ ಮೂರು ಕಾಸಿನ ಲೇಬಲ್ ಸ್ಟ್ಯಾಂಪ್ ಛಾಪಾಗಿ ಬರುವುದಿದೆ

ಇದುವರೆಗೆ ಜಾರಿಯಲ್ಲಿರುತಿದ್ದ ರೂಲ್ಸ್ ಅನುಸರಿಸಿ, ಪ್ರತಿವಾರದಲ್ಲೂ ನಾವು ರವಾನಿಸುತಲಿರುವ ಪತ್ರಿಕೆಗಳು ಇಷ್ಟೆಂದು ಪೋಸ್ಟಾಫೀಸಿಗೆ ನಾವು ಲೆಕ್ಕಕೊಡುತಲಿರುವ ಕಾಲದಲ್ಲೇ ಪತ್ರಿಕೆಗಳು ಕ್ರಮವಾಗಿ ವಿಲಾಸದಾರರಿಗೆ ಪಾವತಿಯಾಗುವದಿಲ್ಲವೆಂಬ ಫಿರ್ಯಾದುಗಳು ಆಗಿಂದಾಗ್ಗೆ ನಮಗೆ ಬರುತಲೂ, ಅವುಗಳನ್ನೆಲ್ಲ ಪೋಸ್ಟಾಫೀಸ್ ಅಧಿಕಾರಿಗಳಿಗೆ ನಾವು ಕಳುಹಿಸುತಲೂ, ಅವರು ವಿಲಾಸದಾರರು ವಾಸಮಾಡುವ ಷಹರ್ ಪೋಸ್ಟಾಫೀಸ್ ಅಧಿಕಾರಿಗಳಿಗೆ ಬರೆದು ತಿಳಿದುಕೊಂಡು ನಮಗೆ ಜವಾಬ್ ಕೊಡುವದೂ ವಾಡಿಕೆಯಾಗಿ ನಡೆದು ಬರುತಲಿದೆ. ಮುಂದಿನ ತಿಂಗಳಿಂದ ಜಾರಿಗೆಬರುವ ಹೊಸರೂಲ್ಸ್ ಅನುಸರಿಸಿ ಪ್ರತಿಒಂದು ಪತ್ರಿಕೆಗೂ ಮೂರುಕಾಸಿನ ಲೇಬಲ್ ಹಚ್ಚಿಸಿ ಪೋಸ್ಟಾಫೀಸಿನಲ್ಲಿಡಲ್ಪಟ್ಟಿರುವ ಪೆಟ್ಟಿಗೆಯಲ್ಲಿ ಹಾಕಿಬಿಡಬೇಕಾಗಿರುತಿದೆ. ರವಾನೇ ಮಾಡುವ ಪತ್ರಿಕೆಗಳಿಗೆ ನಾವು ಇಡುವ ಲೆಕ್ಕವಿನಾ ಬೇರೆ ಯಾವ ಆಧಾರವೂ ಇಲ್ಲವು. ಈಗಿನ ಪದ್ಧತಿಯಲ್ಲಿ ಪ್ರತಿವಾರದೊಳಗೂ ನಾವು ಕೊಡುತಬರುವ ಲೆಕ್ಕದಪ್ರಕಾರ ಪೋಸ್ಟಾಫೀಸಿನವರು ಪತ್ರಿಕೆಗಳನ್ನು ಎಣಿಸಿ ತೆಗೆದುಕೊಳ್ಳುತಲಿರುವದರಿಂದ ವಿಲಾಸದಾರರಿಗೆ ಪಾವತಿ ಆಗದ ಪತ್ರಿಕೆಗಳ ಜವಾಬ್ದಾರಿಯು ಅವರು ನಾಮಮಾತ್ರಕ್ಕಾದರು ವಹಿಸಿದ್ದರು. ಈಗಿನ ಹೊಸ ನಿಬಂಧನೆಯ ಮೂಲಕ ಅಂತ ಜವಾಬ್ದಾರಿಯಿಂದ ಅವರು ತಪ್ಪಿಸಿಕೊಂಡಂತೆ ಕಾಣುತದೆ. ಮುಂದೆ ಬೇಕಾದಾರದಲ್ಲಿ ಯಾರಾದರು ಫಲಾನೆಯ ತಾರೀಖಿನ ಪತ್ರಿಕೆ ತಮಗೆ ಸೇರಲಿಲ್ಲವೆಂದು ನಮಗೆ ಬರೆದು ಅದನ್ನು ನಾವು ಪೋಸ್ಟಾಫೀಸ್ ಅಧಿಕಾರಿಗಳಿಗೆ ತಿಳಿಸಿದರೆ ಅದರಮೇಲೆ ಅವರು ಯಾವ ಕ್ರಮವು ನಡೆಸುವರೋ ಮುಂದೆ ತಿಳಿಯಬೇಕು. ಗ್ರಾಮಾಂತರಗಳಿಗೆ ರವಾನಿಸಲ್ಪಡುವ ಪತ್ರಿಕೆಗಳು ಕ್ರಮವಾಗಿ ಪಾವತಿ ಆಗುವದಿಲ್ಲವೆಂಬ ಫಿರ್ಯಾದುಗಳು ಈಗಲೇ ಬರುವಾಗಿವೆ, ಮುಂದೆ ಇನ್ನೆಷ್ಟು ಬಲವಾಗುವುದೋ ನಾವರಿಯೆವು. ಚಿಕ್ಕಮಗಳೂರು ಷಹರಿನಲ್ಲಿರುವ ಒಬ್ಬ ದೊಡ್ಡ ಮನುಷ್ಯರಿಗೆ ಕಳುಹಿಸುತಲಿರುವ ಪತ್ರಿಕೆಯು ಈಗ್ಗೆ ಎರಡು ಮೂರು ವಾರಗಳಿಂದ ತಮಗೆ ಸೇರಲಿಲ್ಲವೆಂದು ಅವರು ಬರೆದಿರುತ್ತಾರೆ. ಇಂತ ದೊಡ್ಡ ಷಹರುಗಳಿಗೆ ಕಳುಹಿಸಲ್ಪಡುವ ಪತ್ರಿಕೆಗಳ ಗತಿ ಹೀಗಾದಮೇಲೆ ಗ್ರಾಮಾಂತರಗಳಿಗೆ ರವಾನೆಯಾಗುವ ಪತ್ರಿಕೆಗಳು ವಿಲಾಸದಾರರಿಗೆ ಕ್ರಮವಾಗಿ ಪಾವತಿಯಾಗುವದೆಂದು ನಂಬುವದಕ್ಕೆ ಅವಕಾಶ ಕಡಮೆಯಾಗಿರುತ್ತದೆ. ಇವುಗಳಿಗೆಲ್ಲ ಪೋಸ್ಟಾಫೀಸ್ ಚಿಲ್ಲರೆ ನೌಕರರು ಕಾರಣವಲ್ಲದೆ ಬೇರೆ ಯಾವದೂ ಅಲ್ಲವು. ಪೋಸ್ಟಲ್ ಅಧಿಕಾರಿಗಳು ಇದಕ್ಕೆ ಸೂಕ್ಷ್ಮಜ್ಞಾನ ವಹಿಸಕೊಟ್ಟಹೊರತು ಇದು ಕ್ರಮಪಡುವ ಸಂಭವ ಕಾಣಿಸಲಿಲ್ಲವು.

(ಸ್ಥಳದ ಲೇಖಕರೊಬ್ಬರಿಂದ)

ಓ ವಿಧಿಯೆ! ನೀನು ಪ್ರತ್ಯಕ್ಷವಾದಮೇಲೆ ಯಾರನ್ನು ಕ್ರಯಿಸುವರೇನು ಪ್ರಯೋಜನ ಪ್ರಾಪ್ತಿ! ನಿನ್ನ ಸಿದ್ಧ ಸಂಕಲ್ಪವು ಅನ್ಯಥಾ ಪರಿಣಮಿಸುವದುಂಟೆ! ನಿನ್ನ ಆಜ್ಞೋಲ್ಲಂಘನವ ಸಹ ವಿಚಾರಿ ವರ್ತಿಸತಕ್ಕವರ್ಯಾದರೂ ಇರುವರೆ! ನಿನ್ನ ದಯೆಯು ತಪ್ಪಿದ್ದರಿಂದಲೇ ನಮ್ಮ ಜೀವನವು ಅಸ್ವಸ್ಥವಾಯಿತು, ಸ್ಥಿತಿಯು ದುಸ್ಥಿತಿಯಾಯಿತು, ನಿನ್ನ ಅದ್ಭುತ ಪ್ರಭಾವವು ನಾನೇನೆಂದು ವರ್ಣಿಸಬಲ್ಲೆನು! ಅಘಟಿತವಾದ ಕಾರ್ಯವು ಘಟಿಯಿಸುವಿ, ಘಟಿತವಾದುದು ವ್ಯರ್ಥವನ್ನಾಗಿ ಮಾಡುವಿ, ನಿನ್ನ ವೈಪರೀತ್ಯದಿಂ ನಮ್ಮ ಪ್ರಾಣವಷ್ಟೆ ನಮಗೆ ಉಳಿಯಿತು. ಪುತ್ರ ಮಿತ್ರ ಬಾಂಧವರೆಲ್ಲ ವಿನಾಶದ ನಿವೃತ್ತಿಯಾಯಿತು ಗೃಹಾರಾಮಾದಿಗಳಲ್ಲಿ ಅಪೇಕ್ಷೆಯು ತಪ್ಪಿತು. ಇಷ್ಟಜನ ಸಂಭಾಷಣೆಯೂ ಜುಗುಪ್ಸೆಯುಂಟಾಯಿತು. ಅಭೀಷ್ಟವಾದ ಪದಾರ್ಥಗಳಲ್ಲಿ ವಿಷ್ಯವಿರುವಂತೆ ತೋರಿತು. ಭೀತಿಯಿಂದ ಮುಖಕಾಂತಿಯು ಬಾಡಿ ವಿವರ್ಣವಾಯಿತು. ದೈತ್ಯವು ತಪ್ಪಿ ದೌರ್ಬಲ್ಯವು ಅಧಿಕವಾಯಿತು. ಕಡೆಗೆ ಪ್ರಾಣವು ನಿರ್ಬಾಧಕವಾಗಿಯಾದರು ಉಳಿದು ಪ್ರೇಮಾಸ್ಪದವಾದ ಈ ಕಳೇಬರವನ್ನುಳಿದು ತ್ಯಜಿಸುವೆವೋ ಎಂಬ ಚಿಂತೆಯು ನಿರವಧಿಕವಾಯಿತು. ಎಲ್ಲಿಯಾದರು ಹೋಗಿ ಜೀವಸರಿಕೆಯು ಉಳಿಸಿಕೊಳ್ಳುವಣವೆಂದರೆ ಬಹಿಷ್ಪ್ರಚಾರವೇ ದುರ್ಘಟವಾಯಿತು. ಹಿಂದಿರುಗಿಬರುವ ಮನೆಸೇರುವವೆಂಬ ನಂಬಿಕೆಯು ತಪ್ಪಿತು. ಜೀವನವು ಕಷ್ಟಸಾಧ್ಯವಾಯಿತು. ಜನರಿಗೆ ಪರಸ್ಪರ ನಂಬಿಕೆ ಇಲ್ಲವಾಯಿತು. ಬಾಲಗೋಪಾಲರಿಗೆ ತಮ್ಮ ಗಾಲಗಳನ್ನು ತಿರಸ್ಕರಿಸಲಿಕ್ಕೆ ತಕ್ಕ ಸಮಯವು ತಪ್ಪಿಹೋಯಿತು. ನಾಲಕೊಡುವವರಿಲ್ಲವು. ಜನಸಂಚಾರ ನಿರ್ಬಂಧದಿಂದ ಆಹಾರಪದಾರ್ಥಗಳ ದೌರ್ಲಭ್ಯವು ಹೆಚ್ಚಿ ಕ್ರಯವು ಇಮ್ಮಡಿಸಿತು. ಜೀವನದಲ್ಲಿ ಅಸಾಧ್ಯನಿಜ್ಞಾನ ಹುಟ್ಟಿ ಬಂದುದರಿಂದ ಪ್ರತಿಮಾನ ವ್ಯಾಪಾರಿಗಳು ಸಾಧ್ಯವಾದಷ್ಟು ದ್ರವ್ಯವನ್ನು ಆರ್ಜಿಸಬೇಕೆಂಬ ಆತುರವು ಅಧಿಕವಾಯಿತು. ಜನರ ಆರ್ಥಾತುರತ್ವದಿಂದ ಭೂತದಯಾನುರಾಗವು ದೂರವಾಯಿತು. ಪ್ರಜಾಪಾಲಕರೆನಿಸಿರುವವರು ಅನಪಾಯ ಕೀರ್ತಿ ಪ್ರತಿಷ್ಠಾಸಂಪಾದನೈಕಪರರಾಗಿ ಏರ್ಪಟ್ಟ ಅನೇಕ ಏರ್ಪಾಡುಗಳೂ ನಿಬಂಧನೆಗಳೂ ತಮ್ಮ ಅಧಿಕಾರಬಲವನ್ನೂ ಸ್ವೋದ್ದೇಶವನ್ನೂ ಪ್ರಕಟಿಸತಕ್ಕವಾಗಿರುವದರಿಂದ ನಮ್ಮ ದೈನ್ಯಭಾವವೆಲ್ಲವು ಪ್ರಯೋಜನಕಾರಿಯಾಗದೆ ಹೋಯಿತು. ಅಧಿಕಾರವು ನಿರ್ವಹಿಸುವಾತನರೆಲ್ಲರು ಮಾನುಷ ಸ್ವಭಾವವುಳ್ಳವರಾಗಿರುವದರಿಂದ ಸ್ವೋತ್ಕೃಷ್ಟಭಾವವೂ ಉನ್ನತ ಪದಪ್ರಾಪ್ತ್ಯಭಿಲಾಷೆಯೂ ಅವರಿಗುಂಟಾಗಿರುವುದೂ ತಪ್ಪಾಗಿ ಅವರು ನಡೆಯುವದೂ ಸಹಜವಾದುದೆ. ಆದುದರಿಂದ ಅವರಾಕ್ರಮವು ನಮಗೆ ಅನಾತ್ಮೀಯವಾಯಿತು. ಆರ್ಥಾತುರರಾದ ಅಲ್ಪಾಧಿಕಾರಿಗಳಿಗೆಲ್ಲ ನೀನು ಮಹದವಕಾಶವನ್ನುಂಟು ಮಾಡಿದವನಾಗಿ ಅವರ ತೃಷ್ಣೆಯು, ಮಹಾನದೀ ಪ್ರವಾಹದ ದೆಸೆಯಿಂದ ಸಹ ಉಪಶಮನವಾಗುವಂತೆ ಕಾಣಿಸಲಿಲ್ಲವು. ನಿನ್ನ ಆಜ್ಞಾಪೇಕ್ಷೆಯು ಅವರಲ್ಲಿ ಪ್ರಸರಿಸಿದ್ದರಿಂದಲೇ ಅಪಾತ್ರರೋಗ್ರ ಮಹಾಪ್ರಭುಗಳೆನಿಸಿಕೊಂಡು, ಪ್ರಾಣೋತ್ಕ್ರಮಣ ಕಾಲದಲ್ಲಿ ಕಷ್ಟವು ಕೊಡುವಂತೆ, ಪ್ರತ್ಯಕ್ಷವಾದ ನಿನ್ನಿಂದ ಅನುಕೂಲ್ಯಗಳು ಕಲ್ಪಿಸಲ್ಪಟ್ಟವೆ. ಅವರ ಅಧಿಕಾರವನ್ನವರ ವರ್ತನೆಗಳು ಹೊರಪಡಿಸುತಿವೆ. ಅವಿಚಾರಿಣೀಯಗಳಾದ ಅವರ ನಡತೆಗಳು ನಿನ್ನ ಪ್ರಭಾವದಿಂದ ಕೇವಲ ದುಸ್ಸ್ವಪ್ನಗಳಾಗಿ ಪರಿಣಮಿಸಿದವು. ಚಿರಕಾಲಾನುಭೂತಗಳಾದ ಸ್ವದೇಶಾಚಾರಗಳೊಡನೆ ನಮ್ಮ ಶರೀರವು ತೊರೆಯುವದಕ್ಕೆ ಸಹ ನಿನ್ನ ಪ್ರತಿಬಂಧಕಗಳಿಂದ ಪ್ರಯತ್ನ ಇಲ್ಲದೆ ಹೋಯಿತು. "ಜಾತಸ್ಯಹಿ ಧ್ರುವೋ ಮೃತ್ಯುಃ" ಎಂಬದಾಗಿ ನಿನ್ನ ಅಧೀನರಾದ ನಾವೆಂದಿಗಾದರು ಸಾಯಬೇಕಾದವರೆ ಎಂದು ನ ಬದ್ಧಾಗ್ರ ನಮ್ಮ ಜೀವೋತ್ಕ್ರಮಣಕಾಲದ ಭಾವ ಮತ್ತು ಸ್ವಪ್ನ ಕಲ್ಪಿತಗಳಾಗಿರುವ ಸೆಗ್ರಿಗೇಷನ್ ಕ್ಯಾಂಪ್ ಎಂಬ ತೃಣಕಾಷ್ಠಾಲಯಗಳ ಪ್ರತಿ ನಿಜನಪ್ರದೇಶವೂ, ರೋಗಸಂಬಂಧ ನಿವಾರಕವಾದ ಸನ್ನಿವೇಶಗಳ ಸ್ನಾನವೂ, ರೋಗನಿವಾರಕವೆಂದು ಕೊಡಲ್ಪಡುವ ಔಷಧಗಳೂ, ಬಂಧುಜನ ವಿವರ್ಜಿತವಾದ ಅನಾಥಪ್ರೇತ ದಹನವೂ, ತಾರತಮ್ಯವಿಹೀನವಾದ ಪಕ್ಷಪಾತದ ಪ್ರಕಾರಗಳೂ ಒಂದೊಂದೇ ಸಾಕಾದುದಾಗಿರುವಲ್ಲಿ ಎಲ್ಲವನ್ನೂ ಏಕಕಾಲದಲ್ಲಿ ಏಕತ್ರ ಅನುಭವಿಸುವ ಭಾಗ್ಯವು ಕೃಪೆಯೊಡನೆ ನೀನು ಅನುಗ್ರಹಿಸಿರುವಲ್ಲಿ ನಮ್ಮ ಜನ್ಮವು ಸಫಲವಾದ್ದರಿಂದ ಜೀವೋತ್ಕ್ರಮಣವಾಗಿ, ಚಿರಕಾಲಾನುಭವವಾದ ತಾಪತ್ರಯಗಳು ನೀಗಿ, ಭವಬಂಧ ನಿವೃತ್ತಿಕವಾದ ಮುಕ್ತಿಯು ನಿನ್ನ ಕೃಪೆಯಿಂದಾಗಿ, ಮೋಕ್ಷ ಸಾಧನವಾಗುವದರಲ್ಲೇನಾದರೂ ಸಂಶಯವುಂಟೆ? ಅಹೋ ನಿನ್ನ ಶಕ್ತಿಯುಳ್ಳ ಕಾಲವೆ! ನಿನ್ನ ಅನ್ಯಾದೃಶವಾದ ಕ್ರಿಯಾಶಕ್ತಿಯು ವರ್ಣಿಸ ಎಷ್ಟೋ ಯೋಗಿ ಮೊರೆಯಿಡುವೆನೆಂದರೆ, ಪರಾಧೀನರಾದ ನಮಗೆ ವಾಗ್ಬಂಧನವು ಮಾಡಿ ಸಕಲ ಶಕ್ತಿಯನ್ನು ಅಪಹರಿಸಿ ದತ್ತಾಪಹಾರದೋಷಕ್ಕೆ ನೀನ ಗುರಿಯಾಗಿ ಸ್ವತಃ ಸಂಹರಿಸುತಿದ್ದಿರುವ ನೀನು ಕರುಣಾರಹಿತನಾದ ನೀತಿ ದುರ್ಗುಣವಿಹೀನೋಪಿ ವಿಪಕ್ಷಾನ್ನಸುಚಿತ್ತ್ಯ ಕ್ಷೇತ್ರ" ಎಂಬದಾಗಿ ಗುಣಕಾಣ್ಯನಾಗಿದ್ದರೂ ವಿಪತ್ಕಾಲದಲ್ಲಿ ಕ್ಷಮಿಸತಕ್ಕದೆಂಬ ನೀತಿಯನ್ನು ಪಾಲಿಸಿದ ಬಳಿಕ ನಿನ್ನನ್ನು ಪ್ರಾರ್ಥಿಸಿ ಪ್ರಯೋಜನವೇನು? "ಯಸ್ಯಾಯುಷ್ಯವಿನಷ್ಯಂತಿ ಕರ್ಮಾನ್ಯೇವನಾನ್ಯಥಾ | ನೀಯುತೇಽವಮಾರ್ಗ ಸ್ವಮನಾಶಯಗಚ್ಛತಿ" ಯಾವದು ನಡೆಯಬೇಕೋ ಅದು ಅನ್ಯಥಾ ನಡೆಯಲಾರದಷ್ಟಕ್ಕೆ ನಿನ್ನನ್ನು ಧ್ಯಾನಮಾಡಬೇಕೆ, ನಿನ್ನನ್ನು ರಾಧಿಸುವದರಿಂದೇನುಫಲ, ನಿನ್ನನ್ನು ಬೇಡುವದರಿಂದೇನು ಪ್ರಯೋಜನ, ದಾನ ಜಪ ಹೋಮ ಪೂಜನಾದಿಗಳಿಂದೇನು ಫಲ? ಆದುದರಿಂದ ನೀನು ವೈಪರೀತ್ಯವೃತ್ತಿ ವಕ್ರಮಾರ್ಗವನ್ನನುಸರಿಸಿರುವದರಿಂದ ಸಕಲ ಪ್ರಾಣಿಗಳು ಸ್ವತಂತ್ರರಾಗಿ ನಾವುನಿನ್ನ ಅಧೀನರಾಗಿರುವದರಿಂದ ನಿನ್ನ ಇಷ್ಟಬಂದಂತೆ ನಡಿಸು. ಇನ್ನೇನುಮಾಡುವಿ?

ಪ್ಲೇಗ್ ರೋಗ ವೃದ್ಧಿ.

ಈ ಊರಲ್ಲಿ ಪ್ಲೇಗ್‌ರೋಗವು ದಿನೇದಿನೆ ವೃದ್ಧಿಯಾಗುತ್ತಲ್ಲ ಜನರ ಭೀತಿಯೂ ಹೆಚ್ಚುತಲಿದೆ. ಇದು ಅರಳೇಪೇಟೆಯಿಂದ ಅಕ್ಕಿಪೇಟೆಗೆ, ಅಲ್ಲಿಂದ ಬಲುಬಾನಪೇಟೆಗೆ, ಅಲ್ಲಿಂದ ಸುಲ್ತಾನಪೇಟೆ ಮತ್ತು ಚಿಕ್ಕಪೇಟೆಗೆ ಕ್ರಮಕ್ರಮವಾಗಿ ವ್ಯಾಪಿಸಿ ಪ್ರಾಣಹಾನಿಗಳನ್ನುಂಟುಮಾಡುತಲಿದೆ. ಈರೋಗ ತಗಲಿದವರೆಲ್ಲರಿಗೂ ಗಡ್ಡೆಗಳು ಏಳುವದಿಲ್ಲವು. ಅನೇಕರು ಕೇವಲ ಜ್ವರದಿಂದಲೇ ಸಾಯುತಲಿದ್ದಾರೆ. ಗಡ್ಡೆಗಳು ಹೊರಡದೇನೆ ಜ್ವರದಿಂದಲೇ ಸಾಯುವದುಂಟೆಂದು ಇಂಗ್ಲಿಷ್ ವೈದ್ಯರು ಹೇಳುತ್ತ, ಸಾಯುವಂತವರೆಲ್ಲರು ಪ್ಲೇಗ್‌ರೋಗದ ಮೂಲಕ ಮೃತಪಡುವಂತವರ ಗೊಣ್ಣೆಗೆ ಸೇರಿಸಲ್ಪಡುವದರಿಂದ ಸಂಖ್ಯೆಯು ಹೆಚ್ಚಿ ತನ್ಮೂಲಕ ಪ್ರಜೆಗಳು ಕೇವಲ ಭೀತರಾಗಿ ಪ್ರಾಣರಕ್ಷಣಾರ್ಥ ಮನೆ ಗ್ರಾಮಾಂತರಗಳಿಗೆ ಹೊರಡಲುಪಕ್ರಮಿಸಿರುತ್ತಾರೆ. ಅಕ್ಕಿಪೇಟೆಯಲ್ಲಿ ಅನೇಕ ಮನೆಗಳು ಖಾಲಿಯಾದಂತೆ ಕೇಳುತ್ತೇವೆ. ಈ ರೋಗ ಶಾಮಕವಾಗಿ ನಶಾರದವರು ನಾನಾವಿಧ ಪ್ರಯತ್ನಗಳಂ ಮಾಡುತಲಿದ್ದಾರೆ, ಪರಂತು ಕೇವಲ ಮುಖ್ಯವಾದ ಕೆಲವು ವಿಷಯಗಳು ಅವರ ಅನಧಾನಕ್ಕೆ ಬಾರದಿರುವದು ಪ್ರಜೆಗಳ ಮಂದಭಾಗ್ಯದಿಂದಲ್ಲದೆ ಬೇರೆ ಯಾವಕಾರಣದಿಂದಲ್ಲವೆಂದು ಅನೇಕರ ಅಭಿಪ್ರಾಯವಾಗಿರುತದೆ. ಅಂತ ಮುಖ್ಯ ವಿಷಯಗಳಂ ಅಧಿಕಾರಿಗಳ ಅವಧಾನಕ್ಕೆ ತರುವದು ಪ್ರಜೆಗಳ ಪ್ರತಿನಿಧಿಯಾಗಿರುವ ಪತ್ರಿಕಾಲೇಖಕರಿಗೆ ಅವಶ್ಯಕರ್ತವ್ಯವಾಗಿದ್ದಾಗ್ಯೂ ಪ್ರಬಲತರಗಳಾದ ಕೆಲವು ಕಾರಣಗಳನ್ನಾಲೋಚಿಸಿ ಅಷ್ಟರ ಜವಾಬ್ದಾರಿಯಂ ವಹಿಸುವಣವು ಈ ಕಾಲದಲ್ಲಿ ಅಪಾಯಕರವೆಂದು ಭಾವಿಸಿ ಅದಕ್ಕೆ ಉಚಿತನ ಸಮಯವಂ ನಿರೀಕ್ಷಿಸುತಲಿದ್ದೇವೆ. ಈ ಕಾಲದಲ್ಲಿ ಆಕ್ರಮಗಳೂ, ದಾಂಧಲೆಗಳೂ, ಅವಂ ನಡೆಸುವಂತವರ ವಾಲ್ಲಭ್ಯ ಬಲಾನುಗುಣವಾಗಿ ಅವಿಚಾರವಾಗಿ ನಡೆದು ಹೋಗುತಲಿರುವದರಿಂದ ಯಾವ ಲೇಖನವು ಯಾರ ಫಿರ್ಯಾದು ಯೇನುಪ್ರಯೋಜನವನ್ನುಂಟುಮಾಡುವದಕ್ಕೆ ಶಕ್ತವಾದೀತೋ ನಾವರಿಯೆವು. ಇದಕ್ಕೆ ನಿದರ್ಶನವಾಗಿ ಕಳೆದ ಶುಕ್ರವಾರದ ದಿನ ರಾತ್ರಿ ಈ ಊರು ಚಿಕ್ಕಪೇಟೆಯಲ್ಲಿ ಅರ್ಜೀಯವನೊಬ್ಬನು ಪರಸ್ಥಳಕ್ಕೆ ಹೋಗಿ ಬರುವಾಗ್ಗೆ ಕುಡಿದು ಆ ನಿಶೆಯಿಂದ ದಾರಿಯಲ್ಲಿ ಬಿದ್ದು ಪೂರಾ ದೆವ್ವತಗಲಿ ಮನೆಗೆ ಬಂದು ಊಟಮಾಡಿ ಮಲಗಿದನು ಪಾನಾಧಿಕ್ಯದಿಂದಲೋ ಬೇರೆ ಯಾವಕಾರಣದಿಂದಲೋ ಕೆಲವು ಘಂಟೆಗಳೊಳಗಾಗಿ ಮೃತಪಟ್ಟನು. ಮನೆಯವನು ಶನಿವಾರದದಿನ ಬೆಳಗ್ಗೆ ಪೋಲೀಸಿನವರಿಗೆ ರಿಪೋರ್ಟು ಮಾಡಿದನು. ಅದರಮೇಲೆ ಮ್ಯುನಿಸಿಪಲ್ ಪ್ರಸಿಡೆಂಟರು, ಮೆಡಿಕಲ್ ಆಫಿಸರರು, ಪೋಲೀಸ್ ಸೂಪರಿಂಟೆಂಡೆಂಟರವರು ಮೊದಲಾದ ಪ್ಲೇಗ್ ಅಧಿಕಾರಿಗಳು ಬಂದು ನೋಡಿಕೊಂಡು ಹೋದಾಗ್ಗೂ ಪ್ರೇತವನ್ನು ದಹನಮಾಡುವದಕ್ಕೆ ಮಧ್ಯಾಹ್ನೋತ್ತರ ಮೂರು ಘಂಟೆಯವರೆಗೆ ಹುಕುಂಕೊಡದೆ ಪ್ರೇತವು ಬೀದಿಯಲ್ಲಿ ಬಿದ್ದಿದ್ದುದರಿಂದ ದೇವರ ಉತ್ಸವಗಳಿಗೂ, ಆಸ್ಥಾನದಲ್ಲಿರುವ ಬ್ರಾಹ್ಮಣರ ಮನೆಗಳಲ್ಲಿ ಭೋಜನಕ್ಕೂ ಅವಕಾಶವಿಲ್ಲದೆ ಹೋದುದು ಮಾತ್ರವಲ್ಲದೆ ಬೀದಿಯಲ್ಲಿ ಸಂಚಾರಮಾಡುವ ಜನರಿಗೆ, ವಿಶೇಷತಃ ಹುಡುಗರಿಗೆ, ಭೀತಿಯನ್ನುಂಟು ಮಾಡತಕ್ಕದ್ದಾಗಿರುತಿತ್ತು. ಈ ಅನಾಯಕತ್ವಕ್ಕೆ ಯಾರನ್ನು ಗುರಿಮಾಡಬೇಕೋ ನಾವರಿಯೆವು. ಗವರ್ನಮೆಂಟಿನವರು ದೀರ್ಘಾಲೋಚನೆಯಿಂದ ಈ ಷಹರಿಗೆ ಸಮರ್ಥರಾದ ಡಿಸ್ಟ್ರಿಕ್ಟ್ ಆಫೀಸರನ್ನು, ಸಮರ್ಥರಾದ ಪೋಲೀಸ್ ಸೂಪರಿಂಟೆಂಡೆಂಟರನ್ನು, ಸಮರ್ಥರಾದ ಮ್ಯುನಿಸಿಪಲ್ ಪ್ರಸಿಡೆಂಟರು ಮೊದಲಾದವರನ್ನು ಚುನಾಯಿಸಿ ನಿಯಮಿಸಿರುವ ಈ ಕಾಲದಲ್ಲಿ ಸರ್ವವಿಷಯದಲ್ಲೂ ಪ್ರಜೆಗಳಿಗೆ ಬಾಧಕವಾದ ಮೇಲೆ ತಿಳಿಸಿದ ಪ್ರಮಾದಕ್ಕೆ ಯಾರನ್ನು ಗುರಿಮಾಡಬೇಕೋ ನಾವರಿಯೆವು ಈಗಿನ ಸಂದರ್ಭದಲ್ಲಿ ಯಾವಕಾರಣದಿಂದಲೇ ಆಗಲಿ ಮೃತಪಡುವಂತವರ ಕಳೇಬರವನ್ನು ದಹನಬಗ್ಗೆ ಕೊಡಲೆ ಸಾಗಿಸುವದಕ್ಕೆ ತಕ್ಕ ಅನುಕೂಲ್ಯಗಳಂ ಕಲ್ಪಿಸಿಕೊಡುವದು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅವಶ್ಯಕರ್ತವ್ಯವೆಂದು ಸೂಚಿಸುವೆವು.

ಸೂರಾತ್ ಸಿಟಿ ಮ್ಯಾಜಿಸ್ಟ್ರೇಟರಾದ ಮೆ॥ ಭಾಯಿಲಾಲ್ ಎಂಬವರ ಕೋರ್ಟಿನಲ್ಲಿ ಒಂದು ಮೊಕದ್ದಮೆಯು ವಿಚಾರಣೆ ನಡೆಯುತಲಿದ್ದ ಕಾಲದಲ್ಲಿ ಒಬ್ಬ ವಕೀಲರನ್ನು ನೋಡಿ ಅನಾವಶ್ಯಕವಾಗಿ ಅಷ್ಟು ಘಟ್ಟಿಯಾಗಿ ಮಾತನಾಡಬೇಡವೆಂದು ಹೇಳಲು ಸದರೀ ವಕೀಲರು ಆರೀತಿ ಮಾಡುವದಕ್ಕೆ ತನಗೆ ಸಾಧ್ಯವಿಲ್ಲವೆಂದು ಹೇಳಿದರು. ಅದರಮೇಲೆ ಮ್ಯಾಜಿಸ್ಟ್ರೇಟರಿಗೆ ಕೋಪಬಂದು ಸದರೀ ವಕೀಲರಿಗೆ ಒಂದುಕಾಸು ಜುಲ್ಮಾನೆ ವಿಧಿಸಿದರು. ಅದರಮೇಲೆ ಸದರೀವಕೀಲರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ಅಪೀಲ್ ಮಾಡಿದರು. ಇಂತ ಅಲ್ಪವಿಷಯಗಳಲ್ಲಿ ತಾವು ಪ್ರವರ್ತಿಸುವದಕ್ಕೆ ಇಷ್ಟವಿಲ್ಲವೆಂದು ಡಿಸ್ಟ್ರಿಕ್ಟ್ ಜಡ್ಜಿಯವರು ಅಪೀಲನ್ನು ತಿರಸ್ಕರಿಸಿದರು. ಅದರಮೇಲೆ ವಕೀಲರು ಮುಂಬೈ ಹೈಕೋರ್ಟಿನಲ್ಲಿ ಅಪೀಲ್‌ಮಾಡಲಾಗಿ, ಅಲ್ಲಿನ ಜಡ್ಜಿಗಳಾದ ಮೆ॥ ಪಾರ್ಸನ್ ಮತ್ತು ಮೆ॥ ರಾನಡೆಯವರು ಕೆಳಕೋರ್ಟಿನ ಹುಕುಮನ್ನು ರದ್ದುಮಾಡಿ ಲಾ ಅನುಸರಿಸಿ ಅಪೀಲನ್ನು ವಿಚಾರಿಸಿ ಫೈಸಲ್ಮಾಡತಕ್ಕದೆಂದು ಡಿಸ್ಟ್ರಿಕ್ಟ್ ಜಡ್ಜಿಗೆ ಹುಕುಂಕೊಟ್ಟರು.

LOCAL AND PROVINCIAL NEWS.
ಒಳದೇಶವು ಮತ್ತು ತಾಲ್ಲೂಕಿ ಜಾತಿವೃತ್ತಾಂತಗಳು

ಕಳೆದ ಶನಿವಾರದದಿನ ಮಧ್ಯಾಹ್ನಾನಂತ್ರ ಮೂರು ಘಂಟೆಗೆ ಬಲವಾಗಿ ಗಾಳಿಯು ಬೀಸಿ ಸುಮಾರು ಒಂದು ಇಂಚ್ ಆಗುವಷ್ಟು ವರ್ಷ ಬಿದ್ದು ತರುವಾಯ ಬಹಳಹೊತ್ತು ತುಂತುರು ಮಳೆ ಬೀಳುತಲಿತ್ತು.

ಕಳೆದ ಶನಿವಾರದದಿನ ಸಾಯಂಕಾಲ ಸುಮಾರು ಆರುಘಂಟೆಗೆ ಡಾಕ್ಟರ್ ಆರುಮುಗಮುದಲಿಯಾರ್ರವರು ದೊಡ್ಡವರು ಹುಡುಗರು ಸೇರಿ ಸುಮಾರು ನಾಲ್ಕುನೂರು ಜನರಿಗೆ ಇನಾಕ್ಯುಲೇಷನ್ ಎಂಬ ಬೇವಿಗುತ್ತು ಹಾಕಿದರು. ಇವರಲ್ಲಿ ಪ್ರಾಯಶಃ ಬ್ರಾಹ್ಮಣರೇ ಅಧಿಕವಾಗಿದ್ದರು. ಇನ್ನು ಅನೇಕರು ಈ ಕಾರ್ಯಕ್ಕೆ ಪ್ರಯತ್ನಪಡುತಿದ್ದಾರೆ.

ಈ ತಿಂಗಳ ೨೦ನೆಯ ತಾರೀಖಿನಲ್ಲಿ ಒಂದು ಚೋರಿ ಮೊಕದ್ದಮೆಗೆ ಸಂಬಂಧಪಟ್ಟ ಒಬ್ಬ ಖೈದಿಯನ್ನು ಇಬ್ಬರು ಪೋಲೀಸ್ ಕಾನಿಸ್ಟೇಬಲ್‌ಗಳು ಕರೆದುಕೊಂಡು ದಾಗೀನಾ ಪತ್ತೆಯ ಬಗ್ಗೆ ಮಹಾರಾಜರವರ ಅರಮನೆ ಯಂತ್ರದ ಕಾರ್ಖಾನೆಯ ಪಕ್ಕದಲ್ಲಿರುವ ಕೆರೆಯಕಟ್ಟೆಯ ಮೇಲೆ ಹೋಗುತ್ತಿರುವಲ್ಲಿ ಅಪರಾಧಿಯು ಕೆರೆಯ ನೀರಿನಲ್ಲಿ ಧುಮುಕಿದಲು ಪೋಲೀಸ್ ಕಾನ್ಸ್ಟೇಬಲ್‌ಗಳ ಪೈಕಿ ಒಬ್ಬಾತನು ಅಪರಾಧಿಯನ್ನು ಹಿಡಿದು ತರುವದಕ್ಕಾಗಿ ತಾನೂ ನೀರಲ್ಲಿ ಧುಮುಕಿದನು. ಅಪರಾಧಿಯು ತನ್ನರಕ್ಷಣಾರ್ಥ ನೀರಲ್ಲಿ ಇಳಿದಿದ್ದ ಪೋಲೀಸನವನನ್ನು ಒಳಕ್ಕೆ ಕರೆದುಕೊಂಡನಾಗಿ ಇಬ್ಬರು ಮರಳಿ ಹೊರಗೆ ಬರಲಿಲ್ಲವು. ತರುವಾಯ ಇಬ್ಬರ ಮುರ್ದೆಗಳನ್ನೂ ಹೊರಗೆ ತೆಗೆಯಿಸಿಹಾಕಿದರು.

THE MYSORE GAZETTE.
ಮೈಸೂರು ಗೆಜೆಟಿ.

ತಾರೀಖು ೨೨ನೇ ಸಪ್ಟಂಬರ್ ೧೮೯೮.

ಇಶ್ತಿಹಾರ್ ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ ೧೫ನೇ ಸಪ್ಟಂಬರ್ ೧೮೯೮.

ನಂ॥ ೬೬೯೬—ಜಿ. ೩೧೨.—ಸಬ್‌ರಿಜಿಸ್ಟ್ರಾರುಗಳ ಇವರಡಿ ಕಂಡ ಮೊಕರರಾತಿಗಳು ವರ್ಗಾವರ್ಗಿಗಳು ಮತ್ತು ನೇಮಣೂಕಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

೧. ಡೆಪ್ಯುಟಿ ಅಮಲ್ದಾರರಾಗಿ ಮೊಕರರ್ಮಾಡಲ್ಪಟ್ಟ ಆ. ಸಿ. ಸದಾಶಿವ ಪಿಳ್ಳೆಯವರಿಗೆ ಬದಲಾಗಿ ಮೈಸೂರು ತಾಲ್ಲೂಕು ರಿಜಿಸ್ಟ್ರಾರ್ ಕೆ. ಸುಬ್ಬಣ್ಣನವರು ಎಡತೊರೆಯ ಮೊದಲನೇ ಗ್ರೇಡ್ ಸಬ್‌ರಿಜಿಸ್ಟ್ರಾರಾಗಿರತಕ್ಕದ್ದು.

೨. ರೆವಿನ್ಯೂ ಇಲಾಖೆಗೆ ವರ್ಗಮಾಡಲ್ಪಟ್ಟ ಜಿ. ಎಸ್. ರಾಮಸ್ವಾಮಿ ಅಯ್ಯಂಗಾರ್ರಿಗೆ ಬದಲಾಗಿ ಮೂರನೇ ಗ್ರೇಡ್ ಸಬ್‌ರಿಜಿಸ್ಟ್ರಾರ್ ಕೆ. ದೊಡ್ಡಸ್ವಾಮಿ ಅಯ್ಯಂಗಾರ್ ಬಿ. ಎ ಯವರು ಹೊಸಕೋಟೆಯಿಂದ ಆನೆಕಲ್ಲಿಗೆ.

೩. ಮೂರನೇ ಗ್ರೇಡ್ ಸಬ್‌ರಿಜಿಸ್ಟ್ರಾರ್ ಜೋಶಿ ಆನಂದರಾಯರು ದಾವಣಗೆರೆಯಿಂದ ಹೊಸಕೋಟೆಗೆ.

೪. ಮೂರನೇ ಗ್ರೇಡ್ ಸಬ್‌ರಿಜಿಸ್ಟ್ರಾರ್ ಎಂ. ರಾಮರಾಯರು ಮೊಳಕಾಲ್ಮೂರಿನಿಂದ ದಾವಣಗೆರೆಗೆ.

೫. ಇನ್‌ಸ್ಪೆಕ್ಷನ್ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸ್ ಅಸಿಸ್ಟಂಟ್‌ಕ್ಲಾರ್ಕ್ ಎಂ. ವೆಂಕಟಾಚಲ ಅಯ್ಯಂಗಾರ್ರು ಮೊಳಕಾಲ್ಮೂರಿನ ಮೂರನೇ ಗ್ರೇಡ್ ಸಬ್‌ರಿಜಿಸ್ಟ್ರಾರಾಗಿರತಕ್ಕದ್ದು.

ತಾ॥ ೧೬ನೇ ಸಪ್ಟಂಬರ್ ೧೮೯೮.

ನಂ॥ ೬೬೬೧—ಜಿ. ೩೧೬.—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೩೬ನೇ ಸಕ್ಷನ್ ಅನುಸರಿಸಿ, ಕೋಲಾರ್ ಗೋಲ್ಡ್ ಫೀಲ್ಡ್ಸ್ ರೇಂಜಿನ ಅಸಿಸ್ಟಂಟ್ ಕಮಿಷನರ್ ಮೊದಲನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಬಿ. ಚಿ. ಕುಮಾರಸ್ವಾಮಿ ನಾಯುಡುರವರಿಗೆ ಸದರಿ ಕ್ಲಾಸಿನ ಮ್ಯಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೋಡಿನ ೩ನೇ ಷೆಡ್ಯೂಲಿನಲ್ಲಿ ಜಾಸ್ತಿ ಅಧಿಕಾರವಾಗಿ ವಿವರಿಸಲ್ಪಟ್ಟ ಇದರಡಿ ಕಂಡ ಅಧಿಕಾರವು ಸದರೀಯವರು ಮೇಲ್ಕಂಡ ರೇಂಜಿನ ಚಾರ್ಜಿನಲ್ಲಿರುವವರೆಗೆ ಚಲಾಯಿಸುವ ಬಗ್ಗೆ ಕೊಡಲ್ಪಟ್ಟಿರುತ್ತೆ:—

೧ ಎರಡು ಮತ್ತು ಮೂರನೇ ಕ್ಲಾಸಿನ ಮ್ಯಾಜಿಸ್ಟ್ರೇಟರುಗಳಿಂದ ಸಜಾ ವಿಧಿಸಲ್ಪಟ್ಟವರ ಮೇಲೆ ಬರುವ ಅಪ್ಪೀಲುಗಳನ್ನು ದ್ವಿತೀಯ ವಿಚಾರಣೆ ಮಾಡುವ ಅಧಿಕಾರ, ಸಕ್ಷನ್ ೪೦೭.

ನಂ॥ ೬೬೯೬.—ಜಿ. ೩೨೧ ೧೮೯೭ನೇ ಇಸವಿ ಆಗಸ್ಟ್ ೧೨ನೇ ತಾರೀಖು ೧೩೧ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ ಘೋಷಿಸಲ್ಪಟ್ಟ ರಿಜಿಸ್ಟ್ರೇಷನ್ ರೂಲುಗಳ ಪಟ್ಟಿಗೆ ಸೇರಿದ ಗೇಣಿಗಳಿಗೆ ಸಂಬಂಧಪಟ್ಟ ನಂ॥ ೧, ೨ ಮತ್ತು ೩ನೇ ರೂಲ್ಸ್‌ಗಳಿಗೆ ಬದಲಾಗಿ ಇದರಡಿಕಂಡ ರೂಲ್ಸುಗಳನ್ನು ಸೇರಿಸತಕ್ಕದ್ದೆಂದು ೧೮೭೭ನೇ ಇಸವಿಯ III ನೇ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ ೬೯ನೇ ಸಕ್ಷನ್ ಪ್ರಕಾರ ಮೈಸೂರು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

೧. ಒಂದು ವರುಷಕ್ಕೆ ಮೀರಿದ ಅವಧಿಗಳ ಗೇಣಿಗಳ ವಿಷಯದಲ್ಲಿ ಪೂರಾ ವಾಯಿದೆವರೆಗೆ ಕೊಡತಕ್ಕ ಒಟ್ಟು ಗುತ್ತಿಗೆಯೇ ಕಿಮ್ಮತ್ತಾಗಿರತಕ್ಕದ್ದು. ಇತರ ಗೇಣಿಗಳ ವಿಷಯದಲ್ಲಿ ಒಂದು ವರುಷದ ಗುತ್ತಿಗೆಯೇ ಕಿಮ್ಮತ್ತಾಗಿರತಕ್ಕದ್ದು. ಎಲ್ಲಾ ಸಂದರ್ಭಗಳಲ್ಲೂ ದಂಡ ಯಾ ಹೆಚ್ಚು ಮೊಬಲಗು ಯಾವದಾದರೂ ಇದ್ದರೆ ಅದನ್ನು ಕಿಮ್ಮತ್ತಿಗೆ ಸೇರಿಸತಕ್ಕದ್ದು.

೨. ಗುತ್ತಿಗೆಯು ಆಸಾಮಿ ಮೂಲಕ ಕೊಡತಕ್ಕದ್ದಾಗಿದ್ದರೆ ಕಿಮ್ಮತ್ತನ್ನು ಸ್ಟಾಂಪಿನಮೇಲೆ ನಿಶ್ಚಯಿಸ ಬೇಕಾದಷ್ಟು, ಆದರೆ ಗೇಣಿ ದಸ್ತಾವೇಜಿಗೆ ಸ್ಟಾಂಪುಬಿದ್ದರೆ ಆಗಾಜಿನ ಕಿಮ್ಮತ್ತನ್ನು ಚಾಲ್ತಿ ಧಾರಣೆಗಳ ಮೇರಿಗೆ ಲೆಕ್ಕ ಮಾಡತಕ್ಕದ್ದು.

ತಾರೀಖು ೧೭ನೇ ಸೆಪ್ಟಂಬರ್ ೧೮೯೮.

ನಂ॥ ೨೦೬೧.-ಸಿ. ಫೈ. ೧೧೨—೯೭.—ತುಮಕೂರು ಡಿಸ್ಟ್ರಿಕ್ಟಿನ ಅಸಿಸ್ಟಂಟ್ ಕಮಿಷನರ್ ಮೆ॥ ಎ. ಸುಬ್ರಹ್ಮಣ್ಯ ಅಯ್ಯರ್ ಯವರಿಗೆ ೧೮೯೮ನೇ ಮೇ ೨೮ನೇ ಮುರ್ಸ್ಲಂ ೧೨೪೫-ರ, ಫೈ. ೧೧೨—೯೭ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ ನಾಮೆಯಲ್ಲಿ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾ ಮತ್ತೊಂದು ತಿಂಗಳು ಜಾಸ್ತಿ ಮಾಡಲ್ಪಟ್ಟು ಆರೈಕೆ ೧೬ ದಿನಗಳು ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೯೮ನೇ ಆರ್ಟಿಕಲ್ ಮೇರಿಗೂ ಮತ್ತು ಮಿಕ್ಕವು ೨೦೩ (ಬಿ) ಮತ್ತು ೨೦೭ (ii)ನೇ ಆರ್ಟಿಕಲ್‌ಗಳ ಮೇರಿಗೂ ಕೊಟ್ಟಿರುತ್ತೆ.

ತಾ॥ ೧೯ನೇ ಸೆಪ್ಟಂಬರ್ ೧೮೯೮.

ನಂ॥ ೨೦೩೦.-ರ. ೯೯೬.—ಮತ್ತೊಂದು ಹುಕುಂ ನಿರೀಕ್ಷಿಸಿ ಇದರಡಿಕಂಡ ಆಕ್ಟಿಂಗ್ ಮೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

೧ ಆಲೂರು ಸಬ್‌ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮೆ॥ ಎ. ದೇಸಿಕಾಚಾರು ಹಾಸನ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಇರತಕ್ಕದ್ದು.

೨. ಹಾಸನ ಡಿಸ್ಟ್ರಿಕ್ಟ್ ಆಫೀಸಿನ ಜುಡಿಷಿಯಲ್ ಹೆಡ್ ಮುನ್ಷಿ ಎಸ್. ಕೃಷ್ಣಪ್ಪನವರು ಆಲೂರು ಸಬ್‌ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಇರತಕ್ಕದ್ದು.

ಪಬ್ಲಿಕ್‌ವರ್ಕ್ಸ್ ಇಲಾಖಾ.

ಇಸ್ತಿಹಾರನಾಮಾ.

ತಾ॥ ೧೯ನೇ ಸೆಪ್ಟಂಬರ್ ೧೮೯೮.

ನಂ॥ ೯೩೪-೩೭೨೮೯೮.—ಮೆ॥ ಕೆ. ಆರ್. ಶೇಷಾಚಾರ್ ಬಿ. ಎ. ಯವರು ಮಾಹೆಯಾನ ೮೦ ರೂಪಾಯಿಗಳ ತೈಬಿನ ೩ನೇ ಕ್ಲಾಸ್ ನಂಬರು ಸ ಅಸಿಸ್ಟಂಟ್ ಇಂಜಿನಿಯರಾಗಿ ಮೊಕರರ್ಮಾಡಲ್ಪಟ್ಟು ಪ್ಲಾನ್ ಸರ್ಕಲ್ ಮೈಸೂರ್ ಡಿವಿಜನ್ನಿಗೆ ನೇಮಿಸಲ್ಪಟ್ಟಿದ್ದಾರೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಮುಂಬಯಿಯಲ್ಲಿ ಮುಸಲ್ಮಾನರ ಒಂದು ಗಿರಣಿಗೆ ಬೆಂಕಿಬಿದ್ದು ೪೫೦೦೦ ರೂಪಾಯಿಯ ಲುಕ್ಸಾನಾಯಿತು.

ಬನಾರಸಿನಿಂದ ಬಂದ ತಂತಿಯಿಂದ ತಿಳಿಯುವದೇನೆಂದರೆ—ಅಲ್ಲಿ ಭಾಗೀರಥಿಗೆ ಮಹಾಪ್ರವಾಹ ಬಂದು ಆ ಶಹರದ ಪ್ರಕ್ಕಳ ಭಾಗವು ಜಲಮಯವಾಗಿದೆ.

ತಿಬೇಟದೊಳಗಿನ ಜನರುಸತ್ತವರ ಶರೀರವನ್ನು ತುಂಡುಗಳನ್ನಾಗಿ ಮಾಡಿ ಹಾಸಗಳಿಗೆ ತಿಂಬುವದಕ್ಕಾಗಿ ಸಂಕೋಚರದಲ್ಲಿ ಬಿಸಾಟು ಬಿಡುತ್ತಾರೆ.

ಚೀನಾದ ಉತ್ತರ ಭಾಗದ ಟೀಂಟ್ಸಿಯಲ್ಲಿ ಗೇಯಿಟೇ ಬಾಜಾರದ ಸಮೀಪದಲ್ಲಿ ಕೆಲವುಕಡೆ ಜನರು ಕೆಲಸ ಮಾಡುತ್ತಿರಲು ಏಕಾಏಕಿ ಭೂಮಿಯು ಬಿರಿದು ಆ ಬಿರುಕಿನ ಪೈಕಿ ಮೂರುಜನರು ಒಳಗೆ ಬಿದ್ದು ಮೃತ ಪಟ್ಟರು.

ಬೆಂಗಾಳಿಯಲ್ಲಿದ್ದ ನಾನಾಸಂಬಂಧಗಳಿಗೆ ಸರಕಾರದವರು ಪ್ರಜೆಗೆ ಹೋಗಲಿಕ್ಕೆ ಅಪ್ಪಣೆಕೊಟ್ಟರೆಂದು ಗೊತ್ತಾಗುತ್ತದೆ. ಲೋಕಮಾನ್ಯತಿಲಕರನ್ನು ಬಿಟ್ಟು ಕೇಸರಿಗೆ ದಾತ್ರರಾದಂತೆ ಈ ಸರದಾರರ ವಿಷಯದಲ್ಲಿಯೂ ದಯಾಬುದ್ಧಿಯನ್ನು ತೋರಿಸಿದ್ದ ವಿಹಿತವು.

ಭಯಂಕರ ಖೂನು—ನವಲಗುಂದ ತಾಲೂಕ ನರಗುಂದ ಪೇಟೆಯಲ್ಲಿನ ಮಣಸಾಳಿ ಎಂಬ ಹಳ್ಳಿಯಲ್ಲಿ ಒಬ್ಬ ಹನ್ನೆರಡು ವರ್ಷ ವಯಸ್ಸಿನ ಭೀಮಾ ಬಿನ್ ನಾಗಪ್ಪ ಮುಣಸಿ ಎಂಬ ಹುಡುಗನು ತಾನು ಊಟ ಮಾಡುವಕಾಲದಲ್ಲಿ ತನ್ನ ತಂದೆಯು ಬೈದು ಊಟದ ಪಾತ್ರೆಯನ್ನು ಕಸಕೊಂಡನೆಂಬ ಸಿಟ್ಟಿನಿಂದ ಕೊಡ್ಲಿಯನ್ನು ತೆಗೆದುಕೊಂಡು ತನ್ನ ತಂದೆಯ ತಲೆಗೆ ಹೊಡೆದದ್ದರಿಂದ ಸದರಿಯವನು ಆಗಲೇ ಸ್ವರ್ಗವನ್ನು ಕುರಿತು ತೆರಳಿದನು. ಈಗ್ಯೆ ಸದರೀ ಭೀಮನ ಮೇಲೆ ಖಟ್ಲೆಯಾಗಿ ಚೌಕಶಿಯು ನಡೆಯುತ್ತದೆ.

ಲಂಡನಿನಲ್ಲಿ ಕೂತಿರುವ ನಾನ್ಯಾಯ ಕಮಿಟಿಯವರ ಮುಂದೆ ನಾನ್ಯಾಯದ ವ್ಯವಹಾರದಲ್ಲಿ ಪೂರಾ ತಿಳುವಳಿಕೆ ಯುಳ್ಳವರಾದಂತ ದೊಡ್ಡ ಅಧಿಕಾರಿಗಳ ಸಾಕ್ಷಿಗಳಾದವು. ಅವರೆಲ್ಲರೂ ಸರಕಾರೀ ಟಂಕಸಾಲೆಯನ್ನು ಸಾರ್ವಜನಿಕ ಜನರಿಗೆ ಕಟ್ಟುಮಾಡಿದ್ದು ಹೇಗೆ? ಮುಂದೆ ಕೆಲವು ವರ್ಷ ಹೋಗಿದರೆ ಬಂಗಾರದ ನಾಣ್ಯವನ್ನು ನಡೆಸಲಿಕ್ಕೆ ಸೋಯಿ ತಾಗಿ ಅನುಕೂಲವಾಗುವದೆಂದು ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಅದರಿಂದ ದೇಶದಲ್ಲಿ ನಾಣ್ಯದ ಕೊರತೆಯು ಸದ್ಯಕ್ಕೆ ಹಿಪ್ಪೆತ್ತುವ ಸಂಭವ ತೋರುವದಿಲ್ಲ. ಪೂರ್ವಕಾಲದ ಋಷಿಯರು ಹೇಳಿದಂತೆ ಬೊಂಗರ ಕೊರಳೊಳಗೆ ಕಟ್ಟಿದ ಮಂಗಳಸೂತ್ರಕಪ್ಪದ ಹೊತ್ತು ಬರುವದೋ ಏನೋ ತಿಳಿಯದು.

ಮನುಷ್ಯ ಭಕ್ಷಕ ವೃಕ್ಷವು—ಈ ಗಿಡವು ಸುರಮರ ಗಿಡದಂತೆ ಸಿಪ್ಪೆಗೆ ಆಕೃಕಿದಲ್ಲಿ ಬೆಳೆಯುವದು. ಇದರ ಎತ್ತರವು ಸುಮಾರು ೧೧, ೧೨ ಘಟಿನವರೆಗೆ ಇರುತ್ತದೆ. ಇದರ ಸಣ್ಣ ಎಲೆಗಳು ೧೦, ೧೧ ಘಟು, ಮತ್ತು ದೊಡ್ಡ ಎಲೆಗಳು ೧೫, ೨೦ ಘಟು ಇರುತ್ತವೆ. ಈ ಎಲೆಗಳ ಮೇಲೆ ೧೫೦ ರಾತಲ್ ತೂಕದ ಮನುಷ್ಯರು ಕೂತರೂ ಸಹ ಅವು ಮುರಿಯುವದಿಲ್ಲ. ಹಿಂದಕ್ಕೆ ಕಾಡು ಜನರು ಸೈತಾನ ಗಿಡವೆಂಬ ಹೆಸರು ಕೊಟ್ಟು ಇದರ ಪೂಜೆ ಮಾಡುತ್ತಿದ್ದರು. ವಾರ್ಷಿಕ ಪೂಜೆ ದಿವಸ ಈ ಗಿಡಕ್ಕೆ ಒಂದು ನರಬಲಿಯನ್ನು ಕೊಡುತ್ತಿದ್ದರು. ಬಲಿಕೊಡತಕ್ಕವನ ಕೈಕಾಲುಗಳನ್ನು ಕಟ್ಟಿ ಗಿಡದ ನಡುಭಾಗದಲ್ಲಿ ಕೂತಿಸುವರು. ಕೂಡಲೆ ಆ ಎಲೆಗಳು ಆತನನ್ನು ತಮ್ಮಿಂದ ತಾವೇ ಮುಚ್ಚಿಕೊಂಡು ಬಹಳ ವೇಗದ ಮನುಷ್ಯನು ಗುಪ್ತನಾಗುತ್ತಿದ್ದನು. ಇಷ್ಟೇ ಅಲ್ಲ, ಆತನ ಎಲುಬು ಮಾಂಸಗಳು ಸಹ ಇಲ್ಲದೆ ಹೋಗುತ್ತಿದ್ದವು. ಆ ಮನುಷ್ಯನು ಪೂರ ಗುಪ್ತ ಆಗುವವರೆಗೆ ಎಲೆಗಳು ಬಿಚ್ಚುತ್ತಿದ್ದಿಲ್ಲ. ಈ ವೃಕ್ಷವು ದಕ್ಷಿಣ ಆಫ್ರಿಕೆಯಲ್ಲಿ ಕ್ವಚಿತ್ತಾಗಿ ಕಾಣ ಬರುತ್ತದೆ.

VAIDYASARA SANGRAHA.

A TREATISE ON THE PRINCIPLES OF
HINDU MEDICINE
Price, including Postage Rs. 5-0-0.

ವೈದ್ಯಸಾರಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತಿದೆ.

ಅದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್

ಡೆಲಿವರಿ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

BANGALORE CITY MUNICIPALITY.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖ್ ೧೯ನೇ ಜುಲೈ ೧೮೯೮

ಸನ್ ೧೮೯೮ನೇ ಇಸವಿ ಸಪ್ಟಂಬರ್ ೨೯ನೇ ತಾರೀಖ್ ಬೃಹಸ್ಪತಿವಾರದ ದಿನ ಬೆಳಿಗ್ಗೆ ೩॥ ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮ್ಮಿಷನರಿಗಳು ತಮ್ಮ ಆಫೀಸ ಕಟ್ಟಡದಲ್ಲಿ ಸಾಮಾನ್ಯ ಸಭೆಸೇರುವಾಗ ಇದರಡಿ ತಿಳಿಸಲ್ಪಡುವ ಕೆಲಸಗಳು ನಡೆಸಲ್ಪಡುವವು:—

೧. ಸನ್ ೧೮೯೮ನೇ ಇಸವಿ ಆಗಸ್ಟ್ ತಿಂಗಳ ನಗದು ಜಮಾಖರ್ಚ ಲೆಕ್ಕ, ವಾರ್ಡುಗಳು, ... ಚಿಕಿತ್ಸೆಮಾಡುವ ಮೆಡಿಕಲ್ ಆಫೀಸರಲೆಕ್ಕ, ತಗಾದೆ, ವಸೂಲಿ ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ಛತ್ರಕ್ಕೆ ಹೋಗಿದ್ದ ಜನರನ್ನು ಕುರಿತ ಮಾದರಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷ ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ದೀಪಗಳನ್ನು ಕುರಿತ ಟಿಪ್ಪಣಿ ಸಂಗ್ರಹ, ಪ್ರಸವಾಸ್ಪತ್ರೆಯ ಲೆಕ್ಕ, ಅಗ್ನಿಶಾಮಕ ಲೆಕ್ಕ, ದಳವಾಯಿ ಲೆಕ್ಕ, ನಾಯಿಗಳನ್ನು ಕೊಲ್ಲುವದಕ್ಕೆ ಇಡಲ್ಪಟ್ಟ ಇನಾಂಗಳ ಲೆಕ್ಕ, ಮತ್ತು ಕ್ರಿಮಿನಲ್ ಪಿರ್ಯಾದಿಗಳ ಲೆಕ್ಕ.

೨. ಒಂದು ವರ್ಷ ಕಾಲಕ್ಕೆ ಪಂಗಾಯಿದಾಗಿ ಕೆಲವು ಬ್ಯಾಂಡಿನವನ್ನು ಇಟ್ಟುಕೊಳ್ಳುವಂತೆ ಮಂಜೂರಾತ್ರಿ ಆಬಗ್ಗೆ ತಗಲುವ ಖರ್ಚು ಯಾವ ಹುಟ್ಟುವಳಿಯಿಂದ ಕೊಡಲ್ಪಡುವದೂ ಅದನ್ನು ತಿಳಿಸಬೇಕೆಂದು ಅಪೇಕ್ಷಿಸಿ, ೧೮೯೮ನೇ ಇಸವಿ ಸೆಪ್ಟಂಬರ್ ೬ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ 3177—74—L. F. 4—98 ನೇ ನಂಬರ್ ಪ್ರೊಸೀಡಿಂಗ್ಸ್.

೩. ಮಾರ್ಕೆಟಿನ ರಿಜಿಸ್ಟ್ರಾರುಗಳ ಕೆಲಸಗಳು ಎಲ್ಲರಿಗೂ ಸಮವಾಗಿರತಕ್ಕ ಬಗ್ಗೆ ಮ್ಯುನಿಸಿಪಲ್ ಡಿವಿಜನ್‌ಗಳ ಪೈಕಿ ಕೆಲವನ್ನು ವಿಭಾಗ ಮಾಡಬೇಕೆಂದು ಸೂಚಿಸಿ ಪ್ಲೇಗ್‌ಕಮಿಷನರವರು ೧೮೯೮ನೇ ಇಸವಿ ಜುಲೈ ೧೨ನೇ ತಾರೀಖಿನಲ್ಲಿ ಬರೆದ ೫೧೦ನೇ ನಂಬರ್ ಟಿಪ್ಪಣಿ.

೪. ಸಿಟಿಯಲ್ಲಿನ ಅಸಾಧಾರಣವಾದ ರೋಗಪೀಡಿತರಾದವರ ಪಾಲೆಯಲ್ಲಿರುವ ಜನರನ್ನು ಗಾರ್ಡನ್‌ಸ್ಟ್ರೀಟ್ ಎಂಬ ಪಾಲೆಗೆ ಮಾರಿ ವರ್ಗಮಾಡುವ ವಿಷಯದಲ್ಲಿ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿಸ್ಟೇಷನ್ ಫ್ರೆಂಚ್ ಇಗರ್ಜಿ ಸೊಸೈಟಿಯ ಆನರರಿ ಸೆಕ್ರೆಟರಿಯವರಿಂದ ಬಂದ ೧೮೯೮ನೇ ಇಸವಿ ಸೆಪ್ಟಂಬರ್ ೬ನೇ ಮುರ್ಸಲಂ ೬೯—೯೮ನೇ ನಂಬರ್ ಲೆಟರ್

೫. ಕಬ್ಬಿಣಪಾರ್ಕಿನಲ್ಲಿ ತೋಟದಲ್ಲಿ ಅನವಶ್ಯಕವಾಗಿರುವ ಒಂದುತಿಂಗಳಕಾಲ ಗ್ಯಾಸ್‌ಲೈಟ್ ಅಂದರೆ ದೀಪವು ಬೀಳು ಹಾಕುವದಕ್ಕೆ ಬೇಕಾದ ಉಪಕರಣಗಳನ್ನಿಡುವ ವಿಷಯದಲ್ಲಿ ಮೆಸ್ಸರ್ಸ್ ಪಿ. ಆರ್. ಆರ್ಡನ್ಸ್ ಕಂಪನಿಯವರು ೧೮೯೮ನೇ ಇಸವಿ ಆಗಸ್ಟ್ ೩೦ನೇ ತಾರೀಖಿನಲ್ಲಿ ಬರೆದ ಲೆಟರ್.

೬. ಆಹಾರ ಮತ್ತು ಪಾನೀಯ ಪದಾರ್ಥಗಳನ್ನು ತಯಾರ್ಮಾಡಿ ಮಾರುವವರು ಮೊದಲಾದ ವಿಷಯದಲ್ಲಿರುವ ಉಪನಿಬಂಧನೆಯು ಜಾರಿಯೊಳು ತರುವಿಕೆ.

೭. ಕೋಟೆಯ ಡಿಸ್ಪೆನ್ಸರಿಯ ಚಿಲ್ಲರೆ ನೌಕರರಿಬ್ಬರಿಗೆ ಬಂದುರೂಪಾಯಿನಂತೆ ಇಜಾಫೆ ಕೊಡಬೇಕೆಂದು ಪ್ರಿನ್ಸಿಪಾಲ್ ಮೆಡಿಕಲ್ ಆಫೀಸರ್ ಮತ್ತು ಸಾನಿಟರಿ ಕಮಿಷನರವರು ೧೮೯೮ನೇ ಇಸವಿ ಸೆಪ್ಟಂಬರ್ ೯ನೇ ತಾರೀಖಿನಲ್ಲಿ ಬರೆದ ೯೬೨ನೇ ನಂಬರ್ ಲೆಟರ್.

೮. ಮೈಸೂರು ಬೆಂಗಳೂರು ರಸ್ತೆಯಲ್ಲಿ ಹೊಸದಾಗಿ ಸ್ಮಶಾನ ಮಾಡತಕ್ಕ ಬಗ್ಗೆ ಪಡಕೊಂಡ ಜಮೀನಿಗೆ ಕಂಪನ್ಸೇಷನ್ ಕೊಡಬೇಕಾದುದು

೯. ಅಸಿಸ್ಟಂಟ್ ಸರ್ಜನ್ ಮೆ॥ ಮಹಮ್ಮದ್ ಉಸ್ಮಾನ್ ಯವರು ಸಾನಿಟರಿ ಇನ್‌ಸ್ಪೆಕ್ಟರಾಗಿ ಕೆಲಸವನ್ನು ನೋಡಿದ ಕಾಲದಲ್ಲಿ ಅವರಿಗೆ ರುಸುಂ ಕೊಡಬೇಕಾದ ವಿಷಯದಲ್ಲಿ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರವರು ೧೮೯೮ನೇ ಇಸವಿ ಸೆಪ್ಟಂಬರ್ ೬ನೇ ತಾರೀಖಿನಲ್ಲಿ ಬರೆದ ೯೧೮ನೇ ನಂಬರ್ ಟಿಪ್ಪಣಿ.

೧೦. ವೆಸ್ಟರ್ನ್ ಪಾಲ್ಕರ್ಸ್ಟ್ರೀಟ್‌ನಲ್ಲಿರುವ ನಿವಾಸ ಸ್ಥಳದ ಬಳಿ ಇರುವ ಖಾಲಿ ನಿವೇಶನದಲ್ಲಿ ಸ್ವಂತವಾಗಿ ಒಂದು ತರ್ಕಾರೀ ಮಾರ್ಕೆಟ್ಟನ್ನು ಸ್ಥಾಪಿಸಬೇಕೆಂಬ ವಿಷಯ.

೧೧. ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಆಕ್ಟ್ರಾಯಿ ಸೂಪರಿಂಟೆಂಡೆಂಟಾಗಿದ್ದ ಗತಿಸಿದ ಮೆ॥ ಸಮಿನಾಸಪಿಳ್ಳೆಯವರು, ೧೮೯೬ನೇ ಇಸವಿ ಜನವರಿ ಗುರ್ಬೆತಾರೀಖು ಮೊದಲು ಏಪ್ರಿಲ್ ೩೦ನೇ ತಾರೀಖವರೆಗೂ, ೧೮೯೭ನೇ ಫೆಬ್ರವರಿ ೧೫ನೇ ತಾರೀಖ್ ಮೊದಲು ೧೮೯೭ನೇ ಮಾರ್ಚಿ ೩೧ನೇ ತಾರೀಖ್‌ವರೆಗೂ ತಮ್ಮ ಸ್ವಂತ ಕೆಲಸಗಳೊಂದಿಗೆ ಇಲೆಕ್ಷನ್ ಇಲಾಖಾ ಚಾರ್ಜ್ ವಹಿಸಿದ್ದ ಬಗ್ಗೆ ತಮಗೆ ರುಸುಂ ಕೊಡಿಸಬೇಕೆಂದು ೧೮೯೭ನೇ ಇಸವಿ ಮಾರ್ಚಿ ತಿಂಗಳಲ್ಲಿ ಅವರು ಕೇಳಿಕೊಂಡಿದ್ದಂತೆ, ರುಸುಂ ಕೊಡಿಸಬೇಕೆಂದು ಅವರ ಭಾರ್ಯೆಯಾದ ಮಾಣಿಕ್ಯಮ್ಮಾಳ್ ೧೮೯೮ನೇ ಇಸವಿ ಜುಲೈ ೩೦ನೇ ತಾರೀಖಿನಲ್ಲಿ ಬರೆದುಕೊಂಡ ಪಿಟಿಷನ್.

H. RAMAIYAH.
for President,
City Municipal Commission.

BANGALORE:—Printed and Published at the KARNATAKA PRESS, No. 40, HOSPITAL ROAD,—1898.

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು — ಸಾಲ 1 ಕ್ಕೆ ... 3 0 0; 6 ತಿಂಗಳಿಗೆ .. 2 0 0; 3 ತಿಂಗಳಿಗೆ 1 4 0 | ಸಾಲ 1 ಕ್ಕೆ .. 4 0 0; 6 ತಿಂಗಳಿಗೆ .. 2 8 0; 3 ತಿಂಗಳಿಗೆ · 1 8 0

ಜಾಹೀರಾತು: ಮೊದಲನೆಯದಕ್ಕೆ ಪಙ್ತಿ ಒಂದಕ್ಕೆ 0 2 0; ಎರಡನೆಯದಕ್ಕೆ ಪಙ್ತಿ ಒಂದಕ್ಕೆ 0 1 0

VoL. XXV. BANGALORE:—MONDAY, OCTOBER 3, 1898. No. 40.

Select Telegrams.

London, 25th Sept—Col Parsons, with the Kassala garrison, captured Gedaref, on the 22d, after three hours' severe fighting Five hundred Dervishes were killed, the losses of the attacking force being ninety-six Egyptians killed and wounded.

Bombay, 16th Sept,—A Hongkong telegram to the *Times of India* says that it is stated authoritatively at Shanghai that Great Britain has abandoned the New Chwang Railway A statement that the contract with the Hongkong and Shanghai Bank is cancelled is not believed in Hongkong but it was not unexpected eventually The abandoning of the "open door" by Sir Claude Macdonald is an assent to the principle of spheres of influence. It is expected that Russia will withdraw from the Lohan Railway scheme, as the Grand Council recommend using the national assembly at Pekin The Emperor reluctantly withdraws the proposal.

London, 24th Sept—Reuter, telegraphing from Wei Hai Wei, says that the flagship *Centurion* has sailed under sealed orders, her destination, it is supposed, being Taku Six other British warships join her at Chefoo

London, 25th Sept—Kang Yu Wei the reforming adviser to the Emperor of China, who was recently banished has taken refuge aboard the gunboat *Esk*, after the British Consul had refused his surrender to the Chinese authorities

It is believed that the movements of the British fleet betokens serious action

London 23rd September—Mr Curzon has been raised to the Peerage under the title of Baron Curzon of Kedleston, in the peerage of Ireland

London, 24th Sept—Reuter's Paris correspondent states that the four Powers will send the Sultan an ultimatum next week demanding compliance with their project for a settlement of the Cretan question Otherwise measures, on which the Powers have already agreed, will be taken to enforce acceptance the Powers not hesitating to send their fleets to the Dardanelles

Mr John Stanley, Q C, is gazetted a Judge of the Calcutta High Court, vice the Hon'ble E J Trevelyan

London 27th Sept—Another edict has been, issued in Peking, which revokes all recent reforms in China

The British fleet has left Taku, and is proceeding to Wei hai Wei

It is stated in Vienna that Britain, France, Russia and Italy have presented an ultimatum to Turkey, demanding the withdrawal of the Turkish troops in Crete by the 15th of October It is believed that, failing Turkey's compliance with their demand, the Powers intend to blockade certain places on the island by land and sea

London 28th Sept—The surrender of arms at Candia has stopped It is known that the Mussulmans are withholding 2,000 Martinis and 10 Lee Metford rifles

THE

Karnataka Prakasika.

MONDAY, OCTOBER 3, 1898.

THE PLAGUE

This is the subject of interest at the present time. Wherever men do congregate they talk about it. It is uppermost in the minds of all It is making sad ravages in the City, and it may be—though we hope not—that it has not yet reached its climax. Many have already died from its effects, and it is to be feared that the list of deaths given by the authorities does not represent all the casualties It is very probable—rather certain—that many deaths are concealed, the bodies are burnt or buried, and there is an end of the matter. People are leaving the place in large numbers Some of the streets are almost deserted, and many of the shops are shut up Some people complain of the difficulty of procuring the necessaries of life Supplies are not brought in from the villages, and if this state of things continue the City will be in a very poor way before long In fact some of the people may be reduced to a state of starvation Every day sees people shutting up their shops and leaving the place, and those left behind find it very hard to obtain what they want for the necessities of the day If we enquire into the matter, we are told that this exodus is not caused so much by the plague as by the plague rules that are enforced The people are afraid of segregation, they are also afraid of having their houses defiled by being disinfected They do not see the necessity why they should be carried away to a camp when they fall sick, it may be that they do not fall sick of the plague, but of some other disease They do not like a number of people coming to their houses when any one is ill to make enquiries, and perhaps to demand admission. So to avoid any annoyance they betake themselves to the villages around the City, and there intend remaining till the plague takes its departure We cannot help thinking it would be well to do away with segregation altogether. It is driving the people away, and it is not mitigating the disease As we have said, people do not report cases of plague that occur because they are afraid the sick person may be sent to the segregation camp, and there detained To prevent this they shut the patient up in any room that is the most private, and there they keep him till he dies, probably without any medical attendance whatever. Such a proceeding helps to spread the plague rather than mitigating it People will do anything rather than see their friends carried away to the segregation camp. Then again, they do not like their houses to be disinfected, at least, to be disinfected by those the authorities may appoint They should be taught how to disinfect their dwellings, where to find the means to do this with, and should then be left to themselves We feel sure this would be better than the plan now pursued, and we think the spread of the epidemic would not be so great as it is. The measures employed have not stopped its progress, and we feel certain will not do so It may be that the disease must have its course Who can tell? Those who have prescribed measures for its mitigation, it is believed, know very little about the disease, and till they do it is very little use to prescribe what are believed to be remedies One thing should be done. The place should be kept in as good a sanitary condition as possible, but it is to be feared this is far from being the case at least, in the Civil and Military Station

POSTPONEMENT OR NOT

The correspondent of a Madras paper says that very little is being done with regard to the Indian National Congress in the Mofussil, and not much more in Madras He does not give a reason for this, but probably the real reason is the plague It may be that people think that after all the Congress may not come off They may think that as the disease is approaching Madras the authorities at the last moment may refuse to allow the Congress to be held, and so all their trouble would go for nothing. We fancy this is the cause of the delay in putting matters right as far as the Congress is concerned There is plenty of time yet, but the uncertainty paralyses those who ought to be up and doing Some may think that it would be better to postpone the Congress till next year, as the plague is so threatening at the present time But there is another side to the question. There are so many things that require to be looked into, there is so much to be done that the risk must be run, the meeting must be held We gave these subjects in our last issue, so we need not refer to them again in this They are all important, they all require ventilation For this reason it would be a great misfortune were the Congress put off till next year Of course, if the epidemic reaches Madras before the time fixed for the meeting there is no help for it, it must be postponed. Otherwise it must come off

News and Notes.

Six Indians have passed the London Examination for the Covenanted Indian Civil Service

Mr Gobindchand, son of Jiwan Ram, of Ferozepore, has passed into the Indian Civil Service

To keep himself in good physical condition the Czar of Russia takes a brisk run of about three fifths of a mile every morning before breakfast

The Prince of Wales has so far recovered from the effects of the accident which he met with at Waddesdon Manor in July last, that he is attempting to walk

Regarding the statements which have appeared as to a large number of counterfeit rupees being in circulation a contemporary learns that nearly all the suspected coins, which have been submitted to examination at the Mints, have been found to be genuine rupees

In the latest order, the Government of India say that their information since February last is all in favour of the efficacy of M Haffkine's system Inoculated persons will be accordingly exempted from segregation unless they are actually attacked by plague, and also from observation when travelling

Experiments carried out in Hyderabad by the Plague Commissioner go to prove that inoculation with Professor Haffkine's serum, if done in large doses and twice over, protects animals from plague, if subsequently inoculated with the virus of the disease Experiments with calf vaccine lymph also prove that vaccination in the ordinary way and in not less than six places is a protective against plague

The ballon which is to cross the High Alps is being made at Paris by M George Besancon, and will be sixty feet in diameter, 2,000lbs in weight and able to carry 7,000lbs Besides meteorological observations, the mountains will be photographed from the ballon By ascending the Sitten, in the Canton of Valais Captain Spelterini hopes to be driven over the Finsteraar, Urner and Glarner Alps towards the valley of the Upper Rhine

There is a strong feeling in diplomatic and political circles, says a London correspondent, that the Tsar's manifesto in favour of universal peace is due to the direct inspiration of Queen Victoria Her Majesty is deeply possessed by the hope that her reign may never again be disturbed by warlike convulsions To this end she has sought confessedly to restrain her grandson Kaiser William However, Her Majesty has perceived that her influence with the Tsar would be greater because of his love for her grand daughter the Tsarina. To the Tsar and the Tsarina Her Majesty at once appealed, and the declaration published now is the result

In the plague progress report issued by the Collector of Dharwar, it is stated that the total number of persons inoculated up to date is 37,196, while the uninoculated remainder number 1,014 Out of a total of 425 attacks, the 28,160 twice inoculated had 20, the 9,036 once inoculated had 17, and the 1,014 uninoculated had 393 The figure of protection comes to 935, and this would be better still if single inoculations were excluded The virulence of the decease is remarkable Last week it was 112 per thousand per week, which was bad enough, but at the present rate the uninoculated will be wiped out of existence in three weeks

Our attention has been drawn to an article appearing in the leading columns of the *Madras Mail* of Saturday the 17th instant, entitled "A Gift of the Gods" "The Gift of the Gods" is a child born of a Brahmin archaka of the temple of Tirupati who takes advantage of an unsuspecting woman who had gone to Tirupati determined to wipe out the disgrace of being barren, by making propitiatory offerings to the Deity The article is most vulgarly suggestive and is an insult to the religious feelings of the Hindus Apart from the absurdity of any professing Christian making fun of a belief in immaculate conception, we seriously question if our contemporary which is so ready to lecture to others, has not exceeded the bounds not only of decorum, but of the law, in allowing an article so outrageous to the most cherished religious feelings of a large section of the community to appear in its columns—*Hindu*

A young woman, named Marguerite Bougenral, has been sleeping for fifteen years in a village near St. Quintin, France "She was frightened into a trance by the appearance of of a gendarme" Says the Paris Correspondent of the *Civil and Military Gazette* "For fifteen years she has been lying on her bed in her mother's house alive beyond all doubt, for the pulsations of the heart, although very slow, are distinguishable During this long period she has neither taken food nor given any sign of returning conciousness The body is rigid and the limbs are almost like those of a skeleton The abdomen has so collapsed that the spinal column can be seen through it The appearance of the face is exactly that of a corpse, with the exception that the eyes and mouth are firmly closed. To the medical pro-

fession this sleeping girl is a great curiosity There is hardly a doctor of note in France who has not gone to St. Quintin to see her The professional opinion is that she will die while in her present state, and that even if she were to awake, there would be scarcely any chance of her recovery in consequence of the atrophied condition of the intestinal organs"

Local and Provincial.

A SANCTION.—The Government have Sanctioned an additional grant of Rs 1,500 applied for by the Deputy Commissioner, Mysore, for the construction of Plague sheds, &c.

INOCULATION.—A large number of people are now being inoculated every day. Those who perform the operation have plenty to do. The people are not so afraid of it now as they were sometime ago.

THE WEATHER.—We had a few showers of rain last week but not much It is very warm at times, and it seems likely that more rain will soon come down The outlook for the crops has improved very much of late.

THE PLAGUE.—The Health Officer of the City, Dr. Arumuga Mudaliar, informs us that there were forty eight fresh attacks and twenty one deaths on Thursday, and twenty two fresh attacks and nine deaths on Friday

THE MAHARAJAH AND THE MAHARANI REGENT.—Left for Mysore on Friday last under a salute of twenty one guns The departure was private, so there were not many on the platform to see the illustrious passengers take their departure from Bangalore.

A CASE OF PLAGUE AT FRENCH ROCKS.—We are given to know that a certain Brahmin who came to French Rocks the other day from one of the plague infected houses in Bangalore, suffered from high fever showing, according to medical opinion, all symptoms of plague and died on the 26th morning at French-Rocks.—M H

PLAGUE MEDICINE.—The leaflets published by Abraham Pundit of Tanjore, on Plague and its cure, are being circulated broadcast We learn that the Government of Mysore tried the medicine, and it proved efficacious, and hence the Amildar of Bangalore Taluq has been ordered to distribute the medicine gratis, to the public

The Mysore Gazette.

Bangalore, Thursday, 29th September 1898

NOTIFICATIONS BY THE GOVERNMENT OF MYSORE

No 4127—*Pg* P. 21 96, *dated*, 22nd *Sept* 98

MYSORE DASARA AND CHAMUNDI CAR FESTIVALS

Whereas the Government of Mysore are satisfied that there is danger of an outbreak of plague in the Mysore City if people from Bombay, Hyderabad, Bangalore City, or any other infected area are permitted to visit the Mysore City, on the occasion of the Dasara and Chamundi Car Festivals which are to be held from the 16th to 24th and on the 31st October 1898, respectively

In exercise of the powers vested in them under Section 2, sub section 1 of the Epidemic Diseases Regulation No II of 1897, the Government of Mysore are pleased to direct that no person from the Bombay Presidency or the infected parts of the Hyderabad Territory, or from the Bangalore City or other infected area shall be permitted to visit the Mysore City from the 13th October to the 1st November 1898, both days inclusive

No 4225—*J* 455, *dated* 23rd *September* 98

During the employment of Mr P Singrachar, 1st Class Munsiff, as Additional Subordinate Judge of Mysore, the following temporary promotions and appointment of Munsiffs are ordered —

Mr. C Subba Rao, from the 2nd to the 1st Class.

Mr. T. E Jayaram Iyer, B A, & B L, from the 3rd to the 2nd Class

Mr. K Lakshminarnaiya, B A, Translator, Chief Court, to act as Munsiff, 3rd Class, *sub protem*

No 4240—*J* 465, *dated 23rd Sept* 98.

The following transfers and posting of Munsiffs are ordered —

Mr P Venkatachar, from Kolar to Mysore, *vice* Mr P Singrachar appointed as Additional Sub Judge To join on relief

Mr T. E Jayaram Iyer, B A, B L, from Honnali to Kolar *vice* Mr B Venkatachar To join on relief

Mr K L kshminarnaiya, B A is posted to Honnali, *vice* Mr T. E Jayaram Iyer. To join forthwith

No 4301—*Mis* 1040, *dated* 24*th Sept* 98

It is hereby notified that the appointment of a separate President of the Municipal Commissioners for the town of Bangalore, as per Orders No 1036, dated 24th April 1896, is cancelled.

2 Under Section 11 of the Municipal Regulations of 1871, as amended by Regulation I of 1890, the Deputy Commissioner of the Bangalore district will be the *ex officio* "President of the Municipal Commissioners for the town of Bangalore"

3 Mr T T Leonard is appointed Superintendent of the Government Press and Stationery and Compiler of the *Mysore Gazette*

4 Mr H G Sparks is appointed Officer in charge of the Manufacture of Stamps, in addition to his duties as Superintendent of the Central Jail, Bangalore

No 4305—*Mis* 1042 *dated* 24*th September* 98

Mr P R W Wetherall (recalled from leave) will continue as City Magistrate, Mysore, but without prejudice to his substantive appointment as Sub Division Officer, and will also be the Assistant in Plague Administration to the Deputy Commissioner of the Mysore District

No 4310—*Mis* 1047, *dated* 24*th September* 98.

The following appointments, postings and transfers are ordered —

i Mr N Venkata Rao, Assistant Commissioner, Mysore to act as Sub Division Officer, S Mespur, during the absence of Mr P. R W Wetherall on other duty To join forthwith

ii. Mr A Ananda Rao, Munsiff, to be an Extra Assistant Commissioner, and be posted to the Mysore district

iii. Mr B Ramakrishna Rao, Manager Dewan's Office, to be an Extra Assistant Commissioner, and be attached to the Head-quarter Office

iv. Mr. S. Krishnamurti Rao, Extra Assistant Commissioner, to be transferred from the Mysore to the Chitaldrug district

No 4396—*Mis* 1057 *dated* 26*th Sept* 98

The following appointments and transfers are ordered —

(i) Mr. Humza Husson, B A, B L, Assistant Superintendent of Police, Tumkur district, to be Extra Assistant Commissioner and 1st Class Magistrate, Bangalore district

(ii) Mr Zahiruddin Moceen B A, Probationary Assistant Superintendent of Police, to act as Assistant Superintendent of Police and be posted to the Tumkur district

(iii) Mr Nadig Subba Rao, Amildar of Tarikere, to act as Assistant Superintendent of Police and be posted to the Bangalore District for charge of the district outside the Bangalore taluk

No 4429—*Pg* 21 95, *dated* 27*th Sept* 98

For purposes connected with the observation of persons arriving at the Bangalore City from infected areas, as laid down in Regulation 11A issued with Notification No 1291—M F 21-95 dated the 5th July 1898, the Medical Officers attached to the different Wards of the City shall be deemed to be Assistant Health Officers

No 4457—*J* 470, *dated* 29*th Sept* 98

Under Section 12 of the Code of Criminal Procedure I Venkataramaiah, Amildar and 3rd Class Magistrate, Koppa taluk, is invested with the powers of a Magistrate of the 2nd Class He is also empowered to try cases under the Breach of Contract Act 13 of 1859, the powers being exercised so long as he continues to be the Amildar of the Koppa taluk.

ಕರ್ನಾಟಕ ಪ್ರಕಾಶಿಕಾ.

೧೮೯೮ನೇ ಇಸವಿ ಅಕ್ಟೋಂಬರ್ ೩ನೇ ತಾ|| ಸೋಮವಾರ

ಪ್ಲೇಗ್! ಪ್ಲೇಗ್!! ಪ್ಲೇಗ್!!!

ಈಚೆಗೆ ಮೈಸೂರು ಗವರ್ನಮೆಂಟಿನವರು ರೆಯಿಲ್ವೇಮಾರ್ಗವಾಗಿ ಪರಸ್ಥಳಗಳಿಗೆ ಹೋಗುವಂತಹವರ ವಿಷಯದಲ್ಲಿ ನೂತನವಾಗಿ ಕೆಲವು ನಿಬಂಧನೆಗಳಂ ಮಾಡಿ ಕಳೆದ ತಿಂಗಳ ೨೬ನೆಯ ತಾರೀಖು ಸೋಮವಾರದ ಮೈಸೂರು ಗೆಜೆಟ ವಿಶೇಷ ಪತ್ರಿಕೆಯ ಮೂಲಕ ಪ್ರಕಟಿಸಿರುತ್ತಾರೆ. ಸದರೀ ಹೊಸ ನಿಬಂಧನೆಯು ಈತಿಂಗಳ ೧ನೇ ತಾರೀಖು ಮೊದಲು ಜಾರೀಯೊಳು ತರಲ್ಪಟ್ಟವೆ. ಅವು ಯಾವವೆಂದರೆ, ಬೆಳಗ್ಗೆ ೭ ಘಂಟೆ ೩೦ ನಿಮಿಷಗಳಿಗೆ ಮದರಾಸ್ ರೆಯಿಲ್ ಮಾರ್ಗವಾಗಿ ಬವರಿಂಗ್‌ಪೇಟೆ, ಜೋಲಾರ್‌ಪೇಟೆ ವಗೈರೆ ಸ್ಥಳಗಳಿಗೆ ಹೊರಡತಕ್ಕ ಪ್ರಯಾಣಸ್ಥರು ತಾವು ಹೊರಡುವದಕ್ಕೆ ಮುಂದಿನದಿನ ಸಾಯಂಕಾಲ ಆರುಘಂಟೆಯೊಳಗಾಗಿ ರೆಯಿಲ್ ಸ್ಟೇಷನಿಗೆ ಹೋಗಿ ಅಲ್ಲಿ ರೋಗದ ಸೋಂಕು ಬಡಿಸುವದಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಕಟ್ಟಡಕ್ಕೆ ಹೋಗಿ ಸೋಂಕುಗಳಂ ಬಡಿಸಿಕೊಂಡು ಅದಬಗ್ಗೆ ಸರ್ಟಿಫಿಕೇಟನ್ನು ಪಡಕೊಂಡು ರಾತ್ರಿಯೆಲ್ಲ ಸದರೀ ಕಟ್ಟಡದಲ್ಲೇ ಮಲಗಿದ್ದು ಬೆಳಗ್ಗೆ ಗಾಡಿಯಲ್ಲಿ ಪ್ರಯಾಣ ಮಾಡತಕ್ಕದ್ದು. ತರುವಾಯ ಹೊರಡುವಂತ ಗಾಡಿಗಳಲ್ಲಿ ಪ್ರಯಾಣ ಮಾಡತಕ್ಕವರು ಗಾಡಿ ಹೊರಡುವದಕ್ಕೆ ಒಂದೂವರೆ ಘಂಟೆಯ ಕಾಲಕ್ಕೆ ಕಡಮೆಯಿಲ್ಲದೆ ಮುಂದಾಗಿ ಸ್ಟೇಷನಿಗೆ ಹೋಗಿ ಅವರವರ ದೇಹ ಮತ್ತು ಅವರವರು ತಮ್ಮ ಸಂಗಡ ತೆಗದುಕೊಂಡು ಹೋಗುವ ಗಂಟುಗಳನ್ನು ಸೋಂಕ ಬಡಿಸಿಕೊಂಡು ಸರ್ಟಿಫಿಕೇಟ ಪಡೆದು ಹೊರಟು ಹೋಗತಕ್ಕದ್ದು. ಯಾವಗಾಡಿಯಲ್ಲಿ ಹೊರಡುವದಾಗಿ ಸೋಂಕು ಬಡಿಸಿಕೊಳ್ಳುತ್ತಾರೆಯೊ ಆಗಾಡಿಯಲ್ಲಿ ಹೊರಡದೆ ಇನ್ನೊಂದು ಗಾಡಿಯಲ್ಲಿ ಹೊರಡುವ ಪಕ್ಷದಲ್ಲಿ ಪುನಃ ಸೋಂಕು ಬಡಿಸಿಕೊಳ್ಳಬೇಕು. ಸೋಂಕು ಬಡಿಸಿಕೊಳ್ಳುವ ಕ್ರಮವು ಯೆರಡು ವಿಧಗಳಾಗಿರುತವೆ. ಪ್ರಯಾಣಿಕರ ಇಷ್ಟಾನುಸಾರ ಅವುಗಳಲ್ಲಿ ಯಾವದನ್ನಾದರು ಮಾಡಿಸಿಕೊಳ್ಳಬಹುದು —

೧ನೇ—ಒಂದುಬಗೆ ಪ್ರಾರಮಿಕ್ರವಾದ ಪಣ್ಣೀರು, ಅಥವಾ ಬಿಸಿನೀರು, ಇದರಲ್ಲಿ ಸ್ನಾನಮಾಡಬೇಕು, ೨ನೇ—ಸೋಂಕುಬಡಿಸುವ ಒಂದುಬಗೆ ನೀರನ್ನು ಮೈಮೇಲೆ ಹುಯಿಸಿಕೊಳ್ಳಬೇಕು. ಮೇಲಿನ ಯೆರಡು ವಿಧದಲ್ಲಿ ಒಂದಂ ಮಾಡಿಕೊಂಡಮೇಲೆ ಇಷ್ಟಬಂದವರು ಒಳ್ಳೆಯ ನೀರಿನಲ್ಲಿ ಸ್ನಾನಮಾಡಬಹುದು. ಮೈಒರಸಿಕೊಳ್ಳುವದಕ್ಕೆ ಸರ್ಕಾರದವರು ವಸ್ತ್ರಗಳಂ ಸರಬರಾಯಿ ಮಾಡುವರು. ಹೆಂಗುಸರಿಗೆ ಹೆಂಗುಸರೇ ನಿಯಮಿಸಲ್ಪಟ್ಟಿರುತ್ತಾರೆ, ಗೋಷಾ ವಿಷಯದಲ್ಲಿ ತಕ್ಕ ಯೇರ್ಪಾಡುಗಳು ಮಾಡಲ್ಪಟ್ಟಿರುತವೆ.

ಪ್ರಯಾಣಸ್ಥರ ಗಂಟುಗಳೆಲ್ಲವನ್ನು ಬಿಚ್ಚಿನೋಡಿ ಅದರಲ್ಲಿರಬಹುದಾದ ಆಹಾರಪದಾರ್ಥಗಳುವಿನಾ, ಬಾಕೀ ಬೆಲೆಯುಳ್ಳ ರೇಷ್ಮೆಬಟ್ಟೆಗಳು, ಒಗೆದಬಟ್ಟೆಗಳು, ಭಾರೀ ಕ್ರಯವುಳ್ಳ ಬಟ್ಟೆಗಳು ಅಥವಾ ಕೊಗಲಿನ ಸಾಮಾನುಗಳುವಿನಾ ಭಿಕ್ಕವೆಲ್ಲವನ್ನು ಒಂದು ಗೋಣೀಚೀಲದಲ್ಲಿ ಹಾಕಿ ಕಟ್ಟಿ ಒಂದು ಯಂತ್ರದೊಳಗೆ ಇಟ್ಟು ಶಾಕಕೊಟ್ಟು ಸೋಂಕುಗಳಂ ಬಿಡಿಸಿ ಅವರವರಿಗೆ ವಾಪಸ್ ಕೊಟ್ಟು ಬಿಡುವರು, ರೇಷ್ಮೆ ವಗೈರೆ ಬಟ್ಟೆಗಳನ್ನು ಒಗೆದು ಅಥವಾ ಬಿಸಿಲಿಗೆ ಹಾಕಿ ಒಣಗಿಸಿಕೊಡುವರು. ಊರಿನಾದ ಜನರ ವಿಷಯದಲ್ಲಿ ಮೇಲಿನ ನಿಯಮದಿಂದ ವಿನಾಯಿಸಿ ಸರ್ಟಿಫಿಕೇಟ ಕೊಡುವ ಅಧಿಕಾರವು ಈ ಸಿಟಿಯಲ್ಲಿ ಮ್ಯೂನಿಸಿಪಲ್ ಪ್ರೆಸಿಡೆಂಟರವರಿಗೂ ಹೆಲ್ತ್ ಆಫೀಸರರಿಗೂ ಉಂಟುಮಾಡಲ್ಪಟ್ಟಿರುತವೆ. ಈ ಅಧಿಕಾರಿಗಳು ಸರ್ಟಿಫಿಕೇಟ ಕೊಡುವದಕ್ಕೂ ತಕ್ಕಕಾರಣಗಳಮೇಲೆ ನಿರಾಕರಿಸುವದಕ್ಕೂ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಮೇಲೆ ತಿಳಿಸಲ್ಪಟ್ಟಿರುವ ಹೊಸ ಯೇರ್ಪಾಡುಗಳು ಪ್ರಜೆಗಳ ತಿಳುವಳಿಕೆಗೆ ಬಂದಕೂಡಲೆ ಕೇವಲ ಭೀತರಾಗಿ, ಈ ತಿಂಗಳ ೧ನೇ ತಾರೀಖಿಗೆ ಮುಂಚೆಯೇ ಊರು ಬಿಟ್ಟು ಹೊರಟುಹೋಗುವುದು ತಮಗೆ ಸರ್ವವಿಷಯದಲ್ಲೂ ಕ್ಷೇಮಕರವೆಂದು ಭಾವಿಸಿ, ಸರ್ವ ಪ್ರಯತ್ನದಿಂದಲೂ ಆಯಾ ಪಾರ್ಟಿ ಆಫೀಸರುಗಳಿಂದ ಪಾಸ್‌ಪಡಕೊಂಡು ಪರಸ್ಥಳಗಳಿಗೆ ಪ್ರಯಾಣ ಮಾಡಲು ಪ್ರಕ್ರಮಿಸಿ, ಕಳೆದ ೮ ದಿನದ ವಾರದಲ್ಲಿ ಸುಮಾರು ಎರಡುಸಾವಿರ ಕುಟುಂಬಕ್ಕೆ ಮೇಲ್ಪಟ್ಟು ನಾನಾ ಮಾರ್ಗಗಳಲ್ಲಿ ಹೊರಟುಹೋಗಿರುತ್ತಾರೆ. ಈ ಪಟ್ಟಣದ ಪ್ರತಿ ಪೇಟೆಯಲ್ಲೂ ನೂರಾರುಮನೆಗಳಿಗೆ ಮೇಲ್ಪಟ್ಟು ಬೀಗಗಳು ಹಾಕಲ್ಪಟ್ಟವೆ. ಕೆಲವರು ತಮ್ಮ ಸಂಸಾರವನ್ನೆಲ್ಲ ಕರೆದುಕೊಂಡುಹೋಗಿ ಪರಸ್ಥಳಗಳಲ್ಲಿ ಬಿಟ್ಟುಬಂದು ಮನೆಯ ಮಂದಿಗಳ ಬಂದೋಬಸ್ತಿಯಬಗ್ಗೆ ಒಬ್ಬರಿಬ್ಬರು ಕಾದುಕೊಂಡಿರುತ್ತಾರೆ. ಕಳೆದ ಬುಧವಾರದ ಮೊದಲು, ಈವೂರು ಕೆಂಪಾಟಿಗರಪೇಟೆ, ದೊಡ್ಡಪೇಟೆ, ಮಾಮೂಲ್‌ಪೇಟೆ ವಗೈರೆ ಅನೇಕ ಪೇಟೆಗಳಲ್ಲಿ ಅನೇಕ ಅಂಗಡಿಗಳು ಮುಚ್ಚಲ್ಪಟ್ಟವು. ತರಗಿನಪೇಟೆಯಲ್ಲೂ ಮಂಡಿಗಳು ಮುಚ್ಚಲ್ಪಟ್ಟು ಪರುಕಲೂ ೭೮ ಪರಸ್ಥಳಗಳಿಂದ ಜಿನಿಸುಗಳ ಗಾಡಿಗಳು ಬರುವುದು ಬಂದಿತವಾಗಿ ನಿಂತುಹೋದವು, ಅನೇಕ ಗ್ರಾಮಗಳಿಂದ ಮಾಡಿಕೆಯಾಗಿ ಪ್ರತಿದಿನವೂ ತರಕಾರಿ ವಗೈರೆ ತರತಕ್ಕವರು ರೋಗ ಭಯದಿಂದ ನಿಂತುಹೋದ್ದರಿಂದ ಈಗ್ಗೆ ೨-೩ ದಿನಗಳ ಮೊದಲು ಪ್ರಜೆಗಳಿಗೆ ನೆಂಸರಿ ಸಾಮಾನು ಧ್ಯಾನವಾಯಿತು. ಈವೂರಿನ ತಾತ್ಕಾಲಿಕ ಸ್ಥಿತಿಯು ಜಾರಿಕು ಯೋಚಿಸಲಾಗಿ ಇನ್ನು ಒಂದೆರಡುವಾರಗಳೊಳಗಾಗಿ ಊಳಿದಿರುವ ಜನರಿಗೆ ಅತ್ಯವಶ್ಯವಾದ ಆಹಾರ ಪದಾರ್ಥಗಳು ಸಿಕ್ಕುವದೆ ಬಹಳ ಕಷ್ಟಸಾಧ್ಯವಾಗಿರುವದೆಂದು ಚೆಪ್ಪುತ್ತೇವೆ

ಈ ರೋಗ ಪ್ರಾರಂಭದಲ್ಲಿ ಅದರ ನಿವಾರಣೆ ಮತ್ತು ನಿವೃತ್ತಿಯಬಗ್ಗೆ ಸರ್ಕಾರದವರು ಮಾಡಿ ಪ್ರಯೋಗಿಸಿದ ನಾನಾವಿಧ ಉಪಾಯಗಳಲ್ಲಿ ಇನಾಕ್ಯುಲೇಷನ್, ಅಂದರೆ ಗುರ್ತು ಹಾಕಿಸಿಕೊಳ್ಳುವುದು ಮುಖ್ಯವಾದುದಾಗಿ ಎಣಿಸಲ್ಪಟ್ಟ ಆ ಶಾಸ್ತ್ರವು ಪ್ರಾರಂಭಿಸಿದ ಕಾಲದಲ್ಲಿ ಅನೇಕರು ಅದರ ಪ್ರಯೋಜನವಂ ಅನುಭವಪೂರ್ವಕ ತಿಳಿದುಕೊಳ್ಳಲಾರದೆ ಅದರಿಂದ ಕಾಲಾಂತರದಲ್ಲಿ ಬೃಹದ್ರೋಗ, ಬ[illegible] ವೇ ಮೊದಲಾದವು ಪ್ರಾಪ್ತವಾಗುವವೆಂದು ಯೋಚಿಸಿ, ತನ್ಮೂಲಕ ಅನ್ಯರಿಗೂ ಅದರಲ್ಲಿರತಕ್ಕ ಉತ್ಸಾಹವನ್ನು ಹೋಗಲಾಡಿಸುತ ಬಂದದ್ದು ಪ್ರಸಿದ್ಧ ವಿಷಯವಾಗಿರುತದೆ. ಈಗ್ಗೆ ಎಂಟು ಹತ್ತು ದಿನಗಳ ಮೊದಲು ರೋಗವು ಪ್ರಬಲಿಸಿ, ಸರ್ವತ್ರ ವ್ಯಾಪಿಸುತ್ತ, ದಿನಂಪ್ರತಿ ಉಂಟಾಗುವ ಪ್ರಾಣಹಾನಿಗಳ ಸಂಖ್ಯೆಯು ದಿನೆ ದಿನೆ ಹೆಚ್ಚುತಬರುವದು ಕಂಡು ಪ್ರಜೆಗಳು ಮೇಲ್ಬಿದ್ದು ಗುರ್ತುಹಾಕಿಸಿಕೊಳ್ಳುವದಕ್ಕೆ ಪ್ರಾರಂಭಿಸಿದರಾಗಿ ಪ್ರತಿದಿನದಲ್ಲೂ ಆಬಾಲವೃದ್ಧರು ಸುಮಾರು ನಾನೂರು ಐನೂರು ಜನರ ವರೆಗೆ ಗುರ್ತುಹಾಕಿಸಿಕೊಳ್ಳುತಲಿದ್ದಾರೆ. ಈಗ ಪ್ರಜೆಗಳಿಗೆ ಈ ಚಿಕಿತ್ಸೆಯ ವಿಷಯದಲ್ಲುಂಟಾಗಿರುವ ಉತ್ಸಾಹವನ್ನು ನೋಡಿದರೆ ಇನ್ನು ಒಂದೆರಡು ವಾರಗಳೊಳಗಾಗಿ ಅನೇಕ ಸಾವಿರ ಪ್ರಜೆಗಳು ಗುರ್ತು ಹಾಕಿಸಿಕೊಂಡು ಅದರ ಪ್ರಯೋಜನವಂ ಹೊಂದಬಹುದೆಂದು ತೋರುತದೆ. ಈ ಪ್ರಬಲ ಕಾರ್ಯದಬಗ್ಗೆ ನಿಯಮಿತರಾಗಿರುವ ಡಾಕ್ಟರ್ ಆರ್ಮುಗ ಮುದಲಿಯಾರ್‌ರವರು ಗುರ್ತುಹಾಕುವ ಕಾಲದಲ್ಲಿ ವಹಿಸುವ ಸಹನೆಯೂ, ತೋರ್ಪಡಿಸುವ ಅನುಭವ ಪೂರ್ವಕವಾದ ಚತುರತೆಯೂ ಬಹಳ ಶ್ಲಾಘನಾರ್ಹವಾಗಿವೆ.

ಇಲ್ಲಿನ ಸೆಂಟ್ರಲ್ ಕಾಲೇಜ್ ವೆಸ್ಲಿಯನ್ ಮಿಷನ್ ಮತ್ತು ಲಂಡನ್‌ಮಿಷನ್ ಹೈಸ್ಕೂಲುಗಳು, ಮ್ಯೂನಿಸಿಪಲ್ ಸ್ಕೂಲುಗಳು, ಗವರ್ನಮೆಂಟು ಮತ್ತು ಆರ್ಯಬಾಲಿಕಾ ಪಾಠಶಾಲೆಗಳು, ಇವುಗಳ ವಿದ್ಯಾರ್ಥಿಗಳಲ್ಲಿ ಸೇಕಡ ಐವತ್ತರ ಮೊದಲು ಯೆಪ್ಪತ್ತು ಯೆಂಭತ್ತರವರೆಗೆ ಗೈರುಹಾಜರಾಗಿರುವದರಿಂದ ಇವೆಲ್ಲವು ಶೀಘ್ರದಲ್ಲಿ ಮುಚ್ಚಲ್ಪಡಬಹುದೆಂದು ಕಾಣುತಿವೆ. ಸೆಂಟ್ರಲ್ ಕಾಲೇಜಿನಲ್ಲಿ ಓದುತಲಿದ್ದ ಬಾಲಿಕರಾದ ವಿದ್ಯಾರ್ಥಿಯೊಬ್ಬನು ಪ್ರಸಕ್ತ ರೋಗದ ಮೂಲಕ ಮೃತಪಟ್ಟು ತನ್ಮೂಲಕ ಪ್ರಾಪ್ತವಾದ ಗಾಬರಿಯಿಂದ ವಿದ್ಯಾರ್ಥಿಗಳನೇಕರು ಪ್ರಾಣರಕ್ಷಣಾರ್ಥ ಪರಸ್ಥಳಗಳಿಗೆ ಹೊರಟುಹೋದರು. ಅನೇಕರು ಗುರ್ತುಗಳು ಹಾಕಿಸಿಕೊಂಡು ಇನ್ನು ಸ್ಥಳಾಂತರ ಪ್ರ

...ಣಕ್ಕೆ ಉಚಿತಕಾಲವಂ ನಿರೀಕ್ಷಿಸುತಲಿದಾರೆ. ...ದುವರೆಗೆ ಈ ವೂರಿಂದ ಸುಮಾರು ಐವತ್ತು ...ಸಾವಿರ ಪ್ರಜೆಗಳಗೆ ಮೇಲ್ಪಟ್ಟು ಹೊರಟು ಹೋಗಿರಬಹುದೆಂದು ತೋರುತದೆ.

ಮತ್ತೊಂದಂಶವನ್ನು ಪ್ರಾಧಾನ್ಯೇನ ಇಲ್ಲಿ ಪ್ರಸ್ತಾಪಿಸಬೇಕಾದ್ದಾವಶ್ಯಕವೆಂದು ಭಾವಿಸುತ್ತೇವೇನೆಂದರೆ, ಲಕ್ಷಾಂತರ ಪ್ರಜೆಗಳುಳ್ಳ ಈ ಪಟ್ಟಣದಂತ ದೊಡ್ಡ ಪಟ್ಟಣಗಳಲ್ಲಿ ಪ್ರತಿದಿನವೂ ನಾನಾವಿಧ ಕಾರಣಗಳ ಮೂಲಕ ಹತ್ತಾರು ಜನರು ಮೃತಪಡುವದು ಅಸಹಜವಲ್ಲವು. ಈಗಿನ ವಿದ್ಯಮಾನದಲ್ಲಿ ಯಾರಮನೆಯೊಳಗಾದರು ಯಾರಾದರು ಕಾಹಿಲೆ ಇರುವುದು ಪೊಲೀಸಿನವರ ಅಥವಾ ಸೂಪರ್ವೈಜರಿಗಳ ಮೂಲಕ ಪ್ಲೇಗ್ ಅಧಿಕಾರಿಗಳಿಗೆ ತಿಳಿಯಬಂದ ಕೂಡಲೆ ಮೆಡಿಕಲ್ ಅಫಿಸರಗಳು ಬಂದು ದೂರದಿಂದ ರೋಗಿಯನ್ನು ನೋಡಿ ಅವಿಚಾರವಾಗಿ ಪ್ಲೇಗ್ ರೋಗ ತಗಲಿದೆಯೆಂದು ಅಭಿಪ್ರಾಯ ಕೊಡುತಲಿರುವದರಿಂದ ರೋಗಿಯು ಕೂಡಲೆ ಸೆಗ್ರಿಗೇಷನ್ ಕ್ಯಾಂಪಿಗೆ ಸಾಗಿಸಲ್ಪಟ್ಟು ಅವನ ಮನೆಯಲ್ಲಿರುವುತ್ತರೆಲ್ಲರು ಸೋಂಕು ಬಿಡಿಸಲ್ಪಡುವದಕ್ಕೂ ಅವನ ಮನೆಯೊಳಗಿರುವ ಪದಾರ್ಥಗಳೆಲ್ಲವು ಸುಡಿಸಲ್ಪಡುವದಕ್ಕೂ ಕಾರಣವಾಗುತದೆ. ಪ್ಲೇಗಿಲ್ಲದೆ ಮೃತಪಡುವಂತವರೆಲ್ಲರು, ಪ್ಲೇಗ್ ರೋಗದ ಮೂಲಕ ಮೃತಪಡುವಂತವರ ಸಂಖ್ಯೆಗೆ ಸೇರಿಸಲ್ಪಡುತಲಿರುವದರಿಂದ ಅದುಹೆಚ್ಚಿ ಜನರಿಗೆ ಭೀತಿಯು ಇಮ್ಮಡಿಯಾಗಿ ಊರುಬಿಟ್ಟು ಬೇರೆ ಪರಸ್ಥಳಗಳಲ್ಲಿ ನಾನಾವಿಧಕಷ್ಟ ನಿಷ್ಠುರಗಳನ್ನನುಭವಿಸಬೇಕಾದ ದುರ್ವಿಧಿಯು ಪ್ರಾಪ್ತವಾಯಿತಲ್ಲಾ ಯೆಂದು ಪ್ರಜೆಗಳು ಕಣ್ಣೀರು ಸುರಿಯುತ ಸರ್ಕಾರದ ಅತಳತೆಗಳು ಅತಿಚಾರಿತವಾಗಿಯೇ ಪರಿಣಮಿಸಿದೆಯೆಂದು ಮೊರೆಯಿಡುತಲಿದಾರೆ.

ಇದಕ್ಕೆ ನಿದರ್ಶನ ರೂಪವಾಗಿ, ಈವೂರಿನ ಹಿಂದು ಪೇಟೆಯಲ್ಲಿ ಒಂದು ಮನೆಯೊಳು ಒಬ್ಬ ಬ್ರಾಹ್ಮಣ ಹೆಂಗಸು ಬಹುಕಾಲದವರೆವಿಲು ಪಾರ್ಶ್ವವಾಯು ರೋಗಪೀಡಿತಳಾಗಿರುತ, ತನ್ನಿವಾರಣೆಯಬಗ್ಗೆ ಒಬ್ಬ ಇಂಗ್ಲಿಷ್ ಡಾಕ್ಟರಲ್ಲಿ ಔಷಧ ಸೇವನೆ ಮಾಡುತಿರುವಲ್ಲಿ ಪ್ಲೇಗ್ ಇಲಾಖಾ ಮೆಡಿಕಲ್ ಅಫಿಸರೊಬ್ಬರು ಬಂದು ನೋಡಿ ಸದರೀ ಹೆಂಗಸಿಗೆ ಪ್ಲೇಗರೋಗ ತಗಲಿದೆಯೆಂದು ಹೇಳಲು ಮನೆಯವರು, ಮೊದಲಿಂದಲೂ ಔಷಧಕೊಡುತಲಿದ್ದ ಡಾಕ್ಟರು ಡಿಸ್ಪೆನ್ಸರಿಗೆ ಕೊಟ್ಟಿದ್ದ ಔಷಧ ಚೀಟಿಯನ್ನು ತೆಗದು ತೋರಿಸುವಷ್ಟರಲ್ಲಿ ಪ್ಲೇಗ್ ಡಾಕ್ಟರು ಅದನ್ನು ನೋಡಿ ಯಾವದೂ ಹೇಳಲಾರದೆ ತಲೆಬಾಗಿಸಿಕೊಂಡು ಹೊರಟು ಹೋದರೆಂಬದಾಗಿ ಒಬ್ಬ ದೊಡ್ಡಮನುಷ್ಯರ ಮೂಲಕ ತಿಳಿಯಲಾದೆವು. ಸದರೀ ಹೆಂಗಸಿಗೆ ಪ್ರಾಪ್ತವಾಗಬಹುದಾಗಿದ್ದ ದುರ್ದಶೆಯು ಆಕೆಗಾಗಿ ಮೊದಲು ಪಡೆದಿದ್ದ ಬಲಿಷ್ಠವಾದ ಔಷಧ ಚೀಟಿಯ ಮೂಲಕ ನಿವೃತ್ತಿಯಾಯಿತೆಂದು ಎಣಿಸಬೇಕಾಗಿರುತಿದೆ. ಇದೇವಿಧವಾದ ಅನೇಕ ಮೋಸದ್ದ(?)ಗಳು ನಮ್ಮ ತಿಳುವಳಿಕೆಗೆ ಅಗಿಂದಾಗ್ಗೆ ಬರುತಲಿದ್ದಾಗ್ಯೂ ಕಾಲವೈಪರೀತ್ಯವನ್ನಾಲೋಚಿಸಿ ಅವನ್ನೆಲ್ಲ ಪ್ರಕಟಿಸುವದಕ್ಕೆ ನಮ್ಮ ಮನ ವೊಡಂಬಡದೆ ತಾಟಸ್ಥ್ಯವಂ ವಹಿಸಬೇಕಾದವರಾದೆವು. ಏತೇನ ಪ್ಲೇಗ್ ಇಲಾಖಾ ಮೆಡಿಕಲ್ ಅಫಿಸರರು ರೋಗಿಯನ್ನು ಚೆನ್ನಾಗಿ ಪರೀಕ್ಷಿಸಿ ರೋಗ ಕಾರಣವನ್ನು ಯಥಾವಸ್ಥಿತವಾಗಿ ತಿಳಿಸುವರಾದರೆ ಅನೇಕರಿಗೆ ವ್ಯರ್ಥವಾದ ಭೀತಿಯನ್ನೂ ಚಿಂತೆಯನ್ನೂ ಹೋಗಲಾಡಿಸಿದಂತಾಗುವರು. ಈ ವಿಷಯಕ್ಕೆ ಪ್ಲೇಗ್ ಅಧಿಕಾರಿಗಳು ಸಂಪೂರ್ಣಾವಧಾನವಂ ಕೊಡುವರೆಂದು ನಂಬುತ್ತೇವೆ.

ಪ್ರಸಕ್ತ ರೋಗ ನಿವಾರಣೆಯಬಗ್ಗೆ ಗವರ್ನಮೆಂಟಿನವರು ಲಕ್ಷಾಂತರ ರೂಪಾಯಿಗಳಂ ಖರ್ಚು ಮಾಡುತಲಿದಾರೆಂಬುವುದು ಪ್ರಸಿದ್ಧವಿಷಯವಾಗಿದೆ. ಈಬಗ್ಗೆ ಆಗುವ ನಾನಾವಿಧಖರ್ಚುಗಳಲ್ಲೊಂದೆಂದು ಭಾವಿಸಿ, ತಂಜಾವೂರು ವೆ॥ಎಬ್ರಹಾಂ ಪಂಡಿತರಿಂದ ಈರೋಗಕ್ಕಾಗಿಯೇ ಒಬ್ಬ ಮಹಾತ್ಮರ ಉಪದೇಶಪ್ರಕಾರ ತಯಾರ್ಮಾಡಲ್ಪಟ್ಟಿರುವ ಸಿಂಧೂರ ಸಂಜೀವಿನಿ ಮತ್ತು ಮಾರ ಮಾತ್ರೆಗಳನ್ನು ಬಹಳತರಿಸಿ ಪ್ರತಿಪೇಟೆಯಲ್ಲೂ ಪ್ರಾಮಾಣಿಕರಾದ ಒಬ್ಬ ದೊಡ್ಡ ಮನುಷ್ಯರ ವಶಕ್ಕೆ ನಾಲ್ಕೈದು ಡಬ್ಬಿ ಮಾತ್ರೆಗಳಂ ಕೊಟ್ಟು ಅವರವರಪೇಟೆಗಳಲ್ಲಿ ಯಾರಿಗಾದರು ರೋಗತಗಲಿದ ವರ್ತಮಾನ ತಿಳಿಯಬಂದಕೂಡಲೆ ಔಷಧವಂ ಕೊಡುವಂತೆ ನಿಯಮಿಸಿ, ಔಷಧ ತೆಗದುಕೊಂಡವರ ಹೆಸರುಗಳನ್ನೂ, ಸದರೀ ಔಷಧದಿಂದ ರೋಗ ನಿವೃತ್ತಿಯಂ ಪಡೆದವರ ಹೆಸರನ್ನೂ ಆಗಿಂದಾಗ್ಗೆ ಪ್ಲೇಗ್ ಕಮಿಷನರವರಿಗೆ ರಿಪೋರ್ಟು ಮಾಡುವಂತೆ ಯೇರ್ಪಾಡು ಮಾಡಿದರೆ ಈ ಕಾಲದಲ್ಲಿ ಇದು ಬಹಳ ಪ್ರಯೋಜನಕರವಾಗಿರುವುದು. ಈ ಕೆಲಸಕ್ಕೆ ಮೆಡಿಕಲ್ ಅಫಿಸರಗಳನ್ನಾಗಲಿ, ಬೇರೆ ಸರ್ಕಾರಿ ಉದ್ಯೋಗಸ್ಥರನ್ನಾಗಲಿ ನಿಯಮಿಸಿದರೆ, ಔಷಧ ಬೇಕಾದವರು ಅವರ ಸಮಯವ ನಿರೀಕ್ಷಿಸಿ ಔಷಧವಂ ಪಡೆಯುವದರೊಳಗಾಗಿ ರೋಗಿಗೆ ಕಂಠಗತಪ್ರಾಣವಾಗುವದರಲ್ಲಿ ಸಂಶಯ ಲೇಶವೂ ಇರಲಾರದು. ಮೇಲೆ ತಿಳಸಿರುವ ಪಂಡಿತರ ಔಷಧವು ಪ್ರಸಕ್ತ ರೋಗವನ್ನು ನಿವೃತ್ತಿ ಮಾಡುವದಕ್ಕೆ ಶಕ್ತವಾದುದೆಂದು ಅನೇಕರು ಅನುಭವಪ್ರತ್ಯಕ್ಷ ತಿಳಿಸುವದರಿಂದ ಪ್ಲೇಗ್ ಕಮಿಷನರವರು ಕೂಡದರ ಕಡೆಕ್ಕೆ ಪೂರ್ಣಾವಧಾನವಂ ಕೊಟ್ಟು ನಡೆಸಬೇಕೆಂದು ಪ್ರಾರ್ಥಿಸುತ್ತೇವೆ. ನೇಟಿವ್‌ಗಳ ಔಷಧಗಳಂ ತರಿಸಿ ಉಪಯೋಗಿಸುವದರಿಂದ ಇಂಗ್ಲಿಷ್ ವೈದ್ಯಶಾಸ್ತ್ರಜ್ಞರ ಕೀರ್ತಿ ಪ್ರತಿಷ್ಠೆಗಳಿಗೂ ಅವರ ಔಷಧಗಳಲ್ಲಿನ ಶಕ್ತಿಗೂ ಯಾವ ಬಾಗದಲ್ಲೂ ನ್ಯೂನತೆ ಯುಂಟಾಗಲಾರದು. ಸದರೀ ಪಂಡಿತರು ಅಚ್ಚುಹಾಕಿಸಿ ಪ್ರಚಾರಗೊಳಿಸಿರುವ ಒಂದು ಸಣ್ಣ ಬುಕ್ಕಿನಲ್ಲಿ ಅವರ ಔಷಧವಂ ಸೇವನೆ ಮಾಡುವ ಕ್ರಮ, ಅನುಪಾನಕ್ರಮ, ಗಡ್ಡೆಗಳು ಯೆದ್ದರೆ ಅದಕ್ಕೆ ಹಾಕ ಪದಾರ್ಥಗಳನ್ನುಪಯೋಗಿಸುವರೀತಿ, ಪಥ್ಯಕ್ರಮ ಮೊದಲಾದವುಗಳನ್ನೆಲ್ಲ ವಿವರವಾಗಿ ತಿಳಿಸಿರುತ್ತಾರೆ.

ರೋಗ ವ್ಯಾಪಕತೆ.

